ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ—೪

1301

ಸಾಕ್ರಟೀಸನ ಕೊನೆಯ ದಿನಗಳು

000016

U(K)
0952
00016

ಮೈಸೂರು :
ಮೈಸೂರು ವಿಶ್ವವಿದ್ಯಾನಿಲಯ
೧೯೫೮

ಎಲ್ಲ ಹಕ್ಕುಗಳನ್ನೂ ಕಾದಿರಿಸಿದೆ.]

[ಬೆಲೆ : ರೂ. ೨-೨೫.

12-2

...TTVA PRACHAR CENTRE
... ALORE

000016

GANDHI SMARAKA GRANTHALAYA
DATE...
ACC NO...
CALL NO...
BANGALORE-1.

WORKS OF GANDHIJI IN KANNADA
OFFICE LIBRARY
Acc. No. 1305/61
Date Aug 1961 CHIEF EDITOR.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ (ರಿ)
ಪರಿಗ್ರಹಣ ಸಂಖ್ಯೆ: 3999
ACC. No.:
ಗಾಂಧೀ ಗ್ರಂಥಾಲಯ, ಬೆಂಗಳೂರು-1

ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ—೪

ಪ್ರಧಾನ ಸಂಪಾದಕ:

ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.

ಸಾಕ್ರೆಟೀಸನ ಕೊನೆಯ ದಿನಗಳು

00C016
... SMARAKA GRANTHALAYA
DATE........................
ACC No............................
CALL No......................
BANGALORE-1.

ಅನುವಾದಕ:

ಎ. ಎನ್. ಮೂರ್ತಿರಾವ್

ಮೈಸೂರು:
ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಿಸಲ್ಪಟ್ಟಿದೆ
೧೯೩೮

ಮೊದಲನೆಯ ಮುದ್ರಣ ೧೯೩೪

ದ್ವಿತೀಯ ಮುದ್ರಣ ೧೯೫೮

GANDHI SMARAKA GRANTHALAYA
DATE..................
ACC. NO..................
CALL NO..................
BANGALORE-1.

ಬೆಲೆ ;

ಸಾಮಾನ್ಯ ಪ್ರತಿ ... ... ೨=೨೫ ನ. ಪೈ.

ಉತ್ತಮ ಪ್ರತಿ ... ... ೩=೨೫ ,,

K 000016
0336 MUR
N34

ಓರಿಯಂಟ್ ಪವರ್ ಪ್ರೆಸ್, ಲಾಲ್‌ಬಾಗ್ ರೋಡ್, ಬೆಂಗಳೂರು-2

GANDHI SMARAKA GRANTHALAYA
DATE..................
ACC No..................
CALL No.................. ಮುಸ್ನಡಿ
BANGALORE-1.

ಕನ್ನಡ ಸಾಹಿತ್ಯವನ್ನು ಅಭಿವೃದ್ಧಿಪಡಿಸಬೇಕೆಂಬ ಘನೋದ್ದೇಶದಿಂದ ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳು ಒಂದು "ಕನ್ನಡ ಪ್ರಕಟನ ಸಮಿತಿ"ಯನ್ನು ನಿಯಮಿಸಿ, ಪ್ರತಿ ವರುಷವೂ ಪ್ರಸಿದ್ಧರಾದ ಗ್ರಂಥಕರ್ತರನ್ನು ನಿಷ್ಕರ್ಷಿಸಿ ಅವರಿಂದ ಗ್ರಂಥಗಳನ್ನು ಪ್ರಕಟನೆಗೆ ಸಿದ್ಧಪಡಿಸುವುದಕ್ಕೆ ತಕ್ಕ ಏರ್ಪಾಡನ್ನು ಮಾಡಿರುತ್ತಾರೆ.

ಈ ಗ್ರಂಥಗಳು ಎರಡು ಬಗೆಯುವು—

೧. ಈ ನವೀನ ಕಾಲಕ್ಕೆ ಬೇಕಾದ ಮತ್ತು ಜನಸಾಮಾನ್ಯಕ್ಕೆ ಜ್ಞಾನವನ್ನು ಹರಡಬಲ್ಲ ಸಾಹಿತ್ಯ, ಕಲೆ, ವಿಜ್ಞಾನ, ತತ್ತ್ವ, ಚರಿತ್ರೆ, ಧರ್ಮ, ನೀತಿ ಸಂಸ್ಕೃತಿ ಮುಂತಾದ ವಿಷಯಗಳನ್ನು ಲಲಿತವಾದ ಹೊಸಗನ್ನಡ ಶೈಲಿಯಲ್ಲಿ, ವಿವಾದಾಸ್ಪದವಲ್ಲದ ನಿಷ್ಕೃಷ್ಟವಾದ ರೀತಿಯಲ್ಲಿ ತಿಳಿಸತಕ್ಕುವು. ಇವು ಸ್ವತಂತ್ರ ಗ್ರಂಥಗಳಾಗಿರಬಹುದು; ಅಥವಾ ಭಾಷಾಂತರಗಳಾಗಿರಬಹುದು, ಸಂಕಲನಗಳಾಗಿರಬಹುದು.

೨. ಕನ್ನಡದ ಪೂರ್ವದ ಸಾಹಿತ್ಯವನ್ನು ಜನರಲ್ಲಿಯೂ ವಿದ್ಯಾರ್ಥಿವರ್ಗದಲ್ಲಿಯೂ ಹೆಚ್ಚು ಪ್ರಚಾರಕ್ಕೆ ತರುವುದಕ್ಕಾಗಿ, ಉತ್ತಮಕಾವ್ಯ ಸಂಗ್ರಹಗಳು. ಇವು ವಿದ್ಯಾರ್ಥಿಗಳ ಪಾಠಕ್ಕೆ ಅನುಕೂಲವಾಗಿರಬೇಕು; ಮೂಲ ಪ್ರತಿಗಳನ್ನು ಪರಿಶೋಧಿಸಿದ ಶುದ್ಧ ಪಾಠವನ್ನು ಒಳಕೊಂಡು ಪೀಠಿಕೆ, ಶಬ್ದಕೋಶ, ಅವಶ್ಯವಾದ ಟಿಪ್ಪಣಿಗಳು ಇವುಗಳೊಡನೆ ಕೂಡಿರಬೇಕು.

ಹೀಗೆ ಏರ್ಪಟ್ಟು ಇದುವರೆಗೆ ಪ್ರಕಟವಾಗಿರುವ ಮೂರು ಗ್ರಂಥಗಳೂ ಮೇಲಿನ ಎರಡನೆಯ ವರ್ಗಕ್ಕೆ ಸೇರಿದ ಕಾವ್ಯಸಂಗ್ರಹಗಳು. ಈಗ ಮೊದಲನೆಯ ವರ್ಗಕ್ಕೆ ಸೇರಿದ ಅನುವಾದವೊಂದನ್ನು ಕನ್ನಡಿಗರ ಮುಂದಿರಿಸಿದೆ.

ಸಾಕ್ರೆಟೀಸನಂಥ ಮಹಾಪುರುಷನ ಕೊನೆಯ ದಿನಗಳ ಚಿತ್ರವನ್ನು ಪ್ಲೇಟೋವಿನಂಥ "ಗುರುಸಮ"ನಾದ ಶಿಷ್ಯನು ಕೊಟ್ಟಿರುವುದು ಸಾಹಿತ್ಯದಲ್ಲಿ ಅತಿ ವಿರಳ. ಇಲ್ಲಿಯ ಅನುವಾದದಿಂದ ಈ ಮಹಾವ್ಯಕ್ತಿಗಳಿಬ್ಬರ ಪರಿಚಯವೂ ದೊರೆತು ನಮ್ಮ ಜನಜೀವನದಲ್ಲಿ ಹೊಸ ಸ್ಫೂರ್ತಿಯೊಂದು ಉದಿಸುವುದೆಂದು ಹಾರೈಸುತ್ತೇವೆ.

ಬಿ. ಎಂ. ಶ್ರೀಕಂಠಯ್ಯ,

ಸಮಿತಿಯ ಅಧ್ಯಕ್ಷ ಮತ್ತು ಪ್ರಧಾನ ಸಂಪಾದಕ.

GANDHI SMARAKA GRANTHALAYA
DATE..................
ACC No........................
CALL No....................
BANGALORE-1.


ವಿಷಯಸೂಚಿಕೆ

ಚಿತ್ರಗಳು

GANDHI SMARAKA GRANTHALAYA
DATE
Acc. No.
Call No.
BANGALORE-1.

ಅವತರಣಿಕೆ

GANDHI SMARAKA GRANTHALAYA
DATE........................
ACC No..............................
CALL No......................
BANGALORE-1.



ಪ್ಲೇಟೊ

GANDHI SMARAKA GRANTHALAYA
DATE.....................
ACC NO. ....
CALL NO.....................
...ALORE-1.

ಅವತರಣಿಕೆ

ಸುಮಾರು ಎರಡು ಸಾವಿರದ ನಾನೂರು ವರ್ಷಗಳ ಕೆಳಗೆ ಅಥೆನ್ಸಿನ ಅಂಗಡಿ ಬೀದಿಗಳಲ್ಲಿ ವಿಕಾರರೂಪಿಯಾದ ಮನುಷ್ಯನೊಬ್ಬನು ದಿನವೆಲ್ಲಾ ಅಲ್ಲಿದ್ದ ಜನರೊಡನೆ ಮಾತಾಡುತ್ತಾ ತಿರುಗಾಡುತ್ತಿದ್ದನು. ಚಿನಿವಾರರೂ ವರ್ತಕರೂ ವ್ಯಾಪಾರಕ್ಕೆ ಬಂದವರೂ ತಮ್ಮ ತಮ್ಮ ಕೆಲಸಗಳಲ್ಲಿ ಮಗ್ನರಾಗಿರುವ ಆ ಸ್ಥಳದಲ್ಲಿ ಅವನು ಮಾತ್ರ ನಿರಾತಂಕವಾಗಿ ಯಾರು ಸಿಕ್ಕಿದರೆ ಅವರೊಡನೆ ಮಾತಾಡುತ್ತಾ ಕಾಲ ಕಳೆಯುತ್ತಿದ್ದನು. ವೃದ್ಧರು, ಯುವಕರು, ತನ್ನವರು, ಹೊರಗಿನವರು, ಶ್ರೀಮಂತರು, ಬಡವರು ಎಂಬ ಭೇದವೇ ಅವನಿಗಿರಲಿಲ್ಲ; ಯಾರೊಡನೆಯಾದರೂ ಸಂಭಾಷಣೆಯನ್ನು ಹೂಡುತ್ತಿದ್ದನು. ನೋಡುವುದಕ್ಕೆ ಆತನು ಬಹಳ ಕುರೂಪಿ; ಕುಳ್ಳ; ತನ್ನ ಎತ್ತರಕ್ಕೆ ಇರಬೇಕಾದದ್ದಕ್ಕಿಂತ ಹೆಚ್ಚುಗಾತ್ರ; ಅಗಲವಾಗಿ ಚಪ್ಪಟೆಯಾಗಿ ತುದಿಯಲ್ಲಿ ಮೇಲೆಕ್ಕೆದ್ದುಕೊಂಡಿರುವ ಮೂಗು; ವಿಕಾರದೃಷ್ಟಿಯುಳ್ಳ ಕಣ್ಣುಗಳು; ವಿಲಕ್ಷಣವಾದ ನಡಗೆ; ಹಳೆಯದಾಗಿ ಚಿಂದಿಯಾಗುವುದರಲ್ಲಿರುವ ಬಟ್ಟೆಗಳು—ಅವನನ್ನು ನೋಡಿದರೆ ಸ್ವಲ್ಪ ಅಸಹ್ಯವೇ ಆಗುತ್ತಿತ್ತು. ಅವನು ಮಾತಾಡುತ್ತಿದ್ದ ವಿಷಯವೂ ಅಷ್ಟೇನೂ ಘನವಾದದ್ದಾಗಿ ತೋರುತ್ತಿರಲಿಲ್ಲ. ಚಮ್ಮಾರರು, ಕುಲುಮೆಯವರು, ಕುದುರೆಗಳು, ಕತ್ತೆಗಳು—ಇವೇ ಅವನು ಚರ್ಚಿಸುತ್ತಿದ್ದ ವಿಷಯ. ಎಷ್ಟೋ ವೇಳೆ ಜನರು "ಅಗೋ, ಅವನು ಮತ್ತೆ ಚಮ್ಮಾರರ, ಕತ್ತೆ ಕುದುರೆಗಳ ವಿಷಯ ಮಾತಾಡುತ್ತಿದ್ದಾನೆ! ನೀವು ಇನ್ನು ಹತ್ತು ವರ್ಷ ಕಳೆದ ಮೇಲೆ ನೋಡಿ, ಆಗಲೂ ಅವನು ಅದೇ ಮಾತಾಡುತ್ತಿರುತ್ತಾನೆ" ಎಂದು ಹಾಸ್ಯ ಮಾಡುತ್ತಿದ್ದರು. ಅವನ ವಿಷಯ ತಿಳಿಯದೆ, ಅವನ ಮಾತುಗಳನ್ನು ಎಂದೂ ಕೇಳದೆ, ದೂರದಿಂದಲೇ ಅವನ ವರ್ತನೆಯನ್ನು ನೋಡಿದವರಿಗೆ ಅದು ಹಾಸ್ಯಾಸ್ಪದವಾಗಿಯೇ ತೋರಬಹುದಾಗಿತ್ತು. ಆದರೂ ಜನರು ಅವನ ಮಾತುಗಳನ್ನು ಬಹಳ ಆಸಕ್ತಿಯಿಂದ ಕೇಳುತ್ತಿದ್ದರು. ಅವನು ಸಂಭಾಷಣೆ ಮಾಡುತ್ತಿರುವಾಗ ಸುತ್ತಲೂ ಯುವಕರು

ಅವನ ಮಾತಿನಲ್ಲೇ ನೆಟ್ಟ ಮನವುಳ್ಳವರಾಗಿ ನಿಂತಿರುತ್ತಿದ್ದರು. ಅವನೊಡನೆ ಚರ್ಚೆಗೆ ತೊಡಗಿದವರ ಮುಖಚರ್ಯೆಯನ್ನು ನೋಡುವುದರಲ್ಲಿ ಸಹ ಆ ಯುವಕರಿಗೆ ಬಹಳ ಆಸಕ್ತಿಯಿದ್ದಿರಬಹುದು. ಒಂದೊಂದು ವೇಳೆ ವಿದ್ವಾಂಸರೆನ್ನಿಸಿಕೊಂಡು ಗರ್ವಿಷ್ಠರಾದವರು ಅವನೊಡನೆ ನಗುನಗುತ್ತಾ ಮಾತಿಗೆ ಪ್ರಾರಂಭಿಸುವರು; ಆದರೆ ಚರ್ಚೆ ಸ್ವಲ್ಪ ಮುಂದುವರಿಯುವಷ್ಟರಲ್ಲಿಯೇ ಅವನ ವಾದದ ಬಲೆಗೆ ಸಿಕ್ಕಿ ಪರದಾಡಿ ಕೊನೆಗೆ ಹುಬ್ಬು ಗಂಟುಹಾಕಿಕೊಂಡು ತಮ್ಮ ಅಸಮಾಧಾನವನ್ನು ನುಂಗಿಕೊಳ್ಳಲು ಯತ್ನಿಸುತ್ತಾ ಹಿಂದಿರುಗಿ ನೋಡದೆ ಹೊರಟುಹೋಗುತ್ತಿದ್ದರು.

ಈ ವಿಚಿತ್ರ ವ್ಯಕ್ತಿಯೇ ಸಾಕ್ರೆಟೀಸ್. ಅಥೆನ್ಸಿನಂಥ ಸಣ್ಣ ಪಟ್ಟಣದಲ್ಲಿ ಸಾಕ್ರೆಟೀಸನು ಹೆಚ್ಚು ಕಡಮೆ ಎಲ್ಲಾ ಜನರ ಕಣ್ಣಿಗೂ ಬಿದ್ದಿದ್ದುದು ಅಷ್ಟೇನೂ ಆಶ್ಚರ್ಯಕರವಲ್ಲ. ಮನೆ, ಮಠ, ಕಸಬು, ಸಂಪಾದನೆ—ಇದೊಂದರ ಯೋಚನೆಯೂ ಇಲ್ಲದೆ ಪ್ರತಿದಿನವೂ ಅಂಗಡಿಬೀದಿಯಲ್ಲಿ ಕಂಡಕಂಡವರೊಡನೆ ಸಂಭಾಷಣೆ ಮಾಡುತ್ತಿರುವವರು ಎಷ್ಟು ಜನರಿರುತ್ತಾರೆ! ಆದರೆ ಹಳೆಯ ಬಟ್ಟೆಗಳನ್ನುಟ್ಟಿದ್ದ ಈ ಕುರೂಪಿ ಸಾಕ್ರೆಟೀಸನು ಜೋಡು ಹೊಲಿಯುವುದರ ಮತ್ತು ದನ ಕಾಯುವುದರ ಮಾತಾಡುವುದನ್ನು ಕೇಳುವುದಕ್ಕೆ ಅಥೆನ್ಸಿನವರಲ್ಲದೆ ಗ್ರೀಸಿನ ಇತರ ಪಟ್ಟಣಗಳಿಂದಲೂ ಕೆಲವರು ಬರುತ್ತಿದ್ದರು. ಸಾಕ್ರೆಟೀಸನ ಮರಣಕಾಲದಲ್ಲಿ ಅವನ ಜೊತೆಯಲ್ಲಿದ್ದವರ ಪಟ್ಟಿಯೊಂದನ್ನು ಪ್ಲೇಟೊ ಕೊಟ್ಟಿದ್ದಾನೆ. ಅದರಿಂದ ಆತನು ಈಲಿಸ್, ಥೀಬ್ಸ್, ಮೆಗಾರಾ, ಸೈರೀನಿ ಮುಂತಾದ ಕಡೆಗಳಿಂದಲೂ ಜನರನ್ನು ಆಕರ್ಷಿಸಿದ್ದನೆಂದು ತಿಳಿಯಬರುತ್ತದೆ. ಹೀಗೆ ಆತನ ಸಂಭಾಷಣೆಯನ್ನು ಕೇಳುವುದಕ್ಕೆ ಬಂದ ಜನರಲ್ಲಿ ಒಬ್ಬೊಬ್ಬರು ಒಂದೊಂದು ಸ್ವಭಾವದವರು. ಕ್ರೈಟೊ ಎಂಬುವನು ಬುದ್ಧಿಶಕ್ತಿ ಸ್ವಲ್ಪ ಕಡಮೆಯುಳ್ಳ ಧನಿಕ, ವೃದ್ಧ; ಸಿಮಿಯಾಸ್, ಸೀಬೀಸ್ ಎಂಬವರು ತತ್ವವಿಚಾರದಲ್ಲಿ ಆಸಕ್ತಿಯುಳ್ಳ ಯುವಕರು; ಆಂಟಿಸ್ಥನೀಸ್, ಅರಿಸ್ಟಿಪಸ್ ಎಂಬವರು ನೀತಿಶಾಸ್ತ್ರದಲ್ಲಿ ಬೇರೆ ಬೇರೆ ಮತಗಳನ್ನು ಸ್ಥಾಪಿಸಿದರು; ಪ್ಲೇಟೊ ಅದ್ಭುತ ಪ್ರತಿಭಾಶಾಲಿ, ತತ್ವವೇತ್ತ, ರಸಋಷಿ; ಸನೊಫನ್ನನು ಸೇನಾನಾಯಕ; ಆಲ್ಕಿಬಿಯೆಡೀಸ್, ಕ್ರಿಟಿಯಾಸ್ ಮೊದಲಾದವರು ಐಶ್ವರ್ಯದ, ದರ್ಪದ ಮತ್ತು ವಿಷಯ

ಸುಖದ ಲೋಲುಪತೆಯಿಂದ ತಮ್ಮ ಜೀವನವನ್ನು ವ್ಯರ್ಥಮಾಡಿಕೊಂಡದ್ದಲ್ಲದೆ ರಾಷ್ಟ್ರಕ್ಕೆ ಶತ್ರುಗಳಾಗಿ ಪರಿಣಮಿಸಿದವರು — ಇವರು ಕೂಡ ಸಾಕ್ರೆಟೀಸನ ಆಕರ್ಷಣ ಶಕ್ತಿಗೆ ಸಿಕ್ಕಿಬಿದ್ದಿದ್ದರು.

ಯೋಧರು, ತತ್ವಾನ್ವೇಷಕರು, ಸುಖಲೋಲುಪರು, ವೃದ್ಧರು, ಯುವಕರು, ಬಡವರು, ಧನಿಕರು—ಹೀಗೆ ವಿಧವಿಧವಾದ ಮನೋವೃತ್ತಿಯೂ ಜೀವನಪಥವೂ ಉಳ್ಳ ಜನರು ಸಾಕ್ರೆಟೀಸನ ಬಳಿಗೆ ಬಂದು ಅವನ ಮಾತುಗಳನ್ನು ಶ್ರದ್ಧೆಯಿಂದ ಕೇಳುತ್ತಿದ್ದರೆನ್ನುವುದು ನಿಜವಾಗಿಯೂ ಆಶ್ಚರ್ಯಕರವಾದ ಸಂಗತಿ. ಆತನೇನು ಪೆರಿಕ್ಲೀಸನಂತೆ ದೊಡ್ಡ ವಂಶಕ್ಕೆ ಸೇರಿದವನಲ್ಲ, ರಾಜನೀತಿಜ್ಞನಲ್ಲ. ಫಿಡಿಯಾಸನಂತೆ ಲೋಕಪ್ರಸಿದ್ಧವಾದ ಕಲಾವಸ್ತುಗಳನ್ನು ನಿರ್ಮಿಸಲಿಲ್ಲ; ಥೆಮಿಸ್ಟೋಕ್ಲೀಸನಂತೆ ಪ್ರಸಿದ್ಧ ದಳವಾಯಿಯಾಗಿ ಖ್ಯಾತಿ ಪಡೆಯಲಿಲ್ಲ. ಇದರ ಮೇಲೆ ಅವನು ಖಂಡಿತವಾದಿ, ಜನಗಳಲ್ಲಿ ವಿರೋಧ ಕಟ್ಟಿಕೊಳ್ಳಲು ಹೆದರುವವನಲ್ಲ. ಅವನು ಒಂದು ಗ್ರಂಥವನ್ನೂ ಬರೆಯಲಿಲ್ಲ; ತಾನು ಯಾರಿಗೂ ಏನನ್ನೂ ಬೋಧಿಸಲಾರೆನೆಂದು ಪದೇ ಪದೇ ಹೇಳುತ್ತಿದ್ದನು. ಇಷ್ಟಾದರೂ ಅವನ ಸುತ್ತಲೂ ಶಿಷ್ಯರ ಗುಂಪೊಂದು ಸೇರಬೇಕಾದರೆ ಅವನ ಜೀವನದಲ್ಲಿ ಸ್ಫೂರ್ತಿದಾಯಕವಾದದ್ದು ಏನೋ ಇದ್ದಿರಬೇಕು; ಅವನಲ್ಲಿ ಅಸಾಧಾರಣವಾದ ವ್ಯಕ್ತಿ ಮಹಿಮೆಯಿದ್ದಿರಬೇಕು. ಅದನ್ನು ಮನದಟ್ಟು ಮಾಡಿಕೊಳ್ಳಬೇಕಾದರೆ ಅವನ ಜೀವನ ಚರಿತ್ರೆಯನ್ನು ಸ್ವಲ್ಪ ತಿಳಿದುಕೊಳ್ಳುವುದು ಆವಶ್ಯಕ. ಅವನ ವಿಷಯವೇನಿದ್ದರೂ ಮುಖ್ಯವಾಗಿ ಪ್ಲೇಟೊ, ಸೆನೊಫನ್ ಇವರಿಬ್ಬರ ಗ್ರಂಥಗಳಿಂದ ತಿಳಿದುಕೊಳ್ಳಬೇಕಾಗಿದೆ. ಆದರೆ ಪ್ಲೇಟೊ ಚರಿತ್ರಕಾರನಲ್ಲ, ತತ್ವಜ್ಞಾನಿ; ಅದಲ್ಲದೆ ಕವಿ. ಅವನು ಕೊಟ್ಟಿರುವ ಚಿತ್ರದಲ್ಲಿ ನಿಜವಾದದ್ದೆಷ್ಟು, ಕವಿಯ ನಿರ್ಮಾಣವೆಷ್ಟು ಎಂದು ನಿರ್ಧರಿಸುವುದು ಕಷ್ಟ. ಇತ್ತ ಸೆನೊಫನ್ನನು ಸಾಕ್ರೆಟೀಸನ ಕಡೆಯ ವಕೀಲನಾಗಿ ನಿಂತಿದ್ದಾನೆ; ಅದಲ್ಲದೆ ಅವನಿಗೆ ಸಾಕ್ರೆಟೀಸನ ತತ್ವವಿಮರ್ಶೆಯನ್ನು ಚೆನ್ನಾಗಿ ಗ್ರಹಿಸುವ ಶಕ್ತಿಯಿಲ್ಲ. ಆದಕಾರಣ ನಾವು ಇವರಿಬ್ಬರ ಗ್ರಂಥಗಳನ್ನೂ ಜೊತೆಗೆ ಅರಿಸ್ಟೋಟಲ್, ಈಸ್ಕೈನೀಸ್ ಮೊದಲಾದವರು ಹೇಳಿರುವ ಅಲ್ಪಸ್ವಲ್ಪವನ್ನೂ ಹೋಲಿಸಿ ನೋಡಿ ಸಾಕ್ರೆಟೀಸನ ಜೀವನ ಚರಿತ್ರೆಯನ್ನು ಕಟ್ಟಬೇಕು. ಈ ವಿಷಯದಲ್ಲಿ ಯಾವಾಗಲೂ ಸ್ವಲ್ಪ

ಸಂದೇಹವಿದ್ದೇ ಇರುತ್ತದೆ; ಆದರೂ ಇವರೆಲ್ಲರೂ ಹೇಳುವ ವಿಷಯಗಳು ಕೆಲವು ಸಿಕ್ಕುವುದರಿಂದ ಬಹುಮಟ್ಟಿಗೆ ಸತ್ಯವಾದ ಚರಿತ್ರೆಯನ್ನು ಕಟ್ಟುವುದು ಅಸಾಧ್ಯವಲ್ಲ.

ಸಾಕ್ರೆಟೀಸನ ತಂದೆ ಒಬ್ಬ ಶಿಲ್ಪಿ; ಅವನ ಹೆಸರು ಸಾಫ್ರೊನಿಸ್ಕಸ್. ಅವನ ತಾಯಿ ಫೀನಾರಿಟೆ ಎಂಬೊಬ್ಬ ಸೂಲಗಿತ್ತಿ. ಸಾಕ್ರೆಟೀಸನು ಸ್ವಲ್ಪ ದಿನ ಶಿಲ್ಪವೃತ್ತಿಯನ್ನು ಅಭ್ಯಾಸಮಾಡಿದ್ದನು. ಆತನ ಹೆಂಡತಿ ಸಾಂತಿಪಿ ಬಹಳ ಗಯ್ಯಾಳಿಯೆಂದು ಪ್ರಸಿದ್ಧಿ ಪಡೆದಿದ್ದಾಳೆ. ಸಾಕ್ರೆಟೀಸನ ಸಂಸಾರದ ವಿಷಯ ನಮಗೆ ಹೆಚ್ಚು ತಿಳಿದಿಲ್ಲ. ಅವನ ಮೂರು ಮಕ್ಕಳಲ್ಲಿ ಮೊದಲನೆಯವನಾದ ಲಾಂಪ್ರೊಕ್ಲೀಸನು ಒಂದು ಸಲ ತನ್ನ ತಾಯಿಗೆ ಅವಿಧೇಯನಾಗಿದ್ದನೆಂದು ತಿಳಿದು ತಾಯಿಯ ವಿಷಯದಲ್ಲಿ ಗೌರವದಿಂದ ನಡೆದುಕೊಳ್ಳಬೇಕೆಂದು ಸಾಕ್ರೆಟೀಸನು ಬುದ್ಧಿ ಕಲಿಸಿದನಂತೆ. ಬಹುಶಃ ಸಾಕ್ರೆಟೀಸನು ತನ್ನ ಸಂಸಾರಕ್ಕೆ ಹೆಚ್ಚು ಗಮನ ಕೊಡಲಿಲ್ಲವೆಂದು ತೋರುತ್ತದೆ. ಸದಾ ಚರ್ಚೆಯಲ್ಲೇ ಕಾಲ ಕಳೆಯುತ್ತಿದ್ದ ಗಂಡನೊಡನೆ ಸಂಸಾರ ಮಾಡುವುದು ಸಾಂತಿಪಿಗೆ ಕಷ್ಟವೇ ಆಗಿರಬೇಕು. ಆದರೂ ಸಾಕ್ರೆಟೀಸನು ಹೆಂಡತಿಯನ್ನು ತೀರ ಅವಿಶ್ವಾಸದಿಂದ ಕಾಣುತ್ತಿದ್ದನೆಂದು ಹೇಳುವುದೂ ಕಷ್ಟ.

ಕ್ರಿ. ಪೂ. ೪೩೨ ರಿಂದ ಈಚೆಗೆ ಪೊಟಿಡಿಯ, ಡೀಲಿಯಂ, ಆಂಫಿಪೊಲಿಸ್ ಎಂಬ ಸ್ಥಳಗಳಲ್ಲಿ ನಡೆದ ಯುದ್ಧಗಳಲ್ಲಿ ಸಾಕ್ರೆಟೀಸನು ಸೈನಿಕನಾಗಿ ಕಾದಿದನು. ಆಗ ಅವನು ಅಸಾಧಾರಣವಾದ ಧೈರ್ಯಪರಾಕ್ರಮಗಳನ್ನೂ ಕಷ್ಟಸಹಿಷ್ಣುತೆಯನ್ನೂ ತೋರಿಸಿದ್ದಲ್ಲದೆ ಪೊಟಿಡಿಯ ಯುದ್ಧದಲ್ಲಿ ಗಾಯಪಟ್ಟು ಶತ್ರುಗಳ ಕೈಯಿಂದ ಹತನಾಗುವುದರಲ್ಲಿದ್ದ ಆಲ್ಕಿಬಿಯೆಡೀಸನ ಪ್ರಾಣವನ್ನುಳಿಸಿದನು. ಸುಮಾರು ಇದೇ ಕಾಲದಲ್ಲಿ ಅರಿಸ್ಟೋಫೆನೀಸನು 'ಮೇಘಗಳು' ಎಂಬ ಹಾಸ್ಯ ನಾಟಕವನ್ನು ಬರೆದು ಅದರಲ್ಲಿ ಸಾಕ್ರೆಟೀಸನನ್ನು ಜನರ ದ್ವೇಷಕ್ಕೂ ತಿರಸ್ಕಾರಕ್ಕೂ ಗುರಿಮಾಡಿದನು. ಆ ನಾಟಕದಲ್ಲಿ ಬರುವ ಸಾಕ್ರೆಟೀಸನು ಒಬ್ಬ ಸೋಫಿಸ್ಟ್,[1] ಮತ್ತು ಭೌತಶಾಸ್ತ್ರಾಭ್ಯಾಸಿ; ಸ್ಯೂಸ್ ಮೊದಲಾದ ದೇವತೆಗಳು ಸ್ವರ್ಗಚ್ಯುತರಾದರೆಂದೂ ಅವರ ಸ್ಥಾನದಲ್ಲಿ ಮೇಘ,

---

[1] ಅವನಿಗೂ ಸೋಫಿಸ್ಟರಿಗೂ ಬಾಂಧವ್ಯವೆಷ್ಟಿತ್ತೆಂಬುದನ್ನು ಸ್ವಲ್ಪ ಮುಂದೆ ವಿವರಿಸಿದೆ.

ಈಥರ್, ಗಾಳಿ ಮೊದಲಾದ ದೇವತೆಗಳು ಆಳುತ್ತಿರುವರೆಂದೂ ಅವನು ಜನರಿಗೆ ತಿಳಿಸುತ್ತಾನೆ. ಆದರೆ ನಿಜವಾದ ಸಾಕ್ರೆಟೀಸನಿಗೆ ಭೌತಶಾಸ್ತ್ರದಲ್ಲಿ ಹೆಚ್ಚು ಆಸಕ್ತಿಯಿರಲಿಲ್ಲ. "ಪ್ರಕೃತಿಯ ಮತ್ತು ವಿಶ್ವದ ಸ್ವರೂಪವನ್ನು ತಿಳಿಯುವುದು ಹಾಗಿರಲಿ, ನಿನ್ನನ್ನು ನೀನು ತಿಳಿದುಕೋ" ಎಂದು ಅವನು ಬೋಧಿಸುತ್ತಿದ್ದನು. ಸಾಕ್ರೆಟೀಸನು ಈ ನಾಟಕವನ್ನು ನೋಡಿ ಹೆಚ್ಚು ಕೋಪಗೊಂಡಂತೆ ತೋರುವುದಿಲ್ಲ; ನಕ್ಕಿರಬಹುದು. ಒಂದು ಸಲ ಅದನ್ನು ಆಡುತ್ತಿದ್ದಾಗ ಅದರಲ್ಲಿ ಹಾಸ್ಯಮಾಡಿದ್ದ ವ್ಯಕ್ತಿಯನ್ನು ಜನರು ನೋಡಲೆಂದೋ ಏನೋ, ಸಭೆಯುಲ್ಲಿದ್ದ ಸಾಕ್ರೆಟೀಸನು ಎಲ್ಲರಿಗೂ ಕಾಣುವಂತೆ ಎದ್ದು ನಿಂತುಕೊಂಡನೆಂದು ಒಂದು ಕಥೆ ಇದೆ.

ಆತನು ಎರಡು ವೇಳೆ ರಾಜಕೀಯ ತೊಡಕುಗಳಲ್ಲಿ ಸಿಕ್ಕಿಹಾಕಿಕೊಳ್ಳಬೇಕಾಯಿತು. ಕ್ರಿ. ಪೂ. ೪೦೬ ರಲ್ಲಿ ಅಥೆನ್ಸಿನ ನೌಕಾಸೈನ್ಯವು ಆರ್ಗಿನ್ಯೂಸಿ ಎಂಬ ಸ್ಥಳದಲ್ಲಿ ಜಯವನ್ನು ಪಡೆಯಿತು. ಸೇನಾನಾಯಕರು ಯುದ್ಧವಾದ ಮೇಲೆ, ಒಡೆದುಹೋದ ಹಡಗುಗಳಲ್ಲಿದ್ದ ತಮ್ಮ ಕಡೆಯ ಜನರನ್ನು ಉಳಿಸಿಕೊಳ್ಳುವುದಕ್ಕೂ ಸತ್ತವರ ಶವಗಳಿಗೆ ಸಂಸ್ಕಾರ ದೊರೆಯುವಂತೆ ಅವುಗಳನ್ನು ರಕ್ಷಿಸುವುದಕ್ಕೂ ತಕ್ಕ ಪ್ರಯತ್ನಮಾಡಲಿಲ್ಲ. ಅಥೆನ್ಸಿನ ಜನರು ಇದನ್ನು ಕೇಳಿ ರೋಷದಿಂದ ಆ ನಾಯಕರೆಲ್ಲರನ್ನೂ ವಿಚಾರಣೆಗೆ ತಂದರು. ಸೆನೆಟಿನವರು ಜನರನ್ನು ಸಮಾಧಾನಪಡಿಸುವುದಕ್ಕೋಸ್ಕರ ಆ ಎಂಟು ಜನ ನಾಯಕರನ್ನೂ ಒಬ್ಬೊಬ್ಬರನ್ನಾಗಿ ವಿಚಾರಣೆ ಮಾಡದೆ, ಅವರು ತಪ್ಪಿತಸ್ಥರೋ ಅಲ್ಲವೋ ಎಂಬುದನ್ನು ಒಟ್ಟಿಗೆ ಒಂದು ವೋಟಿನಿಂದ ನಿರ್ಣಯಿಸಬೇಕೆಂದಿದ್ದರು. ಹಾಗೆ ಮಾಡುವುದು ಅನ್ಯಾಯ ವರ್ತನೆ, ಅಥೆನ್ಸಿನ ಕಾನೂನಿಗೆ ವಿರುದ್ಧವಾದದ್ದು. ಈ ವಿಷಯವನ್ನು ವೋಟಿಗೆ ಹಾಕಬೇಕೆಂದಿದ್ದ ದಿನ ಸೆನೆಟಿನಲ್ಲಿ ಸಾಕ್ರೆಟೀಸನು ಸಭಾಧ್ಯಕ್ಷನಾಗಿದ್ದನು. ಅಥೆನ್ಸಿನ ಜನರ ಇಚ್ಛೆಗೆ ವಿರೋಧವಾಗಿ ನಡೆದರೆ ತನಗೆ ಸೆರೆಮನೆಯೋ ಮರಣವೋ ನಿಶ್ಚಯವೆಂದು ತಿಳಿದಿದ್ದರೂ ಸಾಕ್ರೆಟೀಸನು ಆ ಅನ್ಯಾಯವಾದ ಪ್ರಶ್ನೆಯನ್ನು ವೋಟಿಗೆ ಹಾಕುವುದಕ್ಕೆ ಒಪ್ಪಲಿಲ್ಲ. ಮಾರನೆಯ ದಿನ ಮತ್ತೊಬ್ಬನು ಅಧ್ಯಕ್ಷನಾದನು, ಅನ್ಯಾಯವೇನೋ ನಡೆದುಹೋಯಿತು; ಆದರೆ ಸಾಕ್ರೆಟೀಸನು ಅದನ್ನು ತಡೆಯುವುದಕ್ಕೆ ತನಗೆ ಸಾಧ್ಯವಾದಷ್ಟು ಪ್ರಯತ್ನಮಾಡಿದನು.

ಇದಾದ ಎರಡು ವರ್ಷಗಳ ಮೇಲೆ ಅಥೆನ್ಸಿನಲ್ಲಿ ಪ್ರಜಾಪ್ರಭುತ್ವವು ಹೋಗಿ ಕ್ರಿಟಿಯಾಸ್ ಮೊದಲಾದ ಮೂವತ್ತು ಜನ ಘಾತುಕರು ಪ್ರಭುತ್ವದಲ್ಲಿದ್ದರು. ಅವರು ಸಾಕ್ರೆಟೀಸನನ್ನೂ ಇನ್ನು ಮೂವರನ್ನೂ ಕರೆಸಿ ತಾವು ಕೊಲ್ಲಿಸ ಬೇಕೆಂದಿದ್ದ ಲಿಯಾನ್ ಎಂಬವನನ್ನು ಸಾಲಾಮಿಸ್ಸಿನಿಂದ ಕರೆದುಕೊಂಡು ಬರುವಂತೆ ಆಜ್ಞಾಪಿಸಿದರು. ಸಾಕ್ರೆಟೀಸನು "ಸಾವು ಬಂದರೆ ಬರಲಿ, ಅಧರ್ಮವನ್ನಾಚರಿಸುವುದಿಲ್ಲ" ಎಂದುಕೊಂಡು ಅವರ ಆಜ್ಞೆಯನ್ನುಲ್ಲಂಘಿಸಿ ಮನೆಗೆ ಹೊರಟುಹೋದನು. ಇನ್ನು ಮೂವರೇನೋ ಸಾಲಾಮಿಸ್ಸಿಗೆ ಹೋಗಿ ಲಿಯಾನನ್ನು ಕರೆತಂದರು. ಇದಕ್ಕೆ ಮೊದಲೇ ಸಾಕ್ರೆಟೀಸನು ಕ್ರಿಟಿಯಾಸ್ ಮೊದಲಾದವರ ದುಷ್ಕೃತ್ಯಗಳನ್ನು ಖಂಡಿಸಿದ್ದಕ್ಕಾಗಿ, ಅವರು ಅವನನ್ನು ಕರೆಸಿ "ಇನ್ನು ಮುಂದೆ ನೀನು ಯುವಕರೊಡನೆ ಸಂವಾದಮಾಡಕೂಡದು" ಎಂದು ಆಜ್ಞೆಮಾಡಿದ್ದರು. ಅಥೆನ್ಸಿನವರು ಆ ಘಾತುಕರ ಪ್ರಭುತ್ವವನ್ನು ಬೇಗ ಕೊನೆಗಾಣಿಸಿದ್ದರಿಂದ ಸಾಕ್ರೆಟೀಸನಿಗೆ ಅವರಿಂದ ಕೇಡಕೇನೂ ಆಗಲಿಲ್ಲ.

ಇವೆರಡು ಸಂದರ್ಭಗಳಲ್ಲಿ ಹೊರತು ಆತನು ರಾಜಕೀಯ ವಿಷಯ ಗಳಿಗೆ ಕೈ ಹಾಕಿದವನೇ ಅಲ್ಲ. ಬೆಳಗ್ಗೆ ಎದ್ದು ಜನಸಂದಣಿ ಇರುವ ಸ್ಥಳ ಗಳಿಗೆ ಹೋಗಿ ಅಲ್ಲಿ ಸಿಕ್ಕಿದವರೊಡನೆ ಮಾತಾಡುವುದೇ ಅವನ ಕೆಲಸ. ಮಾತಾಡುವಾಗ ಯಾವ ವಿಷಯವಾದರೂ ಸ್ಪಷ್ಟವಾಗಿಲ್ಲವೆಂದು ತೋರಿದರೆ, ಅಜ್ಞಾನವೋ ಅಥವಾ ಬರಿಯ ಮಂಜುಮಂಜಾದ ಅಭಿಪ್ರಾಯವೋ ಜ್ಞಾನದ ವೇಷಹಾಕಿಕೊಂಡು ಬಂದರೆ, ಆ ಕ್ಷಣವೇ ಪ್ರಶ್ನೆಹಾಕಿ ವಿಷಯವನ್ನು ಸ್ಪಷ್ಟ ಪಡಿಸುವನು; ಅಜ್ಞಾನವನ್ನು ಹೊರಗೆಡಹುವನು. "ನಾನು ಏನನ್ನೂ ಬೋಧಿಸುವುದಿಲ್ಲ" ಎಂದು ಅವನು ಪದೇ ಪದೇ ಹೇಳಿದ್ದರೂ ನಾವು ಆತನನ್ನು ಬೋಧಕನೆಂದು ಗಣಿಸಬೇಕಾಗುತ್ತದೆ. ತನ್ನ ಸಂವಾದವನ್ನು ಕೇಳಿದವರಿಂದ ಅವನು ಹಣವನ್ನು ತೆಗೆದುಕೊಳ್ಳುತ್ತಿರಲಿಲ್ಲ. ಅವನು ಐಶ್ವರ್ಯಕ್ಕೂ ಪ್ರಾಪಂಚಿಕ ಸುಖಕ್ಕೂ ಸ್ವಲ್ಪವೂ ಮನಸ್ಸುಕೊಡದೆ ಜ್ಞಾನ ವೊಂದೇ ನಿಜವಾಗಿ ಬೆಲೆಯುಳ್ಳದ್ದೆಂದು ನಂಬಿ ಅದನ್ನೇ ಅರಸಿಕೊಂಡು ತಿರುಗುತ್ತಿದ್ದನು. ಆದರೆ ಅವನು ಸನ್ಯಾಸಿಯಂಥ ಮನುಷ್ಯನೆಂದೂ ಪ್ರಾಪಂಚಿಕ ಜೀವನವನ್ನು ದ್ವೇಷಿಸುವವನೆಂದೂ ನಾವು ಭಾವಿಸಬಾರದು. ಅವನು ಯಾವ ಸುಖವನ್ನೂ ಬಯಸದೆ ಇದ್ದರೂ ಪ್ರಪಂಚವನ್ನು ನಿಷ್ಠುರ

ವಾಗಿ ತೊರೆದಿರಲಿಲ್ಲ; ಪ್ರಪಂಚದಲ್ಲಿ ಇದ್ದುಕೊಂಡು ನಿರ್ಲಿಪ್ತನಾಗಿದ್ದನು. ದ್ರಾಕ್ಷಾರಸವೆಂದರೆ ಅವನಿಗೆ ಆಶೆಯಿಲ್ಲ; ಅದನ್ನು ಕುಡಿಯದೆಯೇ ಎಷ್ಟು ದಿನ ಬೇಕಾದರೂ ಇರಬಲ್ಲನು. ಆದರೆ ಸಮಯಬಿದ್ದಾಗ ತನ್ನ ಜೊತೆಯವರೆಲ್ಲರಿಗಿಂತಲೂ ಹೆಚ್ಚಾಗಿ ಕುಡಿದು, ಆದರೂ ಮತ್ತನಾಗದೆ ಇರಬಲ್ಲನು. ಒಂದು ರಾತ್ರಿ ಅವನೂ ಇನ್ನು ಕೆಲವರೂ ದ್ರಾಕ್ಷಾರಸವನ್ನು ಮುಂದಿಟ್ಟುಕೊಂಡು ಮಾತಾಡುತ್ತಾ ಕುಳಿತರು. ಆ ಗುಂಪಿನವರೆಲ್ಲರೂ ಮಧುಪಾನದಿಂದ ಮತ್ತರಾಗಿ ಬಿದ್ದು ಸಾಕ್ರೆಟೀಸನ ಜೊತೆಯಲ್ಲಿ ಇಬ್ಬರು ಮಾತ್ರ ಚರ್ಚೆಮಾಡುತ್ತಾ ಕುಳಿತರು. ಬೆಳಗಿನ ಜಾವದ ಹೊತ್ತಿಗೆ ಅವರೂ ನಿದ್ರೆಮಾಡಿದರು. ಸಾಕ್ರೆಟೀಸನು ಮಾತ್ರ ಎದ್ದು ಸ್ನಾನಮಾಡಿ ಎಂದಿನಂತೆ ತನ್ನ ಕೆಲಸಕ್ಕೆ ಹೊರಟು ಹೋದನು.

ಜ್ಞಾನಸಾಧನೆಗೆ ಆವಶ್ಯಕವಾದ ಮನಶ್ಶಕ್ತಿಯೂ ಧಾರಣಾಶಕ್ತಿಯೂ ಅವನಲ್ಲಿದ್ದುವು. ಯಾವುದಾದರೂ ಒಂದು ಸಮಸ್ಯೆ ಮನಸ್ಸಿಗೆ ಬಂದರೆ ಎಷ್ಟು ಹೊತ್ತಾದರೂ ಸರಿಯೆ, ಅದು ಪೂರ್ತಿಯಾಗುವವರೆಗೂ ಮತ್ತೆ ಯಾವುದಕ್ಕೂ ಗಮನಕೊಡದೆ ಮನಸ್ಸನ್ನು ಅಲ್ಲಿಯೇ ನಿಲ್ಲಿಸಬಲ್ಲನು. "ಒಂದು ದಿನ ಪ್ರಾತಃಕಾಲ ಸಾಕ್ರೆಟೀಸನು ಧ್ಯಾನದಲ್ಲಿರುವವನಂತೆ ಒಂದು ಕಡೆ ನಿಂತಿದ್ದನು. ತಾನು ಯೋಚಿಸುತ್ತಿದ್ದ ವಿಷಯ ಬಗೆಹರಿಯದೆ ಇದ್ದದ್ದರಿಂದಲೋ ಏನೋ ತನಗೆ ತಾನೇ ಪ್ರಶ್ನೆ ಹಾಕಿಕೊಂಡು ಚರ್ಚೆಮಾಡುತ್ತಿರುವವನಂತೆ ಬಹಳ ಹೊತ್ತು ಹಾಗೆಯೇ ನಿಂತಿದ್ದನು. ಮಧ್ಯಾಹ್ನ ಕೆಲವರು ಸೈನಿಕರು ಅವನನ್ನು ನೋಡಿ ಒಬ್ಬರಿಗೊಬ್ಬರು 'ಸಾಕ್ರೆಟೀಸನು ಏನೋ ಯೋಚಿಸುತ್ತಾ ಅಲ್ಲಿಯೇ ನಿಂತಿದ್ದಾನೆ' ಎಂದುಕೊಂಡರು. ಆಗ ಬೇಸಗೆ; ಆ ರಾತ್ರಿ ಅಯೋನಿಯದವರು ಕೆಲವರು ತಮ್ಮ ಕಂಬಳಿಗಳನ್ನು ತಂದು ತಣ್ಣಗಿರುತ್ತದೆಂದು ಅಲ್ಲಿಯೇ ಮಲಗಿಕೊಂಡರು. ಬೆಳಗಿನವರೆಗೂ ಸಾಕ್ರೆಟೀಸನು ಅಲ್ಲಿಯೇ ನಿಂತಿದ್ದುದನ್ನು ಅವರು ನೋಡಿದರು. ಬೆಳಗಾದ ಮೇಲೆ ಅವನು ಸೂರ್ಯನಿಗೆ ನಮಸ್ಕರಿಸಿ ಸ್ತೋತ್ರಮಾಡಿ ಹೊರಟು ಹೋದನು." (ಪ್ಲೇಟೋ; ಸಿಂಪೋಸಿಯಂ.)

ಇದೆಲ್ಲವನ್ನೂ ನೋಡಿದರೆ ಆತನಲ್ಲಿ ಅಸಾಧಾರಣವಾದ ವ್ಯಕ್ತಿಮಹಿಮೆಯಿದ್ದಿತೆಂದು ಸ್ಪಷ್ಟವಾಗುತ್ತದೆ. ಆ ಮಹಿಮೆಯಿಲ್ಲದಿದ್ದರೆ ಅವನ

ಬೋಧನೆಯಿಂದ ಅದನ್ನು ಗ್ರಹಿಸಲಾರದವರಿಗೆ ಕೆಡಕಾಗಿದ್ದರೂ ಆಗಬಹುದಾಗಿತ್ತು. ಅವನು ಕೊಟ್ಟ ವಿಮರ್ಶನಶಿಕ್ಷಣವು ಯುವಕರಿಗೆ ಮತ್ತನ್ನು ತಂದು ಅವರು ಹಿರಿಯರನ್ನು ಅಲ್ಲಗಳೆದು ರಾಷ್ಟ್ರವನ್ನೂ ಮತವನ್ನೂ ನಿಕೃಷ್ಟವಾಗಿ ಕಾಣುವಂತೆ ಮಾಡಬಹುದಾಗಿತ್ತು. ಆದರೆ ಸಾಕ್ರೆಟೀಸನ ಸ್ವಂತ ಜೀವನವು ಅವನ ಬೋಧನೆಗೆ ಸಹಾಯವಾಗಿ, ಅದರ ಅರ್ಥವನ್ನು ಮತ್ತಷ್ಟು ಸ್ಪಷ್ಟಪಡಿಸಿ ಇಂಥ ಅಪಾಯವನ್ನು ಹೋಗಲಾಡಿಸುತ್ತಿತ್ತು. ಸಾಕ್ರೆಟೀಸನು ಬರಿಯ ಪ್ರಶ್ನಕಾರನಲ್ಲ; ವಿಮರ್ಶಕ ಮಾತ್ರನಲ್ಲ; ಸಂಸ್ಥೆಗಳನ್ನು ಹಾಳುಮಾಡುವವನಲ್ಲ; ಸ್ಪಷ್ಟವಾದ ನಿರ್ಮಲಜ್ಞಾನಕ್ಕಾಗಿ ಆತುರಪಡುತ್ತಿರುವವನು. "ಜ್ಞಾನವೆನ್ನುವುದು ಇದೆ; ಅದನ್ನು ಪಡೆಯುವುದಕ್ಕಿಂತ ಶ್ರೇಯಸ್ಕರವಾದದ್ದು ಯಾವುದೂ ಇಲ್ಲ" ಎಂಬ ಅವನ ನಿಶ್ಚಲವಾದ ನಂಬಿಕೆಯೂ ಅವನ ಆದರ್ಶಜೀವನವೂ ಕೇವಲ ಸಂದೇಹವಾದಿಯ ಮನೋವೃತ್ತಿಗೆ ಸಂಜೀವನ.

ಜ್ಞಾನದ ವಿಷಯಲ್ಲಿ ಹೇಗೋ ನೀತಿಯ ವಿಷಯದಲ್ಲೂ ಹಾಗೆಯೇ ಜನಸಾಮಾನ್ಯದ ನೀತಿನಿರ್ಣಯಗಳನ್ನು ವಿಮರ್ಶೆಗೊಳಪಡಿಸಿ ಅವುಗಳಲ್ಲಿರುವ ಜಟಿಲತೆಯನ್ನು ಹೊರಹಾಕುವುದು ಒಳ್ಳೆಯದು. ಆದರೆ ಅಜಾಗರೂಕರಾದ ಯುವಕರು ಇದನ್ನು ಕೇಳಿ ನೀತಿನಿರ್ಣಯವೇ ಸಾಧ್ಯವಲ್ಲವೆಂದೂ ಪ್ರತಿಯೊಬ್ಬನೂ ತನಗೆ ತೋರಿದಂತೆ ನಡೆಯಬಹುದೆಂದೂ ಭಾವಿಸುವ ಸಂಭವವುಂಟು. ಆದರೆ ತಮಗೆ ವಿಮರ್ಶೆಯ ಮಾರ್ಗವನ್ನು ತೋರಿಸಿಕೊಟ್ಟ ಸಾಕ್ರೆಟೀಸನೇ ಪ್ರಾಪಂಚಿಕ ಸುಖವನ್ನು ತೃಣವಾಗಿ ಕಂಡು ಏನು ಕಷ್ಟ ಬಂದರೂ ಲೆಕ್ಕಿಸದೆ ಸಚ್ಚರಿತ್ರನಾಗಿದ್ದುದನ್ನು ನೋಡಿದರೆ ಎಂಥ ಸುಖಲೋಲುಪರಾದ ಯುವಕರಾದರೂ ಸೌಶೀಲ್ಯಕ್ಕೆ ಬೆಲೆಕೊಡದಿರಲು ಆಗುತ್ತಿರಲಿಲ್ಲ.

ಆತನ ಮಾತುಗಳನ್ನು ಕೇಳಿದವರ ಮನಸ್ಸಿನಲ್ಲಿ ಒಂದು ಮಹತ್ತಾದ ಪರಿಣಾಮವುಂಟಾಗುತ್ತಿತ್ತು. ಪ್ಲೇಟೋವಿನ 'ಸಿಂಪೋಸಿಯಮ್' ನಲ್ಲಿ ಆಲ್ಕಿಬಿಯೆಡೀಸನು ಆ ಪರಿಣಾಮವನ್ನು ವರ್ಣಿಸಿ ಸಾಕ್ರೆಟೀಸನನ್ನು ಹೀಗೆ ಕೊಂಡಾಡಿದ್ದಾನೆ; "ಆತನು (ಸಾಕ್ರೆಟೀಸನು) ಮಾತಾಡುವುದನ್ನು ಕೇಳಿ

ದಾಗ ಕಾರಿಬ್ಯಾಂಟಿಕ್ ವ್ರತ[1]ಗಳನ್ನಾಚರಿಸುವವರ ಹೃದಯವು ಹೇಗೆ ನರ್ತಿಸುತ್ತದೋ ಅದಕ್ಕಿಂತಲೂ ಹೆಚ್ಚಾಗಿ ನನ್ನ ಹೃದಯವು ನರ್ತಿಸುತ್ತದೆ. ಅವನು ಮಾತಾಡುತ್ತಿರುವಾಗ ನನ್ನ ಕಣ್ಣಿನಿಂದ ನೀರು ಧಾರೆಯಾಗಿ ಸುರಿದು ಹೋಗುತ್ತದೆ; ನಾನೊಬ್ಬನೇ ಅಲ್ಲದೆ ಇತರರು ಇದೇ ಸ್ಥಿತಿಯಲ್ಲಿರುವುದನ್ನು ನಾನು ನೋಡಿದ್ದೇನೆ. ನಾನು ಪೆರಿಕ್ಲೀಸನೇ ಮೊದಲಾದ ಪ್ರಸಿದ್ಧ ವಾಗ್ಮಿಗಳ ಭಾಷಣಗಳನ್ನು ಕೇಳಿ ಸಂತೋಷಪಟ್ಟಿದ್ದೇನೆ; ಆದರೆ ಆಗ ನನಗೆ ಈ ಅನುಭವವಾಗಲಿಲ್ಲ; ನನ್ನ ಆತ್ಮವು ಕಲಕಿಹೋಗಿ ಗುಲಾಮನಂತೆ ಕೆಳಗೆ ಬಿದ್ದು ತನ್ನನ್ನು ತಾನೇ ನಿಂದಿಸಿಕೊಳ್ಳುವಂತಾಗಲಿಲ್ಲ. ಆದರೆ ಈ ಮಾರ್ಸಿಯಸ್ಸನು[2] ನನಗೆ ಈ ಅನುಭವವಾಗುವಂತೆ ಮಾಡಿ ಕೊನೆಗೆ 'ನನ್ನ ಜೀವನ ಕೇವಲ ನಿರರ್ಥಕವಾದದ್ದು' ಎನ್ನಿಸಿಬಿಟ್ಟಿದ್ದಾನೆ. ನಾನು ಹೇಳುವುದು ಸುಳ್ಳೆನ್ನಬೇಡ, ಸಾಕ್ರೆಟೀಸ್. ಈಗಲೂ ನಾನೇನಾದರೂ ನಿನ್ನ ಮಾತುಗಳನ್ನು ಕೇಳಲು ನಿಶ್ಚಯಿಸಿ ಇಲ್ಲಿ ಕುಳಿತರೆ ಅವುಗಳನ್ನು ನಾನು ಎದುರಿಸಲಾರೆ; ಹಿಂದೆ ಅನುಭವಿಸಿದ್ದೆಲ್ಲವನ್ನೂ ಮತ್ತೆ ಅನುಭವಿಸಬೇಕಾಗುತ್ತದೆ. ನೋಡಿ, ಮಿತ್ರರೇ, ನನಗೇ ಅನೇಕ ವಿಷಯಗಳಲ್ಲಿ ಕೊರತೆಯಿರುವಾಗ ನನಗೆ ಆವಶ್ಯಕವಾದದ್ದನ್ನು ಸಂಪಾದಿಸಿಕೊಳ್ಳದೆ ಅಥೆನ್ಸಿನವರ ಉದ್ಧಾರಕ್ಕೆ ಹೊರಟಿದ್ದೇನೆಂದು ಇವನು ನನ್ನ ಬಾಯಿಂದ ಹೊರಡಿಸುತ್ತಾನೆ. ಆದ್ದರಿಂದ ಸೈರೆನ್ನರ ಗಾನ ಕೇಳದಿರಲು ಕಿವಿಗಳನ್ನು ಮುಚ್ಚಿಕೊಳ್ಳುವಂತೆ ನಾನೂ ಕಿವಿಗಳನ್ನು ಮುಚ್ಚಿಕೊಂಡು ಓಡಿಹೋಗುತ್ತೇನೆ. ಹಾಗೆ ಮಾಡದಿದ್ದರೆ ಈತನ ಬಳಿ ಕುಳಿತು ಅವನ ಮಾತುಗಳನ್ನು ಕೇಳುವುದರಲ್ಲಿಯೇ ವೃದ್ಧನಾಗ

---

[1] ಸೈಬೀಲಿ ಅಥವಾ ರ್ಹಿಯ ಎಂಬ ದೇವತೆಗೆ ಸಂಬಂಧಪಟ್ಟ ವ್ರತಗಳು. ಆ ದೇವತೆಯ ಪೂಜೆಯನ್ನು ಮದ್ದಲೆಯ ಲಯಕ್ಕೆ ಸರಿಯಾದ ನೃತ್ಯದೊಡನೆ ನಡೆಸುತ್ತಿದ್ದರು. ನಮ್ಮಲ್ಲಿ ಅಂಬಾ ಭವಾನಿಗೆ ಗೊಂದಲ ಹಾಕುವುದನ್ನು ಬಹುಶಃ ಅದಕ್ಕೆ ಹೋಲಿಸಬಹುದು.

[2] ಇವನೊಬ್ಬ 'ಸಾಟರ್.' ನೋಡುವುದಕ್ಕೆ ಬಹಳ ವಿಕಾರರೂಪಿಯಾದರೂ ಇವನು ಅದ್ಭುತವಾಗಿ ಕೊಳಲನ್ನು ಬಾರಿಸುತ್ತಿದ್ದನು. ಅಪಾಲೋವಿಗೂ ಇವನಿಗೂ ಸಂಗೀತದಲ್ಲಿ ಸ್ಪರ್ಧೆ ಹುಟ್ಟಿ, ಅಪಾಲೋ ಇವನನ್ನು ಸೋಲಿಸಿಕೊಂದನು.

ಬೇಕಾಗುತ್ತದೆ. ನನ್ನಲ್ಲಿ ನಾಚಿಕೆಯೆನ್ನುವುದು ಇದೆಯೆಂದೇ ಯಾರೂ ಹೇಳಲಾರರು. ಆದರೆ ಈತನು ನನ್ನನ್ನು ನಾಚಿಕೆಪಟ್ಟುಕೊಳ್ಳುವ ಸ್ಥಿತಿಗೆ ತಂದಿದ್ದಾನೆ. ಇವನೊಬ್ಬನೇ ನನಗೆ ಪಶ್ಚಾತ್ತಾಪವನ್ನೂ ಭಯವನ್ನೂ ಉಂಟುಮಾಡಬಲ್ಲವನು; ಏಕೆಂದರೆ ನಾನು ಅವನ ಎದುರಿಗೆ ನಿಂತು ಅವನು ಹೇಳುವುದು ತಪ್ಪೆನ್ನಲಾರೆ; ಅವನು ಹೇಳುವ ರೀತಿಯಲ್ಲಿ ನಡೆಯುವುದಿಲ್ಲವೆಂದೂ ಹೇಳಲಾರೆ. ಆದರೆ ಅವನನ್ನು ಬಿಟ್ಟು ಹೊರಟುಹೋದಬಳಿಕ ಮಂದಿ ನನ್ನ ಮೇಲೆ ಹೊರಿಸುವ ವೈಭವವು ನನ್ನನ್ನು ಮರುಳುಗೊಳಿಸುತ್ತದೆ. ಆದ್ದರಿಂದ ನಾನು ಅವನಿಂದ ತಪ್ಪಿಸಿಕೊಂಡು ಹೋಗಿ ಅವಿತುಕೊಳ್ಳುತ್ತೇನೆ. ಅವನನ್ನು ನೋಡಿದಾಗ ಆತ್ಮತಿರಸ್ಕಾರದಿಂದ ಭೂಮಿಗಿಳಿದು ಹೋಗುತ್ತೇನೆ. ಏಕೆಂದರೆ ಯಾವುದು ನನ್ನ ಕರ್ತವ್ಯವೆಂದು ನಾನೇ ಒಪ್ಪಿರುತ್ತೇನೆಯೋ ಅದನ್ನ ನಾನು ಮಾಡಿರುವುದಿಲ್ಲ. ಎಷ್ಟೋ ವೇಳೆ ಇವನ ಮುಖ ಮತ್ತೆ ಪ್ರಪಂಚದಲ್ಲಿ ಕಾಣದಂತಾದರೆ ಸಾಕು ಎಂದು ಅವನ ಮರಣವನ್ನು ಹಾರೈಸಿದ್ದೇನೆ. ಆದರೆ ಹಾಗೇನಾದರೂ ಅವನಿಗೆ ಮರಣ ಸಂಭವಿಸಿದರೆ ನನಗೆ ಇನ್ನೂ ಹೆಚ್ಚು ಸಂಕಟವಾಗುತ್ತದೆ. ಅದನ್ನ ನಾನು ಬಲ್ಲೆ. ಆದ್ದರಿಂದ ನಾನು ಎಲ್ಲಿ ಹೋಗಬೇಕು, ಈತನನ್ನು ಏನುಮಾಡಬೇಕು ಎನ್ನುವುದೇ ತಿಳಿಯದ ಹಾಗಾಗಿದೆ.....

" ಸಾಕ್ರೆಟೀಸನು ಸಾಧ್ಯವಾದ ಮಟ್ಟಿಗೆ ಸೌಂದರ್ಯವಂತರ ಸಹವಾಸದಲ್ಲಿಯೇ ಇರುವುದನ್ನೂ ತನಗೆ ಯಾವ ವಿಷಯದಲ್ಲಿಯೂ ಏನೂ ತಿಳಿಯದೆಂದು ಹೇಳಿಕೊಳ್ಳುವುದನ್ನೂ ನೀವೆಲ್ಲರೂ ಬಲ್ಲಿರಿ. ಆದರೆ ಆತನ ಹೃದಯವನ್ನು ಒಳಹೊಕ್ಕು ನೋಡಿದರೆ ಆಶ್ಚರ್ಯಕರವಾದ ಆತ್ಮ ಸಂಯಮವೂ ಜ್ಞಾನವೂ ಕಾಣಬರುತ್ತವೆ. ಬರಿಯ ದೇಹಸೌಂದರ್ಯವೆಂದರೆ ಅವನಿಗೆ ಬೆಲೆಯಿಲ್ಲ; ಸೌಂದರ್ಯ, ಐಶ್ವರ್ಯ, ವೈಭವ ಮೊದಲಾದ ಜನಸಾಮಾನ್ಯವು ಮೆಚ್ಚುವ ಬಾಹ್ಯವಸ್ತುಗಳನ್ನು ಕಂಡರೆ ಅವನಿಗೆ ತಿರಸ್ಕಾರ. ಈ ವಸ್ತುಗಳನ್ನೂ ಅವುಗಳೇ ಘನವಾದುವೆಂದು ಎಣಿಸುವ ನಮ್ಮಂಥವರನ್ನೂ ಅವನು ನಿಕೃಷ್ಟವಾಗಿ ಕಾಣುತ್ತಾನೆ. ನಾವು ಘನವಾದದ್ದೆಂದು ಭಾವಿಸುವುದನ್ನೆಲ್ಲಾ ಅವನು ಹಾಸ್ಯಕ್ಕೆ ಗುರಿಮಾಡುತ್ತಿರುತ್ತಾನೆ. ಆದರೆ ಆತನ ಅಂತರ್ಯವನ್ನು ಹೊಕ್ಕು ನೋಡಿದರೆ ಅಲ್ಲಿ ಎಂಥ ದಿವ್ಯಚಿತ್ರಗಳಿವೆ ಎಂಬು

ದನ್ನು ಬಲ್ಲಿರಾ? ನಾನು ಅವುಗಳನ್ನು ನೋಡಿದ್ದೇನೆ; ಅವು 'ಸಾಕ್ರೆಟೀಸನು ಏನು ಆಜ್ಞಾಪಿಸಿದರೂ ನಾವು ಅದರಂತೆ ನಡೆಯುಬೇಕು. ಆತನ ಮಾತು ದೇವರ ಮಾತೆಂದೇ ಭಾವಿಸಬೇಕು' ಎನ್ನಿಸುವಷ್ಟು ಸುಂದರತರವಾಗಿಯೂ ಸುವರ್ಣಕಾಂತಿಯುಕ್ತವಾಗಿಯೂ ಆಶ್ಚರ್ಯಜನಕವಾಗಿಯೂ ದೈವಸಮಾನ ವಾಗಿಯೂ ಇವೆ."—ಈ ಸ್ತೋತ್ರವು ಐಹಿಕಸುಖಗಳಲ್ಲಿ ಮುಳುಗಿದ್ದ ಆಲ್ಸಿಬಿಯೆಡೀಸನದು.

ಸಕಲವಿಷಯ ವಿಮರ್ಶೆ, ಅದರ ಮೂಲಕ ನಿಷ್ಕೃಷ್ಟವಾದ ಜ್ಞಾನಾ ರ್ಜನೆ, ಅದರ ಮೂಲಕ ಉತ್ತಮ ಜೀವನಸಾಧನೆ—ಇದೇ ಸಾಕ್ರೆಟೀಸನ ಜೀವನಧ್ಯೇಯ; ಇದೇ ಅವನಿಗೆ ಮೃತ್ಯುನಿಮಿತ್ತವೂ ಆಯಿತು. ಕೀರಿಫನ್ ಎಂಬುವನು ಡೆಲ್ಫಿಯ ದೇವವಾಣಿಯನ್ನು "ಸಾಕ್ರೆಟೀಸನಿಗಿಂತ ಹೆಚ್ಚು ಜ್ಞಾನಿಗಳು ಯಾರಾದರೂ ಇದ್ದಾರೆಯೇ?" ಎಂದು ಕೇಳಿದನೆಂದೂ ಅದಕ್ಕೆ ಆ ವಾಣಿ "ಇಲ್ಲ" ಎಂದು ಉತ್ತರ ಕೊಟ್ಟಿತೆಂದೂ ಆ ಉತ್ತರದ ಸತ್ಯವನ್ನು ಪರೀಕ್ಷಿಸುವುದಕ್ಕೋಸ್ಕರ ತಾನು ವಿಮರ್ಶೆಯ ಕೆಲಸವನ್ನು ಕೈಕೊಂಡೆನೆಂದೂ ಸಾಕ್ರೆಟೀಸನು 'ಸಮರ್ಥನವಾದ'ದಲ್ಲಿ ಹೇಳಿದ್ದಾನೆ. ಆದರೆ ಕೀರಿಫನ್ನನು ಡೆಲ್ಫಿಗೆ ಹೋಗಿ ಆ ಪ್ರಶ್ನೆಯನ್ನು ಕೇಳಬೇಕಾದರೆ ಅದಕ್ಕೆ ಮೊದಲೇ ಸಾಕ್ರೆಟೀಸನು ಜ್ಞಾನಿಯೆಂದು ಪ್ರಸಿದ್ಧಿ ಪಡೆದಿರಬೇಕು. ಡೆಲ್ಫಿಯ ವಾಣಿಯಿಂದ ಆ ಉತ್ತರ ಬಂದಿರಬಹುದು; ಆದರೆ ಸಾಕ್ರೆಟೀ ಸನು ಜನರ ಜ್ಞಾನವನ್ನು ವಿಮರ್ಶೆ ಮಾಡಲು ಪ್ರಾರಂಭಿಸಿದ್ದಕ್ಕೆ ಅದೇ ಕಾರಣವೆಂದು ಹೇಳಲಾಗುವುದಿಲ್ಲ. ಸಾಧಾರಣವಾಗಿ ನಾವು ಜ್ಞಾನವೆಂದು ತಿಳಿದುಕೊಂಡಿರುವುದು ಬಹುಮಟ್ಟಿಗೆ ಅಸ್ಪಷ್ಟವಾದ ಅಭಿಪ್ರಾಯ ಮಾತ್ರ; ನಾವು ಅಜ್ಞಾನದಲ್ಲಿದ್ದುಕೊಂಡು ಅದನ್ನೇ ಜ್ಞಾನವೆಂದು ಭಾವಿ ಸುತ್ತೇವೆ. ಇದನ್ನು ಜನರಿಗೆ ಮನಗಾಣಿಸಿಕೊಟ್ಟು ಜ್ಞಾನಾರ್ಜನೆಗೆ ಸಹಾಯ ಮಾಡಲು ತಾನು ದೇವರಿಂದ ನಿಯುಕ್ತನಾಗಿದ್ದೇನೆಂದೇ ಸಾಕ್ರೆಟೀಸನ ನಂಬಿಕೆ. "ಜನಗಳನ್ನು ಪರೀಕ್ಷಿಸಬೇಕೆಂದು ಕನಸುಗಳ ಮೂಲಕ, ದೇವ ವಾಣಿಯ ಮೂಲಕ, ಅದಲ್ಲದೆ ದೈವಾಜ್ಞೆಯನ್ನು ಮನುಷ್ಯನು ಯಾವ ಯಾವ ರೀತಿಯಲ್ಲಿ ತಿಳಿಯಬಹುದೋ ಆ ರೀತಿಯಲ್ಲೆಲ್ಲಾ ನಾನು ದೇವ ರಿಂದ ಆಜ್ಞಪ್ತನಾಗಿದ್ದೇನೆ" ಎಂದು ಆತನು 'ಸಮರ್ಥನವಾದ'

ದಲ್ಲಿ ಹೇಳಿದ್ದಾನೆ. ಈ ನಂಬಿಕೆಯಿದ್ದದ್ದರಿಂದ ಅವನು ನಿರ್ಭಯವಾಗಿ ಯಾರೊಡನೆಯಾದರೂ ಸರಿಯೆ ಜಿಜ್ಞಾಸೆಯನ್ನು ಹೂಡುತ್ತಿದ್ದನು. ಕವಿಗಳು, ವಾಗ್ಮಿಗಳು, ರಾಜನೀತಿಜ್ಞರು—ಎಲ್ಲರ ತಿಳಿವಳಿಕೆಯನ್ನೂ ತನ್ನ ಒರೆಗಲ್ಲಿನಿಂದ ಪರೀಕ್ಷಿಸುತ್ತಿದ್ದನು. ಬೆಳಗಿನಿಂದ ಸಂಜೆಯವರೆಗೂ ಜನರೊಡನೆ ಚರ್ಚೆಮಾಡುವುದೇ ಅವನ ಕೆಲಸ. ಚರ್ಚೆ ಸಾಧಾರಣವಾದ ಪ್ರಸಂಗವೊಂದರಿಂದ ಪ್ರಾರಂಭವಾಗಿ ತತ್ವ ವಿಮರ್ಶೆಯಲ್ಲಿ ಕೊನೆಗಾಣುವುದು. ಸಾಕ್ರೆಟೀಸನು ಕತ್ತೆಗಳು, ಕುದುರೆಗಳು, ಜೋಡು ಹೊಲಿಯುವವರು—ಮುಂತಾದ ವಿಷಯವಾಗಿ ಆಡುತ್ತಿದ್ದ ಮಾತೆಲ್ಲಾ ಯಾವುದಾದರೂ ಘನವಾದ ತತ್ವವನ್ನು ಕಂಡುಹಿಡಿಯುವ ಪ್ರಯತ್ನಕ್ಕೆ ತಳಹದಿ ಮಾತ್ರ. ಚರ್ಚೆ ಮೊದಲಾದಾಗ ಜನರು ಧೈರ್ಯವಾಗಿ ಮಾತಿಗೆ ನಿಲ್ಲುವರು; ಆದರೆ ಸ್ವಲ್ಪ ಹೊತ್ತಿನೊಳಗೆ ಅವರ ವಾದವು ಸಾಕ್ರೆಟೀಸನ ವಿಮರ್ಶೆಗೆ ಸಿಕ್ಕಿ ಚೂರಾಗಿ ಹೋಗುವುದು. ಕೊನೆಗೆ ಅವರು "ನಮಗೆ ಏನೇನೂ ತಿಳಿವಳಿಕೆಯಿಲ್ಲ, ನಾವು ಮೊದಲು ನಿಜವೆಂದು ಹೇಳಿದ್ದು ಈಗ ಸುಳ್ಳಾಗಿ ತೋರುತ್ತಿದೆ. ಈಗ ನಮ್ಮ ಮಾತಿನಲ್ಲಿ ನಮಗೇ ನಂಬಿಕೆಯಿಲ್ಲ. ಆಲೋಚನಾ ಪ್ರಪಂಚದಲ್ಲಿ ನಾವು ಇನ್ನೂ ಶಿಶುಗಳು" ಎಂದುಕೊಂಡು ಖಿನ್ನರಾಗಿ ಹೊರಟುಹೋಗುವರು. ಎಲ್ಲರೊಡನೆಯೂ ಮಾತಾಡುವಂತೆ ಆತನೊಡನೆ ಅಸ್ಪಷ್ಟವಾಗಿ ಲೋಕಾಭಿರಾಮವಾದ ಮಾತಾಡಿದರೆ ಸಲ್ಲದು. ನಾವು ಯಾವುದೋ ಜ್ಞಾನದಲ್ಲಿ "ಲೋಕದಲ್ಲಿ ಐಶ್ವರ್ಯ ಮುಖ್ಯವಲ್ಲ, ಧರ್ಮ ಮುಖ್ಯ" ಅಂದರೆ, ಅವನು ಆ ಕ್ಷಣವೇ "ಧರ್ಮವೆಂದರೇನು ?" ಎಂದು ಪ್ರಶ್ನೆ ಹಾಕಿ ನಮ್ಮನ್ನು ಹಿಡಿದು ನಿಲ್ಲಿಸಿಬಿಡುವನು. ಹೀಗೆಯೇ ಅವನು "ನೀತಿಯೆಂದರೇನು ? ರಾಷ್ಟ್ರವೆಂದರೇನು ? ಧೈರ್ಯವೆಂದರೇನು ?" ಎಂದು ಪ್ರಶ್ನೆ ಹಾಕುತ್ತಲೇ ಇರುವನು. 'ಯೂಥಿಫ್ರೊ' ಎಂಬ ಸಂವಾದವು ಆತನ ತರ್ಕಕ್ರಮಕ್ಕೆ ಉತ್ತಮವಾದ ಉದಾಹರಣೆ. ಯೂಥಿಫ್ರೊ ಧರ್ಮಾಧರ್ಮಗಳ ವಿಷಯವನ್ನು ಕೂಲಂಕುಷವಾಗಿ ತಿಳಿದಿರಬೇಕು; ಅದರಿಂದಲೇ ಅವನು ಧೈರ್ಯವಾಗಿ ತನ್ನ ತಂದೆಯನ್ನೇ ನ್ಯಾಯಾಸ್ಥಾನಕ್ಕೆ ಎಳೆದು ತಂದಿದ್ದಾನೆ. ಸಾಕ್ರೆಟೀಸನು ಬಹಳ ವಿನಯದಿಂದಲೂ ನಮ್ರತೆಯಿಂದಲೂ "ಧರ್ಮವೆಂದರೇನು ಎಂಬುದನ್ನು ನನಗೆ ತಿಳಿಸು" ಎಂದು ಕೇಳಲು ಯೂಥಿಫ್ರೊ

ಸಂತೋಷದಿಂದ–ಗುರು ಶಿಷ್ಯನಿಗೆ ಬೋಧಿಸುವಾಗ ಅನುಭವಿಸುವ ಸಂತೋಷ ದಿಂದ–ಒಪ್ಪಿಕೊಂಡು ಚರ್ಚೆಗೆ ಆರಂಭಿಸುವನು. ಯೂಥಿಫ್ರೋವಿಗೆ ತಾನು ಜ್ಞಾನಿಯೆಂದು ಹೆಮ್ಮೆ; "ಸಾಕ್ರೆಟೀಸ್, ಈ ವಿಷಯಗಳಲ್ಲೆಲ್ಲಾ ನಿಷ್ಕೃಷ್ಟ ವಾದ ಜ್ಞಾನವಿಲ್ಲದಿದ್ದರೆ ನನ್ನಿಂದೇನು ಪ್ರಯೋಜನ? ಇತರರಿಗಿಂತಲೂ ನನ್ನದೇನು ಹೆಚ್ಚಿಗೆ?" ಎನ್ನುತ್ತಾನೆ. ಇತರರಿಗಿಂತಲೂ ತಾನು ಹೆಚ್ಚಿನವ ನೆಂಬ ಭಾವನೆ ಮೊದಲೇ ಅವನಲ್ಲಿ ಬೇರೂರಿದೆ. ಆದರೆ ಚರ್ಚೆ ಮುಂದು ವರಿಯುತ್ತ ಬಂದ ಹಾಗೆಲ್ಲಾ ತನ್ನ ಹಿಂದಿನ ಮಾತಿಗೂ ಆಗಿನ ಮಾತಿಗೂ ಹೊಂದುವಣೆಯೇ ತೋರದೆ ಅವನಿಗೆ ದಿಗ್ಭ್ರಮೆ ಹಿಡಿದಂತಾಗುತ್ತದೆ. "ಅದನ್ನು ನಿನಗೆ ಸ್ಪಷ್ಟವಾಗಿ ತಿಳಿಯಹೇಳಬಹುದು, ಆದರೆ ಅದು ಬಹಳ ಹೊತ್ತು ಹಿಡಿಯುವ ಕೆಲಸ" ಎಂದು ಹೇಳಿ ತಪ್ಪಿಸಿಕೊಳ್ಳಲು ಯತ್ನಿಸುವನು. ಆದರೆ ಸಾಕ್ರೆಟೀಸನು ಅಷ್ಟಕ್ಕೆ ಸುಮ್ಮನಾಗುವವನಲ್ಲ. ಕೊನೆಗೆ ಇವನ ಕೈಯಿಂದ ಪಾರಾದರೆ ಸಾಕೆಂದುಕೊಂಡು ಯೂಥಿಫ್ರೊ "ಇನ್ನು ಯಾವಾಗ ಲಾದರೂ ಆಗಲಿ ಸಾಕ್ರೆಟೀಸ್, ಈಗ ನನಗೆ ಬಹಳ ಕೆಲಸವಿದೆ, ಹೋಗಬೇಕು, ಹೊತ್ತಾಯಿತು" ಎನ್ನುತ್ತಾ ಸಾಕ್ರೆಟೀಸನು ಕೂಗಿದರೂ ಹಿಂದಿರುಗಿ ನೋಡ ದೆಯೇ ಹೊರಟು ಹೋಗುವನು.

ಈ ಚರ್ಚೆಗಳಲ್ಲಿ ಸಾಧಾರಣವಾಗಿ ಸಾಕ್ರೆಟೀಸನು ತಾನು ತಿಳಿವಳಿಕೆ ಯಿಲ್ಲದವನೆಂದೂ ಇತರರಿಂದ ಕಲಿಯಲು ಯತ್ನಿಸುತ್ತಿದ್ದೇನೆಂದೂ ಹೇಳುವ ಪದ್ಧತಿ. ಅವನು ಹೀಗೆ ಹೇಳುತ್ತಿದ್ದದ್ದು ಬರಿಯ ನಟನೆಯೆಂದು ಕೆಲವರು ಭಾವಿಸುವುದುಂಟು. ಹೀಗೆ ಅಜ್ಞಾನವನ್ನು ನಟಿಸಿ ಹಸನಧ್ವನಿಯಿಂದ ವಾದ ಮಾಡುವುದನ್ನು 'ಸಾಕ್ರೆಟೀಸನ ಐರನಿ' ಯೆನ್ನುವರು. ಆತನು ಕೆಲವು ವೇಳೆ ನಟನೆಮಾಡುತ್ತಿದ್ದದ್ದೇನೋ ನಿಜ. ಎದುರಾಳಿ ಅಹಂಕಾರಿಯಾ ತಾನು ಸರ್ವಜ್ಞನೆಂದುಕೊಂಡಿದ್ದರೆ ಸಾಕ್ರೆಟೀಸನು ಅಜ್ಞಾನವನ್ನೂ ವಿನಯವನ್ನೂ ಅಭಿನಯಿಸಿ ಅವನ ಅಹಂಕಾರವನ್ನು ಮುರಿದು ಅವನ ತಿಳಿವಳಿಕೆಯ ಮಟ್ಟ ವೆಷ್ಟೆಂದು ತೋರಿಸಿಕೊಡುತ್ತಿದ್ದನು. ಯೂಥಿಫ್ರೊ "ಈಗ ನನಗೆ ಬಹಳ ಕೆಲಸ ವಿದೆ, ಹೊತ್ತಾಯಿತು, ಹೋಗಬೇಕು" ಎಂದು ಹೊರಡುತ್ತಿರುವಾಗ, ಸಾಕ್ರೆ ಟೀಸನು: "ಇದೇನು ಯೂಥಿಫ್ರೊ, ಹೀಗೆ ಮಾಡುವುದುಂಟೆ? ನಾನು ಧರ್ಮಾಧರ್ಮಗಳ ಸ್ವರೂಪವನ್ನು ನಿನ್ನಿಂದ ತಿಳಿದು ಮೆಲೆಟಸ್ಸಿನ ಕೈಯಿಂದ

ಪಾರಾಗಬೇಕೆಂದಿದ್ದೆ. ನನ್ನನ್ನು ನಿರಾಶನನ್ನಾಗಿಮಾಡಿ ಹೊರಟುಹೋಗುವೆ ಯಲ್ಲ! 'ದೈವಸಂಬಂಧವಾದ ವಿಷಯಗಳಲ್ಲಿ ನಾನು ಯೂಥಿಫ್ರೋವಿನಿಂದ ಜ್ಞಾನವನ್ನು ಪಡೆದಿದ್ದೇನೆ. ಈಗ ನಾನು ಅಜ್ಞನಂತೆ ಮನಸ್ಸಿಗೆ ತೋರಿದ ಮಾತಾಡಿ ಮತಕ್ಕೆ ನೂತನ ಕಲ್ಪನೆಗಳನ್ನು ಸೇರಿಸುವುದಿಲ್ಲ. ಇನ್ನು ಮೇಲೆ ಉತ್ತಮ ತರದ ಜೀವನವನ್ನೇ ನಡೆಸುತ್ತೇನೆ.' ಎಂದು ಮೆಲೆಟಸ್ಸಿಗೆ ಹೇಳ ಬೇಕೆಂದಿದ್ದೆ!" ಎನ್ನುತ್ತಾನೆ. ಇಲ್ಲಿ 'ಸಾಕ್ರೆಟೀಸನ ಐರನಿ' ಇದೆ. ಅವನಿಗೆ ಯೂಥಿಫ್ರೊ ನಿಜವಾಗಿಯೂ ಧರ್ಮಾಧರ್ಮಗಳ ಸ್ವರೂಪವನ್ನರಿತವನೆಂದು ನಂಬಿಕೆಯಿಲ್ಲ.

ಆದರೆ ಸಾಕ್ರೆಟೀಸನ ಸಂವಾದಗಳು ಇತರರನ್ನು ಹಾಸ್ಯಕ್ಕೆ ಗುರಿ ಮಾಡುವ ಉದ್ದೇಶದಿಂದ ಹೂಡಿದ ಚಕ್ಕಂದವಲ್ಲ. ಜ್ಞಾನಾರ್ಜನೆಗೆ ಹೊರಡ ಬೇಕಾದರೆ ನಾವು ಅಜ್ಞಾನಿಗಳೆಂದು ತಿಳಿದು ಅಹಂಕಾರದಿಂದ ನಿವೃತ್ತರಾಗು ವುದು ಮೊದಲನೆಯ ಕೆಲಸ. ಜನರ ಮನಸ್ಸನ್ನು ಹೀಗೆ ಶುದ್ಧಿಮಾಡಿ ಜ್ಞಾನದ ವಾಸಕ್ಕೆ ತಕ್ಕುದನ್ನಾಗಿ ಮಾಡುವುದೇ ಸಾಕ್ರೆಟೀಸನ ಉದ್ದೇಶ; ಅವರಿಗೆ ಅವಮಾನ ಮಾಡುವುದಲ್ಲ. ತಾನು ಅಜ್ಞಾನಿಯೆಂದು ಅವನು ಹೇಳಿ ಕೊಂಡದ್ದೂ ನಟನೆ ಮಾತ್ರವಲ್ಲ. ಸಾಕ್ರೆಟೀಸನು ಜ್ಞಾನಿಯೆಂದು ಡೆಲ್ಫಿಯ ದೇವವಾಣಿ ಹೇಳಿದ ಮೇಲೆ ಆತನು "ನಾನು ಅಜ್ಞಾನಿಯೆಂದು ತಿಳಿದಿದ್ದೇನೆ. ಇದೇ ನನ್ನ ಜ್ಞಾನ" ಎಂದುಕೊಂಡನು. ಇದರಲ್ಲಿ ಸತ್ಯಾಂಶವಿದೆ. ಲಕ್ಷಣ ಗಳನ್ನು (definitions) ಕಂಡು ಹಿಡಿಯುವ ಪ್ರಯತ್ನದಲ್ಲಿ ಅನೇಕ ವೇಳೆ ಅವನು ತಾನೇ ಸಲಹೆಗಳನ್ನು ಕೊಡುತ್ತಿದ್ದನು; ಒಂದು ಲಕ್ಷಣವು ಸರಿಯಲ್ಲ ವೆಂದು ತೋರಿ ಬಂದರೆ ಅದರಲ್ಲಿ ಸತ್ಯಾಂಶವಿರುವಷ್ಟನ್ನು ನೆನಪಿನಲ್ಲಿಟ್ಟು ಕೊಂಡು ಬೇರೊಂದು ಸಲಹೆಯನ್ನು ಕೊಡುತ್ತಿದ್ದನು. ಚರ್ಚೆಯಲ್ಲಿ ಆತನು ತನ್ನ ಜೊತೆಗಾರರಿಗೆ ಮಾರ್ಗದರ್ಶಿಯಾಗಿದ್ದನೆಂದು ಹೇಳಬಹುದು. ಆದರೆ ಬಹುಮಟ್ಟಿಗೆ ತಾನೂ ಇತರರೊಡನೆ ಸತ್ಯವನ್ನು ಹುಡುಕುವವನೇ ಆಗಿದ್ದನು. ಅವನು ಹುಡುಕುತ್ತಿದ್ದ ಲಕ್ಷಣಗಳು ಎಷ್ಟೋ ವೇಳೆ ನಿಜ ವಾಗಿಯೂ ಅವನಿಗೆ ಕೈವಶವಾಗಿರಲಿಲ್ಲ. ಅವನೂ ಇತರರಂತೆಯೇ ಯಾತ್ರಿಕ; ಕ್ಷೇತ್ರವನ್ನು ಸೇರಿ ದೇವತಾಸಾನ್ನಿಧ್ಯವನ್ನು ತಲಪಿದವನಲ್ಲ. ಅವನಿಗೂ ಇತರರಿಗೂ ಇದ್ದ ವ್ಯತ್ಯಾಸವಿಷ್ಟೇ: ಯಾತ್ರೆಯ ಆವಶ್ಯಕತೆಯನ್ನೂ, ಯಾವ

ಮಾರ್ಗದಲ್ಲಿ ಹೋದರೆ ಅದು ಸುರಕ್ಷಿತವಾಗಿ ಸಾಗಬಹುದೆಂಬುದನ್ನೂ, ಅವನು ಇತರರಿಗಿಂತಲೂ ಚೆನ್ನಾಗಿ ಬಲ್ಲನು. ಕತ್ತಲೆಯಲ್ಲಿ ಸಿಕ್ಕಿಬಿದ್ದಾಗ ತನ್ನ ಕಣ್ಣಿಗೆ ದೂರದಲ್ಲಿ ಒಂದು ಸಣ್ಣ ಬೆಳಕಿನ ಕಿರಣ ಕಾಣಲು, ಜೊತೆಯವರ ಕೈಹಿಡಿದು ಅವರೊಡನೆ ಆ ಬೆಳಕಿನ ಕಡೆಗೆ ತಡಕಿಕೊಂಡು ಹೋಗುವವನಂತೆ ಸಾಕ್ರೆಟೀಸನು ತನ್ನ ಜೊತೆಗಾರರ ಕೈ ಹಿಡಿದು ಸತ್ಯದ ಕಡೆಗೆ ತಡಕಿಕೊಂಡು ಹೋಗುವನು. ಚರ್ಚೆಯನ್ನು ಹೇಗೆ ಮುಂದುವರಿಸಬೇಕೆನ್ನುವುದು ಅವರಿಗೆ ತೋರದಿದ್ದರೆ ತಾನೇ ಉಪಯುಕ್ತವಾದ ಸಲಹೆಗಳನ್ನು ಕೊಡುವನು. ತಪ್ಪು ದಾರಿಯಲ್ಲಿ ಹೋದದ್ದು ತಿಳಿಯಬಂದರೆ ದಾರಿ ಕವಲೊಡೆಯುವ ಬಳಿಗೆ ಮತ್ತೆ ಬಂದು ಬೇರೆ ದಾರಿಯನ್ನನುಸರಿಸುವನು; ಅದೂ ಸರಿಬಾರದಿದ್ದರೆ ಹೊರಟ ಸ್ಥಳಕ್ಕೆ ಮತ್ತೆ ಬಂದು ಮೊದಲಿನಿಂದ ಪ್ರಾರಂಭಿಸುವನು. ಹುಡುಕುತ್ತಿರುವ ಲಕ್ಷಣವು ಅನೇಕ ವೇಳೆ ಬೇಟೆಯ ಮೃಗದಂತೆ ಇನ್ನೇನು ಸಿಕ್ಕಿತು ಎನ್ನುವುದರೊಳಗೆ ಮತ್ತೆ ನುಸುಳಿಕೊಂಡು ಒಂದು ಕಡೆಗೆ ಓರೆಯಾಗಿ, ಕಣ್ಮರೆಯಾಗಿ ಹೋಗುವುದು. ಅದನ್ನು ಅಟ್ಟಿಕೊಂಡು ಹೋಗುವುದರಲ್ಲಿ ಸಾಕ್ರಟೀಸನಿಗೆ ಬೇಟೆಗಾರನ ಆಸಕ್ತಿಯೇ ಇತ್ತು. ಚರ್ಚೆ ಎಷ್ಟು ಹೊತ್ತಾದರೂ ನಡೆಯಲಿ, ಸಾಕ್ರೆಟೀಸನಿಗೆ ಬೇಸರವಿಲ್ಲ; ಜೊತೆಗಾರರು ಎಷ್ಟು ತಪ್ಪುಮಾಡಿದರೂ ಜುಗುಪ್ಸೆಯಿಲ್ಲ; ಚಳಿಯಾಗಲಿ ಸೆಕೆಯಾಗಲಿ, ರಸ್ತೆಯಲ್ಲೇ ನಿಂತು ಚರ್ಚೆ ಮಾಡುವನು. ಯುವಕನು ತನ್ನ ಪ್ರೇಯಸಿಗಾಗಿ ತವಕಪಡುವಂತೆ ಶುದ್ಧಲಕ್ಷಣಕ್ಕಾಗಿ ತವಕಪಡುತ್ತಿದ್ದನು. ಆದರೆ ಅವನು ಯುವಕನಂತೆ ಹಿಂದೆ ಮುಂದೆ ನೋಡದೆ ನುಗ್ಗುವವನಲ್ಲ. ಮನಸ್ಸಿನಲ್ಲಿ ಯಾವ ಪೂರ್ವನಿರ್ಣಯವೂ ಇಲ್ಲದೆ, ತಾನು ಹೇಳುವುದೇ ಸರಿ ಎಂದು ಸ್ಥಾಪಿಸಲು ಪ್ರಯತ್ನಿಸದೆ, ಹಿಂದಿನ ಮಾತಿಗೂ ಮುಂದಿನ ಮಾತಿಗೂ ವಿರೋಧವಿಲ್ಲನಂತೆ ಎಚ್ಚರಿಕೆಯಿಂದ, ತಾಳ್ಮೆಯಿಂದ ಸತ್ಯಾನ್ವೇಷಣೆಯನ್ನೇ ಗುರಿಯಾಗಿಟ್ಟುಕೊಂಡು ಚರ್ಚೆಮಾಡುತ್ತಿದ್ದನು.

ಸಾಕ್ರೆಟೀಸನು ತನ್ನ ಎಪ್ಪತ್ತನೆಯ ವಯಸ್ಸಿನಲ್ಲಿ ಅಪರಾಧಿಯಾಗಿ ನ್ಯಾಯಾಸ್ಥಾನಕ್ಕೆ ಹೋಗಬೇಕಾಯಿತು. ಅವನ ಮೇಲೆ ಬಂದ ಫಿರ್ಯಾದು ಇದು: "ಸಾಕ್ರೇಟೀಸನು ಅಥೆನ್ಸ್ ನಗರದ ದೇವರುಗಳಲ್ಲಿ ನಂಬಿಕೆಯಿಲ್ಲದೆ ಬೇರೆ ದೇವರುಗಳನ್ನು ಕಲ್ಪಿಸಿದ್ದಾನೆ; ಇದಲ್ಲದೆ ಅವನು ಯುವಕರನ್ನು

ದುರ್ಮಾರ್ಗಕ್ಕೆ ಎಳೆಯುತ್ತಾನೆ. ಆದಕಾರಣ ಅವನು ಅಪರಾಧಿ. ದಂಡನೆ: ಮರಣ." ಸ್ವಲ್ಪ ಯೋಚಿಸಿ ನೋಡಿದರೆ ಸಾಕ್ರೆಟೀಸನ ಮೇಲೆ ಹೀಗೆ ದೂರು ಹೊರಿಸಿದ್ದು ಆಶ್ಚರ್ಯಕರವಾಗಿ ಕಾಣುವುದಿಲ್ಲ. ತಾವು ಜ್ಞಾನಿಗಳೆಂದೂ ದೊಡ್ಡ ಮನುಷ್ಯರೆಂದೂ ಮೆರೆಯುತ್ತಿದ್ದವರು ಅಥೆನ್ಸಿನಲ್ಲಿ ಬಹಳ ಜನರಿದ್ದರು. ಸಾಕ್ರೆಟೀಸನು ಅವರ ಹೆಮ್ಮೆಯನ್ನಿಳಿಸಿ, ಆತ್ಮವಿಮರ್ಶೆ ಮಾಡಿಕೊಳ್ಳುವಂತೆ ಅವರನ್ನು ಒತ್ತಾಯಮಾಡಿ ಅವರ ಸ್ವಾಭಿಮಾನಕ್ಕೆ ಕುಂದು ತಂದಿದ್ದನು. ಹೀಗೆ ತಮ್ಮ ಮೌಢ್ಯವು ಹೊರಬಿದ್ದರೆ ಜನರು ಸಹಿಸರು. ಸಾಕ್ರೆಟೀಸನ ಶತ್ರುಪಕ್ಷದಲ್ಲಿ ಈ ರೀತಿ ಅವನಿಗೆ ವಿರೋಧಿಗಳಾದವರು ಕೆಲವರಿದ್ದಿರಬೇಕು. ಆದರೆ ಜನರಿಗೆ ಆತನಲ್ಲಿ ಶತ್ರುತ್ವ ಹುಟ್ಟುವುದಕ್ಕೆ ಇದಕ್ಕಿಂತ ಮುಖ್ಯವಾದ ಬೇರೆ ಕಾರಣಗಳೂ ಇದ್ದುವು. ಅವುಗಳನ್ನು ತಿಳಿಯಬೇಕಾದರೆ ಆಗಿನ ಕಾಲದ ಗ್ರೀಸಿನ ರಾಜಕೀಯ ಸ್ಥಿತಿಯನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಆ ಕಾಲದಲ್ಲಿ ಅಥೆನ್ಸ್, ಸ್ಪಾರ್ಟಾ ಮುಂತಾದ ಒಂದೊಂದು ನಗರವೂ ಒಂದೊಂದು ರಾಷ್ಟ್ರವಾಗಿತ್ತು. ಕ್ರಿ. ಪೂ. ಐದನೆಯ ಶತಮಾನದಲ್ಲಿ ಈ ನಗರ ರಾಷ್ಟ್ರಗಳ, ಅದರಲ್ಲೂ ಅಥೆನ್ಸಿನ, ಜನರು ತಮ್ಮ ರಾಷ್ಟ್ರದ ಅಭಿವೃದ್ಧಿಯನ್ನೂ ಹಿತಚಿಂತನೆಯನ್ನೂ ಮೊದಲು ಯೋಚಿಸಬೇಕಾಗಿತ್ತು. ಯಾವ ವಿಷಯದಲ್ಲಾಗಲಿ ರಾಷ್ಟ್ರದ ಹಕ್ಕೇ ಮೊದಲನೆಯ ಹಕ್ಕು. ಅಥೆನ್ಸಿನ ಘನತೆಯೂ ಆಗ ಅತ್ಯುನ್ನತ ಸ್ಥಿತಿಯನ್ನೇರಿತ್ತು. ಅಥೆನ್ಸಿನವರು ಪರ್ಷಿಯಾ ದೇಶದ ಚಕ್ರವರ್ತಿಯನ್ನು ಸೋಲಿಸಿ ಜಯಧ್ವಜವನ್ನು ಮೆರೆಯಿಸಿದ್ದಾಗಿತ್ತು. ರಾಷ್ಟ್ರದಲ್ಲಿ ಅಮೋಘವಾದ ಸೃಷ್ಟಿಶಕ್ತಿ ಉಕ್ಕುತ್ತಿತ್ತು. ಈಸ್ಕಿಲಸ್ ಸೋಫೊಕ್ಲೀಸ್, ಯೂರಿಪೀಡೀಸ್ ಮೊದಲಾದವರ ನಾಟಕಗಳು, ಫಿಡಿಯಾಸನ ಪ್ರತಿಮೆಗಳು, ಥ್ಯೂಕಿಡೈಡೀಸನ ಚರಿತ್ರೆ, ಇಕ್ಟಿನಸ್ಸಿನ ಶಿಲ್ಪ, ಪೆರಿಕ್ಲೀಸನ ರಾಜನೀತಿ—ಇವೆಲ್ಲವೂ ಇದೇ ಕಾಲದವು. ಇದಲ್ಲದೆ ಆಗ ಅಥೆನ್ಸಿನಲ್ಲಿ ಪ್ರಜಾಪ್ರಭುತ್ವವಿದ್ದುದರಿಂದ ಆ ಸಣ್ಣ ನಗರದಲ್ಲಿ ಸ್ವತಂತ್ರ ಪೌರರಾದವರೆಲ್ಲರೂ ರಾಷ್ಟ್ರದ ಆಡಳಿತದಲ್ಲೂ, ನ್ಯಾಯ ವಿಮರ್ಶೆಯಲ್ಲೂ ಇತರ ಸಾರ್ವಜನಿಕ ಕಾರ್ಯಗಳಲ್ಲೂ ಭಾಗ ತೆಗೆದುಕೊಳ್ಳುತ್ತಿದ್ದರು. ಆಗಿಂದಾಗ್ಗೆ ಅವರು ಪೆರಿಕ್ಲೀಸನಂಥ ಪ್ರಸಿದ್ಧ ವಾಗ್ಮಿಗಳ ಭಾಷಣಗಳನ್ನು ಕೇಳುತ್ತಿದ್ದರು. ಆದ

ಕಾರಣ ಆಗ ಜನರ ಬುದ್ಧಿಶಕ್ತಿ ಉನ್ನತ ಸ್ಥಿತಿಯಲ್ಲಿದ್ದಿತೆಂದೇ ಹೇಳಬೇಕು. ಅಥೆನ್ಸ್ ಬುದ್ಧಿಶಕ್ತಿಗೂ ಜ್ಞಾನಕ್ಕೂ ತವರುಮನೆಯೆಂದು ಪ್ರಸಿದ್ಧಿ ಪಡೆದಿತ್ತೆಂಬುವನ್ನು ಸಾಕ್ರೆಟೀಸನೇ ಹೆಮ್ಮೆಯಿಂದ ನೆನಸಿಕೊಂಡಿದ್ದಾನೆ. ಈ ಸ್ಥಿತಿಯಲ್ಲಿದ್ದ ಪಟ್ಟಣದಲ್ಲಿ ವ್ಯಕ್ತಿಯ ಯೋಗಕ್ಷೇಮ ಅಷ್ಟು ಮುಖ್ಯವಾಗಿ ಕಾಣುತ್ತಿರಲಿಲ್ಲ; ಜನಗಳ ಮನಸ್ಸಿನಲ್ಲಿ ರಾಷ್ಟ್ರದ ಹಿತವೇ ಪ್ರಮುಖ ಸ್ಥಾನವನ್ನು ಹೊಂದಿತ್ತು. ರಾಷ್ಟ್ರಶಾಸನಗಳಿಗೆ ಅನುಸಾರವಾಗಿ ನಡೆಯುವುದೇ ನೀತಿಯೆಂದೂ ಆ ಶಾಸನಗಳೇ ನೀತಿಸೂತ್ರಗಳೆಂದೂ ಸಹ ಭಾವಿಸಿದ್ದಂತೆ ತೋರುತ್ತದೆ. ಆದ್ದರಿಂದ ನೀತಿ, ಮತ, ನಡವಳಿಕೆ ಇವೆಲ್ಲದರಲ್ಲೂ ವ್ಯಕ್ತಿಯು ಸಂಪ್ರದಾಯಬದ್ಧನಾಗಿರಬೇಕಾಯಿತು. ಈ ಬಗೆಯ ಕಟ್ಟನ್ನು ಚಿತ್ತದಾಸ್ಯವೆಂದು ಅವಹೇಳನ ಮಾಡುವುದು ತಪ್ಪು. ಆಗಿನ ನಗರರಾಷ್ಟ್ರಗಳಲ್ಲಿ ಸಂಪ್ರದಾಯಕ್ಕೆ ಈ ಹೆಚ್ಚಿಗೆ ಬಂದದ್ದು ಆಶ್ಚರ್ಯವಲ್ಲ. ಆಗಿನ ಗ್ರೀಕರಿಗೆ ರಾಷ್ಟ್ರವು ರಾಜಕೀಯ ಸಂಸ್ಥೆ ಮಾತ್ರವಲ್ಲ, ಅದೊಂದು ಪಾರಮಾರ್ಥಿಕ ಸಂಸ್ಥೆ. ಗ್ರೀಕ್ ತತ್ವಜ್ಞರ ಬರವಣಿಗೆಯಲ್ಲೆಲ್ಲಾ ಅವರು ರಾಷ್ಟ್ರವನ್ನು ಆಧ್ಯಾತ್ಮಿಕ ದೃಷ್ಟಿಯಿಂದ ನೋಡುತ್ತಿದ್ದರೆಂಬುದು ಸ್ಪಷ್ಟವಾಗಿ ಕಾಣುತ್ತದೆ. "ದೇವತೆಗಳ ಮತ್ತು ಪ್ರಾಜ್ಞರ ದೃಷ್ಟಿಯಲ್ಲಿ ಮಾತೃಭೂಮಿ ತಾಯಿತಂದೆಗಳಿಗಿಂತಲೂ ಪಿತೃಗಳಿಗಿಂತಲೂ ಹೆಚ್ಚು ಮಹಿಮೆಯುಳ್ಳದ್ದು, ಪವಿತ್ರವಾದದ್ದು, ದೈವಸಮಾನವಾದದ್ದು." (ಕ್ರೈಟೊ)

ಮೇಲೆ ಹೇಳಿದಂತೆ ಅತ್ಯುನ್ನತಸ್ಥಿತಿಯಲ್ಲಿದ್ದ ಅಥೆನ್ಸ್ ಪೆರಿಕ್ಲೀಸನ ಮರಣವಾದ ಮೇಲೆ ಪೆಲಾಪೊನೀಸಿಯನ್ ಯುದ್ಧಕ್ಕೆ ಸಿಕ್ಕಿ ಅಪಜಯ ಹೊಂದಿದ್ದಲ್ಲದೆ ಇತರ ವಿಧಗಳಲ್ಲಿಯೂ ಹೀನಸ್ಥಿತಿಗೆ ಬಂದಿತು. ನಗರದಲ್ಲಿದ್ದ ಒಗ್ಗಟ್ಟು ಸಡಿಲವಾಯಿತು. ಪ್ರಜಾಪ್ರಭುತ್ವವು ಭದ್ರವಾಗಿರಲಿಲ್ಲ. ಜನರು ರಾಷ್ಟ್ರದ ದರ್ಪಕ್ಕೆ ತಡೆಗಳನ್ನೂ ಮೇರೆಗಳನ್ನೂ ಹಾಕುವಂತಾಯಿತು. ನೀತಿಬಲವು ಕಡಿಮೆಯಾಗಿ ರಾಜಕೀಯ ಪ್ರಪಂಚದಲ್ಲಿ ಕರ್ತವ್ಯಭ್ರಷ್ಟರೂ ಸ್ವಾರ್ಥಪರರೂ ಮೋಸಗಾರರೂ ಹೆಚ್ಚಿದರು. ಇತ್ತಕಡೆ ವಿಜ್ಞಾನದ ಬೆಳವಳಿಗೆಯಿಂದಲೂ ಗ್ರೀಕರ ದೇವತೆಗಳಲ್ಲಿ ನಿಜವಾದ ನೀತಿಯ ಸತ್ವವಿಲ್ಲದ್ದರಿಂದಲೂ ಮತದ ವಿಷಯದಲ್ಲಿ ಸಹ ಅಪನಂಬಿಕೆ ಹೆಚ್ಚಿತು. ಹೀಗೆ ಅಥೆನ್ಸ್ ಎಲ್ಲಾ ವಿಧಗಳಲ್ಲಿಯೂ ಅಧೋಗತಿಗೆ ಇಳಿಯುತ್ತಿರುವುದನ್ನು ನೋಡಿ ಜನರ ಮನಸಿ

ನಲ್ಲಿ ಗಾಬರಿಯುಂಟಾಗಿ ಅದಕ್ಕೆ ಕಾರಣರಾದವರನ್ನು ಹಿಡಿದು ಶಿಕ್ಷಿಸಬೇಕೆಂಬ ಆತುರ ಹತ್ತಿತು. ಆಗ ನ್ಯಾಯ, ಅನ್ಯಾಯ ಎಂದು ವಿಮರ್ಶೆಮಾಡುತ್ತಾ ಕುಳಿತುಕೊಳ್ಳುವ ಸಮಯವಲ್ಲವೆಂದು ತೋರಿತು. ಯಾವ ಮಾರ್ಗ ವಾದರೂ ಸರಿಯೆ, ಯಾವ ಉಪಾಯದಿಂದಲಾದರೂ ಸರಿಯೆ, ರಾಷ್ಟ್ರದ ನಾಶಕ್ಕೆ ತಡೆಹಾಕಬೇಕೆಂಬ ಆತಂಕ ಹುಟ್ಟಿತು. ಕೆಲವರು ಅಥೆನ್ಸಿನ ದುಃಸ್ಥಿತಿಗೆ ಕಾರಣವೇನೆಂದು ಯೋಚಿಸಿ ತಪ್ಪಿನಲ್ಲಿ ಸ್ವಲ್ಪ ಭಾಗವನ್ನು ಸೋಫಿಸ್ಟ್ ಪಂಗಡದ ಬೋಧಕರ ಮೇಲೆ ಹೊರಿಸಿದರು. ಸಾಕ್ರೆಟೀಸನೂ ಒಬ್ಬ ಸೋಫಿಸ್ಟನೆಂದೇ ಬಹು ಜನರು ಭಾವಿಸಿದ್ದದ್ದರಿಂದ ಅವನ ಮೇಲೂ ಅಸಮಾಧಾನ ಹುಟ್ಟುವುದಕ್ಕೆ ಕಾರಣವಾಯಿತು.

ಈ ಸೋಫಿಸ್ಟರು ಜನರಿಗೆ ನೀತಿ ವಿಷಯವಾದ ಮತ್ತು ರಾಜಕೀಯ ವಿಷಯವಾದ ತಿಳಿವಳಿಕೆಯನ್ನುಂಟುಮಾಡುತ್ತೇವೆಂದು ಹೇಳುತ್ತಿದ್ದರು. ಅವರು ತಮ್ಮದೇ ಒಂದು ಮತವನ್ನೇನೂ ಪ್ರಚಾರಮಾಡಲಿಲ್ಲ; ಅವರು ತತ್ವ ಜ್ಞಾನಿಗಳೆಂದು ಹೇಳಲಾಗುವುದಿಲ್ಲ. ಅವರಿಗಿಂತ ಹಿಂದಿನ ಜಿಜ್ಞಾಸುಗಳು ಭೂಮಿ, ಆಕಾಶ, ಸೂರ್ಯ, ಚಂದ್ರ, ನಕ್ಷತ್ರಾದಿಗಳು ಮೊದಲಾದುವುಗಳ ಸ್ವರೂಪವನ್ನು ಕಂಡುಹಿಡಿಯುವ ಪ್ರಯತ್ನದಲ್ಲಿದ್ದರು. ಸೋಫಿಸ್ಟರು ಈ ಪ್ರಯತ್ನವನ್ನು ಬಿಟ್ಟು ಕೇವಲ ಮಾನವನಿಗೆ ಸಂಬಂಧಪಟ್ಟ ವಿಷಯಗಳಿಗೆ ಗಮನಕೊಟ್ಟರು. ಆದರೆ ಅವರ ಮುಖ್ಯೋದ್ದೇಶ ತತ್ವಾನ್ವೇಷಣೆಯಲ್ಲ. ಸಾಧಾರಣವಾಗಿ ಆಗ ಧರ್ಮ, ನಡವಳಿಕೆ, ರಾಜನೀತಿ ಮುಂತಾದ ವಿಷಯ ವಾಗಿ ಜನರ ಮನಸ್ಸಿನಲ್ಲಿ ಏಳುತ್ತಿದ್ದ ಪ್ರಶ್ನೆಗಳೂ ಭಾವಗಳೂ ಇವರಲ್ಲಿ ವಾಚ್ಯವಾದುವು. ಬೋಧನೆಯೇ ಅವರ ಉದ್ದೇಶ. ರಾಜನೀತಿಜ್ಞರಾಗಬೇಕೆಂದಿ ದ್ದವರೂ ವಾಗ್ಮಿಗಳಾಗಬೇಕೆಂದಿದ್ದವರೂ ಅವರ ಶಿಷ್ಯರಾಗುತ್ತಿದ್ದರು. ವಾಕ್ಶಾಸ್ತ್ರವು ಅವರಿಂದ ಬಹುಮಟ್ಟಿಗೆ ಬೆಳೆಯಿತು. ಆದರೆ ಸತ್ಯಕ್ಕೆ ಗಮನ ಕೊಡದೆ ಯಾವರೀತಿಯಲ್ಲಾದರೂ ಸರಿಯೆ, ಜನರನ್ನು ಮರುಳುಮಾಡಿ ಅವರನ್ನು ಒಲಿಸಿಕೊಳ್ಳುವ ವಿದ್ಯೆಯನ್ನು ಮಾತ್ರ ಕಲಿಸಿದರೆಂಬ ಅಪಕೀರ್ತಿ ಅವರಿಗೆ ಬಂದಿದೆ. ಅವರು ಭಾಷಾಕೌಶಲ, ಅಲಂಕಾರ ಮೊದಲಾದುವುಗಳ ಸಹಾಯದಿಂದ ಜನರನ್ನು ಮರುಳುಮಾಡುತ್ತಿದ್ದರೆಂದೂ ತಪ್ಪು ವಾದವು ಒಳ್ಳೆಯದಾಗಿ ತೋರುವಂತೆ ಮಾಡುತ್ತಿದ್ದರೆಂದೂ ಪ್ರಸಿದ್ಧಿಯಿದೆ. ಅವು

ತೀರ ಅನ್ಯಾಯುವೆಂದು ಹೇಳುವುದಕ್ಕಾಗುವುದಿಲ್ಲ. ಇದಲ್ಲದೆ ಸೋಫಿಸ್ಟರು "ಪ್ರಪಂಚದಲ್ಲಿ ಎಲ್ಲಾ ವಿಷಯಗಳಿಗೂ ಮಾನವನೇ ಒರೆಗಲ್ಲು; ಸತ್ಯಕ್ಕೆ ಪ್ರತಿಯೊಬ್ಬ ವ್ಯಕ್ತಿಯೂ ಒರೆಗಲ್ಲು; ನನಗೆ ಸತ್ಯವೆಂದು ತೋರಿದ್ದು ನನಗೆ ಸತ್ಯ, ನಿನಗೆ ಸತ್ಯವೆಂದು ತೋರಿದ್ದು ನಿನಗೆ ಸತ್ಯ; ಆದಕಾರಣ ಲೋಕದಲ್ಲಿ ತಪ್ಪೆನ್ನುವುದು ಇಲ್ಲವೇ ಇಲ್ಲ. ಒಟ್ಟಿನಲ್ಲಿ ಜ್ಞಾನವೆನ್ನುವುದು ಇಲ್ಲ; ಇದ್ದರೂ ಅದನ್ನು ತಿಳಿಯುವುದು ಸಾಧ್ಯವಲ್ಲ; ತಿಳಿಯುವುದು ಸಾಧ್ಯವಾದರೂ ಅದನ್ನು ಮತ್ತೊಬ್ಬರಿಗೆ ಬೋಧಿಸುವುದು ಸಾಧ್ಯವಲ್ಲ" ಎಂದು ಸಾರಿದರು. ಇದೇ ಮತವನ್ನು ಅವರು ನೀತಿವಿಷಯಗಳಿಗೂ ಅನ್ವಯಿಸಬೇಕಾಯಿತು. "ನೀತಿ ಎಂಬುದಕ್ಕೆ ಒಂದು ನೆಲೆಯಿಲ್ಲ; ರಾಷ್ಟ್ರಶಾಸನಗಳು ಪದ್ಧತಿಯ ಮೇಲೂ ಪಶುಬಲದ ಮೇಲೂ ನಿಂತಿವೆ; ನ್ಯಾಯ, ಧರ್ಮ ಇವೊಂದೂ ಇಲ್ಲ. ನನ್ನ ಮನಸ್ಸಿಗೆ ತೋರಿದ್ದೇ ನ್ಯಾಯ, ನನ್ನ ಆಚರಣೆಯೇ ಸದಾಚಾರ" ಎನ್ನುವ ಸ್ಥಿತಿಗೆ ಬಂದಿತು. ಹೀಗೆ ನ್ಯಾಯ, ನೀತಿ ಮೊದಲಾದುವುಗಳನ್ನು ಪ್ರತಿಭಟಿಸುವ ಇಚ್ಛೆ ಇದಕ್ಕೆ ಮೊದಲೇ ಗ್ರೀಸಿನಲ್ಲಿ ಕಾಲುಹಾಕಿತ್ತು. ಬರಿಯ ಸಂಪ್ರದಾಯದ ನೀತಿಯನ್ನೂ ಸಂಪ್ರದಾಯದ ಜ್ಞಾನವನ್ನೂ ಪರೀಕ್ಷಿಸುವ ಇಚ್ಛೆಯುಂಟಾದದ್ದರಿಂದಲೇ ಸೋಫಿಸ್ಟರ ಬೋಧನೆಗೆ ಅವಕಾಶ ಹೆಚ್ಚಾಯಿತು. ಆದರೆ ಸೋಫಿಸ್ಟರು ಹಳೆಯ ನೀತಿಗೂ ಧರ್ಮಕ್ಕೂ ಜ್ಞಾನಕ್ಕೂ ಬದಲಾಗಿ ಬೇರೆ ನೀತಿಯನ್ನೂ ಧರ್ಮವನ್ನೂ ಜ್ಞಾನವನ್ನೂ ನಿಲ್ಲಿಸಲಿಲ್ಲ. ಸತ್ಯದ ಗುಡಿ ದೇವರಿಲ್ಲದ ಪಾಳು ಗುಡಿಯಾಯಿತು. ಆದರೂ ಸೋಫಿಸ್ಟರಿಂದ ಅಪಕಾರ ಮಾತ್ರ ಆಯಿತೆಂದು ಹೇಳುವುದು ತಪ್ಪು; ಅವರ ಶತ್ರುಗಳು ಹೇಳುವಷ್ಟು ದೋಷ ಅವರಲ್ಲಿರಲಿಲ್ಲ. ಅವರು ಪಾಂಡಿತ್ಯವನ್ನು ಹರಡಿದರು; ನೀತಿಯ ವಿಷಯದ ಚರ್ಚೆಯನ್ನಾರಂಭಿಸಿದರು; ವಾಕ್ಯಾಸ್ತ್ರವನ್ನು ಅಭಿವೃದ್ಧಿಗೆ ತಂದರು; ವ್ಯಕ್ತಿಯ ಸ್ವಾತಂತ್ರ್ಯವನ್ನು ಆಚರಣೆಗೆ ತಂದರು.

ಸಾಕ್ರೆಟೀಸನೂ ಸೋಫಿಸ್ಟರಲ್ಲಿ ಒಬ್ಬನೆಂದು ಕೆಲವು ಜನರು ಭಾವಿಸಿದ್ದದ್ದರಿಂದ, ರಾಷ್ಟ್ರದ ಅವನತಿಗೆ ಕಾರಣರೆಂದು ಅವರಿಗೆ ಬಂದಿದ್ದ ಅಪಕೀರ್ತಿಗೆ ಅವನೂ ಭಾಗಿಯಾಗಬೇಕಾಯಿತು. ಅರಿಸ್ಟೋಫೆನೀಸನು 'ಮೇಘಗಳು' ಎಂಬ ನಾಟಕದಲ್ಲಿ ಸಾಕ್ರೆಟೀಸನನ್ನು ಸೋಫಿಸ್ಟನೆಂದೇ ಭಾವಿಸಿ ಹಾಸ್ಯಮಾಡಿದ್ದಾನೆ. ಈ ಭಾವನೆ ತಪ್ಪು. ಅವನಿಗೂ ಸೋಫಿಸ್ಟರಿಗೂ ಕೆಲವು ಅಂಶಗಳಲ್ಲಿ

ಹೋಲಿಕೆಯಿರುವುದೇನೋ ನಿಜ. ಸೋಫಿಸ್ಟರಂತೆ ಸಾಕ್ರೆಟೀಸನೂ ವಿಶ್ವದ ಗುಟ್ಟನ್ನು ಕಂಡುಹಿಡಿಯುವ ಪ್ರಯತ್ನವನ್ನು ಬಿಟ್ಟು ಮಾನವನ ಕಡೆಗೆ ದೃಷ್ಟಿಯನ್ನು ತಿರುಗಿಸಿದನು. "ನಿನ್ನನ್ನು ನೀನು ತಿಳಿದುಕೊ" ಎಂದು ಅವನು ಜನರಿಗೆ ಬೋಧಿಸಿದನು. ರಾಜನೀತಿಯಲ್ಲಿ ನಿಪುಣರಾಗಿ ದೊಡ್ಡ ಪದವಿಗೆ ಬರಬೇಕೆಂದು ಬಯಸುತ್ತಿದ್ದ ಯುವಕರು ಶಿಕ್ಷಣಕ್ಕಾಗಿ ಸೋಫಿಸ್ಟರ ಬಳಿಗೆ ಹೋಗುತ್ತಿದ್ದಂತೆಯೇ ಸಾಕ್ರೆಟೀಸನ ಬಳಿಗೂ ಕೆಲವು ವೇಳೆ ಬರುತ್ತಿದ್ದುದುಂಟು. ಈ ಬಗೆಯ ಶಿಕ್ಷಣವನ್ನು ಕೊಡಬಲ್ಲೆನೆಂದು ಸಾಕ್ರೆಟೀಸನು ಒಂದು ಸಲವೂ ಹೇಳದಿದ್ದರೂ ರಾಜಕೀಯ ವಿಷಯಗಳಲ್ಲಿ ಶಿಕ್ಷಣವು ಆವಶ್ಯಕವೆಂದೇನೋ ಅನೇಕ ವೇಳೆ ಹೇಳಿದ್ದನು. ಸೋಫಿಸ್ಟರಂತೆ ಸಾಕ್ರೆಟೀಸನು ಸಂಪ್ರದಾಯದ ಕಟ್ಟನ್ನು ಸಡಿಲಿಸಿ ವ್ಯಕ್ತಿಯ ಹಕ್ಕಿಗೆ ಪ್ರಾಶಸ್ತ್ಯ ಕೊಟ್ಟನು. ಒಂದೊಂದು ವೇಳೆ ಆತನ ವಾದವೂ ಸೋಫಿಸ್ಟರ ವಾದದಂತೆಯೇ ತೋರುತ್ತಿತ್ತೆಂದು ಸಹ ಒಪ್ಪಬಹುದು. ಆದರೂ ಒಟ್ಟಿನಲ್ಲಿ ನೋಡಿದರೆ ಸಾಕ್ರೆಟೀಸನು ಸೋಫಿಸ್ಟರ ಪ್ರತಿಕಕ್ಷಿಯೇ ಹೊರತು ಅವರ ಪಂಗಡದವನಲ್ಲ. ಅವರಿಗೂ ಅವನಿಗೂ ಇದ್ದ ಹೋಲಿಕೆಗಿಂತ ವ್ಯತ್ಯಾಸವೇ ಹೆಚ್ಚು. ಸೋಫಿಸ್ಟರು ತಾವು ಬೋಧಕರೆಂದು ಹೇಳಿಕೊಂಡೇ ಹೊರಟಿದ್ದರು; ಸಾಕ್ರೆಟೀಸನು ಕೊನೆಯವರೆಗೂ ತನಗೆ ಆ ಹೆಸರು ಸಲ್ಲದೆಂದೂ ತಾನು ಜ್ಞಾನವನ್ನು ಹುಡುಕುತ್ತಿರುವವನೆಂದೂ ಹೇಳುತ್ತಿದ್ದನು. ಸೋಫಿಸ್ಟರು ತಮ್ಮ ಬೋಧನೆಗೆ ಪ್ರತಿಫಲವಾಗಿ ಶಿಷ್ಯರಿಂದ ಹಣ ತೆಗೆದುಕೊಳ್ಳುತ್ತಿದ್ದರು. ಸಾಕ್ರೆಟೀಸನು ಹಣ ತೆಗೆದುಕೊಳ್ಳುವುದು ಹಾಗಿರಲಿ, ಹಾಗೆ ತೆಗೆದುಕೊಳ್ಳುವುದು ತೀರ ತುಚ್ಛವಾದ ಕೆಲಸವೆಂದು ತಿಳಿದಿದ್ದನು. ಒಂದು ಸಲ ಆತನು "ಕೊಂಡುಕೊಳ್ಳಲು ಇಚ್ಛೆಯಿರುವವರಿಗೆ ಹಣಕ್ಕಾಗಿ ತಮ್ಮ ಜ್ಞಾನವನ್ನು ಮಾರುವವರನ್ನು ಜನರು ಸೋಫಿಸ್ಟರೆಂದು ಕರೆಯುತ್ತಾರೆ; ಅವರನ್ನು ಜ್ಞಾನಗಣಿಕೆಯರು ಎಂದರೂ ಎನ್ನಬಹುದು" ಎಂದು ಹೇಳಿದನಂತೆ. ಇವುಗಳಿಗಿಂತ ಮುಖ್ಯವಾದ ವಿಷಯಗಳಲ್ಲಿಯೂ ಆತನು ಸೋಫಿಸ್ಟರಿಗೆ ವಿರೋಧಿಯಾಗಿದ್ದನು. ಸೋಫಿಸ್ಟರು ಸತ್ಯ, ಸೌಂದರ್ಯ, ಸದ್ಗುಣ, ನೀತಿ, ಜ್ಞಾನ ಇವೊಂದೂ ಇಲ್ಲವೆಂದೂ, ಇದ್ದರೂ ಅವುಗಳನ್ನು ತಿಳಿಯುವುದು ಸಾಧ್ಯವಲ್ಲವೆಂದೂ ಭಾವನೆ ಬರುವಂತೆ ಮಾಡಿದ್ದರು. ಸಾಕ್ರೆಟೀಸನು ಅವರಿಗೆ ಎದುರಾಳಿ

ಯಾಗಿ ನಿಂತು ಅವುಗಳ ಅಸ್ತಿತ್ವವನ್ನು ಮತ್ತೆ ಸ್ಥಾಪಿಸಿದನು. ಯಾವ ಯೋಚನೆಯನ್ನೂ ಮಾಡದೆ ಜನರು ಕಣ್ಣು ಮುಚ್ಚಿಕೊಂಡು ಒಪ್ಪಿಕೊಳ್ಳುವ ನೀತಿಯನ್ನು ಆತನು ಒಪ್ಪದಿರಬಹುದು. ಆದರೆ ಜನಸಾಮಾನ್ಯದ ಈ ನೀತಿ ನಿರ್ಣಯುಗಳನ್ನು ಪರೀಕ್ಷಿಸಿದ ಮೇಲೆ ನಾವು ಕಂಡುಹಿಡಿಯಬಹುದಾದ ನೀತಿಯೂ ಜ್ಞಾನವೂ ಇವೆಯೆಂದು ಆತನು ದೃಢವಾಗಿ ನಂಬಿದ್ದನು. ಆದರೆ ಅಥೆನ್ಸಿನವರಿಗೆ ಸಾಕ್ರೆಟೀಸನಿಗೂ ಸೋಫಿಸ್ಟರಿಗೂ ಇದ್ದ ವ್ಯತ್ಯಾಸವನ್ನು ಗ್ರಹಿಸುವ ಶಕ್ತಿ ಇರಲಿಲ್ಲ. ಅವನ ಮೇಲೆ ಜನಗಳಿಗೆ ಅಸಮಾಧಾನ ಹುಟ್ಟುವುದಕ್ಕೆ ಇದೂ ಒಂದು ಕಾರಣ.

ಇದಕ್ಕಿಂತಲೂ ಮುಖ್ಯವಾದ ಕಾರಣ ಇನ್ನೊಂದಿತ್ತು. ಸಾಕ್ರೆಟೀಸನು ಅಥೆನ್ಸಿನ ಪ್ರಜಾಪ್ರಭುತ್ವದ ಶತ್ರುವೆಂಬ ಒಂದು ಅಭಿಪ್ರಾಯವು ಪಟ್ಟಣದ ಪ್ರಮುಖರು ಕೆಲವರಲ್ಲಿ ಹುಟ್ಟಿತು. ಸಾಕ್ರೆಟೀಸನೇನೂ ಹಣವಂತರ ಮತ್ತು ದೊಡ್ಡಮನುಷ್ಯರ ಕಡೆಗೆ ಸೇರಿಕೊಂಡು ಪ್ರಜೆಗಳ ಮೇಲೆ ಕೈಮಾಡಲಿಲ್ಲ. ಆದರೂ ಮಂದಿಯ ಆಡಳಿತವೆಂದರೆ ಆತನು ತಿರಸ್ಕಾರವನ್ನು ಸೂಚಿಸಿದಂತೆ ತೋರುತ್ತಿತ್ತು. ರಾಜ್ಯವಾಳುವುದು ಎಲ್ಲರಿಂದಲೂ ಸಾಧ್ಯವಲ್ಲವೆಂದು ಆತನು ಹೇಳುತ್ತಿದ್ದುದೇನೋ ನಿಜ. ಜೋಡು ಹೊಲಿಯಬೇಕಾದರೆ ಆ ಕೆಲಸ ಕಲಿತವನಾಗಬೇಕು ; ಒಂದು ಮೇಜನ್ನು ಮಾಡಬೇಕಾದರೆ ಮರಗೆಲಸ ಕಲಿತವನೇ ಆಗಬೇಕು ; ಇಂಥ ಸಣ್ಣ ಕೆಲಸಗಳನ್ನು ಮಾಡುವುದಕ್ಕೆ ಸಹ ಅವುಗಳಲ್ಲಿ ನಿಪುಣರಾದವರೇ ಆವಶ್ಯಕವಾದರೆ ರಾಜ್ಯದ ಆಡಳಿತದಂಥ ಕಷ್ಟದ ಕೆಲಸಕ್ಕೆ ಸಿಕ್ಕಿದವರು ಕೈಹಾಕಿದರೆ ಅದು ನೆಟ್ಟಗಾಗುವ ಸಂಭವವುಂಟೆ ?—ಈ ರೀತಿ ವಾದಿಸುತ್ತಿದ್ದ ಸಾಕ್ರೆಟೀಸನನ್ನು ಕಂಡರೆ ಜನರಿಗೆ ಕೋಪಬಂದದ್ದೇನೂ ಆಶ್ಚರ್ಯವಲ್ಲ. ಆದರೆ ರಾಜಕೀಯ ಕಾರಣವನ್ನೇ ಹೇಳಿ ಆತನನ್ನು ಅಪರಾಧಿಸ್ಥಾನಕ್ಕೆ ತರುವುದು ಆಗ ಸಾಧ್ಯವಾಗಿರಲಿಲ್ಲ. ಅದಕ್ಕೋಸ್ಕರ ಆತನು ದೇವರುಗಳಲ್ಲಿ ನಂಬಿಕೆಯಿಲ್ಲದವನೆಂತಲೂ ಯುವಕರನ್ನು ಕೆಡಿಸುತ್ತಾನೆಂತಲೂ ಬೇರೆ ಅಪವಾದ ತಂದರು. ಸಾಧಾರಣವಾಗಿ ಅಥೆನ್ಸಿನಲ್ಲಿ ಯಾರಮೇಲಾದರೂ ಅವರು ಮತವನ್ನು ಹಾಳುಮಾಡುತ್ತಾರೆಂಬ ಅಪವಾದ ಬಂದರೆ, ಅದರ ತಳದಲ್ಲಿ ರಾಜಕೀಯ ಕಾರಣವಿರಬೇಕೆಂದು ಊಹಿಸಲು ಅವಕಾಶವಿದೆ. ಹಿಂದೆ ಅನಾಗ್ಸಾಗೊರಾಸ್ ಎಂಬ ಜಿಜ್ಞಾಸು

ವನ್ನು ಹೀಗೆಯೇ ನ್ಯಾಯಸ್ಥಾನಕ್ಕೆ ಎಳೆದಿದ್ದರು. ಆತನು ಪೆರಿಕ್ಲೀಸನಸ್ನೇಹಿತ. ಪೆರಿಕ್ಲೀಸನ ಮೇಲಿನ ದ್ವೇಷದಿಂದ ಅವನ ಮೇಲೆ ಅಪವಾದ ತಂದರೆಂದು ಯೋಚಿಸಲು ಆಧಾರವಿದೆ. ಪ್ರಜಾಪ್ರಭುತ್ವ ಪಕ್ಷದವರಿಗೆ ಸಾಕ್ರೆಟೀಸನ ಮೇಲೆ ಕೋಪಹುಟ್ಟುವುದಕ್ಕೆ ಇನ್ನೊಂದು ಕಾರಣವಿತ್ತು. ಆತನ ಶಿಷ್ಯವರ್ಗದಲ್ಲಿದ್ದ ಆಲ್ಕಿಬಿಯೆಡೀಸ್, ಕ್ರಿಟಿಯಾಸ್, ಕಾರ್ಮೈಡೀಸ್ ಮೊದಲಾದವರು ಅಥೆನ್ಸಿನ ಶತ್ರುಗಳಾಗಿಯೂ ಘಾತುಕರಾಗಿಯೂ ಪರಿಣಮಿಸಿದ್ದರು. ಇವರ ನಡತೆ ಸಾಕ್ರೆಟೀಸನಿಗೆ ಅಪಕೀರ್ತಿಯನ್ನು ತಂದಿತು. ಅಂತೂ ಒಟ್ಟಿನಲ್ಲಿ ಸಾಕ್ರೆಟೀಸನನ್ನು ಕಂಡರೆ ಅಥೆನ್ಸಿನವರಿಗೆ ಭಯ. ಅವನು ಸಂಪ್ರದಾಯ ವನ್ನು ಒಪ್ಪದೆ ತನ್ನದೇ ಒಂದು ದಾರಿ ಮಾಡಿಕೊಳ್ಳುತ್ತಿದ್ದನು; ಆ ಹೊಸ ದಾರಿ ತಮ್ಮನ್ನು ಎಲ್ಲಿಗೆ ಎಳೆದೊಯ್ಯುವುದೋ ಎಂಬ ಹೆದರಿಕೆ ಜನರ ಮನಸ್ಸಿನಲ್ಲಿ ಉಂಟಾಯಿತು. ಸಾಕ್ರೆಟೀಸನು ರಾಷ್ಟ್ರವನ್ನೇ ಮೂಲೋ ತ್ಪಾಟನೆ ಮಾಡುವವನು, ಅವನನ್ನು ಶಿಕ್ಷಿಸಬೇಕು ಎಂದುಕೊಂಡರು. ಅವನ ಜೀವನದ ಮತ್ತು ದಿನಚರ್ಯದ ಘನೋದ್ದೇಶವನ್ನು ಗ್ರಹಿಸುವ ಶಕ್ತಿ ಅವರಿಗಿರಲಿಲ್ಲ.

ಸಾಕ್ರೆಟೀಸನ ಮೇಲೆ ಫಿರ್ಯಾದು ತರುವುದರಲ್ಲಿ ಪ್ರಮುಖರಾದವರು ಮೂರು ಜನ—ತೊಗಲು ವರ್ತಕನಾದ ಆನಿಟಸ್, ಮೆಲೆಟಸ್ ಎಂಬ ಅಪ್ರಸಿದ್ಧ ಕವಿ,ಲೈಕನ್ ಎಂಬೊಬ್ಬ ವಾಗ್ಮಿ. ಅವನ ಮೇಲೆ ಬಂದ ಅಪವಾದ ಎರಡು ಬಗೆಯಾದದ್ದು. ಅವನು ಅಥೆನ್ಸಿನ ದೇವರುಗಳಲ್ಲಿ ನಂಬಿಕೆಯಿಲ್ಲ ದವನು ಎಂಬ ಮೊದಲನೆಯ ಅಪವಾದವು ಅಷ್ಟು ಮುಖ್ಯವಾದುದಲ್ಲವೆಂದು ಆಗಲೇ ಹೇಳಿಯಾಗಿದೆ. ಆದರೂ ಅದರಲ್ಲಿ ನಿಜವೆಷ್ಟಿದೆ ಎಂದು ನೋಡು ವುದು ಉತ್ತಮ. ಅಥೆನ್ಸಿನ ದೇವರುಗಳಲ್ಲಿ ಸಾಕ್ರೆಟೀಸನಿಗೆ ಎಷ್ಟುಮಟ್ಟಿಗೆ ನಂಬಿಕೆಯಿತ್ತೋ ಹೇಳುವುದು ಕಷ್ಟ. ಆತನು 'ಸಮರ್ಥನವಾದ' ದಲ್ಲಿ ತನಗೆ ಅಥೆನ್ಸಿನ ದೇವತೆಗಳಲ್ಲಿ ನಂಬಿಕೆಯಿದೆ ಎಂದಾಗಲಿ, ಇಲ್ಲವೆಂದಾ ಗಲಿ ಹೇಳಿಲ್ಲ. ಈ ಅಪವಾದಕ್ಕೆ ಅವನು ಕೊಟ್ಟಿರುವ ಉತ್ತರವು ಸ್ವಲ್ಪ ಅಸಮರ್ಪಕವೆಂದೇ ಹೇಳಬೇಕು. ಗ್ರೀಕರ ದೇವರುಗಳು ಹೆಚ್ಚುಕಡಮೆ ಮನುಷ್ಯರಂತೆಯೇ ರಾಜಸಗುಣವುಳ್ಳವರು. ಇವರ ವಿಷಯದಲ್ಲಿ ಜನರು ಹೇಳುತ್ತಿದ್ದ ಕಥೆಗಳನ್ನು ಕೇಳಿದರೆ ಜಿಜ್ಞಾಸುಗಳಿಗೆ ಆ ದೇವರುಗಳಲ್ಲಿ ಭಕ್ತಿ

ಯಿಡುವುದು ಹಾಗಿರಲಿ, ನಂಬಿಕೆಯಿಡುವುದೂ ಕಷ್ಟವೇ ಆಗುತ್ತಿತ್ತು. ಸಾಕ್ರೆಟೀಸನಿಗೇನೋ ಈ ಕಥೆಗಳಲ್ಲಿ ನಂಬಿಕೆ ಇರಲಿಲ್ಲ. ಆದರಲ್ಲಿ ಅವನ ದೇನೂ ವೈಶಿಷ್ಟ್ಯವಿರಲಿಲ್ಲ; ಆಗಿನ ಕಾಲದ ಜಿಜ್ಞಾಸುಗಳೆಲ್ಲರಿಗೂ ಆ ದೇವರುಗಳಲ್ಲಿ ನಂಬಿಕೆ ಕಡಮೆಯೆಂದೇ ಹೇಳಬಹುದು. ಆದರೆ ಸಾಕ್ರೆಟೀಸನು ದೇವರುಗಳಿಗೆ ಸಂಬಂಧಪಟ್ಟ ವ್ರತ ಮೊದಲಾದುವುಗಳನ್ನು ನಿಯಮಾನುಸಾರವಾಗಿ ಅನುಸರಿಸುತ್ತಿದ್ದನೆಂದು ಸೆನೊಫನ್ನನಿಂದಲೂ ಪ್ಲೇಟೋವಿನಿಂದಲೂ ತಿಳಿಯುಬರುತ್ತದೆ. ಆತನು ಹೊಸ ದೇವತೆಗಳನ್ನು ಕಲ್ಪಿಸಿದನೆಂಬ ಅಪವಾದ ಬರುವುದಕ್ಕೆ ಒಂದು ವಿಶೇಷ ಕಾರಣವಿತ್ತು. ತನಗೆ ಆಗಾಗ ಒಂದು ದೈವಶಕ್ತಿಯಿಂದ ಪ್ರೇರಣೆ ಬರುತ್ತಿತ್ತೆಂದು ಅವನು ಹೇಳುತ್ತಿದ್ದನು. ಅದರ ವಿಷಯದಲ್ಲಿ ಆತನು ಹೀಗೆ ಹೇಳಿದ್ದಾನೆ: "ಈ ಶಕ್ತಿ—ಅದೊಂದು ವಿಧವಾದ ವಾಣಿ—ನಾನು ಹುಡುಗನಾಗಿರುವಾಗಲೇ ನನ್ನನ್ನು ಪ್ರೇರಿಸಲಾರಂಭಿಸಿತು. ಯಾವುದಾದರೂ ಕೆಲಸವನ್ನು ನಾನು ಮಾಡಬೇಕೆಂದಿರುವಾಗ ಅದು ನನ್ನನ್ನು ತಡೆಯುವುದೇ ಹೊರತು ಇಂಥ ಕೆಲಸವನ್ನು ಮಾಡು ಎಂದು ಆಜ್ಞಾಪಿಸುವುದಿಲ್ಲ." ಈ ಶಕ್ತಿಯನ್ನೇ ಅಥೆನ್ಸಿನವರು ಹೊಸ ದೇವರೆಂದು ಭಾವಿಸಿದರೆಂದು ಸೆನೊಫನ್ನನು ಊಹಿಸಿದ್ದಾನೆ. ಕೆಲವರು ಈ ಶಕ್ತಿಯನ್ನು ಆತ್ಮಸಾಕ್ಷಿ ಎನ್ನುವರು; ಸಾಕ್ರೆಟೀಸನು ಅದು ಒಂದು ದಿವ್ಯ ಶಕ್ತಿಯೆಂದೇ ನಂಬಿದ್ದನೆಂದು ಅವನ ಮಾತುಗಳಿಂದ ಸ್ಪಷ್ಟವಾಗಿ ಕಾಣಬರುತ್ತದೆ. ಆದರೂ ಅದನ್ನು ಅವನು ಹೊಸದಾಗಿ ಕಲ್ಪಿಸಿದ ದೇವರು ಎಂದು ಹೇಳುವುದಕ್ಕಾಗುವುದಿಲ್ಲ. ಸಾಕ್ರೆಟೀಸನಿಗೆ ಅಥೆನ್ಸಿನ ದೇವರಲ್ಲಿ ನಂಬಿಕೆ ಇರಲಿ ಇಲ್ಲದಿರಲಿ, ಆತನು ನಿರೀಶ್ವರವಾದಿಯಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು. ದೇವರಲ್ಲಿ ನಂಬಿಕೆಯೂ ಭಕ್ತಿಯೂ ಆತನ ಪ್ರೇರಣೆಗನುಸಾರವಾಗಿ ನಡೆಯಬೇಕೆಂಬ ದೃಢನಿಶ್ಚಯವೂ ಸಾಕ್ರೆಟೀಸನ ಮಾತುಗಳಲ್ಲಿ ಅನೇಕ ಕಡೆ ಕಂಡುಬರುತ್ತವೆ. "ನನಗೆ ದೇವರಲ್ಲಿರುವಂಥ ನಂಬಿಕೆ ನನ್ನನ್ನು ದೂರುವವರೊಬ್ಬರಿಗೂ ಇಲ್ಲ" ಎಂದು 'ಸಮರ್ಥನವಾದ' ದಲ್ಲಿ ಕಂಠೋಕ್ತವಾಗಿ ಹೇಳಿದ್ದಾನೆ.

ಸಾಕ್ರೆಟೀಸನು ಯುವಕರನ್ನು ಕೆಟ್ಟದಾರಿಗೆ ಎಳೆದನೆಂಬುದಂತೂ ತೀರ ತಪ್ಪು ತಿಳಿವಳಿಕೆ. ಅವನಿಂದ ಯುವಕರು ವಿಮರ್ಶೆಯ ಮತ್ತು ನಿಷ್ಕೃಷ್ಟ

ವಾದ ವಿಷಯಪರಿಶೀಲನೆಯ ಅಭ್ಯಾಸವನ್ನು ಕಲಿತರೆಂಬುದೇನೋ ನಿಜ. ಆದರೆ ಈ ಅಭ್ಯಾಸದ ಜೊತೆಗೆ ಆತನ ಆದರ್ಶಜೀವನದ ಪ್ರಭಾವವೂ ಅವರ ಮೇಲೆ ಬಿದ್ದುದರಿಂದ ಅವರ ಮನಸ್ಸಿನ ಮೇಲೆ ಅದು ಅತ್ಯುತ್ತಮವಾದ ಪರಿಣಾಮವನ್ನುಂಟುಮಾಡಿತು. ಕ್ರಿಟಿಯಾಸ್ ಮೊದಲಾದವರ ದುಷ್ಕೃತ್ಯಗಳಿಗಾಗಿ ಅವನನ್ನು ದೂರುವುದು ಸರಿಯಲ್ಲ. ಅವರು ದುರಾಚಾರಿಗಳಾದಾಗ ಸಾಕ್ರೈಟೀಸನು ನಿರ್ದಾಕ್ಷಿಣ್ಯವಾಗಿ ಅವರ ತಪ್ಪನ್ನು ಎತ್ತಿ ತೋರಿಸಿ ಅವರಿಗೆ ಬುದ್ಧಿ ಕಲಿಸಲು ಪ್ರಯತ್ನಿಸಿದನೆಂದು ಸ್ಸೆನೊಫನ್ನನು ತಿಳಿಸುತ್ತಾನೆ.

ಈ ಅಪವಾದಗಳಿಗೆಲ್ಲಾ 'ಸಮರ್ಥನವಾದ'ವೆಂಬ ಸಂವಾದವು ಉತ್ತರ. ಸಾಕ್ರೈಟೀಸನು ಅದರಲ್ಲಿ ಹೇಳಿರುವಂತೆಯೇ ಮಾತಾಡಿದನೆಂದು ನಿಸ್ಸಂದೇಹವಾಗಿ ಹೇಳುವುದಕ್ಕಾಗುವುದಿಲ್ಲ. ಆದರೆ ಸ್ವಲ್ಪ ಹೆಚ್ಚುಕಡಮೆ ಅದೇ ರೀತಿ ಮಾತಾಡಿರಬಹುದೆಂದು ತೋರುತ್ತದೆ. ಆತನ ಭಾಷಣದಲ್ಲಿ ತನಗೆ ಮರಣದಂಡನೆಯಾಗಬಹುದೆಂಬ ಆತಂಕವಾಗಲಿ, ನ್ಯಾಯಾಧೀಶರನ್ನು ಹೊಗಳಿ ಅವರ ಮನಸ್ಸನ್ನು ತನ್ನಕಡೆಗೆ ತಿರುಗಿಸಿಕೊಳ್ಳಬೇಕೆಂಬ ಅಪೇಕ್ಷೆಯಾಗಲಿ ಎಳ್ಳಷ್ಟೂ ಕಾಣುವುದಿಲ್ಲ. ನ್ಯಾಯಾಧೀಶರೆದುರಿಗೆ ಅಪರಾಧಿಸ್ಥಾನದಲ್ಲಿ ನಿಂತಿರುವಾಗಲೂ ಅವನು ಮಾನವಚಕ್ರವರ್ತಿಯಂತೆ ದರ್ಪದಿಂದ ಮಾತಾಡುತ್ತಾನೆ. ತಾನು ಅನುಸರಿಸುತ್ತಿದ್ದ ಜೀವನಕ್ರಮಕ್ಕೆ ವಿರುದ್ಧವಾಗಿ ಒಂದು ಮಾತನ್ನೂ ಆಡಲೊಪ್ಪುವುದಿಲ್ಲ. "ಬಿಡುಗಡೆಯಾದರೆ ಒಡನೆಯೇ ನಾನು ನಿಯುಕ್ತನಾಗಿರುವ ಕಾರ್ಯದಲ್ಲಿ ಮತ್ತೆ ತೊಡಗುತ್ತೇನೆ" ಎಂದು ಘಂಟಾಘೋಷವಾಗಿ ಹೇಳುತ್ತಾನೆ. ಆತನು ಸ್ವಲ್ಪ ನಮ್ರತೆಯನ್ನು ತೋರಿಸಿ ಗಡೀಪಾರಾಗಿ ಹೋಗುವುದಕ್ಕೆ ಒಪ್ಪಿದ್ದರೆ ನ್ಯಾಯಾಧೀಶರು ಅದಕ್ಕೆ ಅಡಚಣೆ ಮಾಡುತ್ತಿರಲಿಲ್ಲ. ಆನಿಟಸ್ಸಿಗೆ ಸಹ ಸಾಕ್ರೈಟೀಸನ ಮರಣ ಬೇಕಾಗಿರಲಿಲ್ಲ. ಅವನು ದೇಶವನ್ನು ಬಿಟ್ಟು ಹೊರಟುಹೋಗಿದ್ದರೆ ಅವನಿಗೂ ಸಂತೋಷವೇ ಆಗುತ್ತಿತ್ತು. ಆದರೆ ಸಾಕ್ರೈಟೀಸನು ಹಾಗೇನಾದರೂ ಗಡೀಪಾರು ಶಿಕ್ಷೆಯನ್ನು ಸೂಚಿಸಿದ್ದರೆ ತಾನು ತಪ್ಪಿತಸ್ಥನೆಂದು ಒಪ್ಪಿಕೊಂಡಂತಾಗುತ್ತಿತ್ತು. ತಪ್ಪೇನೂ ಇಲ್ಲದಿರುವಾಗ ತಾನು ಅಪರಾಧಿಯೆಂದು ಒಪ್ಪಿಕೊಳ್ಳುವುದೇತಕ್ಕೆ? ಸಾಕ್ರೈಟೀಸನು ಜಂಬಗಾರನಲ್ಲ; ಆದರೆ ತಾನು ಮಾಡಿರುವ ಕೆಲಸಕ್ಕೆ ತಕ್ಕ ಪ್ರತಿಫಲ ಬಹುಮಾನವೇ ಹೊರತು ಶಿಕ್ಷೆಯಲ್ಲವೆಂದು ಅವನು ಧೈರ್ಯವಾಗಿ

ಹೇಳುತ್ತಾನೆ. ಸಾಕ್ರೆಟೀಸನ ಸ್ಥಿತಿಯಲ್ಲಿದ್ದ ಅಪರಾಧಿಗಳು ತಮ್ಮ ಹೆಂಡತಿ ಮಕ್ಕಳನ್ನು ನ್ಯಾಯಾಸ್ಥಾನಕ್ಕೆಕರೆತಂದುನ್ಯಾಯಾಧೀಶರಿಗೆ ಮರುಕವುಂಟಾಗು ವಂತೆ ಮಾಡುವುದು ಆ ಕಾಲದಲ್ಲಿ ವಾಡಿಕೆಯಾಗಿತ್ತು ; ಅದನ್ನು ಯಾರೂ ಅವಮಾನಕರವೆಂದು ತಿಳಿದಿರಲಿಲ್ಲ. ಆದರೆ ವಯಸ್ಸಾದವರೂ ಪ್ರಾಜ್ಞರಾದ ವರೂ ಹೇಡಿಗಳಂತೆ ಮರಣಕ್ಕಂಜಿ ಗೋಳಿಟ್ಟು ಗೋಗರೆಯುವುದು ಸಾಕ್ರೆ ಟೀಸನಿಗೆ ಅಸಹ್ಯಕರವಾಗಿತ್ತು. ಅದಲ್ಲದೆ ಅವನೇ ಹೇಳಿರುವಂತೆ "ನ್ಯಾಯಾಧಿ ಪತಿ ಇರುವುದು ತೀರ್ಪು ಕೊಡುವುದಕ್ಕೆ ; ಬೇಡಿದವರ ಕೋರಿಕೆಯನ್ನು ಸಲ್ಲಿಸುವುದಕ್ಕಲ್ಲ. ಆತನು ಶಾಸನಕ್ಕನುಸಾರವಾಗಿ ತೀರ್ಪು ಕೊಡುತ್ತೇನೆಂದು ಪ್ರಮಾಣಮಾಡಿರುತ್ತಾನೆ ; ಇಚ್ಛೆಬಂದಾಗ ದಯೆ ತೋರಿಸುತ್ತೇನೆಂದಲ್ಲ." ಆದಕಾರಣ ಅವನು ನ್ಯಾಯಾಧೀಶರ ಕರುಣೆಯನ್ನು ಬೇಡಲಿಲ್ಲ. ಅಷ್ಟು ಖಂಡಿತವಾಗಿ ಮಾತಾಡದೆ ಸ್ವಲ್ಪಮಟ್ಟಿಗಾದರೂ ಜನರ ಮನಸ್ಸನ್ನು ಒಲಿಸಿ ಕೊಳ್ಳಲು ಪ್ರಯತ್ನಿಸಿದ್ದರೆ ಅವನಿಗೆಬಹುಶಃ ಮರಣದಂಡನೆಯಾಗುತ್ತಿರಲಿಲ್ಲ. ಆದರೆ ಸಾಕ್ರೆಟೀಸನಿಗೆ ಮರಣವೆಂದರೆ ಲಕ್ಷ್ಯವೇ ಇಲ್ಲ. "ನಾನು ಸಾಯು ವುದಕ್ಕೆ ಹೋಗುತ್ತೇನೆ; ನೀವು ಬದುಕಿ ಬಾಳಲು ಹೋಗುತ್ತೀರಿ. ಇವೆರಡ ರಲ್ಲಿ ಯಾವುದು ಉತ್ತಮ ಸ್ಥಿತಿಯೋ ಭಗವಂತನೊಬ್ಬನಿಗೇ ಗೊತ್ತು" ಎಂದು ಗಂಭೀರವಾಣಿಯಿಂದ ನುಡಿದು ಅವನು ನ್ಯಾಯಾಸ್ಥಾನವನ್ನು ಬಿಟ್ಟು ಹೊರಟನು.

ಆತನ ವಿಚಾರಣೆಯಾದ ದಿನಕ್ಕೂ ಮರಣದ ದಿನಕ್ಕೂ ನಡುವೆ ಒಂದು ತಿಂಗಳ ಅವಧಿಯಿತ್ತು. ಆ ಕಾಲದಲ್ಲಿ ಸಾಕ್ರೆಟೀಸನು ಮನಸ್ಸುಮಾಡಿದ್ದರೆ ಸೆರೆಮನೆಯಿಂದ ತಪ್ಪಿಸಿಕೊಂಡು ಹೋಗುವುದು ಕಷ್ಟವಾಗಿರಲಿಲ್ಲ. 'ಕ್ರೈಟೋ' ವಿನಲ್ಲಿ ಹೇಳಿರುವ ಸಂಗತಿ ನಡೆಯಿತೋ ಇಲ್ಲವೋ ಹೇಳಲಾಗುವುದಿಲ್ಲ. ಅವನ ಸ್ನೇಹಿತರು ಹಾಗೆ ಅವನನ್ನು ತಪ್ಪಿಸಿಕೊಂಡು ಹೋಗಬೇಕೆಂದು ಒತ್ತಾಯ ಮಾಡಿದರೆನ್ನುವುದು ಅಸಂಭವವಲ್ಲ. ತನ್ನನ್ನು ಹೀಗೆ ಒತ್ತಾಯಮಾಡಿದವ ರಿಗೆ ಸಾಕ್ರೆಟೀಸನು ಶಾಸನಗಳ ಉಜ್ವಲವಾದ ಭಾಷಣದಲ್ಲಿ ಉತ್ತರ ಕೊಟ್ಟಿ ದ್ದಾನೆ. ಅಥೆನ್ಸಿನವರ ತೀರ್ಪು ಸರಿಯಾಗಲಿ, ತಪ್ಪಾಗಲಿ, ವ್ಯಕ್ತಿ ತನ್ನ ಸುಖಕ್ಕೋಸ್ಕರ ಆ ತೀರ್ಪಿಗೆ ವಿರುದ್ಧವಾಗಿ ನಡೆಯಲಾಗದು. "ಸಾಕ್ರೆ ಟೀಸನು ಹಣ್ಣು ಹಣ್ಣು ಮುದುಕನಾಗಿ ಬದುಕಿ ಕಷ್ಟಪಡುವುದಕ್ಕಿಂತಲೂ

ಸಾಯುವುದು ಮೇಲೆಂದುಕೊಂಡು ತಪ್ಪಿಸಿಕೊಂಡುಹೋಗಲು ಒಪ್ಪಲಿಲ್ಲ" ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಹೀಗೆ ಹೇಳಲು ಏನೂ ಆಧಾರವಿಲ್ಲ. ಸಾಯುವುದಕ್ಕೆ ಪ್ರತಿದಿನವೂ ಸಿದ್ಧನಾಗುತ್ತಿದ್ದ ಸಾಕ್ರೆಟೀಸನಿಗೆ ಮೃತ್ಯುವೆಂದರೆ ಯಾವ ಭಯವೂ ಇರಲಿಲ್ಲ. ಅದರಿಂದಲೇ ಅವನು ಅದನ್ನು ಸಂತೋಷದಿಂದ ಎದುರುಗೊಂಡನು. ಅವನು ಜೀವನಕ್ಕೆ ಹೆದರಿ ಮೃತ್ಯುವನ್ನು ಆಲಿಂಗಿಸಿಕೊಳ್ಳುವಂಥ ಹೇಡಿಯಲ್ಲ.

ಮರಣದ ದಿನ ಬಂದಾಗ ಸಾಕ್ರೆಟೀಸನು ಸಂಜೆಯುವರೆಗೂ ಎಂದಿನಂತೆ ತತ್ತ್ವ ವಿಚಾರದಲ್ಲಿ ಕಾಲಕಳೆದು ಸ್ನಾನಮಾಡಿ, ಹೆಂಡತಿ ಮಕ್ಕಳನ್ನೂ ಸ್ನೇಹಿತರನ್ನೂ ಬೀಳ್ಕೊಂಡು ಸಂತೋಷಚಿತ್ತನಾಗಿ ನಿಯಮಿತ ಕಾಲಕ್ಕಿಂತ ಸ್ವಲ್ಪ ಮುಂಚೆಯೇ ವಿಷಪಾನಮಾಡಿದನು. ವಿಷವು ಕಾಲಿನಿಂದ ಹೃದಯುವನ್ನು ಮುಟ್ಟುವವರೆಗೂ ಆತನು ಜ್ಞಾನವಾಗಿಯೇ ಇದ್ದನು. ಪ್ರಾಣ ಹೋಗುವುದಕ್ಕೆ ಒಂದು ನಿಮಿಷ ಮುಂಚೆ "ಕ್ರೈಟೊ, ನಾನು ಈಸ್ಕ್ಲೆಪಿಯುಸ್ಸಿಗೆ ಒಂದು ಹುಂಜವನ್ನು ಸಲ್ಲಿಸಬೇಕು; ಅದನ್ನು ಮರೆಯದೆ ಕೊಡು" ಎಂದನು. ಅವನಿಗೆ ಮರಣವು ಮರಣವಲ್ಲ, ಜೀವನವೆಂಬ ರೋಗದಿಂದ ಬಿಡುಗಡೆ. ಆ ಕೊನೆಯ ಮಾತಿನ ಅರ್ಥ ಇದೇ ಇರಬಹುದು.

ಸಾಕ್ರೆಟೀಸನ ಘನತೆಯು ಅವನ ನಡತೆ ಮತ್ತು ಆದರ್ಶಜೀವನ ಇವುಗಳಲ್ಲಿಯೇ ಮುಗಿಯಲಿಲ್ಲ. ಆತನು ಒಂದಕ್ಷರವನ್ನೂ ಬರೆಯದಿದ್ದರೂ ಗ್ರೀಕರ ತತ್ತ್ವಶಾಸ್ತ್ರಚರಿತ್ರೆಯಲ್ಲಿ—ಅಂದರೆ ಯೂರೋಪಿನ ತತ್ತ್ವಶಾಸ್ತ್ರಚರಿತ್ರೆಯಲ್ಲೇ—ಅವನ ಹೆಸರು ಶಾಶ್ವತವಾಗಿ ನಿಲ್ಲುತ್ತದೆ. ಜೂಲಿಯನ್ ಚಕ್ರವರ್ತಿ ಹೇಳಿರುವಂತೆ "ಸಾಫ್ರೊನಿಸ್ಕಸ್ಸಿನ ಮಗನು ಅಲೆಗ್ಸಾಂಡರನಿಗಿಂತ ಮಹತ್ವದ ಕೆಲಸಗಳನ್ನು ಮಾಡಿದ್ದಾನೆ . . . . ಅಲೆಗ್ಸಾಂಡರನ ವಿಜಯದಿಂದ ಯಾರಿಗೆ ಮೋಕ್ಷ ಸಿಕ್ಕಿದೆ? . . . ಆದರೆ ಈಗ ತತ್ತ್ವಜ್ಞಾನದಿಂದ ಮೋಕ್ಷವನ್ನು ಪಡೆದಿರುವವರೆಲ್ಲರೂ ಸಾಕ್ರೆಟೀಸನ ಋಣಿಗಳು." ಅರಿಸ್ಟೋಟಲಿನ ಪ್ರಕಾರ ಅವನು ತತ್ತ್ವಶಾಸ್ತ್ರಕ್ಕೆ ಮಾಡಿದ ಉಪಕಾರ ಎರಡು ವಿಧವಾದದ್ದು. ಮೊವಲನೆಯದು, ಒಂದೇ ವರ್ಗಕ್ಕೆ ಸೇರಿದ ನೂರಾರು ವಸ್ತುಗಳನ್ನು ಪರಿಶೀಲಿಸಿ ಅವುಗಳೆಲ್ಲಕ್ಕೂ ಅನ್ವಯಿಸುವ ತತ್ತ್ವಗಳನ್ನು ಕಂಡುಹಿಡಿಯುವ ವಿಧ; ಎರಡನೆಯದು, ಲಕ್ಷಣಗಳ ಪ್ರಾಮುಖ್ಯವನ್ನು ತೋರಿಸಿಕೊಟ್ಟದ್ದು. ಆತನು

ಪ್ಲೇಟೋವಿನಂತೆ ತಾನೇ ಹೊಸ ತತ್ವಮತವನ್ನು ಕಂಡುಹಿಡಿದು ಪ್ರಚಾರ ಮಾಡಲಿಲ್ಲ; ತತ್ವಶಾಸ್ತ್ರ ನಗರದಲ್ಲಿ ಅವನದೇ ಒಂದು ಸೌಧವಿದೆಯೆಂದು ಹೇಳಲಾಗುವುದಿಲ್ಲ. ಆದರೆ ಅವನು ತೋರಿಸಿಕೊಟ್ಟ ಕ್ರಮದಿಂದ ತತ್ವ ಶಾಸ್ತ್ರವು ಸಾಧ್ಯವಾಯಿತೆನ್ನಬಹುದು. ಸಾಕ್ರೆಟೀಸನು ಪಾಶ್ಚಾತ್ಯ ತತ್ವ ಪ್ರವಾಹಗಳಿಗೆ ಮೂಲಸ್ಥಾನ. ಅವನು ತನ್ನ ಸಂವಾದಗಳನ್ನು ನಡೆಸಲಾ ರಂಭಿಸಿದ ಕಾಲದಲ್ಲಿ ಅಥೆನ್ಸಿನಲ್ಲಿ ನಿಷ್ಕೃಷ್ಟವಾದ ಜ್ಞಾನವಿರುವುದು ಹಾಗಿರಲಿ, ಅಂಥ ಜ್ಞಾನದ ಭಾವನೆ ಸಹ ಇರಲಿಲ್ಲ. ಅಥೆನ್ಸಿನಲ್ಲಿ ಪ್ರಸಿದ್ಧಿಪಡೆದಿದ್ದ ವಾಗ್ಮಿಗಳೂ ದೇವತೋಪಾಸಕರೂ ತಾವು ಜ್ಞಾನಿಗಳೆಂದು ಹೆಮ್ಮೆಗೊಂಡು "ತಮಗೆ ತಿಳಿಯದೆ ಇದ್ದುದನ್ನು ಸಹ ತಿಳಿದಿದ್ದೇವೆಂದು ಹೇಳಿಕೊಳ್ಳುವಷ್ಟು" ಮೂಢರಾಗಿ ತೀರ ನಾಚಿಕೆಗೇಡಾದ ಸ್ಥಿತಿಯಲ್ಲಿದ್ದರು. ತಮ್ಮ ಜ್ಞಾನವು ಅತ್ಯಲ್ಪವಾದದ್ದಿರಬಹುದು, ನಿಷ್ಕೃಷ್ಟವಾದದ್ದಲ್ಲದಿರಬಹುದು ಎಂಬ ಯೋಚ ನೆಯೇ ಅವರಿಗೆ ಹೊಳೆದಿರಲಿಲ್ಲ. ಆದಕಾರಣ ಸಾಕ್ರೆಟೀಸನು ಮೊದಲು ಈ ಅಜ್ಞಾನವನ್ನು ಹೊರಗೆಡಹಿದನು. ಯಾವ ವಿಷಯವನ್ನಾಗಲಿ ವಿಮರ್ಶೆಮಾಡಿ ತನ್ನ ತರ್ಕದ ಒರೆಗಲ್ಲಿಗೆ ಹಾಕಿ ನೋಡಿದಲ್ಲದೆ ಅದನ್ನು ಅವನು ಒಪ್ಪುತ್ತಿರ ಲಿಲ್ಲ. ಧೈರ್ಯ, ನ್ಯಾಯ, ಧರ್ಮ, ರಾಷ್ಟ್ರ ಮೊದಲಾದ ಪದಗಳ ಅರ್ಥ ತಿಳಿಯದೆಯೇ ನಾವು ಪ್ರತಿದಿನವೂ ಅವುಗಳನ್ನು ಉಪಯೋಗಿಸುತ್ತಿರುತ್ತೇವೆ. ಆದರೆ ಜ್ಞಾನಾಭಿಲಾಷಿಗಳು ಅವುಗಳ ಅರ್ಥವನ್ನು ಪರೀಕ್ಷಿಸಿ ನೋಡಿಯೇ ತೀರಬೇಕು. ಅವುಗಳಿಗೆಲ್ಲಾ ಲಕ್ಷಣವನ್ನು ಗೊತ್ತು ಮಾಡಿಕೊಳ್ಳುವುದು ಆವಶ್ಯಕವೆಂದೂ ಆ ಲಕ್ಷಣಗಳಿಲ್ಲದೆ ಜ್ಞಾನವು ಅಸಾಧ್ಯವೆಂದೂ ಸಾಕ್ರೆ ಟೀಸನು ತೋರಿಸಿಕೊಟ್ಟನು. ಆ ಕ್ರಮವನ್ನನುಸರಿಸಿ ಆತನ ಬೋಧನೆಯಿಂದ ಮುಂದುವರಿದು ಪ್ಲೇಟೋ ತಾನೇ ಒಂದು ಘನವಾದ ತತ್ವಪ್ರಪಂಚವನ್ನು ನಿರ್ಮಿಸಿದನು. ಪ್ಲೇಟೋವಿನ ತತ್ವಗಳು ಅವನವೇ ಆದರೂ ಅವನಗ್ರಂಥಗಳಲ್ಲಿ ಸಾಕ್ರೆಟೀಸನ ಬೋಧನೆಯು ಮತ್ತು ಅದಕ್ಕಿಂತಲೂ ಹೆಚ್ಚಾಗಿ ಆತನು ತೋರಿಸಿ ಕೊಟ್ಟ ವಿಚಾರಕ್ರಮದ ಪರಿಣಾಮವನ್ನು ಕಾಣಬಹುದು; ಆ ಪಾತ್ರವನ್ನವ ಲಂಬಿಸಿ ಪಾಶ್ಚಾತ್ಯ ತತ್ವಶಾಸ್ತ್ರದ ಮಹಾನದಿಯೊಂದು ಹರಿಯಿತು. ಅದರ ವಿಷಯವಾಗಿ ಇಲ್ಲಿ ಹೆಚ್ಚು ಹೇಳುವುದು ಸಾಧ್ಯವಿಲ್ಲ. ಸಾಕ್ರೆಟೀಸನ ನೀತಿ ಶಾಸ್ತ್ರದ ವಿಷಯವಾಗಿ ಒಂದೆರಡು ಮಾತು ಮಾತ್ರ ಹೇಳಿ ಮುಗಿಸಬಹುದು.

ಜ್ಞಾನವನ್ನು ಪಡೆಯುವುದು ಸಾಕ್ರೆಟೀಸನ ಪರಮಧ್ಯೇಯ. ಜ್ಞಾನವೂ ಸದ್ಗುಣವೂ ಬರಿಯ ಮಾತುಗಳೆಂದೂ ಅವುಗಳನ್ನು ಪಡೆಯುವುದು ಅಸಾಧ್ಯವೆಂದೂ ಜನರ ಮನಸ್ಸಿನಲ್ಲಿ ಅಭಿಪ್ರಾಯವನ್ನುಂಟುಮಾಡಿದ್ದ ಸೋಫಿಸ್ಟರಿಗೆ ಎದುರಾಳಿಯಾಗಿ ನಿಂತು ಸಾಕ್ರೆಟೀಸನು "ಜ್ಞಾನವೆನ್ನುವುದು ಇದೆ; ಸದ್ಗುಣವೂ ಇದೆ. ಅವುಗಳನ್ನು ಪಡೆಯುವುದು ಸಾಧ್ಯ" ಎಂದು ಹೇಳಿದ್ದಲ್ಲದೆ "ಜ್ಞಾನವೂ ಸದ್ಗುಣವೂ ಒಂದೇ" ಎಂದು ಸಾರಿದನು. ಇದೇ ಅವನ ಮುಖ್ಯ ತತ್ವ. ಅವನ ದೃಷ್ಟಿಯಲ್ಲಿ ಜ್ಞಾನವು ಮಾನವವರ್ಗಕ್ಕೆ ಭೂಷಣ ಮಾತ್ರವಲ್ಲ. ಜ್ಞಾನವೊಂದಿಲ್ಲದಿದ್ದರೆ ಮತ್ತೆ ಯಾವ ಸದ್ಗುಣವಿದ್ದರೂ ವ್ಯರ್ಥವೆಂದು ಹೇಳಿದರೂ ಸಾಲದು. ಜ್ಞಾನವಿಲ್ಲದಿದ್ದರೆ ಸದ್ಗುಣ ಸಾಧ್ಯವೇ ಅಲ್ಲ, ಜ್ಞಾನವೇ ಸದ್ಗುಣ. ಮೊದಲ ಸಲ ಕೇಳಿದರೆ ಸ್ವಲ್ಪ ವಿಚಿತ್ರವಾಗಿ ತೋರುವ ಈ ತತ್ವವು ನಿಜವಾಗಬೇಕಾದರೆ, ನಾವು ಜ್ಞಾನವೆಂಬ ಶಬ್ದಕ್ಕೆ ಬರಿಯ ಬುದ್ಧಿವಂತಿಕೆಯೆಂದಾಗಲಿ, ಶಬ್ದಾರ್ಥದ ತಿಳಿವಳಿಕೆಯೆಂದಾಗಲಿ ಅರ್ಥಮಾಡಬಾರದು. ಇದು ಒಳ್ಳೆಯದು, ಇದು ಕೆಟ್ಟದ್ದು ಎಂದು ವಾದದ ಮೂಲಕ ತಿಳಿಯುವುದು ಮಾತ್ರವೇ ಜ್ಞಾನವಲ್ಲ. ಒಳ್ಳೆಯದನ್ನು ಕಂಡರೆ ಪ್ರೇಮ, ಕೆಟ್ಟದ್ದನ್ನು ಕಂಡರೆ ದ್ವೇಷ—ಇವು ಆದ್ಯಂತ ವ್ಯಕ್ತಿಯಲ್ಲೂ ಹೊರಸೂಸುತ್ತಿರಬೇಕು. ಜ್ಞಾನವು ಚರ್ಮಚಕ್ಷುಸ್ಸಿಗೆ ಅಗೋಚರವಾದ ಬೆಳಕು; ಒಂದು ವಿಧವಾದ ಸ್ವರ್ಗೀಯ ತೇಜಸ್ಸು. ಜ್ಞಾನಕ್ಕೆ ಈ ಅರ್ಥವನ್ನು ಕೊಟ್ಟರೆ ಸಾಕ್ರೆಟೀಸನ ತತ್ವವು ಅಷ್ಟು ವಿಚಿತ್ರವಾಗಿ ಕಾಣುವುದಿಲ್ಲ. ಸಾಕ್ರೆಟೀಸನಲ್ಲಿ ಈ ಬಗೆಯ ಜ್ಞಾನವಿತ್ತು. ಆತನ 'ಡೀಮನ್'—ಅವನು ತಪ್ಪುದಾರಿಗೆ ಹೋಗುವ ಸಂಭವವಿದ್ದಾಗ ಅವನನ್ನು ತಡೆಯುತ್ತಿದ್ದ ಶಕ್ತಿ—ಇಂಥ ಜ್ಞಾನವೇ ಆಗಿರಬಹುದು. ಸತ್ಯ ಅಸತ್ಯ, ಸದ್ಗುಣ ದುರ್ಗುಣ, ಇವುಗಳ ಭೇದವನ್ನು ಯೋಚನೆಗೆ ಮುಂಚೆಯೇ ಅರಿಯುವಷ್ಟು ಆತನ ಆತ್ಮವು ಸಂಸ್ಕಾರಹೊಂದಿದ್ದಿರಬೇಕು. ಇಂಥ ಜ್ಞಾನವೂ ಸದ್ಗುಣವೂ ಒಂದೇ ಎಂದರೆ ಅದೇನೂ ಆಶ್ಚರ್ಯವಾಗಿ ತೋರುವುದಿಲ್ಲ.

ಆದರೆ ಸಾಕ್ರೆಟೀಸನು ಅನೇಕ ವೇಳೆ ಈ ವಿಧವಾದ ಜ್ಞಾನವನ್ನಲ್ಲದೆ ಉತ್ತಮತರದ ತಿಳಿವಳಿಕೆಯನ್ನೇ ಮನಸ್ಸಿನಲ್ಲಿಟ್ಟುಕೊಂಡು ಈ ತತ್ವವನ್ನು ಬೋಧಿಸಿದಂತೆ ತೋರುತ್ತದೆ. ಸಾಕ್ರೆಟೀಸನಿಗೆ ಪ್ರಾಪಂಚಿಕ ವಿಷಯಗಳಲ್ಲಿ

ಅಸಾಧಾರಣವಾದ ತಿಳಿವಳಿಕೆ ಇತ್ತು. ಈ ಗುಣಕ್ಕೇ ಸ್ಪೆನೊಫನ್ನನು ಹೆಚ್ಚು ಗಮನಕೊಟ್ಟಿದ್ದಾನೆ. ಸ್ಪೆನೊಫನ್ನನ ಪುಸ್ತಕವನ್ನು ಓದಿದವರು ಜ್ಞಾನವೆಂಬ ಪದಕ್ಕೆ ಮೇಲೆ ಹೇಳಿದಂಥ ಘನವಾದ ಅರ್ಥವನ್ನು ಕೊಡದೆ ಸಾಧಾರಣವಾದ ಅರ್ಥವನ್ನೇ ಕೊಡಬಹುದು. ಈ ಅರ್ಥದಲ್ಲಿಯೂ ಕೂಡ ಜ್ಞಾನವೂ ಸದ್ಗುಣವೂ ಒಂದೇ ಎಂದು ಸಾಕ್ರೆಟೀಸನು ಹೇಳಿದಹಾಗೆ ತೋರುತ್ತದೆ. ಈ ಅರ್ಥದಲ್ಲಿಯೂ ಅವನ ತತ್ವ ಸ್ವಲ್ಪಮಟ್ಟಿಗೆ ನಿಜವೆಂದೇ ಹೇಳಬೇಕು. "ಮೋಸ ಮಾಡುವುದು ಕೆಟ್ಟದ್ದೆಂದು ತಿಳಿದೂ ನಾವು ಮೋಸಮಾಡುವುದಿಲ್ಲವೆ?" ಎನ್ನಬಹುದು. ಆದರೆ ಅನೇಕ ವೇಳೆ ಅದು ನಿಜವಾಗಿಯೂ ಕೆಟ್ಟದ್ದೆಂದು ನಮಗೆ ದೃಢವಾದ ನಂಬಿಕೆ ಇರುವುದಿಲ್ಲ. "ಮೋಸಮಾಡಿದರೆ ಏನಾಗುತ್ತದೆ? ನಮಗೆ ಆದಾಯವಾಗುವ ಸಂಭವವುಂಟು; ಜಾಗರೂಕರಾಗಿದ್ದರೆ ಕೆಡುಕೇನೂ ಆಗಲಾರದು. ಇತರರಿಗೇನೋ ಕೆಡುಕಾಗಬಹುದು; ಆದರೆ . . . ಏನುಮಾಡುವುದಕ್ಕಾಗುತ್ತದೆ? ಪ್ರಪಂಚವೇ ಹೀಗೆ" ಎಂದುಕೊಳ್ಳುತ್ತೇವೆ. ಕೆಟ್ಟದ್ದು ಮಾಡಿದರೆ ನಮಗೆ ಹಾನಿ ಖಂಡಿತವೆಂಬ ನಂಬಿಕೆ ನಮಗಿರುವುದಿಲ್ಲ. "ಸದ್ಗುಣ ಹಾಗಿರಲಿ, ಪ್ರಪಂಚದಲ್ಲಿ ಹಣ ಮುಖ್ಯ" ಎಂದುಕೊಳ್ಳುತ್ತೇವೆ. ಆದ್ದರಿಂದ ಸಾಕ್ರೆಟೀಸನ ಮತ ತೀರ ಸುಳ್ಳೆಂದು ಹೇಳಲಾಗುವುದಿಲ್ಲ. ಆದರೆ ಎಷ್ಟೋ ವೇಳೆ ನಾವು ಒಂದು ಮಾರ್ಗವು ಒಳ್ಳೆಯದೆಂದು ಚೆನ್ನಾಗಿ ತಿಳಿದಿದ್ದರೂ ಆ ಮಾರ್ಗವನ್ನೇ ಅನುಸರಿಸುವಷ್ಟು ಮನೋನಿಶ್ಚಯವಿಲ್ಲದೆ ಕೆಟ್ಟ ದಾರಿಯನ್ನು ಹಿಡಿಯುವುದೂ ಉಂಟು. ಇದು ಒಳ್ಳೆಯದು ಎಂದು ತಿಳಿದ ಮಾತ್ರಕ್ಕೆ ಅದನ್ನು ಮಾಡಿದ ಹಾಗಾಗಲಿಲ್ಲ; ತಿಳಿವಳಿಕೆಯ ಜೊತೆಗೆ ಚಿತ್ತಸಿದ್ಧಿಯೂ ಬೇಕು. ಆದ್ದರಿಂದ ಸಾಕ್ರೆಟೀಸನ ಮತವನ್ನು ಒಪ್ಪುವುದಕ್ಕಾಗುವುದಿಲ್ಲ. ಅರಿಸ್ಟಾಟಲ್ ಹೇಳಿದಂತೆ ಆತ್ಮದಲ್ಲಿ ವಿವೇಕಕ್ಕೆ ವಿರೋಧವಾಗಿ ವರ್ತಿಸುವ ಭಾಗವೂ ಒಂದಿದೆ ಎಂಬುದನ್ನು ಸಾಕ್ರೆಟೀಸನು ಮರೆತನು.

ಜ್ಞಾನಸದ್ಗುಣಗಳ ಆವಶ್ಯಕತೆ, ಅವುಗಳ ಸತ್ಯ, ಅವನ್ನು ಪಡೆಯುವ ಬಗೆ—ಇವುಗಳ ವಿಷಯವಾಗಿ ಅವನು ಮಾಡಿದ ಬೋಧನೆ ಆಗಿನ ಕಾಲಕ್ಕೆ ಅತ್ಯಾವಶ್ಯಕವಾಗಿತ್ತು. ಜ್ಞಾನವೇನಿದ್ದರೂ ನಮ್ಮ ಇಂದ್ರಿಯಗಳಿಂದ ತಿಳಿಯುವಷ್ಟು ಮಾತ್ರ ಎಂಬ ಭಾವನೆಯನ್ನು ಸೋಫಿಸ್ಟರು ಪ್ರಚಾರಕ್ಕೆ ತಂದಿದ್ದರು.

ಸಾಕ್ರೆಟೀಸನು "ಇಂದ್ರಿಯಗಳಿಂದ ನಾವು ಪಡೆಯುವ ತಿಳಿವಳಿಕೆಯನ್ನು ನೆಚ್ಚ ಬಾರದು. ಎಲ್ಲಾ ಮನುಷ್ಯರಲ್ಲಿಯೂ ಒಂದೇ ವಿಧವಾಗಿ ಕೆಲಸಮಾಡುವು ದೆಂದರೆ ಬುದ್ಧಿಯೊಂದೇ. ನಾವು ಜ್ಞಾನವನ್ನು ಪಡೆಯುವುದು ಅದರಿಂದಲೇ. ಬುದ್ಧಿ ಎಲ್ಲರಲ್ಲಿಯೂ ಒಂದೇ ವಿಧವಾದ ಕೆಲಸಮಾಡುತ್ತದೆಯಾದದ್ದರಿಂದ ಎಲ್ಲರೂ ಒಪ್ಪಬಹುದಾದ ಜ್ಞಾನವಿದೆ" ಎಂದು ವಾದಿಸಿದನು. ಹೀಗೆ ಸಾಕ್ರೆ ಟೀಸನು ಸಂಪ್ರದಾಯವಿಮರ್ಶೆ ಮಾಡಿದರೂ ಜನರನ್ನು ಶೂನ್ಯಪ್ರಪಂಚದಲ್ಲಿ ಕೈಬಿಡದೆ ಜ್ಞಾನವೆನ್ನುವುದು ಇದೆಯೆಂದು ತೋರಿಸಿಕೊಟ್ಟನು.

ಸಾಕ್ರೆಟೀಸನ ಶಿಷ್ಯವರ್ಗದಲ್ಲಿ ಅರಿಸ್ಟಿಪಸ್, ಆಂಟಿಸ್ಥೆನೀಸ್ ಎಂಬವ ರಿಬ್ಬರಿದ್ದರು. ಇವರು ಸಾಕ್ರೆಟೀಸನ ಬೋಧನೆಯ ಮತ್ತು ಆತನ ಜೀವನದ ಒಂದೊಂದು ಭಾಗವನ್ನು ಮಾತ್ರ ಗ್ರಹಿಸಿ ಅದನ್ನೇ ದೊಡ್ಡದಾಗಿ ಬೆಳಸಿ ಬೇರೆ ಬೇರೆ ಮತಗಳನ್ನು ಪ್ರಚಾರಮಾಡಿದರು. ಸದ್ಗುಣವೇ ಮುಖ್ಯವೆಂದೂ ಅದಿಲ್ಲದಿದ್ದರೆ ಸೌಖ್ಯವು ಅಸಾಧ್ಯವೆಂದೂ ಸಾಕ್ರೆಟೀಸನು ಹೇಳಿದನು. ಸೌಖ್ಯಸದ್ಗುಣಗಳೆರಡೂ ಬೇರೆ ಬೇರೆಯಾಗಿ ದೊರೆಯಲಾರವೆಂದು ಆತನ ಮತ. "ಯಾವನೂ ಮನಃಪೂರ್ವಕವಾಗಿ ದುಃಖವನ್ನನುಭವಿಸುವುದಿಲ್ಲ. ಸುಖವನ್ನೂ ತನ್ನ ಇಷ್ಟವಿಲ್ಲದೆ ಅನುಭವಿಸುವುದಿಲ್ಲ" ಎಂಬ ಎಪಿಕಾರ್ಮಸ್ ಕವಿಯ ವಾಕ್ಯವನ್ನು ಸಾಕ್ರೆಟೀಸನ ಶಿಷ್ಯರು ಆಗಾಗ ಉದ್ಧರಿಸುತ್ತಿದ್ದರು. ಕೆಡುಕು ದುಃಖವನ್ನುಂಟುಮಾಡುವುದರಿಂದ ಯಾರೂ ತಾವಾಗಿಯೇ ಕೆಟ್ಟದ್ದನ್ನು ಮಾಡುವುದಿಲ್ಲ; ಕೆಟ್ಟದ್ದನ್ನು ಮಾಡುವುದಕ್ಕೆ ಅಜ್ಞಾನವೇ ಕಾರಣ—ಇದೇ ಸಾಕ್ರೆಟೀಸನ ಮತ. ಸಾಕ್ರೆಟೀಸನು ತನ್ನ ಜೀವನದಲ್ಲಿ ಸದ್ಗುಣಸೌಖ್ಯಗಳ ಏಕತ್ವವನ್ನು ಅನುಭವಕ್ಕೆ ತಂದುಕೊಂಡಿದ್ದನು.

ಮೇಲೆ ಉದ್ಧರಿಸಿರುವ ಎಪಿಕಾರ್ಮಸ್ಸಿನ ವಾಕ್ಯದಲ್ಲಿ ಸ್ಪಷ್ಟವಾಗಿರುವ "ಮನುಷ್ಯನು ಸೌಖ್ಯವನ್ನೇ ಅರಸುತ್ತಾನೆ" ಎಂಬ ಭಾಗವು ಸಾಕ್ರೆಟೀಸನ ಬೋಧನೆಯಲ್ಲೂ ಅಡಗಿತ್ತೆಂದು ಕೆಲವು ಲೇಖಕರ ಅಭಿಪ್ರಾಯ. ಆದರೆ ಸಾಕ್ರೆಟೀಸನ ಜೀವನವನ್ನೂ ಅವನ ಬೋಧನೆಯನ್ನೂ ಒಟ್ಟಿನಲ್ಲಿ ಪರಿಶೀಲಿಸಿ ನೋಡಿದರೆ, ಅವನು ಸೌಖ್ಯಕ್ಕೆ ಅಷ್ಟು ಹೆಚ್ಚು ಬೆಲೆ ಕೊಡಲಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ. "ಸದ್ಗುಣವೇ ಸೌಖ್ಯ"ಎಂದದ್ದೇನೋ ಸರಿಹೋಯಿತು. ಆದರೆ ಅರಿಸ್ಟಿಪಸ್ಸನೂ ಅವನ ಸಂಗಡದವರೂ—ಅವರಿಗೆ ಸಿರಿನೇಯಿಕ್

ಪಂಗಡದವರೆಂದು ಹೆಸರು—"ಮನುಷ್ಯನು ಯಾವಾಗಲೂ ಸೌಖ್ಯವನ್ನೇ ಅರಸುತ್ತಾನೆ; ಆದ್ದರಿಂದ ಅದಕ್ಕೇ ಪ್ರಾಮುಖ್ಯವನ್ನು ಕೊಡಬೇಕು" ಎಂದುಕೊಂಡು "ಸೌಖ್ಯವೇ ಸದ್ಗುಣ" ಎಂದರು. ಜೀವನದ ಗುರಿ ಸದ್ಗುಣ; ಆದರೆ ಸದ್ಗುಣದ ಗುರಿ ಸೌಖ್ಯ. ಆದ್ದರಿಂದ ಜೀವನದ ಗುರಿ ಸೌಖ್ಯ. ಸೌಖ್ಯವೆಂದರೆ ಸಂತೋಷ, ಅದರಲ್ಲಿಯೂ ಕ್ಷಣ ಕ್ಷಣದ ಸಂತೋಷ ಎಂದು ಅವರು ಅರ್ಥಮಾಡಿಕೊಂಡರು. ನಾಳೆ ಯಾರೋ, ನಾವು ಯಾರೋ; ಸಂತೋಷವು ಸಾಧ್ಯವಾಗಿರುವಾಗ ಅದನ್ನನುಭವಿಸೋಣ ಎಂದು ಅವರ ಮತ. ಬಿಸಿಲಿನಲ್ಲಿ ಹೂವಿನಿಂದ ಹೂವಿಗೆ ಹಾರಿ ಮಧುವನ್ನು ಹೀರಿ ಒಂದೆರಡು ದಿನಗಳಲ್ಲಿ ನಾಶಹೊಂದುವ ಬಣ್ಣದ ಚಿಟ್ಟೆಯ ಜೀವನವನ್ನೇ ಅವರು ಆದರ್ಶವಾಗಿಟ್ಟುಕೊಂಡಂತೆ ತೋರುತ್ತದೆ. ಸಂತೋಷಗಳಲ್ಲಿಯೂ ಶಾರೀರಕ ಸಂತೋಷಗಳೇ ಬಹಳ ಹಿತಕರವಾದದ್ದರಿಂದ ಅವೇ ಮುಖ್ಯ. ಆದರೆ ಮಿತಿಮೀರಿ ಸಂತೋಷವನ್ನು ಅನುಭವಿಸುವುದರಿಂದ ಅದು ದುಃಖವಾಗಿ ಅಥವಾ ನೋವಾಗಿ ಪರಿಣಮಿಸಬಹುದು; ಆದದ್ದರಿಂದ ಸಂತೋಷಾಭಿಲಾಷೆಯನ್ನು ಸ್ವಲ್ಪ ಹಿಡಿತದಲ್ಲಿಟ್ಟುಕೊಳ್ಳುವುದು ಉತ್ತಮ. ಇದೇ ಈ ಪಂಗಡದವರ ಬೋಧನೆ. ಸಾಕ್ರೆಟೀಸನು ಈ ಬಗೆಯ ಮಿತಜೀವನಕ್ಕೆ ಹೆಚ್ಚು ಬೆಲೆ ಕೊಡಲಿಲ್ಲ; ಅದು ನಿಜವಾದ ಆತ್ಮಸಂಯಮವಲ್ಲ.

ಸಾಕ್ರೆಟೀಸನ ಜೀವನಕ್ರಮವನ್ನು ನೋಡಿ ಆಂಟಿಸ್ಥೆನೀಸನು ಬಹಳ ಆಶ್ಚರ್ಯಗೊಂಡು ಆ ಬಗೆಯ ಜೀವನವೇ ಅತ್ಯುತ್ತಮವಾದದ್ದೆಂದುಕೊಂಡನು. ಜ್ಞಾನ ಸದ್ಗುಣಗಳೊಡನೆ ಹೋಲಿಸಿದಲ್ಲಿ ಮತ್ತೆಲ್ಲವೂ ನಿಕೃಷ್ಟವಾದವುಗಳೆಂದು ಸಾಕ್ರೆಟೀಸನು ಹೇಳಿದ್ದನು. ಈ ಬೋಧನೆಯ ಮತ್ತು ಆತನ ಜೀವನದ ಆಧಾರದಮೇಲೆ ಆಂಟಿಸ್ಥೆನೀಸನೂ ಅವನ ಶಿಷ್ಯರೂ ತಮ್ಮ 'ಸಿನಿಕ್' ಮತವನ್ನು ಸ್ಥಾಪಿಸಿದರು. ಸಾಕ್ರೆಟೀಸನ ಜೀವನದಲ್ಲಿ ಒಂದು ಅಮೋಘವಾದ ಸ್ವಾತಂತ್ರ್ಯವಿದ್ದುದನ್ನು ಇವರು ನೋಡಿದ್ದರು. ಆತನು ಧರ್ಮಕ್ಕೆ ಹೊರತು ಮತ್ತೆ ಯಾವುದಕ್ಕೂ ತಲೆ ಬಾಗುವವನಲ್ಲ. ಭಕ್ಷ್ಯಭೋಜ್ಯಾದಿಗಳು, ವಿಷಯಸುಖ, ವಸ್ತ್ರಾದಿಗಳ ಭೋಗ—ಇವೊಂದರ ಹಂಗೂ ಅವನಿಗಿರಲಿಲ್ಲ. ದ್ರವ್ಯಾರ್ಜನೆಗೆ ಅವನು ಯಾವಾಗಲೂ ಮನಸ್ಸುಕೊಡಲಿಲ್ಲ. ಪ್ರಪಂಚದ ಬಂಧನೆಯೊಂದಕ್ಕೂ ಸಿಕ್ಕದ ಈ ಜೀವನವನ್ನು ಸಿನಿಕ್ಕರು ಆದರ್ಶ

ವಾಗಿಟ್ಟುಕೊಂಡರು. ಆದರೆ ಅವರು ಸಾಕ್ರೆಟೀಸನ ಬೋಧನೆಯನ್ನಾಗಲಿ, ಜೀವನವನ್ನಾಗಲಿ ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ನಾವು ಮೇಲೆ ವರ್ಣಿಸಿರುವ ಸ್ವಾತಂತ್ರ್ಯವೇ ಸಾಕ್ರೆಟೀಸನ ಜೀವನಧ್ಯೇಯವಲ್ಲ. ಪ್ರಾಪಂಚಿಕ ಸೌಖ್ಯಕ್ಕಿಂತ ಸಾವಿರಪಾಲು ಹೆಚ್ಚಾದ ನಿಧಿಯೊಂದನ್ನು—ಜ್ಞಾನವನ್ನು—ಆತನು ಕಂಡುಹಿಡಿದು ಅವರ ಆರ್ಜನೆಯಲ್ಲಿಯೇ ಆಸಕ್ತನಾಗಿದ್ದುದರಿಂದ ಅವನಿಗೆ ಆ ಸೌಖ್ಯದ ಕಡೆಗೆ ಮನಸ್ಸೇ ಹೋಗುತ್ತಿರಲಿಲ್ಲ. ಆದರೆ ಸ್ವಾತಂತ್ರ್ಯ ಮಾತ್ರವೇ—ಇತರರ ಅಭಿಪ್ರಾಯವನ್ನು ತಿರಸ್ಕರಿಸುವುದು ಮಾತ್ರವೇ—ಅವನ ಧ್ಯೇಯವಲ್ಲ. ಹಾಗೆಯೇ ನೀತಿವಿಷಯಕವಾದ, ಮನುಷ್ಯ ವಿಷಯಕವಾದ ಜ್ಞಾನವು ಮುಖ್ಯವೆಂದು ತಿಳಿದಿದ್ದುದರಿಂದ ಸಾಕ್ರೆಟೀಸನು ಇತರ ವಿಧವಾದ ಜ್ಞಾನಕ್ಕೆ ಹೆಚ್ಚು ಬೆಲೆ ಕೊಡುತ್ತಿರಲಿಲ್ಲ. ಇದನ್ನೆಲ್ಲ ಬೆಟ್ಟವಾಗಿ ಬೆಳಸಿ ಸಿನಿಕ್ಕರು ಜೀವನದಲ್ಲಿ ಸಂತೋಷದಾಯಕವಾದದ್ದೆಲ್ಲವನ್ನೂ ತ್ಯಜಿಸಿದರು. ಸುಖಕ್ಕೆ ದಾಸರಾಗಕೂಡದೆನ್ನುವುದೇನೋ ಸರಿ; ಆದರೆ ಸುಖದ ದ್ವೇಷಕ್ಕೆ ತಾನೇ ಏಕೆ ದಾಸರಾಗಬೇಕು? ಸಾಕ್ರೆಟೀಸನು ಹೇಳಿದ್ದು ಸುಖದಿಂದ ಕೆಡುಕಾಗುತ್ತದೆಯೆಂದಲ್ಲ; ಜೀವನದಲ್ಲಿ ಅದೇ ಮುಖ್ಯವಲ್ಲವೆಂದು. ಸಿನಿಕ್ಕರು ಸುಖವು ಸುಖವಾದದ್ದರಿಂದಲೇ ಅದನ್ನು ದ್ವೇಷಿಸುತ್ತಿದ್ದರು. ಬೇಕೆಂದು ಕಷ್ಟವಾದದ್ದನ್ನೂ ವಿಕಾರವಾದದ್ದನ್ನೂ ಹುಡುಕುತ್ತಿದ್ದರು. ಜ್ಞಾನಾರ್ಜನೆಯ ವಿಷಯದಲ್ಲಿಯೂ ಹಾಗೆಯೇ. ಪಾಂಡಿತ್ಯ, ಜ್ಞಾನ ಎಂದರೆ ಅವರಿಗೆ ತಿರಸ್ಕಾರ. ಹೀಗಾಗಿ ಅವರ ಮತವು ಮೌಢ್ಯದಲ್ಲಿಯೂ ಅನಾಗರಿಕ ಮತ್ತು ಅಸಂಸ್ಕೃತ ಜೀವನದಲ್ಲಿಯೂ ಪರಿಣಮಿಸಿತು.

ಹೀಗೆ ಸಾಕ್ರೆಟೀಸನ ಬೋಧನೆಯಲ್ಲಿಯೂ ಜೀವನದಲ್ಲಿಯೂ ಒಂದೊಂದು ಅಂಶವನ್ನು ಮಾತ್ರ ತೆಗೆದುಕೊಂಡು ಅದನ್ನೇ ಪರ್ವತಪ್ರಮಾಣಕ್ಕೆ ಹೆಚ್ಚಿಸಿ ಸಿನಿಕ್ಕರೂ ಸಿರಿನೇಯಿಕ್ಕರೂ ಒಂದಕ್ಕೊಂದು ಸಂಪೂರ್ಣವಾಗಿ ವಿರುದ್ಧವಾದ ಮತಗಳನ್ನು ಸ್ಥಾಪಿಸಿದರು. 'ಸಿನಿಕ್' ಮತದಲ್ಲಿದ್ದ ಅಸಹ್ಯಕರವಾದ ಅಂಶಗಳೂ ಗೊಡ್ಡುತನವೂ ಕಳೆದುಹೋಗಿ ಅದು ಪರಿಶುದ್ಧಿ ಪಡೆದು 'ಸ್ಟೋೀಯಿಕ್' ಮತವಾಯಿತು. ಹಾಗೆಯೇ 'ಸಿರಿನೇಯಿಕ್' ಮತವು ಪರಿಶುದ್ಧಿಹೊಂದಿ 'ಎಪಿಕ್ಯೂರಿಯನ್' ಮತವಾಯಿತು. ಇವೆರಡರಲ್ಲಿ 'ಸ್ಟೋೀಯಿಕ್' ಮತವು ಬಹಳ ಪ್ರಸಿದ್ಧಿಪಡೆದು ಯೂರೋಪಿನಲ್ಲಿ



ಪ್ಲೇಟೊ

ಕ್ರಿಸ್ತಮತವು ಹರಡುವವರೆಗೂ ಪ್ರಬಲವಾಗಿತ್ತು. ಈ ಮತಗಳ, ಮತ್ತು ಇವುಗಳ ಮೂಲಕ ಸಾಕ್ರೆಟೀಸನ ಪ್ರಭಾವವನ್ನು ಮುಂದಿನ ನೀತಿಶಾಸ್ತ್ರಕಾರರಲ್ಲಿಯೂ ನೋಡಬಹುದು.

ಇಲ್ಲಿ ಪರಿವರ್ತಿತವಾಗಿರುವ ಸಂವಾದಗಳಲ್ಲಿ ಪ್ಲೇಟೋ ತನ್ನ ಗುರುವಿನ ಕೊನೆಯ ದಿನಗಳ ಚಿತ್ರವನ್ನು ಕೊಟ್ಟಿದ್ದಾನೆ. ಹಿಂದೆಯೇ ಹೇಳಿದಂತೆ ಇದರಲ್ಲಿ ಚರಿತ್ರಕಾರನ ದೃಷ್ಟಿ, ಗುರುಪ್ರೇಮ, ಕವಿಯ ಮತ್ತು ಸ್ವತಂತ್ರ ಜಿಜ್ಞಾಸುವಿನ ದೃಷ್ಟಿ—ಇವು ಯಾವ ಪ್ರಮಾಣದಲ್ಲಿ ಸೇರಿವೆಯೆಂಬುದನ್ನು ನಿರ್ಧರಿಸುವುದು ಕಷ್ಟ. ಒಟ್ಟಿನಲ್ಲಿ ಈ ಚಿತ್ರದಲ್ಲಿ ಸಾಹಿತ್ಯದಲ್ಲಿರಬೇಕಾದ ಸತ್ಯವಲ್ಲದೆ ಚರಿತ್ರೆಯ ಸತ್ಯವೂ ಇದೆಯೆಂದು ನಂಬಬಹುದು. ಇಲ್ಲಿರುವುದು ಬರಿಯ ಜೀವನಚರಿತ್ರೆಯೇನೋ ಅಲ್ಲ; ಇದು ಇಬ್ಬರು ಮಹಾಪುರುಷರ ಪ್ರತಿಭೆ ಬೆರೆತು ಉತ್ಪನ್ನವಾಗಿರುವ ಉಜ್ವಲ ಕಾವ್ಯ. ಈ ನಾಲ್ಕು ಸಂವಾದಗಳೂ ನಾಲ್ಕು ರತ್ನಗಳಾದರೂ ಇವುಗಳನ್ನು ಒಟ್ಟು ಒಂದು ಕಾವ್ಯವೆಂದೇ ಭಾವಿಸಬಹುದು. ಸಾಕ್ರೆಟೀಸನ ಪಾತ್ರವು, ಒಂದು ಕಡೆ ಈ ನಾಲ್ಕು ರತ್ನಗಳನ್ನೂ ಒಂದುಗೂಡಿಸುವ ಸುವರ್ಣ ಸೂತ್ರ; ಮತ್ತೊಂದು ಕಡೆ ಅವುಗಳೆಲ್ಲದರಲ್ಲಿಯೂ ಇರುವ ಜೀವಕಳೆ. ಪ್ಲೇಟೋವಿನ ಇತರ ಗ್ರಂಥಗಳಿಗಿಂತಲೂ ಇವು ಸರ್ವಜನರಂಜಕವಾಗಿವೆ. ಹಾಗೆಂದರೆ ಪ್ಲೇಟೋವಿಗೆ ಸಹಜವಾದ ತತ್ವವಿಚಾರ ಇದರಲ್ಲಿ ಇಲ್ಲವೆಂದಲ್ಲ; 'ಫೀಡೋ'ವಿನಲ್ಲಿ ಅದು ಹೇರಳವಾಗಿದೆ. ಆದರೆ ತತ್ವವಿಚಾರಕ್ಕಿಂತಲೂ ಹೆಚ್ಚಾಗಿ ಇದು ಪ್ರಪಂಚದಲ್ಲಿ ಶಕಸ್ಥಾಪಕನೆಂದು ಗಣಿಸಬಹುದಾದ, ದೇವಾಂಶಸಂಭೂತನೆನ್ನಬಹುದಾದ, ಮಹಾತ್ಮನೊಬ್ಬನ ಚಿತ್ರವನ್ನು ನಮ್ಮ ಮುಂದಿರಿಸುತ್ತದೆ.

ಈ ಗ್ರಂಥವು ನಾಟಕವಲ್ಲದಿದ್ದರೂ ನಾಟಕದ ಕೆಲವು ಗುಣಗಳು ಇದರಲ್ಲಿ ಕಂಡುಬರುತ್ತವೆ. ಸಂಭಾಷಣೆ ಲಲಿತವಾಗಿಯೂ ಸ್ವಾಭಾವಿಕವಾಗಿಯೂ ಪಾತ್ರಕ್ಕನುಗುಣವಾಗಿಯೂ ಇದೆ. ನಾಟಕಕಾರನು ತನ್ನ ಪಾತ್ರಗಳ ಜೀವನದ ಸಂಗತಿಗಳನ್ನು ಕಾವ್ಯಕ್ಕೆ ಹೊಂದಿಸಿಕೊಳ್ಳುವಂತೆಯೇ ಇಲ್ಲಿಯೂ ಪ್ಲೇಟೊ ಸಾಕ್ರೆಟೀಸನ ಜೀವನವನ್ನು ತನ್ನ ಕಾವ್ಯಕ್ಕೆ ಹೊಂದಿಸಿಕೊಂಡಂತಿದೆ. 'ಯೂಥಿಫ್ರೊ' ಈ ನಾಟಕದ ಪ್ರಸ್ತಾವನೆಯೆನ್ನಬಹುದು. ಅದರಲ್ಲಿ ನಮಗೆ ಮುಖ್ಯಪಾತ್ರಗಳ ಪರಿಚಯವಾಗುವುದಲ್ಲದೆ ಸಾಕ್ರೆಟೀಸನು ನ್ಯಾಯಸ್ಥಾನಕ್ಕೆ

ಅಪರಾಧಿಯೆನಿಸಿಕೊಂಡು ಬಂದಿರುವನೆಂದೂ ತಿಳಿಯುತ್ತದೆ. 'ಸಮರ್ಥನ ವಾದದಲ್ಲಿ ಶತ್ರುಪಕ್ಷದವರ ಕಾರ್ಯಭಾಗವನ್ನೂ, ಎರಡು ಪಕ್ಷಗಳ ಹೋರಾಟವನ್ನೂ, ಆನಿಟಸ್ ಮೊದಲಾದವರು ಜಯವನ್ನು-ಅದನ್ನು ಜಯ ವೆನ್ನಬಹುದಾದರೆ—ಪಡೆದದ್ದನ್ನೂ ಪ್ಲೇಟೊ ನಿರೂಪಿಸಿದ್ದಾನೆ. ನಾಟಕದ ಆರೋಹಣವೂ ಶಿಖರವೂ ಈ ಸಂವಾದದಲ್ಲಿವೆ. ದುರಂತ ನಾಟಕಗಳ ಅವರೋಹಣ ಭಾಗದಲ್ಲಿ ಕವಿಗಳು "ನಾಯಕನಿಗೆ ಸಂಭವಿಸುವುದರಲ್ಲಿರುವ ಅಪಾಯವೂ ಮರಣವೂ ತಪ್ಪಿದರೂ ತಪ್ಪಬಹುದು" ಎಂಬ ಆಸೆಯನ್ನು ಹುಟ್ಟಿಸುವುದುಂಟು. ಪ್ಲೇಟೊ ಅದರಂತೆಯೇ ಸಾಕ್ರೆಟೀಸನು ಸೆರೆಯಿಂದ ತಪ್ಪಿಸಿಕೊಂಡುಹೋಗುವುದು ಸಾಧ್ಯವೆಂದು 'ಕ್ರೈಟೋ'ವಿನಲ್ಲಿ ಸೂಚನೆ ಕೊಟ್ಟಿದ್ದಾನೆ. ಆದರೆ ಇದರಿಂದೇನಾದರೂ ಜನಗಳ ಮನಸ್ಸಿನಲ್ಲಿ ಆಸೆ ಮೂಡುವುದಾದರೆ ಅದು ಮೂಡುವುದರೊಳಗೇ ಕೊನೆಗಾಣುತ್ತದೆ. 'ಫೀಡೋ'ವಿನಲ್ಲಿ ನಾಟಕದ ಉಪಸಂಹಾರವಾಗುತ್ತದೆ. ತತ್ವವಿಚಾರವೇ ಹೆಚ್ಚು ಭಾಗವನ್ನಾಕ್ರಮಿಸಿಕೊಂಡಿರುವ ಈ ಸಂವಾದದಲ್ಲಿ ಸಾಹಿತ್ಯಸೌಂದ ರ್ಯವನ್ನು ಎಷ್ಟು ಮಟ್ಟಿಗೆ ತುಂಬಬಹುದೋ ಅಷ್ಟು ಮಟ್ಟಿಗೂ ಪ್ಲೇಟೊ ತುಂಬಿದ್ದಾನೆ. ನಾಟಕದಲ್ಲಿ ಹೇಗೆ ಪಾತ್ರಚಿತ್ರವು ಒಂದು ಆಂತರಿಕ ನಿಯ ಮದಿಂದ ವಿಕಾಸಹೊಂದುವುದೋ ಹಾಗೆಯೇ ಸಾಕ್ರೆಟೀಸನ ಚಿತ್ರವು ಇಲ್ಲಿ ವಿಕಾಸಹೊಂದಿದೆ. 'ಸಮರ್ಥನವಾದ'ದಲ್ಲಿ ನಾವು ಕಾಣುವ ಸಾಕ್ರೆಟೀಸನಿಗೆ ಮರಣವು ಪ್ಲೇಟೊ ನಿರೂಪಿಸಿರುವಂತೆಯೇ ಆಗಬೇಕು; ಬೇರೆ ಮಾರ್ಗವಿಲ್ಲ. 'ಫೀಡೋ'ವಿನ ಕೊನೆಯಲ್ಲಿರುವವನು ಮೊದಲಿನ ಸಾಕ್ರೆಟೀಸನೇ. ಆದರೆ ಮರಣ ಸಮೀಪಿಸಿದ ಹಾಗೆಲ್ಲಾ ಅವನ ಗಾಂಭೀರ್ಯ, ಶಾಂತತೆ, ಹೃದಯದ ಮಾರ್ದವ—ಇವು ಹೆಚ್ಚಾಗಿ ಹೊರಹೊಮ್ಮುವಂತೆ ತೋರುತ್ತದೆ. ಮರಣಸಮಯದಲ್ಲಿ ಅಂಥ ಮಹಾತ್ಮರ ಮೇಲೆ ಮಾತ್ರವೇ ಬೀಳಬಹುದಾದ ಅಮಾನುಷವಾದ ದಿವ್ಯತೇಜಸ್ಸು ಸಾಕ್ರೆಟೀಸನ ಮೇಲೆ ಬಿದ್ದು ಅವನ ರೂಪವನ್ನು ಪ್ರಕಾಶಗೊಳಿಸಿದೆ.

ಶ್ರೇಷ್ಠರಾದ ಕಲಾವಿದರು ಸಣ್ಣ ಸಣ್ಣ ಸಂಗತಿಗಳನ್ನು ಉಚಿತವರಿತು ಉಪಯೋಗಿಸಿಕೊಂಡು ಕಾವ್ಯಕ್ಕೆ ಕಳೆಕಟ್ಟುವರು. ಸಾಕ್ರೆಟೀಸನ ಚಿತ್ರವು ಎಂದೆಂದಿಗೂ ಮನಸ್ಸಿನಲ್ಲಿ ನಿಲ್ಲುವಂತೆ ಮಾಡುವ ಇಂಥ ಸಣ್ಣ ವಿಷಯಗಳು

ಇಲ್ಲಿ ಅನೇಕವಿವೆ. 'ಫೀಡೋ'ವಿನ ಮಧ್ಯಭಾಗದಲ್ಲಿ ವಾದವು ಒಂದು ನಿಲುವಿಗೆ ಬಂದಾಗ ಸಿಮಿಯಾಸನೂ ಸೀಬೀಸನೂ "ಈತನ ಮರಣದಿನದಲ್ಲಿಯೂ ನಾವು ಇವನ ವಾದಕ್ಕೆ ಆಕ್ಷೇಪಣೆಗಳನ್ನೊಡ್ಡಿ ಬೇಸರವುಂಟುಮಾಡುವುದೆ?" ಎಂದುಕೊಂಡು ಮಾತಾಡದೆ ಸುಮ್ಮನಿರುವರು. ಸಾಕ್ರೆಟೀಸನು ಇದನ್ನು ತಿಳಿದು ನಕ್ಕು ಅವರಿಗೆ ಧೈರ್ಯಹೇಳಿ, "ಅವರ ಮನಸ್ಸಿನ ಗಾಯಗಳನ್ನು ವಾಸಿಮಾಡಿ, ಸೋತು ಚೆದರಿಹೋಗಿರುವ ಸೈನ್ಯವನ್ನು ಮತ್ತೆ ಕೂಡಿಸಿ ತನ್ನನ್ನು ಹಿಂಬಾಲಿಸುವಂತೆ ಹುರಿದುಂಬಿಸುವ ದಳಪತಿಯ ಹಾಗೆ" ಅವರನ್ನು ಮತ್ತೆ ವಾದಭೂಮಿಗೆ ಕರೆತರುವನು. ಸಾಕ್ರೆಟೀಸನು ಜಿಜ್ಞಾಸು ಮಾತ್ರವಲ್ಲ, ಅವನು ತಂದೆಯಂತೆ ಶಿಷ್ಯರಲ್ಲಿ ವಿಶ್ವಾಸವಿಟ್ಟಿದ್ದಾನೆ. ಆತನು ಫೀಡೋವಿನ ಹತ್ತಿರ ಕುಳಿತು ಅವನ ತಲೆಗೂದಲಿನಲ್ಲಿ ಕೈಯಾಡಿಸುತ್ತಾ ಮಾತಾಡುತ್ತಿರುವ ಚಿತ್ರವೂ, ತನ್ನ ಶಿಷ್ಯರಲ್ಲಿ ತೋರಿಸುವ ಸೌಹಾರ್ದವೂ ನಮ್ಮ ಮನಸ್ಸನ್ನು ತರ್ಕದ ಕಡೆಯಿಂದ ಅವನ ಸರಳಹೃದಯದ ಕಡೆಗೆ ಸೆಳೆಯುತ್ತವೆ. ತನಗೆ ವಿಷದ ಬಟ್ಟಲನ್ನು ತಂದು ಕೊಡುವ ಕಾವಲುಗಾರನ ಗುಣವನ್ನು ಸಹ ಆತನು ಪ್ರಶಂಸೆಮಾಡದಿರಲಾರ. ಅವನ ಮರಣಸಮಯದ ಚಿತ್ರವನ್ನಂತೂ ಎಷ್ಟು ಹೊಗಳಿದರೂ ಸ್ವಲ್ಪವೇ. ಅದೊಂದು ಅನರ್ಘಸಾಹಿತ್ಯರತ್ನ. ಅಲ್ಲಿ ಭಾವಾಡಂಬರವಾಗಲಿ, ಶಬ್ದಾಡಂಬರವಾಗಲಿ ಸ್ವಲ್ಪವೂ ಇಲ್ಲ. ಮಿತವಾಗಿ ಉಪಯೋಗಿಸಿರುವ ಸರ್ವಸಾಧಾರಣವಾದ ನಾಲ್ಕು ಮಾತುಗಳಿಂದ ಪ್ಲೇಟೊ ಅನುಪಮಸೌಂದರ್ಯವುಳ್ಳ ಚಿತ್ರವನ್ನು ನಿರ್ಮಿಸಿದ್ದಾನೆ: ಎಷ್ಟೋ ಜನರಿಗೆ ವಿಷಪಾನಮಾಡಿಸಿ ಕಠಿನಹೃದಯನಾಗಿರಬೇಕಾದ ಸೆರೆಮನೆಯ ಕಾವಲುಗಾರನೂ ಸಹ ಕಣ್ಣೀರು ಹಾಕಿಕೊಂಡು ಹೊರಟುಹೋಗುವನು. ಅಪಾಲೊಡೋರಸ್ಸನು ಚರ್ಚೆ ಮುಗಿದಾಗಿನಿಂದಲೂ ಅಳುತ್ತಲೇ ಕುಳಿತಿರುವನು. ಫೀಡೊ ಮೊದಲಾದವರು ತಮ್ಮ ದುಃಖವನ್ನು ಬಹು ಕಷ್ಟಪಟ್ಟು ತಡೆದಿರುವರು; ಆದರೆ ಸಾಕ್ರೆಟೀಸನು ವಿಷಕುಡಿಯುವುದನ್ನು ನೋಡಿದಾಗ ಅವರ ದುಃಖ ಉಕ್ಕಿ ಬರುವುದು. ಇವರೆಲ್ಲರ ನಡುವೆ ಸಾಕ್ರೆಟೀಸನು ಮಾತ್ರ ಗಂಭೀರವಾಗಿ ಹರ್ಷಚಿತ್ತನಾಗಿ ನಿಂತಿದ್ದಾನೆ. ಆತನು ಮನುಷ್ಯನಾಗಿದ್ದೂ ಅಮಾನುಷವಾದ ಶಾಂತಿಯಲ್ಲಿದ್ದಾನೆ. ನಮ್ಮ ಸುಖ ದುಃಖಗಳು, ಸಣ್ಣ ಪುಟ್ಟ ಆಸೆಗಳು,

ಜೀವನದ ಭ್ರಮೆ—ಇವೆಲ್ಲವನ್ನೂ ತಿಳಿಯಬಲ್ಲವನಾದರೂ ಅವುಗಳನ್ನು ಮೀರಿ ನಿಂತು ಪ್ರಪಂಚವನ್ನು ನೋಡುತ್ತಿದ್ದಾನೆ. ಮರಣವು ಅವನನ್ನು ಜಯಿಸಲಾರದು, ಅವನೇ ಮರಣವನ್ನು ಜಯಿಸಿದ್ದಾನೆ.

ಗ್ರೀಕರ ಅತ್ಯುತ್ತಮ ಕಲೆಯಲ್ಲಿ, ಅವರ ನಾಟಕಗಳಲ್ಲಿ, ಪ್ರತಿಮೆಗಳಲ್ಲಿ, ವಾಸ್ತುಶಿಲ್ಪದಲ್ಲಿ, ಕಂಡುಬರುವ ಪರಿಪೂರ್ಣತೆಯೂ ಸರ್ವಾಂಶಗಳ ಉಚಿತ ಪ್ರಮಾಣವೂ ಸಾಕ್ರೆಟೀಸನಲ್ಲಿಯೂ ಕಂಡುಬರುತ್ತವೆ. ಆತನು ಬುದ್ಧ, ಕ್ರಿಸ್ತ ಮೊದಲಾದ ಜಗತ್ತಿನ ಮಹಾಪುರುಷರಲ್ಲೊಬ್ಬನು. ಬರ್ಟ್ರಂಡ್ ರಸಲ್ ಎಂಬಾತನು ಸಾಕ್ರೆಟೀಸನಿಗೆ ಬುದ್ಧ ಕ್ರಿಸ್ತರಿಗಿಂತಲೂ ಉನ್ನತಸ್ಥಾನವನ್ನೇ ಕೊಡುತ್ತಾನೆ. ಈ ಮೂವರನ್ನು ತೂಗಿ ನೋಡುವ ಸಾಹಸಕಾರ್ಯಕ್ಕೆ ನಾವು ಇಲ್ಲಿ ಕೈಹಾಕುವುದಿಲ್ಲ. ಬಗೆಬಗೆಯ ಮಾಯೆಗೂ ರಾಗದ್ವೇಷಾದಿಗಳಿಗೂ ಸಿಕ್ಕಿ ಸತ್ಯದ ಅಚ್ಚಳಿಯದ ನಿರ್ಮಲಜ್ಯೋತಿಯನ್ನು ನೋಡಲು ಎಳಸುವುದು ಸಹ ಇಲ್ಲದಿರುವ ನಮ್ಮನ್ನು ಕೈಹಿಡಿದು ಆ ಕಡೆಗೆ ತಿರುಗಿಸುವವರು ಸಾವಿರ, ಎರಡು ಸಾವಿರ ವರ್ಷಗಳಿಗೆ ಒಬ್ಬೊಬ್ಬರಾದರೂ ಬೇಕು. ಸಾಕ್ರೆಟೀಸನು ಇಂಥ ಮಹಾಪುರುಷ. ಈಗ ನಮ್ಮ ದೇಶದಲ್ಲಿ ಸಾಕ್ರೆಟೀಸನ ಕಾಲದ ಗ್ರೀಸಿನಲ್ಲಿ ಹೇಗೋ ಹಾಗೆಯೇ ಹಳೆಯ ಪದ್ಧತಿಗಳೂ ಸಂಸ್ಥೆಗಳೂ ಹೀನಸ್ಥಿತಿಗೆ ಬಂದಿವೆ; ಹೊಸವು ಪೂರ್ಣರೂಪವನ್ನು ತಳೆದಿಲ್ಲ. ಸಂಪ್ರದಾಯದ ಬಿಗಿ ತಪ್ಪಿದೆ. ಒಂದು ನಿಶ್ಚಲವಾದ ನಂಬಿಕೆಯೂ ಗುರಿಯೂ ಇಲ್ಲದೆ ನಾವು ಬಿರುಗಾಳಿಗೆ ಸಿಕ್ಕಿದ ಹಡಗಿನಂತೆ ತೂರಿಕೊಂಡು ಹೋಗಿ ನಾಶ ಹೊಂದುವ ಸಂಭವವುಂಟು. ಹೀಗೆ ಸಮುದ್ರ ಮಧ್ಯದಲ್ಲಿ ದಿಕ್ಕು ತೋಚದಿರುವ ನಮಗೆ ಸಾಕ್ರೆಟೀಸನು ಎರಡು ಸಾವಿರದ ನಾನೂರು ವರ್ಷಗಳ ಮೋಡದ ಹಿಂದಿದ್ದರೂ ಕಾಂತಿಯುಡುಗದೆ ಪ್ರಕಾಶಿಸುತ್ತಿರುವ ಧ್ರುವತಾರೆ. ಅದರ ಬೆಳಕಿನಿಂದ ನಾವು ದಿಗ್ಭ್ರಮೆಯನ್ನು ಕಳೆದುಕೊಂಡು ನಮ್ಮ ನಾವೆಯನ್ನು ಬಂದರಿನ ಕಡೆಗೆ ತಿರುಗಿಸಬಹುದು.


ಮುಂದೆ ಬರುವ ಸಂವಾದಗಳು ಗ್ರೀಕ್ ಭಾಷೆಯಿಂದ ಇಂಗ್ಲಿಷಿಗೆ ತರ್ಜುಮೆಮಾಡಿದ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಕನ್ನಡಿಸಿದುವು. ಬಹು ಮಟ್ಟಿಗೆ ಎಫ್. ಜೆ. ಚರ್ಚ್ ಅವರ ' ಸಾಕ್ರೆಟೀಸನ ವಿಚಾರಣೆ ಮತ್ತು

ಮರಣ' ಎಂಬ ಗ್ರಂಥದ ಸರಣಿಯನ್ನೇ ಅನುಸರಿಸಿದ್ದರೂ ಚರ್ಚ್, ಜೊವೆಟ್, ಫೌಲರ್, ಈ ಮೂವರ ಪರಿವರ್ತನೆಗಳನ್ನೂ ಎದುರಿಗಿಟ್ಟು ಕೊಂಡು ಈ ಸಂವಾದಗಳನ್ನು ಭಾಷಾಂತರಿಸಿದ್ದೇನೆ. ಅವತರಣಿಕೆಯನ್ನು ಬರೆಯುವುದರಲ್ಲಿ ಮುಂದೆ ಕಾಣಿಸಿರುವ ಪುಸ್ತಕಗಳಿಂದ ಸಹಾಯ ಪಡೆದಿದ್ದೇನೆ.—

TAYLOR: *Plato*
JOWETT: Introductions to his Translation of *The Dialogues of Plato*
CHURCH: Introduction to the *Trial and Death of Socrates*
STACE: *A Critical History of Greek Philosophy*
ROGERS: *A History of Ethics*
GOMPERZ: *Greek Thinkers*
FIELD: *Plato and his Contemporaries*

ಎ. ಎಸ್. ಮೂರ್ತಿರಾವ್.

ಸಾಕ್ರೇಟೀಸನ
ಕೊನೆಯ ದಿನಗಳು



ಸಾಕ್ರೆಟೀಸ್

ಯೂಥಿಫ್ರೊ

ಪಾತ್ರಗಳು : ಸಾಕ್ರೆಟೀಸ್ ಮತ್ತು ಯೂಥಿಫ್ರೊ
ಸ್ಥಾನ : ಆರ್ಕ್ಯಾನನ ಮಂದಿರದ ಕೈಸಾಲೆ

ಯೂ—ಇದೇನು, ಸಾಕ್ರೆಟೀಸ್, ಆರ್ಕ್ಯಾನನ ಮಂದಿರದ ಬಳಿ ನಿನಗೇನು ಕೆಲಸ? ಯಾವಾಗಲೂ ಲಿಸಿಯುಮ್ಮಿನಲ್ಲಿಯೇ ಇರುತ್ತಿದ್ದ ನೀನು ಇಲ್ಲಿಗೆ ಬಂದದ್ದೇನು? ಆರ್ಕ್ಯಾನನ ನ್ಯಾಯಸ್ಥಾನದಲ್ಲಿ ನನ್ನದೇನೋ ಒಂದು ಮೊಕದ್ದಮೆ ಇದೆ. ಆದರೆ ನಿನ್ನದು ಯಾವುದೂ ಇರಲಾರದಲ್ಲವೆ?

ಸಾ—ನನ್ನದು ಮೊಕದ್ದಮೆಯಲ್ಲ, ಯೂಥಿಫ್ರೊ. ಅಥೆನ್ಸಿನಲ್ಲಿ ಅದಕ್ಕೆ ಆಪಾದನೆಯೆಂದು ಹೆಸರು.

ಯೂ—ಏನು, ಯಾರಾದರೂ ನಿನ್ನನ್ನು ವಿಚಾರಣೆಗೆ ಗುರಿಮಾಡಿದ್ದಾರೆಯೆ? ನೀನೇ ಯಾರನ್ನಾದರೂ ವಿಚಾರಣೆಗೆ ಎಳೆದಿರುವೆಯೆಂದು ನಾನು ನಂಬಲಾರೆ.

ಸಾ—ನಾನು ಯಾರನ್ನೂ ವಿಚಾರಣೆಗೆ ಎಳೆತಂದಿಲ್ಲ.

ಯೂ—ಹಾಗಾದರೆ ನಿನ್ನನ್ನೇ ಯಾರೋ ವಿಚಾರಣೆಗೆ ಗುರಿಪಡಿಸಿದ್ದಾರೆ?

ಸಾ—ಹೌದು.

ಯೂ—ಯಾರು?

ಸಾ—ನನಗೆ ಚೆನ್ನಾಗಿ ಅವನ ಗುರುತಿಲ್ಲ, ಯೂಥಿಫ್ರೊ. ಯಾರೋ ಒಬ್ಬ ಅಜ್ಞಾತ ಯುವಕನಿರಬೇಕು. ಅವನ ಹೆಸರು ಮೆಲೆಟಸ್ ಅಂತೆ. ಅವನು ಇರುವ ತುಕಡಿ ಪಿಥಿಸ್. ಆ ತುಕಡಿಯಲ್ಲಿ ಮೆಲೆಟಸ್ ಎಂಬ ಹೆಸರಿನವರು ಯಾರಾದರೂ ನಿನಗೆ ಗುರುತಿರುವರೆ? ಜ್ಞಾಪಿಸಿಕೊ. ಅವನಿಗೆ ಸ್ವಲ್ಪ ಗರುಡಮೂಗು, ನೀಳವಾದ ಕೂದಲು, ಕುರುಚಲು ಗಡ್ಡ.

ಯೂ—ಯಾರೋ ನನಗೂ ತಿಳಿಯದು, ಸಾಕ್ರೆಟೀಸ್. ಅವನು ನಿನ್ನ ಮೇಲೆ ಹೊರಿಸಿರುವ ಅಪರಾಧವೇನು?

ಸಾ—ಅಪರಾಧವೆ? ಸಾಧಾರಣವಾದದ್ದಲ್ಲ. ಅಂಥ ಘನವಾದ ವಿಷಯದಲ್ಲಿ ಅವನಂಥ ತರುಣನು ನಿಷ್ಕರ್ಷೆಗೆ ಬರುವುದೆಂದರೆ ಸಾಮಾನ್ಯವಲ್ಲ. ಯುವಕರು ದುರ್ಮಾರ್ಗಕ್ಕೆ ಬೀಳುವುದು ಹೇಗೆ, ಅವರನ್ನು ದುರ್ಮಾರ್ಗಕ್ಕೆ ಎಳೆಯುವವರು ಯಾರು, ಇದೆಲ್ಲವೂ ತನಗೆಗೊತ್ತುಂಟೆಂದು ಅವನು ಹೇಳುತ್ತಾನೆ. ಆತ ಬಹಳ ಪ್ರಾಜ್ಞನಿರಬೇಕು; ನಾನು ಮೂಢನೆಂದು ಬಲ್ಲ. ತನ್ನ ಸ್ನೇಹಿತರನ್ನು ದುರ್ಮಾರ್ಗಕ್ಕೆ ಎಳೆಯುತ್ತಿದ್ದೇನೆಂದು ತನ್ನ ಮಾತೆಯಾದ ಅಥೆನ್ಸ್ ನಗರದ ಪ್ರಜೆಗಳೆದುರಿಗೆ ಅಪವಾದ ತಂದಿರುವನು. ನಮ್ಮ ನಗರದಲ್ಲಿ ರಾಜಕೀಯ ಸುಧಾರಣೆಯ ಕೆಲಸವನ್ನು ವಿಹಿತವಾದ ರೀತಿಯಲ್ಲಿ ಪ್ರಾರಂಭಿಸಿರುವವನು ಇವನೊಬ್ಬನೇ ಎಂದು ತೋರುತ್ತದೆ. ಆರಂಬ ಮಾಡುವವನು ಮೊದಲು ಸಣ್ಣ ಗಿಡಗಳ ಯೋಗಕ್ಷೇಮವನ್ನು ನೋಡಿಕೊಂಡು ಅನಂತರ ಉಳಿದವುಗಳಿಗೆ ಗಮನಕೊಡುತ್ತಾನಲ್ಲವೆ? ಹಾಗೆಯೇ ಸುಧಾರಕನು ಮೊದಲು ಯುವಕರನ್ನು ಸನ್ಮಾರ್ಗಿಗಳನ್ನಾಗಿ ಮಾಡಲು ಯತ್ನಿಸುತ್ತಾನೆ. ಅದರಿಂದಲೇ ಮೆಲೆಟಸ್ ಬೆಳೆಯುವ ಯುವಕರನ್ನು ಕೆಡಿಸುವ ನಮ್ಮಂಥವರನ್ನು ಮೊದಲು ತೊಡೆದು ಹಾಕಿ, ಅನಂತರ ದೊಡ್ಡವರ ಯೋಚನೆಮಾಡುತ್ತಾನೆಂದು ತೋರುವುದು. ಆತನು ಹೀಗೆಯೇ ಕೆಲಸಮಾಡುತ್ತ ಹೋದರೆ ದೇಶಕ್ಕೆ ಅವನಿಂದ ಮಹೋಪಕಾರವಾಗುತ್ತದೆ; ಆತನು ಕಾರ್ಯವನ್ನಾರಂಭಿಸಿರುವ ರೀತಿಯನ್ನು ನೋಡಿದರೇನೋ ಹಾಗೆಯೇ ಕಾಣುವುದು.

ಯೂ—ಅವನು ದೇಶಕ್ಕೆ ಉಪಕಾರಿಯಾಗಲೆಂದೇ ನನ್ನ ಹಾರೈಕೆ. ಆದರೆ ಅವನು ಹಾಗಾಗುವನೇ ಎಂಬ ವಿಷಯದಲ್ಲಿ ಬಹಳ ಸಂದೇಹವಿದೆ. ನಿನಗೆ ಕೇಡುಕುಮಾಡಿದರೆ ಅವನು ರಾಷ್ಟ್ರದ ಹೃದಯವನ್ನೇ ಭೇದಿಸಿದಂತಾಗುವುದೆಂದು ನನ್ನ ಅಭಿಪ್ರಾಯ. ಅವನು ಹೇಳುವುದೇನು? ನೀನು ಯುವಕರನ್ನು ಕೆಡಿಸುತ್ತಿರುವುದು ಹೇಗಂತೆ?

ಸಾ—ಹೇಗೆನ್ನುವೆಯಾ? ಮೆಲೆಟಸ್ ಹೇಳುವುದು ಬಹಳ ವಿಚಿತ್ರವಾಗಿ ತೋರುತ್ತದೆ. ನಾನು ದೇವತೆಗಳನ್ನು ಸೃಷ್ಟಿಸುತ್ತೇನಂತೆ. ಆದ್ದರಿಂದ ಪ್ರಾಚೀನ ದೇವತೆಗಳಲ್ಲಿ ನಂಬಿಕೆಯಿಲ್ಲದೆ ಹೊಸ ದೇವತೆಗಳನ್ನು ಕಲ್ಪಿಸುವವನೆಂದು ನನ್ನ ಮೇಲೆ ಅಪವಾದವನ್ನು ತಂದಿದ್ದಾನೆ.

ಯೂ—ಓಹೋ, ತಿಳಿಯಿತು, ಸಾಕ್ರೆಟೀಸ್. ನೀನು ಯಾವಾಗಲೂ "ನನಗೆ ದೇವರಿಂದ ಒಂದು ಪ್ರೇರಣೆ ಬರುತ್ತದೆ" ಎಂದು ಹೇಳುವೆಯಲ್ಲ, ಅದ ರಿಂದ ಈ ಅಪವಾದ ಬಂದಿರಬೇಕು. ನಮ್ಮ ಮತಕ್ಕೆ ಕೆಲವು ನವೀನ ಕಲ್ಪನೆಗಳನ್ನು ತಂದುಹಾಕಿದೆಯೆಂದು ನಿನ್ನನ್ನು ಅವನು ದೂರುತ್ತಿದ್ದಾನೆ. ಇಂಥ ವಿಷಯಗಳಲ್ಲಿ ಜನಗಳಿಗೆ ಸುಲಭವಾಗಿ ತಪ್ಪು ತಿಳಿವಳಿಕೆ ಕೊಡ ಬಹುದೆಂದು ಅವನು ಬಲ್ಲನು. ಅವರೆದುರಿಗೆ ನಿನ್ನನ್ನು ದೂಷಿಸುವುದು ಸುಲಭವೆಂದುಕೊಂಡು ನ್ಯಾಯಸ್ಥಾನಕ್ಕೆ ಬಂದಿದ್ದಾನೆ. ಈಗ ನೋಡು, ನಾನು ಭವಿಷ್ಯವನ್ನು ಕುರಿತು ಹೇಳಿದ್ದರಲ್ಲಿ ಒಂದಾದರೂ ಸುಳ್ಳಾಗಿಲ್ಲ. ಇಷ್ಟಾದರೂ ನಾನು ಸಭೆಯಲ್ಲಿ ದೈವಿಕವಾದ ವಿಷಯಗಳನ್ನು ಕುರಿತು ಮಾತಾಡಿ ಭವಿಷ್ಯದಲ್ಲಿ ಏನು ನಡೆಯುವುದೆಂಬುದನ್ನು ಹೇಳಿದರೆ, ಜನರು ನನ್ನಂಥವನನ್ನೇ ತಿರಸ್ಕರಿಸಿ ನಗುತ್ತಾರೆ! ನಮ್ಮಂಥವರನ್ನು ಕಂಡರೆ ಈ ಜನರಿಗೆ ಹೊಟ್ಟೆಯಕಿಚ್ಚು; ಅವರ ಮಾತಿಗೆ ನಾವು ಗಮನವನ್ನೇ ಕೊಡ ಬಾರದು; ನಮ್ಮನ್ನು ದೂರಿದರೆ ಧೈರ್ಯವಾಗಿ ಅವರನ್ನು ಎದು ರಿಸಬೇಕು.

ಸಾ—ಅವರು ನಮ್ಮನ್ನು ಹಾಸ್ಯಮಾಡಿದರೆ ಅದೇನೂ ದೊಡ್ಡ ವಿಷಯವಲ್ಲ, ಯೂಥಿಫ್ರೊ. ಈಗ ನಮ್ಮ ಪಟ್ಟಣದಲ್ಲಿ ಯಾರಾದರೂ ಒಬ್ಬನು ಬಹಳ ಜ್ಞಾನಿಯೆಂದು ಹೆಸರು ಪಡೆದಿದ್ದಾನೆಂದಿಟ್ಟುಕೊ; ಅವನು ತನ್ನ ಜ್ಞಾನ ವನ್ನು ಇತರರಿಗೆ ಬೋಧಿಸಲು ಪ್ರಯತ್ನಿಸುವವರೆಗೂ ಅಥೆನ್ಸಿನವರು ಅವನ ಗೊಡವೆಗೇ ಹೋಗುವುದಿಲ್ಲ. ಹಾಗೆ ಅವನು ಬೋಧಿಸಲು ಪ್ರಯ ತ್ನಿಸಿದೊಡನೆಯೇ ನೀನು ಹೇಳುವಂತೆ ಹೊಟ್ಟೆಯಕಿಚ್ಚಿನಿಂದಲೋ ಮತ್ತಾ ವುದಾದರೂ ಕಾರಣದಿಂದಲೋ ಅವರಿಗೆ ಬಹಳ ಸಿಟ್ಟು ಬರುತ್ತದೆ.

ಯೂ—ನಾನೇನೋ ಅಂಥ ಕಾರಣದಿಂದ ಅವರ ಕೋಪಕ್ಕೆ ಪಾತ್ರನಾಗುವ ಸಂಭವವೇ ಇಲ್ಲ.

ಸಾ—ಇಲ್ಲದಿರಬಹುದು. ನೀನು ಜನಸಂದಣಿಯಲ್ಲಿ ಹೆಚ್ಚು ಕಾಣಿಸಿಕೊಳ್ಳು ವವನಲ್ಲ; ಅದೂ ಅಲ್ಲದೆ ನೀನು ನಿನ್ನ ಜ್ಞಾನವನ್ನು ಇತರರಿಗೆ ಬೋಧಿಸು ವುದಕ್ಕೆ ಆತುರಪಡುವುದಿಲ್ಲವೆಂದು ಅವರ ಭಾವನೆ. ಆದರೆ ನನಗೆ ಜನರ ಮೇಲೆ ಬಹಳ ಪ್ರೀತಿ ಇರುವುದರಿಂದ ಸಿಕ್ಕಿದವರೊಡನೆಲ್ಲಾ ಹಿಂಜರಿಯದೆ

ಸಲಿಗೆಯಾಗಿ ಮಾತಾಡುತ್ತೇನೆ. ಅದಕ್ಕಾಗಿ ಅವರಿಂದ ಹಣವನ್ನು ಅಪೇಕ್ಷಿಸುವುದು ಹಾಗಿರಲಿ, ನನಗೆ ಶಕ್ತಿ ಇರುವುದಾದರೆ ನನ್ನ ಮಾತನ್ನು ಕೇಳಿದ್ದಕ್ಕಾಗಿ ನಾನೇ ಅವರಿಗೆ ಹಣವನ್ನು ಕೊಟ್ಟೇನು. ನಿನ್ನ ಮಾತನ್ನು ಕೇಳಿ ಜನರು ನಗುತ್ತಾರೆಂದು ಈಗ ನೀನು ಹೇಳಿದೆಯಲ್ಲ, ಹಾಗೆ ನನ್ನ ಮಾತಿಗೂ ಅವರು ನಕ್ಕರೆ ಇಂದು ನ್ಯಾಯಸ್ಥಾನದಲ್ಲಿ ಕಾಲ ಸಂತೋಷವಾಗಿಯೇ ಕಳೆದು ಹೋಗುತ್ತದೆ. ಆದರೆ ನಗುವುದಕ್ಕೆ ಬದಲಾಗಿ ಅವರು ಶ್ರದ್ಧೆಯನ್ನು ವಹಿಸಿ ವಿಚಾರಣೆಮಾಡಲಾರಂಭಿಸಿದರೆ, ಆ ವಿಚಾರಣೆ ಎಲ್ಲಿ ಕೊನೆಗಾಣುವುದೆಂಬುದನ್ನು ನಿನ್ನಂಥ ಭವಿಷ್ಯದರ್ಶಿಗಳೇ ಹೇಳಬೇಕು.

ಯೂ—ಈ ವಿಚಾರಣೆಯಿಂದ ಏನೂ ಆಗುವಂತೆ ತೋರುವುದಿಲ್ಲ. ನೀನು ಜಯಶೀಲನಾಗಿಯೆ ಬರುತ್ತೀಯೆ. ನನ್ನ ಮೊಕದ್ದಮೆಯಲ್ಲಿ ನನಗೂ ಜಯವೇ ಆಗುವುದೆಂದು ನನ್ನ ನಂಬಿಕೆ.

ಸಾ—ನಿನ್ನ ಮೊಕದ್ದಮೆ ಏನು ? ನೀನು ಯಾರ ಮೇಲಾದರೂ ವ್ಯಾಜ್ಯತಂದಿರುವೆಯೊ ಅಥವಾ ಇನ್ನು ಯಾರಾದರೂ ನಿನ್ನ ಮೇಲೆ ತಂದಿದ್ದಾರೊ ?

ಯೂ—ನಾನೇ ತಂದಿದ್ದೇನೆ.

ಸಾ—ಯಾರ ಮೇಲೆ ?

ಯೂ—ಯಾರೋ ಒಬ್ಬನ ಮೇಲೆ. ಆತನನ್ನು ವಿಚಾರಣೆಗೆ ಎಳೆದದ್ದಕ್ಕಾಗಿ ಎಲ್ಲರೂ ನನ್ನನ್ನು ಹುಚ್ಚನೆನ್ನುವರು.

ಸಾ—ಏಕೆ ? ನಿನ್ನ ಕೈಗೆ ಸಿಕ್ಕದೆ ಹಾರಿಹೋಗುವುದಕ್ಕೆ ಅವನಿಗೇನು ರೆಕ್ಕೆಗಳುಂಟೊ ?

ಯೂ—ಹಾರಿಹೋಗುವಂಥನನೇನಲ್ಲ. ಆತನಿಗೆ ಬಹಳ ವಯಸ್ಸಾಗಿದೆ.

ಸಾ—ಯಾರು ಅವನು ?

ಯೂ— ನನ್ನ ತಂದೆ.

ಸಾ—ಏನು, ನಿನ್ನ ತಂದೆಯೆ ? ಇದೇನಯ್ಯ, ನೀನಾಡುವ ಮಾತು !

ಯು—ಹೌದು, ನನ್ನ ತಂದೆ.

ಸಾ—ಏನು ಅವನ ಮೇಲೆ ಆಪಾದನೆ ?

ಯೂ—ಕೊಲೆ, ಸಾಕ್ರೆಟೀಸ್.

ಸಾ—ಆಶ್ಚರ್ಯ! ನಿಜವಾಗಿಯೂ, ಯೂಥಿಫ್ರೊ, ಸಾಧಾರಣ ಜನರಿಗೆ ಧರ್ಮ ಅಧರ್ಮ ಇವುಗಳ ತಿಳಿವು ಇರುವುದು ಅಪರೂಪ. ನಿನ್ನ ಹಾಗೆ ಇಂಥ ವ್ಯಾಜ್ಯವನ್ನು ತರಬೇಕಾದರೆ ಸಾಧಾರಣರಿಗೆ ಸಾಧ್ಯವಲ್ಲ. ಧರ್ಮ ಸೂಕ್ಷ್ಮವನ್ನು ಚೆನ್ನಾಗಿ ಅರಿತ ಜ್ಞಾನಿಯೇ ಆಗಬೇಕು.

ಯೂ—ನೀನು ಹೇಳುವುದು ನಿಜ, ಸಾಕ್ರೆಟೀಸ್.

ಸಾ—ನಿಮ್ಮ ತಂದೆಯಿಂದ ಕೊಲೆಯಾದವನು ನಿನಗೆ ಹತ್ತಿರ ಸಂಬಂಧ ವೇನೊ? ಇದ್ದೇ ಇರಬೇಕು. ಇಲ್ಲದಿದ್ದರೆ ಯಾವನೋ ಅಪರಿಚಿತನನ್ನು ಕೊಂದದ್ದಕ್ಕಾಗಿ ನೀನು ನಿನ್ನ ತಂದೆಯನ್ನೇ ವಿಚಾರಣೆಗೆ ಗುರಿಮಾಡು ತ್ತಿದ್ದೆಯಾ!

ಯೂ—ನಿನ್ನ ಮಾತನ್ನು ಕೇಳಿದರೆ ನಗು ಬರುತ್ತದೆ, ಸಾಕ್ರೆಟೀಸ್. ಕೊಲೆ ಯಾದವನು ನನಗೆ ಬಂಧುವಾದರೇನು, ಅಪರಿಚಿತನಾದರೇನು? ಎರಡು ಸಂದರ್ಭಗಳಲ್ಲಿಯೂ ಅಪರಾಧ ಒಂದೇ ಅಲ್ಲವೆ? ಈಗ ನಾವು ಯೋಚಿಸ ಬೇಕಾದದ್ದು ಆ ಕೊಲೆ ನ್ಯಾಯವೇ ಅನ್ಯಾಯವೇ ಎಂಬ ವಿಷಯ. ನ್ಯಾಯವಾದರೆ ಕೊಂದವನನ್ನು ಬಿಡುಗಡೆಮಾಡುವುದು ಧರ್ಮ; ಅನ್ಯಾ ಯವಾದರೆ ಕೊಲೆಪಾತಕನು ನನ್ನ ಮನೆಯಲ್ಲೇ ಇದ್ದು ನನ್ನ ಪಂಕ್ತಿ ಯಲ್ಲೇ ಊಟಮಾಡುವವನಾದರೂ ಅವನಿಗೆ ಶಿಕ್ಷೆಯಾಗಲೇ ಬೇಕು. ಕೊಲೆಗಾರನೆಂದು ತಿಳಿದ ಮೇಲೆ ಅವನನ್ನು ದಂಡನೆಗೆ ಗುರಿಮಾಡಿ ಆ ಮೂಲಕ ನಮ್ಮಿಬ್ಬರ ಆತ್ಮಶುದ್ಧಿಯನ್ನೂ ಮಾಡಿಕೊಳ್ಳಬೇಕು. ಹಾಗೆ ಮಾಡದೆ ಅವನ ಸಹವಾಸದಲ್ಲಿಯೇ ಇದ್ದರೆ, ಕೊಲೆಯಾದವನು ಯಾರಾ ದರೂ ಸರಿಯೆ, ಅಶೌಚವೇನೋ ಒಂದೇ ಅಲ್ಲವೆ? ಈ ಸಂದರ್ಭದಲ್ಲಿ ಕೊಲೆಯಾಗಿರುವವನು ನೆಕ್ಸೋಸಿನಲ್ಲಿ ನಮ್ಮ ಜಮೀನಿನಲ್ಲಿ ಕೆಲಸಮಾ ಡುತ್ತಿದ್ದ ನನ್ನ ಬಡ ಆಳೊಬ್ಬನು. ಅವನು ಹೆಂಡ ಕುಡಿದು ಮೈಮರೆ ತಿದ್ದಾಗ ನಮ್ಮ ಗುಲಾಮನೊಬ್ಬನ ಮೇಲೆ ರೇಗಿ ಅವನನ್ನು ಕೊಂದು ಬಿಟ್ಟನು. ಆದ್ದರಿಂದ ನನ್ನ ತಂದೆ ಅವನನ್ನು ಕೈ ಕಾಲು ಕಟ್ಟಿ ಒಂದು ಬಚ್ಚಲಗುಂಡಿಗೆ ಹಾಕಿಸಿ, ಅವನಿಗೆ ಏನು ಶಿಕ್ಷೆಕೊಡಬೇಕೆಂಬುದನ್ನು ತಿಳಿಯಲು ಅಥೆನ್ಸಿನ ದಿವ್ಯದರ್ಶಿಯ ಬಳಿಗೆ ಆಳನ್ನು ಅಟ್ಟಿದನು. ಕೊಲೆ

ಗಾರನಾದವನ ಪ್ರಾಣ ಹೋದರೆ ಅದೇನೂ ಆತಂಕದ ವಿಷಯವಲ್ಲ ವೆಂದು ಭಾವಿಸಿ ನಮ್ಮ ತಂದೆ ಅವನಿಗೆ ಅಪಾಯವಾಗದಂತೆ ಎಚ್ಚರಿಕೆ ಯಿಂದ ನೋಡಿಕೊಳ್ಳಲಿಲ್ಲ. ಅವನ ಪ್ರಾಣ ಹೋಗಿಯೇ ಹೋಯಿತು. ಅಥೆನ್ಸಿಗೆ ಹೋಗಿದ್ದ ಆಳು ಹಿಂದಿರುಗುವುದಕ್ಕಿಂತ ಮುಂಚೆಯೇ ಮೈಗೆ ಬಿಗಿದಿದ್ದ ಕಟ್ಟುಗಳ ಯಾತನೆ, ಹಸಿವು, ಚಳಿ ಇವುಗಳಿಂದ ಅವನು ಸತ್ತು ಹೋದನು. ಆ ಕೊಲೆಪಾತಕನನ್ನು ಕೊಂದ ತಪ್ಪಿಗಾಗಿ ನಾನು ತಂದೆ ಯನ್ನೇ ವಿಚಾರಣೆಗೆ ಎಳೆದೆನೆಂದು ನನ್ನ ತಂದೆಗೂ ಮನೆಯವರಿಗೂ ನನ್ನ ಮೇಲೆ ಬಹಳ ಸಿಟ್ಟು. "ನಿನ್ನ ತಂದೆ ಆ ಆಳನ್ನು ಕೊಲ್ಲಲೇ ಇಲ್ಲ. ಅಥವಾ ಅವನನ್ನು ಹತ್ತು ಸಲ ಕೊಂದನೆಂದರೂ ಕೊಲೆಯಾ ದವನು ತಾನೇ ಕೊಲೆಪಾತಕ—ಅವನ ವಿಷಯಕ್ಕೆ ಇಷ್ಟೇನು ಗಲಭೆ? ಮಗನು ತಂದೆಯ ಮೇಲೆ ಕೊಲೆಯ ಅಪರಾಧವನ್ನು ಹೊರಿಸುವುದು ಅಧರ್ಮ"—ಇದೇ ಅವರ ತರ್ಕ. ಧರ್ಮಾಧರ್ಮಗಳಿಗೆ ಸಂಬಂಧಪಟ್ಟ ದೈವಶಾಸನವನ್ನು ಇವರು ಎಷ್ಟು ಚೆನ್ನಾಗಿ ತಿಳಿದಿದ್ದಾರೆ, ನೋಡಿ ದೆಯಾ?

ಸಾ—ಏನು ಯೂಥಿಫ್ರೊ? ಇಂಥ ಸಂದರ್ಭದಲ್ಲಿ ಈಗ ನೀನು ಮಾಡಿರು ವಂತೆ ತಂದೆಯನ್ನು ವಿಚಾರಣೆಗೆ ಗುರಿಪಡಿಸುವುದು ಅಧರ್ಮಕಾರ್ಯ ವಾಗಿರಬಹುದೆಂಬ ಶಂಕೆ ನಿನಗಿಲ್ಲವೆ? ದೈವಿಕ, ಧರ್ಮ, ಅಧರ್ಮ, ಈ ವಿಷಯಗಳಲ್ಲಿ ನಿನಗಿರುವ ಜ್ಞಾನವು ಅಷ್ಟು ನಿಷ್ಕೃಷ್ಟವಾದದ್ದೆ?

ಯೂ—ಸಾಕ್ರೆಟೀಸ್, ಈ ವಿಷಯಗಳಲ್ಲೆಲ್ಲಾ ನಿಷ್ಕೃಷ್ಟವಾದ ಜ್ಞಾನವಿಲ್ಲದಿ ದ್ದರೆ ನನ್ನಿಂದ ಏನು ಪ್ರಯೋಜನ? ಉಳಿದವರಿಗಿಂತ ನನ್ನ ಹೆಚ್ಚಿಗೆ ಯೇನು?

ಸಾ—ಹಾಗಾದರೆ, ಯೂಥಿಫ್ರೊ ಮಹಾಶಯ, ನಾನು ನಿನ್ನ ಶಿಷ್ಯನಾಗುವುದು ಉತ್ತಮವೆಂದು ತೋರುತ್ತದೆ; ಆಗ ನಾನು ನನ್ನ ಮೊಕದ್ದಮೆಯ ವಿಚಾರಣೆ ಪ್ರಾರಂಭವಾಗುವುದಕ್ಕೆ ಮುಂಚೆ ಮೆಲೆಟಸ್ಸನ್ನು ಕರೆದು "ನೋಡು, ಮೆಲೆಟಸ್, ನಾನು ದೇವತೆಗಳ ವಿಷಯದಲ್ಲೂ ಧರ್ಮದ ವಿಷಯದಲ್ಲೂ ಬಹಳ ಆಸಕ್ತಿಯುಳ್ಳವನು. ಈ ವಿಷಯದಲ್ಲಿ ನಾನು ನೂತನ ಕಲ್ಪನೆಗಳನ್ನು ತಂದುಹಾಕಿರುವೆನೆಂದೂ ಹಗುರವಾಗಿ ಮಾತಾಡು

ತ್ತೇನೆಂದೂ ನೀನು ನನ್ನನ್ನು ದೂರಿದ ಬಳಿಕ ನಾನು ಯೂಥಿಫ್ರೋವಿನ ಶಿಷ್ಯನಾದೆನು. ಆತ ಜ್ಞಾನಿಯೆಂದೂ ಈ ವಿಷಯಗಳಲ್ಲಿ ಆತನ ಅಭಿಪ್ರಾಯವು ಮನ್ನಣೆಗೆ ಅರ್ಹವೆಂದೂ ನೀನು ಒಪ್ಪುವುದಾದರೆ ನನ್ನ ಅಭಿಪ್ರಾಯವೂ ಹಾಗೆಯೇ ಎಂದು ತಿಳಿದುಕೊ. ಆತನ ಅಭಿಪ್ರಾಯಗಳು ಸರಿಯೆಂದು ಒಪ್ಪುವುದಾದರೆ ನನ್ನ ಅಭಿಪ್ರಾಯಗಳನ್ನೂ ಒಪ್ಪಬೇಕು. ಈಗ ನನ್ನನ್ನು ವಿಚಾರಣೆಗೆ ಗುರಿಪಡಿಸಬೇಡ. ನನ್ನ ಅಭಿಪ್ರಾಯಗಳು ತಪ್ಪೆಂದು ನೀನು ಹೇಳುವುದಾದರೆ ನೀನು ಮೊದಲು ನನ್ನ ಗುರುವಿನ ಮೇಲೆ ವ್ಯಾಜ್ಯ ತರಬೇಕು. ಹಿರಿಯರನ್ನು ನೀತಿಗೆಡಿಸಿದ್ದಕ್ಕಾಗಿ, ಅಂದರೆ ತನ್ನ ತತ್ವಗಳ ಮೂಲಕ ನನ್ನನ್ನೂ, ಶಿಕ್ಷೆ ದಂಡನೆಗಳಿಂದ ತನ್ನ ತಂದೆಯನ್ನೂ ನೀತಿಗೆಡಿಸಿದ್ದಕ್ಕಾಗಿ, ಅವನನ್ನೇ ಅಪರಾಧಿಸ್ಥಾನಕ್ಕೆ ಎಳೆಯಬೇಕು'' ಎಂದು ಹೇಳುವೆನು. ಮೆಲೆಟಸ್ ನನ್ನ ಮಾತಿಗೆ ಕಿವಿಗೊಡದೆ, ನನ್ನನ್ನು ಬಿಟ್ಟು ನಿನ್ನ ಮೇಲೆ ವ್ಯಾಜ್ಯವನ್ನು ತರುವುದಿಲ್ಲವೆಂದರೆ ನಾನು ನ್ಯಾಯಸ್ಥಾನದಲ್ಲಿಯೂ ಅದೇ ರೀತಿ ವಾದಿಸಬಹುದು.

ಯೂ—ನಿಜ, ಸಾಕ್ರೆಟೀಸ್, ಸ್ಯೂಸ್ ದೇವನ ಆಣೆ; ಅವನು ನನ್ನ ಮೇಲೆ ವ್ಯಾಜ್ಯ ತರಲಿ, ಅವನ ವಾದದಲ್ಲಿರುವ ಹುಳುಕುಗಳನ್ನೆಲ್ಲಾ ಹೊರಹಾಕುತ್ತೇನೆ. ನನ್ನ ಪ್ರಸ್ತಾವ ಬರುವುದಕ್ಕಿಂತ ಮುಂಚೆ ಮೆಲೆಟಸ್ಸಿನ ವಿಷಯ ಹೇಳುವುದೇ ಬೇಕಾದಷ್ಟಿರುತ್ತದೆ.

ಸಾ—ಹೌದಯ್ಯ, ಅದನ್ನು ತಿಳಿದೇ ನನಗೆ ನಿನ್ನ ಶಿಷ್ಯನಾಗಬೇಕೆಂದು ಇಷ್ಟು ಔತ್ಸುಕ್ಯ. ಈಗ ಇಲ್ಲಿ ನೋಡಿದರೆ ಮೆಲೆಟಸ್ಸಿಗೇ ಆಗಲಿ, ಇತರರಿಗೇ ಆಗಲಿ, ನಿನ್ನ ಮೇಲೆ ಅಷ್ಟು ಗಮನವಿರುವಂತೆ ತೋರುವುದಿಲ್ಲ. ಆದರೆ ನನ್ನನ್ನು ನೋಡಿದೊಡನೆಯೇ ನನ್ನ ಅಂತರಾಳವನ್ನು ಭೇದಿಸಿ ಧರ್ಮಭ್ರಷ್ಟನೆಂಬ ಆಪಾದನೆಯನ್ನು ನನ್ನ ಮೇಲೆ ತಂದಿದ್ದಾನೆ. ಆದ್ದರಿಂದ ಧರ್ಮಾಧರ್ಮ ಸ್ವರೂಪವನ್ನು ನನಗೆ ತಿಳಿಯಹೇಳು; ನಿನಗೆ ಅದು ಚೆನ್ನಾಗಿ ತಿಳಿದಿದೆಯೆಂದು ಹೇಳಿದೆಯಲ್ಲ. ಕೊಲೆ, ದೇವತೆಗಳಿಗೆ ಅಪ್ರಿಯವಾದ ಇತರ ದುಷ್ಕೃತ್ಯಗಳು, ಇವುಗಳ ವಿಷಯದಲ್ಲಿ ಧರ್ಮ ಯಾವುದು? ಅಧರ್ಮ ಯಾವುದು? ಎಲ್ಲಾ ಕೃತ್ಯಗಳಲ್ಲಿಯೂ ಧರ್ಮವೆನ್ನುವುದು ಒಂದೇ ಆಗಿರಬೇಕು. ಅಧರ್ಮದಲ್ಲಿಯೂ ಕೂಡ—ಅದು

ಯಾವಾಗಲೂ ಧರ್ಮಕ್ಕೆ ವಿರುದ್ಧವಾಗಿರಬೇಕಷ್ಟೆ—ಅಧರ್ಮ ಕಾರ್ಯಗಳೆಂದು ಯಾವಯಾವುದನ್ನು ಕರೆಯುವೆವೋ ಅವೆಲ್ಲಕ್ಕೂ ಅನ್ವಯಿಸುವಂಥ ಸಾಮಾನ್ಯ ಗುಣವೊಂದಿರಬೇಕು.

ಯೂ—ಇದ್ದೇ ಇರಬೇಕು, ಸಾಕ್ರೈಟೀಸ್.

ಸಾ— ಹಾಗಾದರೆ ಧರ್ಮವೆಂದರೇನು, ಅಧರ್ಮವೆಂದರೇನು ? ಹೇಳು.

ಯೂ—ಈಗ ನಾನು ಮಾಡುತ್ತಿರುವ ಹಾಗೆಮಾಡುವುದು – ಅಂದರೆ ಕೊಲೆ, ಪವಿತ್ರವಾದದ್ದನ್ನು ಅಲ್ಲಗಳೆಯುವುದು, ಮುಂತಾದ ದುಷ್ಕೃತ್ಯಗಳನ್ನು ಮಾಡಿದವರು ಯಾರೇ ಆಗಲಿ, ಕೊನೆಗೆ ತಾಯಿತಂದೆಗಳೇ ಆಗಲಿ, ಅವರನ್ನು ವಿಚಾರಣೆಗೆ ಗುರಿಮಾಡುವುದು —ಧರ್ಮ. ಹಾಗೆ ಮಾಡದಿರುವುದು ಅಧರ್ಮ. ಧರ್ಮಭ್ರಷ್ಟರು ಯಾರೇ ಆಗಲಿ ಅವರನ್ನು ಶಿಕ್ಷೆಯಿಲ್ಲದೆ ಹೋಗಗೊಡಬಾರದೆಂಬ ಈ ತತ್ವಕ್ಕೆ ಎಂಥ ಘನವಾದ ನಿದರ್ಶನವನ್ನು ಕೊಡುತ್ತೇನೆ, ನೋಡು. ದೇವತೆಗಳಲ್ಲೆಲ್ಲಾ ಸ್ಯೂಸ್ ಅತ್ಯಂತ ಶ್ರೇಷ್ಠನೆಂದೂ ಧರ್ಮಪಕ್ಷಪಾತಿಯೆಂದೂ ನಾವು ತಿಳಿದಿಲ್ಲವೆ? ಆದರೂ ತನ್ನ ಮಕ್ಕಳನ್ನು ದೌರಾತ್ಮ್ಯದಿಂದ ತಿಂದುಹಾಕಿದ್ದಕ್ಕಾಗಿ ತನ್ನ ಸ್ವಂತ ತಂದೆಯಾದ ಕ್ರೋನಸ್ಸನ್ನು ಸ್ಯೂಸ್ ಬಂಧಿಸಿದನೆಂದು ಜನರು ಒಪ್ಪುವುದಿಲ್ಲವೆ? ಕ್ರೋನಸ್ ಕೂಡ ತನ್ನ ತಂದೆಯಾದ ಯೂರನಸ್ಸನ್ನು ಇಂಥ ಕಾರಣಗಳಿಗಾಗಿಯೇ ಹೇಳಬಾರದ ರೀತಿಯಲ್ಲಿ ಶಿಕ್ಷಿಸಿದನೆಂದೂ ಒಪ್ಪುವರಲ್ಲವೆ ? ಆದರೂ ನಾನು ನನ್ನ ತಂದೆಯನ್ನು ವಿಚಾರಣೆಗೆ ಗುರಿಪಡಿಸಿದೆನೆಂದು ಇದೇ ಜನರು ನನ್ನಮೇಲೆ ಆಗ್ರಹಮಾಡುವರು. ದೇವತೆಗಳ ವಿಷಯದಲ್ಲಿ ಹೇಳುವುದು ಒಂದು, ನನ್ನ ವಿಷಯದಲ್ಲಿ ಹೇಳುವುದು ಮತ್ತೊಂದು.

ಸಾ—ಈಗ ನನ್ನನ್ನು ಅಪರಾಧಿಯಾಗಿ ಮಾಡಿರುವುದಕ್ಕೂ ಅದೇ ಕಾರಣವಲ್ಲವೆ? ದೇವತೆಗಳ ವಿಷಯದಲ್ಲಿ ಇಂಥ ಕಥೆಗಳನ್ನು ಕೇಳಿದಾಗ ನನಗೆ ಅಸಮಾಧಾನವಾಗುವುದು. ಈ ಪುರಾಣಗಳನ್ನು ಕುರಿತು ಸಂಶಯಪಟ್ಟದ್ದಕ್ಕೆ ನನ್ನನ್ನು ಅವರು ಪಾಪಿಯೆನ್ನುವರೇನೊ. ಆದರೆ ಇಂಥ ವಿಷಯಗಳನ್ನು ಚೆನ್ನಾಗಿ ಬಲ್ಲ ನೀನೂ ಈ ಕಥೆಗಳು ನಿಜವೆನ್ನುವುದಾದರೆ ನಾನು ಅವುಗಳನ್ನು ಒಪ್ಪಲೇಬೇಕೆಂದು ತೋರುತ್ತದೆ. ನನಗೆ ಈ ವಿಷಯದಲ್ಲಿ ಏನೇನೂ ತಿಳಿವಳಿಕೆಯಿಲ್ಲವೆಂದು ನಾನೇ ಒಪ್ಪಿಕೊಂಡ ಮೇಲೆ ಮತ್ತೇನು

ಹೇಳಲಿ ? ಯೂಥಿಫ್ರೊ, ನಮ್ಮ ಸ್ನೇಹದಾಣೆ, ನಿಜವಾಗಿ ಹೇಳು. ಈ ಕಥೆಗಳೆಲ್ಲಾ ಯಥಾರ್ಥವಾಗಿ ನಡೆದುವೆಂದು ನೀನು ನಂಬುವೆಯಾ ?

ಯೂ—ಹೌದು, ಸಾಕ್ರೆಟೀಸ್. ಇದಕ್ಕಿಂತಲೂ ವಿಚಿತ್ರವಾದ ವಿಷಯಗಳು ಇನ್ನೂ ಎಷ್ಟೋ ಇವೆ. ಆದರೆ ಜನಸಾಮಾನ್ಯಕ್ಕೆ ತಿಳಿಯದು, ಅಷ್ಟೆ.

ಸಾ—ಹಾಗಾದರೆ ನಮ್ಮ ಕವಿಗಳು ಹೇಳುವಂತೆ ದೇವತೆಗಳು ಒಬ್ಬರೊಡನೊಬ್ಬರು ಯುದ್ಧಮಾಡಿದರೆಂದೂ ಅವರವರಿಗೆ ದ್ವೇಷಾಸೂಯೆಗಳು ಉಂಟೆಂದೂ ನಂಬುವೆಯಾ ? ನಮ್ಮ ಚಿತ್ರಕಾರರು ಈ ಕಥೆಗಳ ಚಿತ್ರಗಳನ್ನು ನಮ್ಮ ಗುಡಿಗಳಲ್ಲೆಲ್ಲಾ ಚಿತ್ರಿಸಿರುವರು; ಅದರಲ್ಲೂ ಪಾನ್-ಅಥೀನಿಯ ಉತ್ಸವದಲ್ಲಿ ಆಕ್ರೊಪೋಲಿಸ್ಸಿಗೆ ಬಿಜಯಮಾಡಿಸಿಕೊಂಡು ಹೋಗುವ ಅಥೀನಿದೇವಿಯ ದುಕೂಲದ ಮೇಲೆ ಇಂಥ ಚಿತ್ರಗಳು ತುಂಬಿವೆ. ಈ ಕಥೆಗಳೆಲ್ಲಾ ನಿಜವೆ, ಯೂಥಿಫ್ರೊ ?

ಯೂ—ನಿಜ, ಸಾಕ್ರೆಟೀಸ್. ಇವು ಮಾತ್ರವೇ ಅಲ್ಲ, ದೇವತೆಗಳ ವಿಷಯದಲ್ಲಿ ಅತ್ಯಾಶ್ಚರ್ಯಕರವಾದ ಸಂಗತಿಗಳು ಇನ್ನೂ ಎಷ್ಟೋ ಇವೆ. ನಿನಗೆ ಕೇಳಬೇಕೆಂಬ ಕುತೂಹಲವಿದ್ದರೆ ಹೇಳಬಲ್ಲೆ.

ಸಾ—ಇರಬಹುದು. ಇನ್ನು ಯಾವಾಗಲಾದರೂ ನಿನಗೆ ವಿರಾಮವಿರುವಾಗ ಆ ಕಥೆಗಳನ್ನು ಹೇಳುವೆಯಂತೆ. ಸದ್ಯಕ್ಕೆ ನಾನು ಸ್ವಲ್ಪ ಹೊತ್ತಿನ ಕೆಳಗೆ ಕೇಳಿದ ಪ್ರಶ್ನೆಗೆ ದಯವಿಟ್ಟು ನಿಶ್ಚಿತವಾದ ಉತ್ತರ ಕೊಡು. ಧರ್ಮವೆಂದರೇನು ಎಂದು ಕೇಳಿದಾಗ, ನೀನು ಕೊಟ್ಟ ಉತ್ತರ ನನ್ನ ಮನಸ್ಸಿಗೆ ತೃಪ್ತಿಕರವಾಗಿ ತೋರಲಿಲ್ಲ. ನೀನು ಈಗ ಮಾಡುತ್ತಿರುವುದು, ಅಂದರೆ ನಿಮ್ಮ ತಂದೆಯನ್ನು ವಿಚಾರಣೆಗೆ ಗುರಿಮಾಡುತ್ತಿರುವುದು, ಧರ್ಮಕಾರ್ಯವೆಂದು ಮಾತ್ರ ಹೇಳಿದೆ.

ಯೂ—ಹೌದು. ಅದು ನಿಜ.

ಸಾ—ಇರಬಹುದು. ಆದರೆ ಧರ್ಮವೆನ್ನಿಸಿಕೊಳ್ಳುವ ಕಾರ್ಯಗಳು ಇನ್ನೂ ಅನೇಕವಿವೆ, ಅಲ್ಲವೆ ?

ಯೂ—ಹೌದು, ಧಾರಾಳವಾಗಿ.

ಸಾ—ಹಾಗಾದರೆ ನಾನು ಕೇಳಿದ್ದು ಏನೆಂದು ಸ್ವಲ್ಪ ಜ್ಞಾಪಿಸಿಕೊ. ಧರ್ಮಕಾರ್ಯಗಳು ಯಾವುವು ಎಂಬುದಕ್ಕೆ ಒಂದೆರಡು ಉದಾಹರಣೆಗಳನ್ನು

ಕೊಡಬೇಕೆಂದು ನಾನು ಕೇಳಲಿಲ್ಲ. ಎಲ್ಲಾ ಧರ್ಮಕಾರ್ಯಗಳಿಗೂ ಅವು ಧರ್ಮಕಾರ್ಯಗಳೆನ್ನಿಸಿಕೊಳ್ಳಬೇಕಾದರೆ ಒಂದು ಸಾಮಾನ್ಯಸ್ವರೂಪವಿರಬೇಕಲ್ಲವೆ? ಆ ಸ್ವರೂಪವನ್ನು ತಿಳಿಯಬೇಕೆಂದು ನನ್ನ ಇಚ್ಛೆ. "ಧರ್ಮಕಾರ್ಯಗಳನ್ನು ಧರ್ಮವಾಗಿ ಮಾಡುವ ಸಾಮಾನ್ಯಗುಣವೊಂದಿದೆ, ಅಧರ್ಮಕಾರ್ಯಗಳನ್ನು ಅಧರ್ಮವಾಗಿ ಮಾಡುವ ಸಾಮಾನ್ಯಗುಣ ಮತ್ತೊಂದಿದೆ" ಎಂದು ಹೇಳಿದ್ದು ನಿನಗೆ ಜ್ಞಾಪಕವಿದೆಯಷ್ಟೆ?

ಯೂ—ಜ್ಞಾಪಕವಿದೆ.

ಸಾ—ಹಾಗಾದರೆ ಆ ಸಾಮಾನ್ಯಗುಣ ಯಾವುದೆಂದು ವಿವರಿಸು. ಅದು ತಿಳಿದರೆ ನನಗೆ ಒಂದು ನೆಲೆ ಸಿಕ್ಕಿದಂತಾಗಿ, ನಿನ್ನ ಕೆಲಸಗಳನ್ನೇ ಆಗಲಿ ಇತರರ ಕೆಲಸಗಳನ್ನೇ ಆಗಲಿ ಆ ಒರೆಗಲ್ಲಿನಿಂದ ಪರೀಕ್ಷಿಸಿ, ಅವುಗಳಲ್ಲಿ ಧರ್ಮ ಯಾವುದು ಅಧರ್ಮ ಯಾವುದು ಎಂದು ನಿಶ್ಚಯಿಸಲು ಅನುಕೂಲವಾಗುವುದು.

ಯೂ—ಅದಕ್ಕೇನು, ಬೇಕಾದರೆ ಹೇಳುತ್ತೇನೆ.

ಸಾ—ಬೇಕು. ತಿಳಿಯಬೇಕೆಂದು ಬಹಳ ಅಪೇಕ್ಷೆಯಿದೆ.

ಯೂ—ನೋಡು, ದೇವತೆಗಳಿಗೆ ಯಾವುದು ಪ್ರಿಯವೋ ಅದು ಧರ್ಮ, ಅವರಿಗೆ ಯಾವುದು ಅಪ್ರಿಯವೋ ಅದು ಅಧರ್ಮ.

ಸಾ—ಸೊಗಸಾದ ಉತ್ತರ. ನಾನು ಅಪೇಕ್ಷಿಸಿದಂಥ ಉತ್ತರವನ್ನೇ ಕೊಟ್ಟೆ. ಆದರೆ ನೀನು ಹೇಳುವುದು ಸರಿಯೋ ಅಲ್ಲವೋ ಈಗಲೇ ಹೇಳಲಾರೆ. ನೀನು ಅದರ ಸತ್ಯಾಂಶವನ್ನು ಸಮರ್ಥಿಸುವುದರಲ್ಲಿದ್ದೀಯೇನೊ?

ಯೂ—ಹೌದು.

ಸಾ—ಹಾಗಾದರೆ ಈಗ ನಾವು ಹೇಳುವುದು ಏನೆಂದು ಸ್ವಲ್ಪ ಪರೀಕ್ಷಿಸೋಣ. ದೇವತೆಗಳಿಗೆ ಪ್ರಿಯವಾದ ವಿಷಯಗಳು ಧರ್ಮ, ಪ್ರಿಯರಾದ ಜನರು ಧರ್ಮಿಷ್ಠರು; ಅಪ್ರಿಯವಾದ ವಿಷಯಗಳು ಅಧರ್ಮ, ಅಪ್ರಿಯರಾದ ಜನರು ಧರ್ಮಭ್ರಷ್ಟರು. ಈಗ ನೋಡು, ಧರ್ಮವೂ ಅಧರ್ಮವೂ ಒಂದೇ ಅಲ್ಲ; ಅವು ಪೂರ್ಣವಾಗಿ ಪರಸ್ಪರ ವಿರುದ್ಧವಾದವು—ಇದನ್ನು ಮೊದಲೇ ಒಪ್ಪಿಕೊಂಡೆವಲ್ಲವೆ?

ಯೂ—ಹೌದು.

ಸಾ—ದೇವತೆಗಳಲ್ಲಿ ದ್ವೇಷಾಸೂಯೆಗಳು, ಪಕ್ಷಪ್ರತಿಪಕ್ಷಗಳು, ಭಿನ್ನಾಭಿಪ್ರಾಯಗಳು—ಇವು ಉಂಟೆಂದೂ ನಾವು ಹೇಳಿದೆವಲ್ಲವೆ?

ಯೂ—ಹೌದು.

ಸಾ—ದ್ವೇಷಕ್ರೋಧಗಳು ಹುಟ್ಟುವುದು ಎಂಥ ಭಿನ್ನಾಭಿಪ್ರಾಯದಿಂದ? ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಈಗ, ಈ ಸಂಖ್ಯೆ ಹೆಚ್ಚೋ ಆ ಸಂಖ್ಯೆ ಹೆಚ್ಚೋ ಎಂಬ ವಿಷಯದಲ್ಲಿ ನಮ್ಮಿಬ್ಬರಿಗೂ ಭಿನ್ನಾಭಿಪ್ರಾಯವುಂಟಾದರೆ ಅದರಿಂದ ನಮ್ಮಲ್ಲಿ ಕ್ರೋಧ ಹುಟ್ಟಿ ನಾವು ಶತ್ರುಗಳಾಗುವ ಸಂಭವವುಂಟೆ? ಕೂಡಲೆ ಎಣಿಕೆಮಾಡಿ ಆ ವಿವಾದವನ್ನು ನಿರ್ಣಯಿಸುವೆವಲ್ಲವೆ?

ಯೂ - ಹೌದು.

ಸಾ—ಅಥವಾ ಎರಡು ಪದಾರ್ಥಗಳಲ್ಲಿ ಯಾವುದು ದೊಡ್ಡದು ಯಾವುದು ಚಿಕ್ಕದು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯ ಬಂದರೆ ಅವೆರಡನ್ನೂ ಅಳತೆ ಮಾಡಿ ನೋಡಿ ಆಗಲೇ ಆ ವಿವಾದವನ್ನು ನಿರ್ಣಯಿಸುವೆವಲ್ಲವೆ?

ಯೂ—ಹೌದು.

ಸಾ—ಎರಡು ಪದಾರ್ಥಗಳಲ್ಲಿ ಯಾವುದರ ತೂಕ ಹೆಚ್ಚು ಎಂದು ಪ್ರಶ್ನೆ ಹುಟ್ಟಿದರೆ ಅವೆರಡನ್ನೂ ತೂಗಿ ಆಗಲೇ ನಿಷ್ಕರ್ಷಿಸುವೆವಲ್ಲವೆ?

ಯೂ—ನಿಜ.

ಸಾ—ಹಾಗಾದರೆ ಹೀಗೆ ತೀರ್ಮಾನಿಸಲಾಗದಿರುವ ಮತ್ತು ನಮ್ಮಲ್ಲಿ ರೋಷ ಹುಟ್ಟಿಸಿ ಶತ್ರುತ್ವವನ್ನು ತಂದುಹಾಕುವ ಭಿನ್ನಾಭಿಪ್ರಾಯಗಳು ಯಾವ ಸಂದರ್ಭದಲ್ಲಿ ಬರುವುವು? ಈ ಪ್ರಶ್ನೆಗೆ ಉತ್ತರ ನಿನಗೆ ಈ ಘಳಿಗೆಯಲ್ಲಿ ಹೊಳೆಯದೆ ಇರಬಹುದು. ನಾನು ಒಂದು ಸೂಚನೆ ಕೊಡುತ್ತೇನೆ. ಇಂಥ ಭಿನ್ನಾಭಿಪ್ರಾಯ ಹುಟ್ಟುವುದು ಒಳ್ಳೆಯದು ಕೆಟ್ಟದ್ದು, ನ್ಯಾಯವಾದದ್ದು ಅನ್ಯಾಯವಾದದ್ದು, ಉಚ್ಚವಾದದ್ದು ನೀಚವಾದದ್ದು—ಈ ವಿಷಯಗಳಲ್ಲಲ್ಲವೆ? ನಮ್ಮಿಬ್ಬರಲ್ಲೇ ಆಗಲಿ ಇತರರಲ್ಲೇ ಆಗಲಿ, ತೀರ್ಮಾನಿಸಲ ಸಾಧ್ಯವಾದ ಭಿನ್ನಾಭಿಪ್ರಾಯ ಬಂದು ಜಗಳ ಹುಟ್ಟಬೇಕಾದರೆ ಇಂಥ ವಿಷಯಗಳ ಚರ್ಚೆಯಲ್ಲಿಯೇ ಅಲ್ಲವೆ?

ಯೂ—ಹೌದು ಸಾಕ್ರೆಟೀಸ್. ಇಂಥ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಬಂದರೇ ಜಗಳ ಹುಟ್ಟುವುದು.

ಸಾ—ಹಾಗಾದರೆ ಯೂಥಿಫ್ರೊ, ದೇವತೆಗಳು ಜಗಳವಾಡಿದರೆ, ಇಂಥ ವಿಷಯಗಳಲ್ಲೇ ತಾನೇ ಜಗಳವಾಡುತ್ತಾರೆ?

ಯೂ—ಇಂಥ ವಿಷಯಗಳಲ್ಲಿಯೇ.

ಸಾ—ಹಾಗಾದರೆ ನೀನು ಏನು ಹೇಳಿದಹಾಗಾಯಿತು, ನೋಡೋಣ. ದೇವತೆಗಳಲ್ಲಿ ಕೆಲವರು ಒಂದನ್ನು ನ್ಯಾಯವಾಗಿ ಗಣಿಸುವರು, ಇನ್ನು ಕೆಲವರು ಮತ್ತೊಂದನ್ನು ನ್ಯಾಯವೆನ್ನುವರು; ಯಾವುದನ್ನು ಕೆಲವರು ಒಳ್ಳೆಯದು, ಉಚ್ಚವಾದದ್ದು ಎನ್ನುವರೋ ಅದನ್ನೇ ಮತ್ತೆ ಕೆಲವರು ಕೆಟ್ಟದ್ದು, ನೀಚವಾದದ್ದು ಎನ್ನುವರು. ಇಂಥ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಹುಟ್ಟದಿದ್ದರೆ ಅವರಲ್ಲಿ ಪರಸ್ಪರ ಕಲಹಗಳೇ ಇರುತ್ತಿರಲಿಲ್ಲ, ಅಲ್ಲವೆ?

ಯೂ—ನೀನು ಹೇಳುವುದು ನಿಜ.

ಸಾ—ದೇವತೆಗಳಲ್ಲಿ ಪ್ರತಿಯೊಬ್ಬರೂ ತಮಗೆ ಉತ್ತಮವಾದದ್ದು, ನ್ಯಾಯವಾದದ್ದು, ಶ್ರೇಷ್ಠವಾದದ್ದು ಎಂದು ತೋರಿದ್ದನ್ನು ಪ್ರೀತಿಸುವರು; ಅದಕ್ಕೆ ವಿರುದ್ಧವಾದದ್ದನ್ನು ದ್ವೇಷಿಸುವರು, ಅಲ್ಲವೆ?

ಯೂ—ನಿಜ.

ಸಾ—ಆದರೆ ನೀನು ಹೇಳಿದ ಪ್ರಕಾರ ಒಂದೇ ಒಂದು ಕಾರ್ಯವನ್ನು ಅಥವಾ ಪದಾರ್ಥವನ್ನು ಅವರಲ್ಲಿ ಕೆಲವರು ನ್ಯಾಯವೆಂದೂ ಮತ್ತೆ ಕೆಲವರು ಅನ್ಯಾಯವೆಂದೂ ಗಣಿಸುವರು; ಅನಂತರ ಅದರ ವಿಷಯವಾಗಿ ವಾಗ್ವಾದ ನಡೆದು ಪರಸ್ಪರ ಕಲಹವೂ ಹೊಡೆದಾಟವೂ ಸಂಭವಿಸುವುವು, ಅಲ್ಲವೆ?

ಯೂ—ಹೌದು.

ಸಾ—ಹಾಗಾದರೆ ಒಂದೇ ಪದಾರ್ಥವನ್ನು ದೇವತೆಗಳು ಪ್ರೀತಿಸುವರೆಂತಲೂ ದ್ವೇಷಿಸುವರೆಂತಲೂ ಹೇಳಬೇಕಾಗುತ್ತದೆ. ಒಂದೇ ಒಂದು ಪದಾರ್ಥವು ಅವರಿಗೆ ಪ್ರಿಯವಾಗಿಯೂ ಇರುವುದು, ಅಪ್ರಿಯವಾಗಿಯೂ ಇರುವುದು.

ಯೂ—ನಿಜ.

ಸಾ—ಹಾಗಾದರೆ ನೀನು ಹೇಳುವ ಪ್ರಕಾರ ಒಂದೇ ಒಂದು ಪದಾರ್ಥವು ಧರ್ಮವೂ ಆಗುವುದು, ಅಧರ್ಮವೂ ಆಗುವುದು.

ಯೂ—ಏನೋ ಹಾಗೆಯೇ ತೋರುತ್ತದೆ.

ಸಾ—ಹಾಗಾದರೆ ಮಿತ್ರ ಯೂಥಿಫ್ರೋ, ನೀನು ನನ್ನ ಪ್ರಶ್ನೆಗೆ ಉತ್ತರ ಕೊಟ್ಟಂತಾಗಲಿಲ್ಲ. ಧರ್ಮ, ಅಧರ್ಮ ಎರಡೂ ಆದ ಕೆಲಸ ಯಾವುದೆಂದು ನಾನು ನಿನ್ನನ್ನು ಕೇಳಲಿಲ್ಲ. ದೇವತೆಗಳಿಗೆ ಪ್ರಿಯವಾದದ್ದು ಅಪ್ರಿಯ ವಾಗಿಯೂ ಇರುತ್ತದೆಂದು ಈಗ ಕಂಡುಬಂದಿತು. ಆದ್ದರಿಂದ ಈಗ ನಿನ್ನ ತಂದೆಯನ್ನು ಶಿಕ್ಷೆಗೆ ಗುರಿಮಾಡುತ್ತಿರುವುದು ಸ್ಯೂಸಿಗೆ ಪ್ರಿಯವಾದ ಕಾರ್ಯವಿರಬಹುದು ; ಆದರೆ ಕ್ರೋನಸ್ಸಿಗೂ ಯುರಾನಸ್ಸಿಗೂ ಅಸಹ್ಯ ವಾಗಿರಬಹುದು. ಹೆಫೀಸ್ಟಸ್ಸಿಗೆ ಸಮ್ಮತವಾದದ್ದಾದರೂ ಹೀರಳಿಗೆ ಅಸಹ್ಯ ವಾಗಿರಬಹುದು. ಹೀಗೆಯೇ ಭಿನ್ನಾಭಿಪ್ರಾಯಗಳುಳ್ಳ ದೇವತೆಗಳು ಇನ್ನೂ ಅನೇಕರಿರಬಹುದು.

ಯೂ—ಅದು ಸರಿ, ಸಾಕ್ರೆಟೀಸ್. ಆದರೆ ಒಬ್ಬ ಮನುಷ್ಯನು ಇನ್ನೊಬ್ಬ ನನ್ನು ಅನ್ಯಾಯವಾಗಿ ಕೊಂದರೆ ಅವನು ದಂಡನೆಗೆ ಅರ್ಹನೆಂದು ಎಲ್ಲಾ ದೇವತೆಗಳೂ ಒಪ್ಪುವರೆಂದು ನನ್ನ ನಂಬಿಕೆ. ಈ ವಿಷಯದಲ್ಲಿ ಭಿನ್ನಾಭಿ ಪ್ರಾಯ ಬರಲಾರದು.

ಸಾ—ಮನುಷ್ಯರಲ್ಲಿಯೂ ಹಾಗೆಯೇ ಯೂಥಿಫ್ರೊ. ಒಬ್ಬನು ಮತ್ತೊಬ್ಬ ನನ್ನು ಅನ್ಯಾಯವಾಗಿ ಕೊಂದದ್ದಕ್ಕೆ ಅಥವಾ ಮತ್ತೆ ಯಾವುದಾದರೂ ಅನ್ಯಾಯವಾದ ಕೆಲಸವನ್ನು ಮಾಡಿದ್ದಕ್ಕೆ ಶಿಕ್ಷೆ ಕೊಡಬೇಕೇ ಬೇಡವೇ ಎಂಬ ವಿಷಯದಲ್ಲಿ ವಿವಾದ ಹುಟ್ಟಿದ್ದನ್ನು ಎಲ್ಲಾದರೂ ಕೇಳಿರುವೆಯಾ ?

ಯೂ—ಇಲ್ಲವೆ ? ಈ ವಿಷಯದಲ್ಲಿ ಯಾವಾಗಲೂ ಎಲ್ಲೆಲ್ಲಿಯೂ ಚರ್ಚೆ ನಡೆ ಯುತ್ತಲೇ ಇದೆ. ಅದರಲ್ಲಿಯೂ ನ್ಯಾಯಸ್ಥಾನದಲ್ಲಿ ಸದಾ ಇದೇ ಚರ್ಚೆ. ಜನರು ಎಷ್ಟೋ ವಿಧವಾದ ದುಷ್ಕೃತ್ಯಗಳನ್ನು ಮಾಡುವರು ; ಅನಂತರ ಶಿಕ್ಷೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಏನು ಬೇಕಾದರೂ ಹೇಳುವರು, ಏನು ಬೇಕಾದರೂ ಮಾಡುವರು.

ಸಾ—ದುಷ್ಕೃತ್ಯವನ್ನು ಮಾಡಿರುವೆವೆಂದು ಒಪ್ಪಿಕೊಂಡು ಕೂಡ ತಾವು ಶಿಕ್ಷಾರ್ಹರಲ್ಲವೆಂದು ವಾದಿಸುತ್ತಾರೆಯೆ, ಯೂಥಿಫ್ರೊ ?

ಯೂ—ಇಲ್ಲ. ಹಾಗಲ್ಲ ಅವರು ವಾದಿಸುವುದು.

ಸಾ—ಹಾಗಾದರೆ ಏನಾದರೂ ಮಾಡುವರು, ಏನಾದರೂ ಹೇಳುವರು ಎನ್ನುವುದಕ್ಕಾಗುವುದಿಲ್ಲ. ತಾವು ತಪ್ಪು ಮಾಡಿದ್ದರೂ ತಮ್ಮನ್ನು ಶಿಕ್ಷಿಸಕೂಡದೆಂದು ಅವರು ಧೈರ್ಯವಾಗಿ ಹೇಳಲಾರರು. ಅವರು ಹೇಳುವುದು ತಾವು ಕೆಟ್ಟದ್ದೇನನ್ನೂ ಮಾಡಿಯೇ ಇಲ್ಲವೆಂದು.

ಯೂ—ನಿಜ.

ಸಾ—ಹಾಗಾದರೆ, ಕೇಡಿಗನು ಶಿಕ್ಷಾರ್ಹನೆಂಬ ವಿಧಿಯನ್ನು ಅವರು ವಿರೋಧಿಸುವುದಿಲ್ಲ. ಅದರ ವಿಷಯದಲ್ಲಿ ಅವರು ಚರ್ಚೆ ಮಾಡುವುದೇ ಇಲ್ಲ. ಅವರು ಚರ್ಚೆಮಾಡುವ ಪ್ರಶ್ನೆ: "ಕೇಡಿಗನೆಂದರೆ ಯಾರು ? ಕೆಟ್ಟ ಕೆಲಸವೆಂದರೆ ಎಂಥಾದ್ದು ?" ಎನ್ನುವುದಲ್ಲವೇ ?

ಯೂ—ಹೌದು.

ಸಾ—ನೀನು ಈಗ ಹೇಳಿದಂತೆ ದೇವತೆಗಳು ನ್ಯಾಯಾನ್ಯಾಯಗಳ ವಿಷಯವಾಗಿ ಕಲಹ ಮಾಡುವುದು ನಿಜವಾದರೆ, ಅವರ ವಿಷಯದಲ್ಲಿಯೂ ಮೇಲೆ ಹೇಳಿದ ಮಾತು ನಿಜವಲ್ಲವೆ ? ಇತರರು ಅನ್ಯಾಯದಿಂದ ವರ್ತಿಸುವರೆಂದು ಅವರಲ್ಲಿ ಕೆಲವರು ಹೇಳುವರು ; ಮತ್ತೆ ಕೆಲವರು ಇಲ್ಲವೆನ್ನುವರು. ಆದರೆ ತಪ್ಪು ಮಾಡಿದವನಿಗೆ ಶಿಕ್ಷೆಯಾಗಕೂಡದೆಂದು ದೇವತೆಗಳೇ ಆಗಲಿ, ಮನುಷ್ಯರೇ ಆಗಲಿ ಯಾರೂ ಹೇಳುವುದಿಲ್ಲ.

ಯೂ—ನೀನು ಹೇಳುವುದು ಒಟ್ಟಿನಲ್ಲಿ ನಿಜ, ಸಾಕ್ರೆಟೀಸ್.

ಸಾ—ನನಗೆ ತೋರುವುದರಲ್ಲಿ–ದೇವತೆಗಳಾದರೂ ಸರಿಯೆ, ಮಾನವರಾದರೂ ಸರಿಯೆ–ಚರ್ಚೆಮಾಡಿದರೆ ಪ್ರತಿಯೊಂದು ಕಾರ್ಯದ ವಿಷಯವಾಗಿಯೂ ಪ್ರತ್ಯೇಕವಾಗಿ ಚರ್ಚೆಮಾಡುತ್ತಾರೆ. ಇಂಥ ಒಂದು ಸಂದರ್ಭದಲ್ಲಿ ಜಗಳ ಬಂದರೆ ಕೆಲವರು ಅದು ನ್ಯಾಯವೆನ್ನುತ್ತಾರೆ, ಇನ್ನು ಕೆಲವರು ಅದು ಅನ್ಯಾಯವೆನ್ನುತ್ತಾರೆ, ಅಲ್ಲವೆ ?

ಯೂ—ಹೌದು.

ಸಾ—ಹಾಗಾದರೆ ಪ್ರಿಯಮಿತ್ರ ಯೂಥಿಫ್ರೊ, ನನಗೆ ಇದನ್ನು ಸ್ವಲ್ಪ ತಿಳಿಯ ಹೇಳು. ಈಗ ಯಾರನ್ನೋ ಕೊಂದದ್ದಕ್ಕಾಗಿ ಒಬ್ಬ ಕೂಲಿಯ ಆಳನ್ನು

ಅವನ ಯಜಮಾನನು ಬಂದಿಯಾಗಿ ಇಡುತ್ತಾನೆ; ಈ ಸಂದರ್ಭದಲ್ಲಿ ಏನು ಮಾಡಬೇಕೆಂಬುವನ್ನು ದಿವ್ಯದರ್ಶಿಗಳಿಂದ ತಿಳಿಯುವುದಕ್ಕೆ ಮುಂಚೆಯೇ ಬಂದಿ ಸಾಯುತ್ತಾನೆ; ಅವನು ಅನ್ಯಾಯದಿಂದ ಸತ್ತನೆಂದು ಎಲ್ಲಾ ದೇವತೆಗಳೂ ಅಭಿಪ್ರಾಯಪಡುತ್ತಾರೆಯೆ? ಹಾಗೆ ಹೇಳಲು ನಿನಗೆ ಆಧಾರವೇನಿದೆ? ಇಂಥವನ ಸಾವಿಗಾಗಿ ಮಗನು ತಂದೆಯನ್ನು ವಿಚಾರಣೆಗೆ ಗುರಿಮಾಡುವುದು ನ್ಯಾಯವೆಂದು ನೀನು ಹೇಗೆ ಬಲ್ಲೆ? ಎಲ್ಲಾ ದೇವತೆಗಳೂ ಏಕಕಂಠರಾಗಿ ನಿನ್ನ ಕೆಲಸ ನ್ಯಾಯವೆನ್ನುತ್ತಾರೆಂದು ನನಗೆ ನಿರ್ಧರಿಸಿಕೊಟ್ಟರೆ ನಿನ್ನ ಜ್ಞಾನದ ಮಹತ್ವವನ್ನು ಜೀವಾವಧಿ ಹೊಗಳುತ್ತಿರುತ್ತೇನೆ.

ಯೂ—ಅದನ್ನು ನಿನಗೆ ಸ್ಪಷ್ಟವಾಗುವಂತೆ ಹೇಳುವುದೇನೋ ಕಷ್ಟವಲ್ಲ; ಆದರೆ ಅದು ಬಹಳ ಹೊತ್ತು ಹಿಡಿಯುವ ಕೆಲಸ.

ಸಾ—ತಿಳಿಯಿತು, ಹೇಳಿದ್ದನ್ನು ಜಾಗ್ರತೆಯಾಗಿ ಗ್ರಹಿಸುವ ಶಕ್ತಿ ನ್ಯಾಯಾಧೀಶರಿಗೆ ಇದೆ, ನನಗಿಲ್ಲ ಎಂದು ನಿನ್ನ ಅಭಿಪ್ರಾಯ. ಅವರೆದುರಿಗೇನೋ ನಿನ್ನ ತಂದೆ ಮಾಡಿದ್ದು ತಪ್ಪೆಂದೂ ದೇವತೆಗಳೆಲ್ಲರೂ ಅಂಥ ಕೃತ್ಯಗಳನ್ನು ದ್ವೇಷಿಸುವರೆಂದೂ ದೃಢಪಡಿಸಿಯೇ ಪಡಿಸುತ್ತೀಯೆ.

ಯೂ—ಹೌದು, ಅವರು ನನ್ನ ಮಾತಿಗೆ ಲಕ್ಷ್ಯಕೊಡುವುದೊಂದಾದರೆ.

ಸಾ—ನೀನು ಒಳ್ಳೆಯ ವಾಗ್ಮಿಯೆಂದು ತೋರಿದರೆ ಅವರು ಲಕ್ಷ್ಯ ಕೊಟ್ಟೇ ಕೊಡುತ್ತಾರೆ. ಅದಿರಲಿ, ಈಗ ನೀನು ಮಾತಾಡುತ್ತಿದ್ದಾಗ ನನಗೆ ಒಂದು ಯೋಚನೆ ಹೊಳೆಯಿತು. ನನಗೆ ನಾನೇ "ಈಗ ಆ ಕೂಲಿಯವನು ಅನ್ಯಾಯದಿಂದ ಸತ್ತನೆಂಬುದನ್ನು ದೇವತೆಗಳೆಲ್ಲರೂ ಒಪ್ಪುತ್ತಾರೆಂದು ಯೂಥಿಫ್ರೊ ದೃಢಪಡಿಸಿಕೊಟ್ಟರೂ ಕೂಡ, ಧರ್ಮಾಧರ್ಮಗಳ ವಿಚಾರ ನನಗೇನಾದರೂ ಮೊದಲಿಗಿಂತ ಚೆನ್ನಾಗಿ ತಿಳಿದಂತಾಯಿತೆ?" ಎಂದುಕೊಂಡೆನು. ಇದೊಂದು ಕೃತ್ಯ ದೇವತೆಗಳಿಗೆ ಅಪ್ರಿಯವಾಗಿದ್ದರೂ ಇರಬಹುದು; ಆದರೆ ಧರ್ಮಾಧರ್ಮಗಳ ಲಕ್ಷಣವನ್ನು ಈ ಮೂಲಕ ತಿಳಿಯಲಾಗುವುದಿಲ್ಲ; ಏಕೆಂದರೆ ದೇವತೆಗಳಿಗೆ ಅಪ್ರಿಯವಾದದ್ದು ಅವರಿಗೆ ಪ್ರಿಯವಾಗಿಯೂ ಇರುವುದೆಂದು ಸ್ವಲ್ಪ ಹೊತ್ತಿನ ಕೆಳಗೆ ನಮಗೆ ತಿಳಿಯಬಂದಿದೆ. ಹೋಗಲಿ, ಆ ವಾದವನ್ನು ಅಲ್ಲಿಗೆ ಬಿಡೋಣ. ಎಲ್ಲಾ ದೇವತೆಗಳೂ ಇಂಥ

ಕೆಲಸಗಳನ್ನು ಅನ್ಯಾಯವೆನ್ನುತ್ತಾರೆಂದೂ ದ್ವೇಷಿಸುತ್ತಾರೆಂದೂ ಒಪ್ಪಿಕೊಳ್ಳೋಣ. ನಾವು ಮೊದಲು ಕೊಟ್ಟ ಲಕ್ಷಣವನ್ನು ಈಗ ಸ್ವಲ್ಪ ತಿದ್ದೋಣವೆ? ದೇವತೆಗಳೆಲ್ಲರೂ ಯಾವುದನ್ನು ದ್ವೇಷಿಸುವರೋ ಅದು ಅಧರ್ಮ, ಯಾವುದನ್ನು ಪ್ರೀತಿಸುವರೋ ಅದು ಧರ್ಮ; ಯಾವುದನ್ನು ಕೆಲವರು ಪ್ರೀತಿಸಿ ಮತ್ತೆ ಕೆಲವರು ದ್ವೇಷಿಸುವರೋ ಅದು ಧರ್ಮ, ಅಧರ್ಮ ಎರಡೂ ಆಗಿರಬಹುದು ಅಥವಾ ಎರಡೂ ಅಲ್ಲದಿರಬಹುದು. ಧರ್ಮಕ್ಕೂ ಅಧರ್ಮಕ್ಕೂ ಹೀಗೆ ಲಕ್ಷಣವನ್ನು ಹೇಳೋಣವೆ?

ಯೂ—ಏಕಾಗಬಾರದು, ಸಾಕ್ರೆಟೀಸ್?

ಸಾ—ಆಗಬಾರದೆಂದು ನಾನೇನೂ ಹೇಳುವುದಿಲ್ಲ. ನನಗೆ ಆ ವಿಷಯವನ್ನು ಬೋಧಿಸಲು ಈ ಲಕ್ಷಣ ಸಹಕಾರಿಯಾಗುವುದೋ ಇಲ್ಲವೋ ಅದು ನೀನು ಯೋಚಿಸಬೇಕಾದದ್ದು.

ಯೂ—ಈ ಲಕ್ಷಣ ಸರಿಯೆಂದು ತೋರುತ್ತದೆ. ಎಲ್ಲಾ ದೇವತೆಗಳಿಗೂ ಪ್ರಿಯವಾದದ್ದು ಧರ್ಮ, ಅಪ್ರಿಯವಾದದ್ದು ಅಧರ್ಮ.

ಸಾ—ಈ ಲಕ್ಷಣ ತೃಪ್ತಿಕರವಾಗಿದೆಯೆ ಇಲ್ಲವೆ ಎಂದು ಪರೀಕ್ಷಿಸೋಣವೋ ಅಥವಾ ಯಾವ ಪ್ರಶ್ನೆಯನ್ನೂ ಕೇಳದೆ ನಮ್ಮ ಇಲ್ಲವೇ ಮತ್ತೊಬ್ಬರ ಮಾತನ್ನೇ ಪ್ರಮಾಣವೆಂದು ಭಾವಿಸಿಕೊಳ್ಳೋಣವೋ? ಯಾವ ಅಭಿಪ್ರಾಯವನ್ನೂ ವಿಚಾರಮಾಡಿ ನೋಡಬೇಕಲ್ಲವೆ?

ಯೂ—ವಿಚಾರಮಾಡಿ ನೋಡಬೇಕು. ಆದರೆ ನನಗೇನೋ ಈ ಸಲ ನಾವು ಹೇಳಿರುವ ಲಕ್ಷಣ ಸರಿಯೆಂದು ತೋರುತ್ತದೆ.

ಸಾ—ಸ್ವಲ್ಪ ತಾಳು, ಯೂಥಿಫ್ರೊ, ಸರಿಯೋ ಇಲ್ಲವೋ ಸದ್ಯದಲ್ಲೇ ತಿಳಿಯುತ್ತದೆ. ಈಗ ಸ್ವಲ್ಪ ಯೋಚನೆ ಮಾಡು. ಧರ್ಮವು ಧರ್ಮವಾಗಿರುವುದರಿಂದ ದೇವತೆಗಳು ಅದನ್ನು ಪ್ರೀತಿಸುತ್ತಾರೆಯೆ ಅಥವಾ ದೇವತೆಗಳು ಪ್ರೀತಿಸುವುದರಿಂದ ಅದು ಧರ್ಮವೆನ್ನಿಸಿಕೊಳ್ಳುವುದೆ?

ಯೂ—ನಿನ್ನ ಅರ್ಥ ಸರಿಯಾಗಿ ತಿಳಿಯಲಿಲ್ಲ.

ಸಾ—ಸ್ಪಷ್ಟವಾಗಿ ಹೇಳಲು ಪ್ರಯತ್ನಿಸುತ್ತೇನೆ. ಈಗ ನಾವು ಹೊರಲ್ಪಡುವುದು, ಹೊರುವುದು, ನಡಸಲ್ಪಡುವುದು, ನಡಸುವುದು; ನೋಡಲ್ಪಡು

ವುದು, ನೋಡುವುದು—ಹೀಗೆಲ್ಲಾ ಹೇಳುತ್ತೇವೆ. ಈ ಜೋಡಿಗಳಲ್ಲಿ ಒಂದೊಂದು ಶಬ್ದಕ್ಕೂ ಬೇರೆ ಬೇರೆ ಅರ್ಥವಿದೆಯಲ್ಲವೆ? ಆ ಅರ್ಥಭೇದ ವೇನೆಂಬುದು ನಿನಗೆ ಗೊತ್ತಿರಬೇಕು.

ಯೂ—ಅದೇನೋ ಗೊತ್ತಿದೆ.

ಸಾ—ಒಂದು ಪದಾರ್ಥ ಪ್ರೀತಿಸಲ್ಪಡುತ್ತಿದೆಯೆನ್ನುವುದೂ ಒಂದು ಪದಾರ್ಥ ಪ್ರೀತಿಸುತ್ತಿದೆಯೆನ್ನುವುದೂ ಬೇರೆ ಬೇರೆಯಲ್ಲವೆ?

ಯೂ—ನಿಜ.

ಸಾ—ಈಗ ಹೇಳು. ಒಂದು ಪದಾರ್ಥ ಹೊರಲ್ಪಟ್ಟಿದೆ. ಅದು ಹೊರಲ್ಪಟ್ಟಿರುವ ಸ್ಥಿತಿಯಲ್ಲಿರುವುದಕ್ಕೆ ಹೊರಲ್ಪಟ್ಟಿರುವುದೇ ಕಾರಣವೋ ಅಥವಾ ಮತ್ತೇನಾದರೂ ಕಾರಣವುಂಟೋ?

ಯೂ—ಇಲ್ಲ. ಹೊರಲ್ಪಟ್ಟಿರುವುದೇ ಕಾರಣ.

ಸಾ—ಹಾಗೆಯೇ ಒಂದು ಪದಾರ್ಥ ನಡಸಲ್ಪಡುತ್ತಿರುವ ಸ್ಥಿತಿಯಲ್ಲಿರುವುದಕ್ಕೆ ನಡಸಲ್ಪಡುತ್ತಿರುವುದೇ ಕಾರಣ. ನೋಡಲ್ಪಡುತ್ತಿರುವ ಸ್ಥಿತಿಯಲ್ಲಿರುವುದಕ್ಕೆ ನೋಡಲ್ಪಡುತ್ತಿರುವುದೇ ಕಾರಣ, ಅಲ್ಲವೆ?

ಯೂ—ನಿಶ್ಚಯ.

ಸಾ—ಹಾಗಾದರೆ ಆ ಪದಾರ್ಥ ನೋಡಲ್ಪಡುತ್ತಿರುವುದಕ್ಕೆ ನೋಡಲ್ಪಡುವ ಸ್ಥಿತಿಯಲ್ಲಿರುವುದು ಕಾರಣವಲ್ಲ; ನೋಡಲ್ಪಡುತ್ತಿರುವುದು ನೋಡಲ್ಪಡುವ ಸ್ಥಿತಿಯಲ್ಲಿರುವುದಕ್ಕೆ ಕಾರಣ. ನಡೆಸಲ್ಪಡುತ್ತಿರುವುದಕ್ಕೆ ಅದು ನಡಸಲ್ಪಡುವ ಸ್ಥಿತಿಯಲ್ಲಿರುವುದು ಕಾರಣವಲ್ಲ; ನಡಸಲ್ಪಡುತ್ತಿರುವುದು ನಡಸಲ್ಪಡುವ ಸ್ಥಿತಿಯಲ್ಲಿರುವುದಕ್ಕೆ ಕಾರಣ. ಹೊರಲ್ಪಡುತ್ತಿರುವುದಕ್ಕೆ ಅದು ಹೊರಲ್ಪಡುವ ಸ್ಥಿತಿಯಲ್ಲಿರುವುದು ಕಾರಣವಲ್ಲ; ಹೊರಲ್ಪಡುತ್ತಿರುವುದು ಹೊರಲ್ಪಡುವ ಸ್ಥಿತಿಯಲ್ಲಿರುವುದಕ್ಕೆ ಕಾರಣ. ನನ್ನ ಅರ್ಥ ಸ್ಪಷ್ಟವಾಯಿತೆ, ಯೂಥಿಫ್ರೊ? ಒಂದು ಪದಾರ್ಥವು ಏನೋ ಒಂದು ಪರಿಣಾಮ ಹೊಂದಿದರೆ ಅದು ಹಾಗೆ ಆಗುವುದಕ್ಕೆ ಪರಿಣಾಮಹೊಂದಿದ ಸ್ಥಿತಿ ಕಾರಣವಲ್ಲ; ಪರಿಣಾಮ ಹೊಂದುವುದೇ ಪರಿಣಾಮಹೊಂದಿದ ಸ್ಥಿತಿಗೆ ಕಾರಣ. ನಾನು ಹೇಳುವುದನ್ನು ಒಪ್ಪುವೆಯಾ?

ಯೂ—ಒಪ್ಪುತ್ತೇನೆ.

ಸಾ—ಪ್ರೀತಿಸಲ್ಪಡುತ್ತಿರುವ ವಸ್ತು ಅನ್ಯವಸ್ತುವಿನಿಂದ ಯಾವುದೋ ಪರಿಣಾಮಹೊಂದಿದ ಅಥವಾ ಹೊಂದುತ್ತಿರುವ ಸ್ಥಿತಿಯಲ್ಲಿದೆಯಲ್ಲವೆ?

ಯೂ—ಹೌದು.

ಸಾ—ಹಾಗಾದರೆ ಇತರ ವಿಷಯಗಳಲ್ಲಿ ಹೇಳಿದ್ದು ಇಲ್ಲಿಯೂ ನಿಜವಾಗಬೇಕು. ಪ್ರಿಯವಸ್ತು ಪ್ರೀತಿಸಲ್ಪಡುತ್ತಿರುವುದು ಅದು ಪ್ರೀತಿಸಲ್ಪಡುತ್ತಿರುವ ಸ್ಥಿತಿಯಲ್ಲಿರುವುದರಿಂದಲ್ಲ; ಅದನ್ನು ಪ್ರೇಮಿಗಳು ಪ್ರೀತಿಸುವುದರಿಂದ ಅದು ಪ್ರೀತಿಸಲ್ಪಡುತ್ತಿರುವ ಸ್ಥಿತಿಯಲ್ಲಿದೆ.

ಯೂ—ನಿಶ್ಚಯ.

ಸಾ—ಹಾಗಾದರೆ ಯೂಥಿಫ್ರೊ, ಧರ್ಮದ ವಿಷಯದಲ್ಲಿ ಏನು ಹೇಳೋಣ? ನಿನ್ನ ಲಕ್ಷಣದ ಪ್ರಕಾರ ಅದು ಎಲ್ಲಾ ದೇವತೆಗಳಿಂದಲೂ ಪ್ರೀತಿಸಲ್ಪಡುವುದಲ್ಲವೆ?

ಯೂ—ಹೌದು.

ಸಾ—ಏಕೆ? ಅದು ಧರ್ಮವಾದ್ದರಿಂದಲೋ ಅಥವಾ ಮತ್ತಾವುದಾದರೂ ಕಾರಣದಿಂದಲೋ?

ಯೂ—ಅದು ಧರ್ಮವಾದ್ದರಿಂದ.

ಸಾ—ಹಾಗಾದರೆ ಅದು ಧರ್ಮವಾದ್ದರಿಂದ ದೇವತೆಗಳಿಂದ ಪ್ರೀತಿಸಲ್ಪಡುತ್ತದೆ. ದೇವತೆಗಳು ಅದನ್ನು ಪ್ರೀತಿಸುವುದರಿಂದ ಅದು ಧರ್ಮವಾಗಿಲ್ಲ.

ಯೂ—ಹಾಗೇ ತೋರುತ್ತದೆ.

ಸಾ—ಆದರೆ ದೇವತೆಗಳಿಗೆ ಪ್ರಿಯವಾದ ವಸ್ತು ಹಾಗೆ ಪ್ರಿಯವಾಗಿರುವುದಕ್ಕೆ—ಹಾಗೆ ಪ್ರೀತಿಸಲ್ಪಡುತ್ತಿರುವ ಸ್ಥಿತಿಯಲ್ಲಿರುವುದಕ್ಕೆ - ಅವರು ಅದನ್ನು ಪ್ರೀತಿಸುವುದೇ ಕಾರಣವಲ್ಲವೆ?

ಯೂ—ಹೌದು.

ಸಾ—ಹಾಗಾದರೆ ನೀನು ಹೇಳುವ ಹಾಗೆ ಧರ್ಮವೆಂದರೆ ದೇವತೆಗಳಿಗೆ ಪ್ರಿಯವಾದದ್ದು ಎಂದಲ್ಲ; ದೇವತೆಗಳಿಗೆ ಪ್ರಿಯವಾದದ್ದು ಧರ್ಮವೆಂದೂ ಅಲ್ಲ. ಅವು ಬೇರೆ ಬೇರೆ ವಸ್ತುಗಳು.

ಯೂ—ಏಕೆ, ಸಾಕ್ರೆಟೀಸ್ ?

ಸಾ—ಏಕೆಂದರೆ, ದೇವತೆಗಳು ಧರ್ಮವನ್ನು ಪ್ರೀತಿಸುವುದು ಅದು ಧರ್ಮವಾದ್ದರಿಂದ. ಅವರು ಅದನ್ನು ಪ್ರೀತಿಸುವುದರಿಂದ ಅದು ಧರ್ಮವಾಗುವುದಿಲ್ಲ ಎಂದು ನಾವು ಒಪ್ಪಿಕೊಂಡಿದ್ದೇವೆ.

ಯೂ—ಹೌದು.

ಸಾ—ಯಾವುದು ದೇವತೆಗಳ ಪ್ರೀತಿಗೆ ಪಾತ್ರವಾಗಿರುವುದರಿಂದ ಅವರಿಗೆ ಸಂತೋಷವನ್ನು ಕೊಡುತ್ತದೆಯೋ ಅದು ಹಾಗೆ ಸಂತೋಷವನ್ನು ಕೊಡುವುದಕ್ಕೆ ಆ ಪ್ರೀತಿಯೇ ಕಾರಣ. ಅದು ಸಂತೋಷಕೊಡುತ್ತದೆಯೆಂದು ಅವರು ಅದನ್ನು ಪ್ರೀತಿಸುವುದಿಲ್ಲ, ಅಲ್ಲವೆ ?

ಯೂ—ಹೌದು.

ಸಾ—ಹಾಗಾದರೆ ಯೂಥಿಫ್ರೊ, ಧರ್ಮವೂ ದೇವತೆಗಳಿಗೆ ಪ್ರಿಯವಾದದ್ದೂ ಬೇರೆ ಬೇರೆ ವಸ್ತುಗಳಾಗಿರಬೇಕು. ದೇವತೆಗಳು ಧರ್ಮವನ್ನು ಧರ್ಮದ ಸಲುವಾಗಿಯೇ ಪ್ರೀತಿಸಿದ್ದರೆ ಅವರು ತಮಗೆ ಸಂತೋಷದಾಯಕವಾದದ್ದನ್ನು ಅದು ತಮಗೆ ಸಂತೋಷದಾಯಕವಾಗಿರುವುದರ ಸಲುವಾಗಿಯೇ ಪ್ರೀತಿಸುತ್ತಿದ್ದರು. ಆದರೆ ಅವರಿಗೆ ಸಂತೋಷದಾಯಕವಾದ ವಸ್ತು ತಮಗೆ ಅದರ ಮೇಲಿರುವ ಪ್ರೇಮದ ಸಲುವಾಗಿ ಸಂತೋಷದಾಯಕವಾಗಿದ್ದಿದ್ದರೆ ಆಗ ಧರ್ಮವು ದೇವತೆಗಳಿಗೆ ಅದರ ಮೇಲಿರುವ ಪ್ರೇಮದ ಸಲುವಾಗಿ ಧರ್ಮವಾಗುತ್ತಿತ್ತು. ಆದರೆ ಈಗ ನೋಡು. ಅವೆರಡೂ ವಿರುದ್ಧ ವಸ್ತುಗಳು, ಪೂರ್ಣವಾಗಿ ಬೇರೆ ಸ್ವಭಾವವುಳ್ಳವು. ಏಕೆಂದರೆ, ಅವುಗಳಲ್ಲಿ ಒಂದು (ದೇವತೆಗಳಿಗೆ ಪ್ರಿಯವಾದದ್ದು) ಪ್ರೀತಿಸಲ್ಪಡುತ್ತಿರುವುದರಿಂದ ಪ್ರೇಮಯೋಗ್ಯವಾದದ್ದು ; ಇನ್ನೊಂದು (ಧರ್ಮ) ಪ್ರೇಮಯೋಗ್ಯವಾದ್ದರಿಂದ ಪ್ರೀತಿಸಲ್ಪಡತಕ್ಕದ್ದು. ಯೂಥಿಫ್ರೊ, ನಾನು ಕೇಳಿದ ಪ್ರಶ್ನೆ—ಧರ್ಮವೆಂದರೇನು ಎಂದು ಈಗ ನೀನು ಧರ್ಮದ ತಿರುಳೇನೆಂದು ಹೇಳಿಯೇ ಇಲ್ಲ. ಧರ್ಮದ ಒಂದು ಗುಣವನ್ನು—ಅದು ಎಲ್ಲಾ ದೇವತೆಗಳಿಗೂ ಪ್ರಿಯವಾದದ್ದು ಎಂಬ ಒಂದು ಗುಣವನ್ನು—ಮಾತ್ರ ಹೇಳಿದ್ದೀಯೆ. ಅದರ ತಿರುಳೇನೆಂದು ಹೇಳಲಿಲ್ಲ. ದಯವಿಟ್ಟು ಆ ಗುಟ್ಟನ್ನು ನನ್ನಿಂದ ಮರಸ

ಬೇಡ. ಧರ್ಮವೇನೆಂಬ ವಿಷಯವನ್ನು ಪುನಃ ಮೊದಲಿಂದ ಪ್ರಾರಂಭಿಸು. ಅದನ್ನು ದೇವತೆಗಳು ಪ್ರೀತಿಸುವರೋ ಇಲ್ಲವೋ ಆ ವಿಷಯ ಈಗ ಬೇಡ. ಅದಕ್ಕೆ ಬೇರೆ ಗುಣಗಳೇನಿದ್ದರೂ ಅವುಗಳ ವಿಷಯವೂ ಬೇಡ. ಧರ್ಮವೆಂದರೇನು, ಅಧರ್ಮವೆಂದರೇನು ಎಂಬುದನ್ನು ಸ್ಪಷ್ಟಪಡಿಸು.

ಯೂ—ಸಾಕ್ರೆಟೀಸ್, ನನ್ನ ಮನಸ್ಸಿನಲ್ಲಿರುವುದನ್ನು ನಿನಗೆ ಹೇಗೆ ವಿವರಿಸಬೇಕೆಂಬುದೇ ತಿಳಿಯುವುದಿಲ್ಲವಲ್ಲ. ನಾನು ಯಾವ ಲಕ್ಷಣವನ್ನು ಹೇಳಿದರೂ ಅದು ನಿಲ್ಲಿಸಿದಲ್ಲಿ ನಿಲ್ಲದೆ ಚಕ್ರಾಕಾರವಾಗಿ ಸುತ್ತುವಂತೆ ತೋರುತ್ತದೆ.

ಸಾ—ಯೂಥಿಫ್ರೊ, ನೀನು ಕೊಡುವ ಲಕ್ಷಣಗಳು ನನ್ನ ಪೂರ್ವಜನಾದ ಡೀಡಾಲಸ್ಸನ ಕೃತಿಗಳಂತಿವೆ. ನಾನೇನಾದರೂ ಅಂಥ ಲಕ್ಷಣಗಳನ್ನು ಹೇಳಿದ್ದರೆ, "ಡೀಡಾಲಸ್ಸನು ನಿರ್ಮಿಸುತ್ತಿದ್ದ ಪ್ರತಿಮೆಗಳಂತೆ ನಿನ್ನ ಲಕ್ಷಣಗಳೂ ಓಡಿಹೋಗುತ್ತಿವೆ. ಎಷ್ಟೇ ಆಗಲಿ ನೀನು ಡೀಡಾಲಸ್ಸನ ವಂಶಸ್ಥನಲ್ಲವೆ?" ಎಂದು ನೀನು ಹಾಸ್ಯಮಾಡುತ್ತಿದ್ದೆ. ಆದರೆ ಈ ಲಕ್ಷಣಗಳು ನಿನ್ನವಾದ್ದರಿಂದ ಹಾಗೆ ಹಾಸ್ಯಮಾಡಿ ಪ್ರಯೋಜನವಿಲ್ಲ. ಅಂತೂ ನೀನು ಹೇಳಿದ ಲಕ್ಷಣ ಒಂದು ಕಡೆ ನಿಲ್ಲುವುದೇನೋ ಇಲ್ಲ.

ಯೂ—ನೀನು ಹೇಳಿದ ಹಾಸ್ಯ ಈಗಲೂ ಇಲ್ಲಿಗೆ ಅನ್ವಯಿಸುವುದಿಲ್ಲವೆಂದು ಹೇಳಲಾಗದು, ಸಾಕ್ರೆಟೀಸ್. ನಾನು ಕೊಟ್ಟ ಲಕ್ಷಣ ನಿಂತಲ್ಲಿ ನಿಲ್ಲದೆ ಚಕ್ರಾಕಾರವಾಗಿ ಸುತ್ತುವುದು ನನ್ನ ತಪ್ಪಲ್ಲ. ನೀನೇ ಈಗ ಡೀಡಾಲಸ್ಸಾಗಿರುವಂತೆ ತೋರುತ್ತದೆ. ನನ್ನ ಪಾಡಿಗೆ ನನ್ನನ್ನು ಬಿಟ್ಟಿದ್ದರೆ ನಾನು ಕೊಟ್ಟ ಲಕ್ಷಣ ನಿಶ್ಚಲವಾಗಿಯೇ ಇರುತ್ತಿತ್ತು.

ಸಾ—ಹಾಗಾದರೆ ನಾನು ಡೀಡಾಲಸ್ಸಿಗಿಂತ ಹೆಚ್ಚು ಕೌಶಲವುಳ್ಳವನಿರಬೇಕು; ಏಕೆಂದರೆ, ತಾನು ನಿರ್ಮಿಸಿದ ಪದಾರ್ಥಗಳು ಮಾತ್ರ ತಿರುಗುವಂತೆ ಅವನು ಮಾಡುತ್ತಿದ್ದನು; ನಾನಾದರೋ ಇತರರು ನಿರ್ಮಿಸಿದವುಗಳನ್ನು ತಿರುಗುವಂತೆ ಮಾಡಬಲ್ಲೆ. ಇದರಲ್ಲಿ ಇನ್ನೂ ಒಂದು ವಿಚಿತ್ರವೇನೆಂದರೆ, ಅವು ಹಾಗೆ ತಿರುಗುವುದು ನನ್ನ ಇಷ್ಟಕ್ಕೆ ವಿರೋಧವಾಗಿ. ನಮ್ಮ ಲಕ್ಷಣಗಳು ನಿಶ್ಚಲವಾಗಿ, ಭದ್ರವಾಗಿ ನಿಂತಿರುವುದಾದರೆ ಡೀಡಾಲಸ್ಸನ ಕೌಶಲವನ್ನಲ್ಲದೆ

ಜೊತೆಗೆ ಟಾಂಟಾಲಸ್ಸನ ಐಶ್ವರ್ಯವೆಲ್ಲವನ್ನೂ ಕೊಟ್ಟೇನು. ಅದು ಹೋಗಲಿ. ಈಗ ನಿನಗೆ ಸ್ವಲ್ಪ ಸೋಮಾರಿತನವಿರಬೇಕು. ಧರ್ಮವೆಂದರೇನು ಎಂಬುದನ್ನು ನನಗೆ ತಿಳಿಯಹೇಳುವುದಕ್ಕೆ ಆದಷ್ಟು ಸಹಾಯವನ್ನು ನಾನೂ ಮಾಡುತ್ತೇನೆ. ಹಿಂದೆಗೆಯಬೇಡ. ಈಗ ಹೇಳು, ಯಾವುದು ಧರ್ಮವೋ ಅದು ನ್ಯಾಯವೂ ಆಗಿರಬೇಕಲ್ಲವೆ ?

ಯೂ—ಹೌದು.

ಸಾ—ಹಾಗಾದರೆ ನ್ಯಾಯವಾದದ್ದೆಲ್ಲ ಧರ್ಮವೆ? ಅಥವಾ "ಧರ್ಮವಾದದ್ದೆಲ್ಲ ನ್ಯಾಯ; ನ್ಯಾಯವೆನ್ನುವುದರಲ್ಲಿ ಒಂದು ಭಾಗ ಮಾತ್ರ ಧರ್ಮ, ಉಳಿದದ್ದು ಬೇರೊಂದು" ಎನ್ನುವೆಯಾ ?

ಯೂ—ನಿನ್ನ ಮಾತು ಅರ್ಥವಾಗಲಿಲ್ಲ, ಸಾಕ್ರೆಟೀಸ್.

ಸಾ—ಹಾಗೆಂದರೇನು, ಯೂಥಿಫ್ರೊ! ನೀನೇನು ನನ್ನಂತೆ ಮುದುಕನಲ್ಲ. ಪ್ರಾಯದವನು; ಜ್ಞಾನದಲ್ಲಂತೂ ನನಗಿಂತ ಎಷ್ಟೋ ದೊಡ್ಡವನು! ನಾನು ಮೊದಲೇ ಹೇಳಿದಂತೆ ನೀನು ಅಷ್ಟು ಜ್ಞಾನಿಯಾಗಿರುವುದರಿಂದಲೇ ಸ್ವಲ್ಪ ಸೋಮಾರಿತನ ಬಂದಿರಬೇಕು. ಸ್ವಲ್ಪ ಯೋಚಿಸು, ಯೂಥಿಫ್ರೊ. ನಾನು ಕೇಳುವುದು ಅಂಥ ಕಷ್ಟವಾದ ಪ್ರಶ್ನೆಯೇನೂ ಅಲ್ಲ. ಒಂದು ನಿದರ್ಶನವನ್ನು ತೆಗೆದುಕೊಳ್ಳೋಣ. "ಸಕಲ ವಸ್ತುಗಳನ್ನೂ ನಿರ್ಮಿಸಿದ ಸೃಷ್ಟಿಕರ್ತ ಸ್ಯೂಸಿನ ಹೆಸರನ್ನು ಉಚ್ಚರಿಸಬೇಡ. ಏಕೆಂದರೆ, ಭಯವಿದ್ದಲ್ಲಿ ಭಕ್ತಿಯೂ ಇರುವುದು" ಎಂದು ಸ್ಟೇಸೈನಸ್ ಕವಿ ಹೇಳಿರುವನು. ಅದನ್ನು ನಾನು ಒಪ್ಪುವುದಿಲ್ಲ. ಏಕೆಂದು ಹೇಳಲಿ ?

ಯೂ—ಹೇಳು.

ಸಾ—ಭಯವಿದ್ದ ಕಡೆ ಭಕ್ತಿಯೂ ಇರುತ್ತದೆ ಎನ್ನುವುದು ಸತ್ಯವಲ್ಲವೆಂದು ನನಗೆ ತೋರುತ್ತದೆ. ರೋಗ, ಬಡತನ ಮೊದಲಾದ ಹಾನಿಗಳಿಗೆ ಹೆದರುವ ಜನರನೇಕರಲ್ಲಿ ಭಯವೇನೋ ಕಂಡುಬರುವುದು; ಆದರೆ ಯಾವುದಕ್ಕೆ ಹೆದರುವರೋ ಅದರ ವಿಷಯದಲ್ಲಿ ಭಕ್ತಿಯೇನೂ ಇರುವಂತೆ ತೋರುವುದಿಲ್ಲ.

ಯೂ—ನಿಜ.

ಸಾ—ಆದರೆ ಭಕ್ತಿ ಇರುವ ಕಡೆಯಲ್ಲಿ ಭಯವೂ ಇರುತ್ತದೆ. ಯಾವ ಕೆಲಸದ

ವಿಷಯದಲ್ಲಾಗಲಿ ಯಾರಿಗೆ ಭಕ್ತಿಯೂ ಲಜ್ಜೆಯೂ ಇರುತ್ತವೋ ಅವರಿಗೆ ಅಪಕೀರ್ತಿಯ ಭಯವೂ ಇರುತ್ತದೆ.

ಯೂ—ನಿಶ್ಚಯ.

ಸಾ—ಹಾಗಾದರೆ ಭಕ್ತಿ ಇರುವ ಕಡೆಯಲ್ಲೆಲ್ಲಾ ಭಯವಿರುವುದಾದರೂ ಭಯ ವಿರುವ ಕಡೆಯಲ್ಲೆಲ್ಲಾ ಭಕ್ತಿಯೂ ಇರುವುದೆಂದು ಹೇಳಿದರೆ ತಪ್ಪಾಗುತ್ತದೆ. ಭಕ್ತಿ ಭಯದ ಜೊತೆಯಲ್ಲಿ ಸರ್ವದಾ ಇರುವುದಿಲ್ಲ. ಏಕೆಂದರೆ, ಭಯ ಭಕ್ತಿಗಿಂತಲೂ ವಿಶಾಲವಾದದ್ದು. ಬೆಸವು ಸಂಖ್ಯೆಯ ಒಂದು ಭಾಗವಲ್ಲವೆ? ಬೆಸವಿದ್ದಲ್ಲಿ ಸಂಖ್ಯೆಯಿದ್ದೇ ಇರಬೇಕು; ಆದರೆ ಸಂಖ್ಯೆಯಿದ್ದಲ್ಲಿ ಬೆಸವಿದ್ದೇ ಇರಬೇಕೆಂದು ನಿರ್ಬಂಧವಿಲ್ಲ. ಹೀಗೆಯೇ ಭಕ್ತಿ ಭಯದ ಒಂದು ಭಾಗ. ನನ್ನ ಅರ್ಥ ಸ್ಪಷ್ಟವಾಯಿತೆ?

ಯೂ—ತಿಳಿಯಿತು.

ಸಾ—ನಾನು ಸ್ವಲ್ಪ ಹೊತ್ತಿನ ಕೆಳಗೆ ನಿನ್ನನ್ನು ಕೇಳಿದ ಪ್ರಶ್ನೆಗೆ ಇದೇ ಅರ್ಥ. ನ್ಯಾಯವಿರುವ ಕಡೆಯಲ್ಲೆಲ್ಲಾ ಧರ್ಮವೂ ಇರುವುದೆ? ಅಥವಾ "ಧರ್ಮ ಎಲ್ಲೆಲ್ಲಿರುವುದೋ ಅಲ್ಲೆಲ್ಲಾ ನ್ಯಾಯವೂ ಇರುವುದಾದರೂ ನ್ಯಾಯ ಎಲ್ಲೆಲ್ಲಿರುವುದೋ ಅಲ್ಲೆಲ್ಲಾ ಧರ್ಮವಿರುವುದಿಲ್ಲ. ಏಕೆಂದರೆ, ಧರ್ಮ ನ್ಯಾಯದ ಒಂದು ಭಾಗ ಮಾತ್ರ" ಎನ್ನಬಹುದೆ? ನಿನ್ನ ಅಭಿಪ್ರಾಯ ವೇನು?

ಯೂ—ಹಾಗೆ ಹೇಳಬಹುದು: ನೀನು ಹೇಳುವುದು ಸರಿ.

ಸಾ—ಧರ್ಮ ನ್ಯಾಯದ ಒಂದು ಭಾಗ ಮಾತ್ರವಾದರೆ, ನ್ಯಾಯದಲ್ಲಿ ಅದು ಯಾವ ಭಾಗವೆಂಬುದನ್ನು ನಾವು ಕಂಡುಹಿಡಿಯಬೇಕಲ್ಲವೆ? ಈಗ ನೀನು "ಬೆಸವು ಸಂಖ್ಯೆಯಲ್ಲಿ ಯಾವ ಭಾಗ? ಯಾವ ಸಂಖ್ಯೆ ಬೆಸಸಂಖ್ಯೆ?" ಎಂದು ಕೇಳಿದ್ದರೆ, ನಾನು "ಸಮಸಂಖ್ಯೆಯಲ್ಲದ್ದು ಬೆಸಸಂಖ್ಯೆ" ಎನ್ನುತ್ತಿದ್ದೆ, ಅಲ್ಲವೆ?

ಯೂ—ಹೌದು.

ಸಾ—ಹಾಗಾದರೆ ಧರ್ಮ ನ್ಯಾಯದಲ್ಲಿ ಯಾವ ಭಾಗವೆಂಬುದನ್ನು ನನಗೆ ತಿಳಿಸುವುದಕ್ಕಾಗುತ್ತದೆಯೆ ನೋಡು. ಅದು ಗೊತ್ತಾದರೆ ನಾನು ಮೆಲೆ

ಟಸ್ಸಿಗೆ "ಯೂಥಿಫ್ರೋವನ್ನು ಕೇಳಿ ಯಾವ ಕಾರ್ಯಗಳು ಧರ್ಮವಾದುವು, ಪವಿತ್ರವಾದುವು ಎಂಬುದನ್ನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಆದ್ದರಿಂದ ನಾನು ಅಧರ್ಮದಿಂದ ವರ್ತಿಸುವೆನೆಂದು ನನ್ನ ಮೇಲೆ ಅನ್ಯಾಯವಾಗಿ ದೂರು ತರಬೇಡ" ಎಂದು ಹೇಳಬಹುದು.

ಯೂ—ಸಾಕ್ರೆಟೀಸ್, ನ್ಯಾಯದಲ್ಲಿ ದೇವತೆಗಳಿಗೆ ಸಲ್ಲಬೇಕಾದ ಗಮನಕ್ಕೆ ಸಂಬಂಧಪಡುವ ಭಾಗವೇ ಧರ್ಮ; ಮನುಷ್ಯರಿಗೆ ಸಲ್ಲಬೇಕಾದ ಗಮನಕ್ಕೆ ಸಂಬಂಧಪಡುವುದು ನ್ಯಾಯದಲ್ಲಿ ಇನ್ನುಳಿದಿರುವ ಭಾಗ.

ಸಾ—ಒಳ್ಳೆಯ ಉತ್ತರವನ್ನೇ ಹೇಳಿದೆ, ಯೂಥಿಫ್ರೊ. ಆದರೆ ಅಲ್ಲಿ ತಿಳಿದುಕೊಳ್ಳಬೇಕಾದ ಸಣ್ಣ ಅಂಶವೊಂದಿದೆ. ನೀನು ದೇವತೆಗಳಿಗೆ ಸಲ್ಲಬೇಕಾದ ಗಮನವೆಂದು ಹೇಳಿದೆಯುಲ್ಲ, ಅದು ಅರ್ಥವಾಗಲಿಲ್ಲ. 'ಗಮನ' ಎನ್ನುವ ಪದವನ್ನು ಇತರ ವಿಷಯಗಳಲ್ಲಿ ನಾವು ಯಾವ ಅರ್ಥದಲ್ಲಿ ಉಪಯೋಗಿಸುತ್ತೇವೋ ದೇವತೆಗಳ ವಿಷಯದಲ್ಲಿಯೂ ಅದೇ ಅರ್ಥದಲ್ಲಿ ಉಪಯೋಗಿಸಲಾಗುವುದಿಲ್ಲ, ಅಲ್ಲವೆ? ಉದಾಹರಣೆಗೆ, "ನಾವು ಕುದುರೆಗಳಿಗೆ ಸರಿಯಾಗಿ ಗಮನ ಕೊಡುವುದು ಕುದುರೆಗಳನ್ನು ತಯಾರುಮಾಡುವವನಿಗಲ್ಲದೆ ಇತರರಿಗೆ ತಿಳಿಯದು" ಎಂದು ಹೇಳುತ್ತೇವಲ್ಲವೆ?

ಯೂ—ಹೌದು.

ಸಾ—ಏಕೆಂದರೆ, ಕುದುರೆಗಳಿಗೆ ಸಂಬಂಧಪಡುವ ವೃತ್ತಿಯೆಂದರೆ ಕುದುರೆಗಳಿಗೆ ಗಮನಕೊಡುವುದೇ.

ಯೂ—ಹೌದು.

ಸಾ—ನಾಯಿಗಳಿಗೆ ಗಮನಕೊಡುವುದು ಬೇಟೆಗಾರನಿಗಲ್ಲದೆ ಇತರರಿಗೆ ತಿಳಿಯುವುದಿಲ್ಲ.

ಯೂ—ನಿಜ.

ಸಾ—ಏಕೆಂದರೆ, ಬೇಟೆಗಾರನ ವೃತ್ತಿಯೆಂದರೆ ನಾಯಿಗಳಿಗೆ ಗಮನಕೊಡುವುದೇ.

ಯೂ—ಹೌದು.

ಸಾ—ಹೀಗೆಯೇ ದನ ಕಾಯುವವನ ವೃತ್ತಿ ದನಗಳಿಗೆ ಗಮನಕೊಡುವುದು.

ಯೂ—ಹೌದು.

GANDHI SMARAKA GRANTHALAYA
BANGALORE-1.

ಸಾ—ಧರ್ಮವೆನ್ನುವುದು ದೇವತೆಗಳಿಗೆ ಗಮನಕೊಡುವುದು ಎಂದಲ್ಲವೇ ನೀನು ಹೇಳುವುದು?

ಯೂ—ಹೌದು.

ಸಾ—ಸರಿ. ಹೀಗೆ ಗಮನಕೊಡುವುದಕ್ಕೆಲ್ಲ ಇರುವ ಉದ್ದೇಶ ಒಂದೇ ಅಲ್ಲವೆ? ಗಮನಕೊಡುವುದೇಕೆ? ಯಾವುದಕ್ಕೆ ಗಮನ ಕೊಡುತ್ತೇವೋ ಅದಕ್ಕೆ ಒಳ್ಳೆಯದಾಗಲೆಂದು, ಪ್ರಯೋಜನವಾಗಲೆಂದು, ಅಲ್ಲವೆ? ಉದಾಹರಣೆಗೆ, ಕುದುರೆಗಳನ್ನು ತರಬಿಯತ್ತು ಮಾಡುವವನ ವೃತ್ತಿಯಿಂದ ಕುದುರೆಗಳು ಪ್ರಯೋಜನವನ್ನೂ ಅಭಿವೃದ್ಧಿಯನ್ನೂ ಹೊಂದುತ್ತವೆ.

ಯೂ—ನಿಜ.

ಸಾ—ಹಾಗೆಯೇ ಬೇಟೆಗಾರನ ವೃತ್ತಿಯಿಂದ ನಾಯಿಗಳು ಪ್ರಯೋಜನವನ್ನು ಪಡೆದು ಅಭಿವೃದ್ಧಿ ಹೊಂದುತ್ತವೆ; ದನಗಳು ದನಕಾಯುವವನ ವೃತ್ತಿಯಿಂದ ಅಭಿವೃದ್ಧಿ ಹೊಂದುತ್ತವೆ; ಇತರ ವಿಷಯುಗಳಲ್ಲಿಯೂ ಹೀಗೆಯೇ. ಯಾವುದಕ್ಕೆ ನಾವು ಈ ರೀತಿ ಗಮನಕೊಡುತ್ತೇವೋ ಅದಕ್ಕೆ ಕೇಡು ಮಾಡಬೇಕೆಂಬ ಉದ್ದೇಶ ನಮಗೆ ಎಂದಿಗಾದರೂ ಇರುತ್ತದೆಯೆ?

ಯೂ—ಇಲ್ಲ, ಎಂದಿಗೂ ಇಲ್ಲ.

ಸಾ—ಹಾಗಾದರೆ ಅವುಗಳಿಗೆ ಒಳ್ಳೆಯದನ್ನು ಮಾಡುವುದೂ ಅವುಗಳನ್ನು ಅಭಿವೃದ್ಧಿಸ್ಥಿತಿಗೆ ತರುವುದೂ ತಾನೆ ನಮ್ಮ ಉದ್ದೇಶ?

ಯೂ—ಹೌದು.

ಸಾ—ನೀನು ಧರ್ಮವೆಂದರೆ ದೇವತೆಗಳಿಗೆ ಗಮನಕೊಡುವುದು ಎಂದೆಯಲ್ಲ; ಹಾಗಾದರೆ ದೇವತೆಗಳಿಗೆ ಒಳ್ಳೆಯದನ್ನು ಮಾಡುವುದೂ ಅವರನ್ನು ಅಭಿವೃದ್ಧಿಸ್ಥಿತಿಗೆ ತರುವುದೂ ಧರ್ಮದ ಉದ್ದೇಶವೆ? ನೀನು ಒಂದು ಧರ್ಮಕಾರ್ಯವನ್ನು ಮಾಡಿದರೆ ದೇವತೆಗಳಲ್ಲಿ ಯಾರಾದರೂ ಅದರಿಂದ ಉತ್ತಮಸ್ಥಿತಿಗೆ ಬರುವರೆಂದು ಹೇಳುವುದಕ್ಕಾಗುತ್ತದೆಯೆ?

ಯೂ—ಖಂಡಿತ ಇಲ್ಲ. ಎಲ್ಲಾದರೂ ಉಂಟೆ?

ಸಾ—ಇಲ್ಲ. ನಿನ್ನ ಅರ್ಥ ಅದಲ್ಲವೇ ಅಲ್ಲವೆಂದು ನನಗೆ ಚೆನ್ನಾಗಿ ಗೊತ್ತು. ಅದಕ್ಕೇ, ದೇವತೆಗಳಿಗೆ ಗಮನಕೊಡುವುದೆಂದರೇನು ಎಂದು ನಾನು

ಕೇಳಿದ್ದು. ಗಮನವೆಂದರೆ ನಿನ್ನ ಅರ್ಥ ಅದಿರಲಾರದೆಂದೇ ನನಗೂ ತೋಚಿತು.

ಯೂ—ನಿಜ, ಸಾಕ್ರೆಟೀಸ್, ನನ್ನ ಮನಸ್ಸಿನಲ್ಲಿದ್ದದ್ದು ಆ ವಿಧವಾದ ಗಮನವಲ್ಲ.

ಸಾ—ಒಳ್ಳೆಯದು, ಹಾಗಾದರೆ ದೇವತೆಗಳಿಗೆ ಯಾವ ವಿಧವಾದ ಗಮನ ಕೊಟ್ಟರೆ ಅದು ಧರ್ಮವೆನ್ನಿಸಿಕೊಳ್ಳುತ್ತದೆ?

ಯೂ—ಗುಲಾಮರು ಯಜಮಾನರಿಗೆ ಕೊಡುವ ಗಮನ, ಸಾಕ್ರೆಟೀಸ್.

ಸಾ—ತಿಳಿಯಿತು. ಅದು ದೇವತೆಗಳಿಗೆ ಮಾಡುವ ಒಂದು ವಿಧವಾದ ಸೇವೆ, ಅಲ್ಲವೆ?

ಯೂ—ಹೌದು.

ಸಾ—ವೈದ್ಯನ ವೃತ್ತಿಯೂ ಒಂದು ವಿಧವಾದ ಸೇವೆಯಲ್ಲವೆ? ಅದರ ಫಲಿತಾಂಶ ಆರೋಗ್ಯ.

ಯೂ—ಹೌದು.

ಸಾ—ಹಡಗು ಕಟ್ಟುವವನಿಗೆ ಸೇವೆ ಮಾಡುವ ವೃತ್ತಿಯೊಂದಿರುವುದು. ಆ ವೃತ್ತಿಯ ಫಲಿತಾಂಶವೇನು?

ಯೂ—ಹಡಗು, ಸಾಕ್ರೆಟೀಸ್.

ಸಾ—ಮನೆ ಕಟ್ಟುವವನಿಗೆ ಸೇವೆ ಮಾಡುವ ವೃತ್ತಿಯ ಫಲಿತಾಂಶ ಮನೆ, ಅಲ್ಲವೆ?

ಯೂ—ಹೌದು.

ಸಾ—ಹಾಗಾದರೆ ಯೂಥಿಫ್ರೊ, ದೇವತೆಗಳಿಗೆ ಸೇವೆ ಮಾಡುವ ವೃತ್ತಿಯ ಫಲಿತಾಂಶವೇನು ಹೇಳು. ನಿನಗೆ ಈ ವಿಷಯ ಗೊತ್ತೇ ಇರಬೇಕು. ದೈವಿಕವಾದ ವಿಷಯಗಳಲ್ಲಿ ನಿನ್ನಷ್ಟು ತಿಳಿವಳಿಕೆಯುಳ್ಳವರು ಮತ್ತೊಬ್ಬರಿಲ್ಲ.

ಯೂ—ಅದೇನೋ ನಿಜ, ಸಾಕ್ರೆಟೀಸ್.

ಸಾ—ಹಾಗಾದರೆ ದಯವಿಟ್ಟು ಹೇಳು. ದೇವತೆಗಳು ನಮ್ಮ ಸೇವೆಯನ್ನು ಯಾವ ಮಹಾಕಾರ್ಯಕ್ಕಾಗಿ ಉಪಯೋಗಿಸುತ್ತಾರೆ?

ಯೂ—ಅಂಥ ಕಾರ್ಯಗಳು ಅನೇಕವಿವೆ; ಅವು ಬಹಳ ಘನವಾದುವು.

ಸಾ—ಒಬ್ಬ ದಳಪತಿ ತನ್ನ ವೃತ್ತಿಯಿಂದ ಸಾಧಿಸುವ ಘನವಾದ ಕೆಲಸಗಳೂ

ಹಾಗೆಯೇ ಅನೇಕವಿವೆ. ಆದರೆ ಅವುಗಳಲ್ಲಿ ರತ್ನಪ್ರಾಯವಾದದ್ದು ಯುದ್ಧದಲ್ಲಿ ಜಯ, ಅಲ್ಲವೆ?

ಯೂ—ಹೌದು.

ಸಾ—ಬೇಸಾಯಗಾರನೂ ಎಷ್ಟೋ ಸೊಗಸಾದ ಕೆಲಸಗಳನ್ನು ಮಾಡುತ್ತಾನೆ. ಆದರೆ ಅವುಗಳಲ್ಲಿ ಮುಖ್ಯವಾದದ್ದು ಅವನು ಭೂಮಿಯಲ್ಲಿ ಧಾನ್ಯವನ್ನು ಬೆಳೆಯುವುದು.

ಯೂ—ಹೌದು.

ಸಾ—ದೇವತೆಗಳು ನಮ್ಮ ಸೇವೆಯಿಂದ ಸಾಧಿಸುವ ಮಹಾಕಾರ್ಯಗಳಲ್ಲಿ ಮುಖ್ಯವಾದದ್ದು ಯಾವುದು ಹೇಳು.

ಯೂ—ನಾನು ನಿನಗೆ ಮೊದಲೇ ಹೇಳಿದ ಹಾಗೆ, ಸಾಕ್ರೆಟೀಸ್, ಈ ವಿಷಯಗಳಲ್ಲಿ ಸತ್ಯವನ್ನು ತಿಳಿಯುವುದು ಸುಲಭವಲ್ಲ. ಆದರೆ ಒಟ್ಟಿನಲ್ಲಿ ಹೀಗೆ ಹೇಳಬಹುದು. ಸ್ತೋತ್ರದಿಂದ, ಯಾಗದಿಂದ, ವಾಕ್ಕರ್ಮಗಳ ಮೂಲಕ, ದೇವತೆಗಳಿಗೆ ಸಂತೋಷವಾಗುವಂತೆ ಮಾಡುವುದನ್ನು ಕಲಿಯುವುದೇ ಧರ್ಮ. ಈ ಧರ್ಮ ನಮ್ಮ ಸಂಸಾರವನ್ನು ಮಾತ್ರವಲ್ಲದೆ ದೇಶವೆಲ್ಲವನ್ನೂ ಕೇಡಿಗೆ ಸಿಕ್ಕದಂತೆ ಕಾಪಾಡುತ್ತದೆ. ದೇವತೆಗಳಿಗೆ ಸಂತೋಷವನ್ನುಂಟುಮಾಡದೆ ಇರುವ, ಅಪ್ರಿಯವಾದ, ಅಧರ್ಮ ಎಲ್ಲರಿಗೂ ನಾಶವನ್ನು ತಂದುಹಾಕುತ್ತದೆ.

ಸಾ—ನಿಜವಾಗಿಯೂ ಯೂಥಿಫ್ರೊ, ನೀನು ಮನಸ್ಸು ಮಾಡಿದ್ದರೆ ನನ್ನ ಪ್ರಶ್ನೆಗೆ ಇನ್ನೂ ಕಡಮೆ ಮಾತುಗಳಲ್ಲಿಯೇ ಉತ್ತರ ಕೊಡಬಹುದಾಗಿತ್ತು. ಆದರೆ ನನಗೆ ಈ ವಿಷಯಗಳನ್ನು ತಿಳಿಯಹೇಳಲು ನಿನಗೆ ಇಷ್ಟವಿಲ್ಲವೆಂದು ಇದರಿಂದ ವ್ಯಕ್ತವಾಗುತ್ತದೆ. ನಾನು ತಿಳಿಯಲು ಆತುರಪಡುತ್ತಿರುವ ವಿಷಯವನ್ನು ಹೇಳುವುದರಲ್ಲಿದ್ದವನು ಅಷ್ಟರಲ್ಲಿಯೇ ಆ ಮಾತನ್ನು ನಿಲ್ಲಿಸಿಬಿಟ್ಟೆಯಲ್ಲ! ನೀನು ಸ್ವಲ್ಪ ಮನಸ್ಸು ಮಾಡಿ ಮುಂದುವರಿದಿದ್ದರೆ ಧರ್ಮದ ಸ್ವರೂಪವು ಇಷ್ಟುಹೊತ್ತಿಗೆ ನನಗೆ ಮನದಟ್ಟಾಗಿರುತ್ತಿತ್ತು. ಈಗ ನಾನು ನಿನಗೆ ಪ್ರಶ್ನೆಹಾಕುತ್ತಿರುವುದರಿಂದ ನೀನು ಯಾವ ಕಡೆಗೆ ಎಳೆದರೆ ಆ ಕಡೆಗೆ ನಿನ್ನನ್ನು ಹಿಂಬಾಲಿಸಬೇಕಾಗಿದೆ. ಧರ್ಮವಾದದ್ದು—ಧರ್ಮ—

ಎಂದರೇನು? ದಯವಿಟ್ಟು ಹೇಳು. ಸ್ತೋತ್ರ ಮತ್ತು ಯಾಗ ಇವುಗಳ ವಿಷಯದ ಶಾಸ್ತ್ರ ಎಂದು ನಿನ್ನ ಅಭಿಪ್ರಾಯವೆ?

ಯೂ—ಹೌದು.

ಸಾ—ಯಾಗವೆಂದರೆ ದೇವತೆಗಳಿಗೆ ಕೊಡುವುದು, ಸ್ತೋತ್ರವೆಂದರೆ ದೇವತೆಗಳಿಂದ ಬೇಡುವುದು, ಅಲ್ಲವೆ?

ಯೂ—ಹೌದು, ಸಾಕ್ರೆಟೀಸ್.

ಸಾ—ಹಾಗಾದರೆ ನೀನು ಹೇಳುವ ಪ್ರಕಾರ ಧರ್ಮವೆನ್ನುವುದು ದೇವರಿಂದ ಬೇಡುವ ಮತ್ತು ದೇವರಿಗೆ ಕೊಡುವ ವಿಷಯದ ಶಾಸ್ತ್ರ?

ಯೂ—ಹೌದು, ನನ್ನ ಅರ್ಥವನ್ನು ಚೆನ್ನಾಗಿ ಗ್ರಹಿಸಿದ್ದೀಯೆ, ಸಾಕ್ರೆಟೀಸ್.

ಸಾ—ನಿಜ, ಯೂಥಿಫ್ರೊ. ನಾನು ನಿನ್ನಿಂದ ಜ್ಞಾನವನ್ನು ಪಡೆಯಬೇಕೆಂದು ಆತುರನಾಗಿರುವುದರಿಂದ ನಿನ್ನ ಮಾತು ಒಂದೂ ವ್ಯರ್ಥವಾಗದಂತೆ ಬಹು ಶ್ರದ್ಧೆಯಿಂದ ಕೇಳುತ್ತಿದ್ದೇನೆ. ಅದಿರಲಿ. ದೇವತೆಗಳ ಸೇವೆ ಎಂದೆಯಲ್ಲ, ಅದು ಏನು? ದೇವತೆಗಳಿಂದ ಬೇಡುವುದು, ಅವರಿಗೆ ಕೊಡುವುದು ಎಂದಲ್ಲವೇ ನೀನು ಹೇಳಿದ್ದು.

ಯೂ—ಹೌದು.

ಸಾ—ಹಾಗಾದರೆ ನಾವು ಯೋಗ್ಯವಾದ ರೀತಿಯಲ್ಲಿ ಬೇಡುವುದೆಂದರೆ ಅವರಿಂದ ನಮಗೆ ಯಾವುದು ಆವಶ್ಯಕವೋ ಅದನ್ನು ಬೇಡುವುದು.

ಯೂ—ಹೌದು.

ಸಾ—ಯೋಗ್ಯವಾದ ರೀತಿಯಲ್ಲಿ ಕೊಡುವುದೆಂದರೆ ಅವರಿಗೆ ನಮ್ಮಿಂದ ಯಾವುದು ಆವಶ್ಯಕವೋ ಅದನ್ನು ಕೊಡುವುದು. ಒಬ್ಬನಿಗೆ ಬೇಕಿಲ್ಲದೆ ಇರುವ ಪದಾರ್ಥವನ್ನು ಕೊಟ್ಟದ್ದರಿಂದ ಏನು ಪ್ರಯೋಜನ?

ಯೂ—ನಿಜ, ಸಾಕ್ರೆಟೀಸ್.

ಸಾ—ಹಾಗಾದರೆ ಧರ್ಮವು ದೇವತೆಗಳಿಗೂ ಮನುಷ್ಯರಿಗೂ ನಡೆಯುವ ಒಂದು ವ್ಯಾಪಾರ?

ಯೂ—ನೀನು ಇಷ್ಟಪಟ್ಟರೆ ಹಾಗೇ ಕರೆಯಬಹುದು.

ಸಾ—ಹಾಗಲ್ಲ, ನನ್ನ ಇಷ್ಟವೆಂದರೇನು? ಸರಿಯಾದ ಹೆಸರಿನಿಂದ ಕರೆಯ

ಬೇಕೆಂದೇ ನನ್ನ ಇಷ್ಟ. ಈಗ ಹೇಳು. ದೇವತೆಗಳು ನಮ್ಮಿಂದ ಪಡೆಯುವ ವಸ್ತುಗಳಿಂದ ಏನು ಪ್ರಯೋಜನವನ್ನು ಹೊಂದುತ್ತಾರೆ? ಅವರು ನಮಗೆ ಏನು ಕೊಡುತ್ತಾರೆನ್ನುವುದು ಎಲ್ಲರಿಗೂ ತಿಳಿದ ವಿಷಯ. ನಾವು ಅನುಭವಿಸುತ್ತಿರುವುದೆಲ್ಲವೂ ಅವರು ಅನುಗ್ರಹಿಸಿದ್ದೇ. ಆದರೆ ನಾವು ಅವರಿಗೆ ಕೊಡುವ ಪದಾರ್ಥಗಳಿಂದ ಅವರಿಗೇನು ಪ್ರಯೋಜನ? ಈ ವ್ಯಾಪಾರದಲ್ಲಿ ಈಗ ನಮ್ಮಲ್ಲಿರುವ ಒಳ್ಳೆಯ ವಸ್ತುಗಳೆಲ್ಲವನ್ನೂ ಅವರಿಂದ ಪಡೆದು, ನಾವು ಅವರಿಗೆ ಪ್ರತಿಯಾಗಿ ಏನನ್ನೂ ಕೊಡಬೇಡವೆ? ಇಂಥ ವ್ಯಾಪಾರವಾದರೆ ನಮಗೆ ಬಹಳ ಲಾಭಕರ.

ಯೂ—ನಾವು ಕೊಡುವ ಪದಾರ್ಥಗಳಿಂದ ದೇವತೆಗಳಿಗೆ ಪ್ರಯೋಜನವುಂಟೆಂದು ಭಾವಿಸಿದ್ದೀಯಾ, ಸಾಕ್ರೆಟೀಸ್?

ಸಾ—ಹಾಗಾದರೆ ನಾವು ದೇವತೆಗಳಿಗೆ ಕೊಡುವ ಪದಾರ್ಥಗಳು ಯಾವುವು ಹೇಳು.

ಯೂ—ಗೌರವ, ಭಕ್ತಿ. ನಾನು ಆಗಲೇ ಹೇಳಿದ ಹಾಗೆ ದೇವತೆಗಳಿಗೆ ಒಪ್ಪಿಗೆಯಾದದ್ದು, ಅವರಿಗೆ ಸಂತೋಷವುಂಟುಮಾಡುವಂಥಾದ್ದು.

ಸಾ—ಹಾಗಾದರೆ ಧರ್ಮ ಅವರಿಗೆ ಒಪ್ಪಿಗೆಯಾದದ್ದು, ಸಂತೋಷವುಂಟುಮಾಡುವಂಥಾದ್ದು; ಆದರೂ ಅದರಿಂದ ಅವರಿಗೆ ಪ್ರಯೋಜನವಿಲ್ಲ, ಅದು ಅವರಿಗೆ ಪ್ರಿಯವಾದದ್ದಲ್ಲ ಎನ್ನುವುದಕ್ಕಾಗುತ್ತದೆಯೆ?

ಯೂ—ದೇವತೆಗಳಿಗೆ ಅವಕ್ಕಿಂತ ಪ್ರಿಯವಾದದ್ದು ಯಾವುದೂ ಇಲ್ಲ.

ಸಾ—ಹಾಗಾದರೆ ಧರ್ಮವು ದೇವತೆಗಳಿಗೆ ಪ್ರಿಯವಾದದ್ದು?

ಯೂ—ಹೌದು, ನಿಸ್ಸಂದೇಹವಾಗಿ.

ಸಾ—ನೋಡು, ನೀನು ಹೇಳುವ ಲಕ್ಷಣಗಳು ನಿಲ್ಲಿಸಿದಲ್ಲಿ ನಿಲ್ಲದೆ ಸುತ್ತಿಕೊಂಡು ಬರುತ್ತವೆಯೆಂದರೆ ಇನ್ನೂ ನಿನಗೆ ಆಶ್ಚರ್ಯವೆ? ಡೀಡಾಲಸ್ಸನಂತೆ ಅವುಗಳನ್ನು ತಿರುಗಿಸುತ್ತೇನೆಂದು ನನ್ನ ಮೇಲೆ ತಪ್ಪುಹೊರಿಸಿದೆಯಲ್ಲ, ನೀನು ಡೀಡಾಲಸ್ಸನಿಗಿಂತ ಚತುರನಾಗಿ ಈ ಲಕ್ಷಣಗಳನ್ನು ಚಕ್ರಾಕಾರವಾಗಿ ಸುತ್ತಿಸಿಕೊಂಡು ತಂದಿದ್ದೀಯೆ! ನಮ್ಮ ಲಕ್ಷಣ ಒಂದು ಸುತ್ತು ಹಾಕಿಕೊಂಡು ಮೊದಲಿದ್ದ ಸ್ಥಳಕ್ಕೇ ಬಂದಿದೆ. ಧರ್ಮವೇ ಬೇರೆ, ದೇವತೆ

ಗಳಿಗೆ ಪ್ರಿಯವಾದದ್ದೇ ಬೇರೆ ಎಂದು ನಾವು ಆಗಲೇ ನಿಶ್ಚಯಿಸಿಕೊಂಡೆವಲ್ಲವೆ? ನಿನಗೆ ಜ್ಞಾಪಕವಿರಬಹುದು.

ಯೂ—ಜ್ಞಾಪಕವಿದೆ.

ಸಾ—ಈಗ ಮತ್ತೆ ದೇವತೆಗಳಿಗೆ ಪ್ರಿಯವಾದದ್ದೇ ಧರ್ಮವೆಂದು ಹೇಳುವೆಯಲ್ಲ? ದೇವತೆಗಳಿಗೆ ಸಂತೋಷವುಂಟುಮಾಡುವುದೆಂದರೂ ದೇವತೆಗಳಿಗೆ ಪ್ರಿಯವಾದದ್ದೆಂದರೂ ಒಂದೇ ತಾನೆ?

ಯೂ—ಹೌದು.

ಸಾ—ಹಾಗಾದರೆ ನಮ್ಮ ಹಿಂದಿನ ನಿರ್ಣಯವು ತಪ್ಪಿರಬೇಕು ಅಥವಾ ಅದು ಸರಿಯಾಗಿದ್ದರೆ ನಾವು ಈಗ ಹೇಳುತ್ತಿರುವುದು ತಪ್ಪು.

ಯೂ—ಹಾಗೇ ತೋರುತ್ತದೆ.

ಸಾ—ಹಾಗಾದರೆ ನಾವು ಚರ್ಚೆಯನ್ನು ಪುನಃ ಮೊದಲುಮಾಡಿ, ಧರ್ಮವೆಂದರೇನು ಎಂದು ಕೇಳಬೇಕಾಯಿತು. ನಾನು ಅದನ್ನು ಕಂಡು ಹಿಡಿಯುವವರೆಗೂ ನನ್ನ ಪ್ರಯತ್ನವನ್ನು ಬಿಡುವುದೇ ಇಲ್ಲವೆಂದುಕೊಂಡಿದ್ದೇನೆ. ಈ ಜ್ಞಾನ ಸಂಪಾದನೆಗೆ ನಾನು ಅರ್ಹನಲ್ಲವೆಂದು ಭಾವಿಸಬೇಡ. ಈ ವಿಷಯಕ್ಕೆ ಪೂರ್ಣ ಗಮನವನ್ನು ಕೊಟ್ಟು ನಿಶ್ಚಯವಾದ ಅರ್ಥವನ್ನು ನನಗೆ ತಿಳಿಸು. ಈ ವಿಷಯ ನಿನಗಲ್ಲದೆ ಮತ್ತೆ ಯಾರಿಗೆ ಗೊತ್ತಿರಬೇಕು? ಇದನ್ನು ನನಗೆ ತಿಳಿಸುವವರೆಗೆ ಪ್ರೋಟಿಯಸ್ಸನನ್ನು ಹಿಡಿದಂತೆ ನಿನ್ನನ್ನು ಬಿಡದೆ ನಿಲ್ಲಿಸಿಕೊಳ್ಳಬೇಕು. ಧರ್ಮಾಧರ್ಮಗಳ ಸ್ವರೂಪವು ನಿನಗೆ ತಿಳಿಯದೆ ಇದ್ದರೆ ಒಬ್ಬ ಕೂಲಿಯವನನ್ನು ಕೊಂದದ್ದಕ್ಕಾಗಿ ನಿನ್ನ ತಂದೆಯ ಮೇಲೆ ವ್ಯವಹಾರವನ್ನು ಎಂದಿಗಾದರೂ ತರುತ್ತಿದ್ದೆಯಾ! "ನಾನು ಮಾಡಿದ್ದೇನಾದರೂ ತಪ್ಪಾದರೆ ದೇವತೆಗಳ ಕೋಪಕ್ಕೆ ಪಾತ್ರನಾದೇನು, ಜನಗಳಲ್ಲಿ ಅಪಕೀರ್ತಿ ಬಂದೀತು" ಎಂದು ಅಂಜುತ್ತಿದ್ದೆ. ಈ ವ್ಯವಹಾರ ಹೂಡಿರುವುದನ್ನು ನೋಡಿದರೆ ಧರ್ಮ ಯಾವುದು, ಅಧರ್ಮ ಯಾವುದು ಎಂಬುದನ್ನು ನೀನು ನಿಶ್ಚಯಿಸಿಕೊಂಡೇ ಇರುವೆಯೆಂದು ವ್ಯಕ್ತವಾಗುತ್ತದೆ. ಅದನ್ನು ಗುಟ್ಟಾಗಿಡಬೇಡ, ಯೂಥಿಫ್ರೊ. ನನಗೂ ತಿಳಿಸು.

ಯೂ—ಇನ್ನು ಯಾವಾಗಲಾದರೂ ಆಗಲಿ, ಸಾಕ್ರೆಟೀಸ್. ಈಗ ನನಗೆ ಬಹಳ ಕೆಲಸವಿದೆ, ಹೋಗಬೇಕು, ಹೊತ್ತಾಯಿತು.

ಸಾ—ಇದೇನು, ಯೂಥಿಫ್ರೊ, ಹೀಗೆ ಮಾಡುವುದುಂಟೆ? ನಾನು ಧರ್ಮಾಧರ್ಮಗಳ ಸ್ವರೂಪವನ್ನು ನಿನ್ನಿಂದ ತಿಳಿದುಕೊಂಡು ಮೆಲಿಟಸ್ಸಿನ ಕೈಯಿಂದ ಪಾರಾಗಬೇಕೆಂದಿದ್ದೆ. ನನ್ನನ್ನು ನಿರಾಶನನ್ನಾಗಿ ಮಾಡಿ ಹೊರಟು ಹೋಗುವೆಯಲ್ಲ! "ದೈವ ಸಂಬಂಧವಾದ ವಿಷಯಗಳಲ್ಲಿ ನಾನು ಯೂಥಿಫ್ರೋವಿಂದ ಜ್ಞಾನವನ್ನು ಪಡೆದಿದ್ದೇನೆ. ಈಗ ನಾನು ಅಜ್ಞನಂತೆ ಮನಸ್ಸಿಗೆ ತೋರಿದ ಮಾತಾಡಿ ಮತಕ್ಕೆ ನೂತನ ಕಲ್ಪನೆಗಳನ್ನು ಸೇರಿಸುವುದಿಲ್ಲ; ಇನ್ನು ಮೇಲೆ ಉತ್ತಮ ತರದ ಜೀವನವನ್ನೇ ನಡೆಸುತ್ತೇನೆ" ಎಂದು ಮೆಲಿಟಸ್ಸಿಗೆ ಹೇಳಬೇಕೆಂದಿದ್ದೆ!

ಸಮರ್ಥನ ವಾದ

ಪಾತ್ರಗಳು: ಸಾಕ್ರೆಟೀಸ್ ಮತ್ತು ಮೆಲೆಟಸ್
ಸ್ಥಾನ: ನ್ಯಾಯಸ್ಥಾನ

ಸಾ—ಅಥೆನ್ಸಿನ ಮಹಾಜನರೇ,

ನನ್ನ ಮೇಲೆ ಆಪಾದನೆ ತಂದಿರುವವರು ಇದುವರೆಗೂ ಆಡಿದ ಮಾತುಗಳಲ್ಲಿ ನಿಮಗೆ ಎಷ್ಟುಮಟ್ಟಿಗೆ ವಿಶ್ವಾಸ ಹುಟ್ಟಿದೆಯೊ ನನಗೆ ತಿಳಿಯದು. ಅವರೇನೋ ಜನರ ಮನಸ್ಸನ್ನು ಸೆಳೆದುಕೊಳ್ಳುವಂತೆ ಬಹು ಬುದ್ಧಿವಂತಿಕೆ ಯಿಂದ ಮಾತಾಡಿದರು. ಅವರ ಮಾತು ನನ್ನನ್ನು ಕೂಡ ಮರುಳುಮಾಡಿ ನಾನು ಯಾರೆಂಬುದನ್ನೇ ಮರಸುವಂತಿತ್ತು. ಆದರೂ ಅವರು ಹೇಳಿದ್ದರಲ್ಲಿ ಎಳ್ಳಷ್ಟಾದರೂ ನಿಜವಿರಲಿಲ್ಲ. ಅವರು ಹೇಳಿದ ಸಾವಿರ ಸುಳ್ಳುಗಳಲ್ಲಿ ಒಂದು ಮಾತ್ರ ನನಗೆ ಬಹಳ ಆಶ್ಚರ್ಯವನ್ನುಂಟುಮಾಡಿತು. ನಾನು ಬಹಳ ಚತುರ ನಾದ ವಾಗ್ಮಿಯೆಂದೂ ನನ್ನ ವಾಗ್ವೈಖರಿಯಿಂದ ಮೋಸ ಹೋಗಬಾರದೆಂದೂ ಅವರು ನಿಮ್ಮನ್ನು ಎಚ್ಚರಿಸಿದರು. ನನಗೆ ವಾಕ್ಚಾತುರ್ಯವು ಏನೇನೂ ಇಲ್ಲ ವೆಂದು ನಾನು ನಿಮ್ಮೆದುರಿಗೆ ಈಗ ಮಾತಾಡುವುದರಲ್ಲಿಯೇ ವ್ಯಕ್ತವಾಗುತ್ತದೆ; ಸಂದರ್ಭ ಹೀಗಿರುವಾಗ ನನ್ನನ್ನು ಒಳ್ಳೆಯ ವಾಗ್ಮಿಯೆನ್ನುವುದು ತೀರ ನಾಚಿಕೆಗೆಟ್ಟ ನಡತೆ. ಸತ್ಯವನ್ನು ನುಡಿಯುವುದು ಚಾತುರ್ಯವೆನ್ನುವುದಾದ ರೇನೋ ನಾನು ಚತುರನೇ ಹೌದು. ಆದರೆ ನನ್ನ ಶತ್ರುಗಳು ಹೇಳುವ ಚಾತುರ್ಯ ಬೇರೆ ವಿಧವಾದದ್ದು. ನಾನು ಮೊದಲೇ ಹೇಳಿದಂತೆ ಅವರ ಮಾತಿನಲ್ಲಿ ಲೇಶ ಮಾತ್ರವೂ ನಿಜವಿಲ್ಲ. ನಾನು ನಿಮ್ಮಲ್ಲಿ ಏನನ್ನೂ ಮರೆ ಮಾಚದೆ ಸತ್ಯವಾದ ವಿಷಯವಷ್ಟನ್ನೂ ನಿಮಗೆ ತಿಳಿಸುತ್ತೇನೆ. ಅವರಂತೆ ಶಬ್ದಾಡಂಬರವುಳ್ಳ ಘನವಾದ ಭಾಷಣವನ್ನು ತಯಾರಿಸಿಕೊಂಡು ಬರುವ ಶಕ್ತಿ ನನಗಿಲ್ಲ. ನಾನು ಹೇಳಬೇಕೆಂದಿರುವುದನ್ನು ಆ ಘಳಿಗೆಯಲ್ಲಿ ನನಗೆ ತೋರಿದ ಮಾತುಗಳಲ್ಲಿ ಹೇಳಿಬಿಡುತ್ತೇನೆ; ಏಕೆಂದರೆ ನ್ಯಾಯವು ನನ್ನ ಪಕ್ಷ

ದಲ್ಲಿದೆಯೆಂಬ ನಂಬಿಕೆ ನನಗಿದೆ. ಅದಲ್ಲದೆ ನನ್ನಂಥ ವಯಸ್ಸಾದವನು ತರುಣ ರಂತೆ ಭಾಷಣಗಳನ್ನು ಸಿದ್ಧಪಡಿಸಿಕೊಂಡು ಬರುವುದು ತಕ್ಕದ್ದೂ ಅಲ್ಲ. ನಿಮ್ಮಲ್ಲಿ ನನ್ನದೊಂದು ಪ್ರಾರ್ಥನೆಯಿದೆ. ಸಾಧಾರಣವಾಗಿ ಅಂಗಡಿಬೀದಿ ಯಲ್ಲೂ ಚಿನಿವಾರರ (Money-changers) ಅಂಗಡಿಗಳ ಬಳಿಯಲ್ಲೂ ನಾನು ಜನಗಳೊಡನೆ ಮಾತಾಡುವುದನ್ನು ನಿಮ್ಮಲ್ಲಿ ಅನೇಕರು ಕೇಳಿರುವಿರಿ; ಈಗ ನಾನು ನಿಮ್ಮೆದುರಿಗೆ ನನ್ನ ನಿರಪರಾಧಿತ್ವವನ್ನು ದೃಢಪಡಿಸುವಾಗಲೂ ಅದೇ ರೀತಿಯಾಗಿ ಮಾತಾಡಿದರೆ ನೀವು ಆಶ್ಚರ್ಯಪಡಬೇಡಿ; ಮಾತಿನ ನಡುವೆ ನನ್ನನ್ನು ತಡೆಯಬೇಡಿ. ಈಗ ನನಗೆ ಎಪ್ಪತ್ತು ವರ್ಷದ ಮೇಲಾಯಿತು; ಆದರೂ ಇದುವರೆಗೆ ಒಂದು ದಿನವೂ ನಾನು ನ್ಯಾಯ ಸ್ಥಾನಕ್ಕೆ ಬಂದವನಲ್ಲ. ಇಲ್ಲಿಯ ಭಾಷಾಮರ್ಯಾದೆ ನನಗೆ ತಿಳಿಯದು. ಆದ್ದರಿಂದ ನಾನು ಪರದೇಶದವನಾಗಿ ಬೇರೆ ಭಾಷೆಯಲ್ಲಿ ಮಾತಾಡತಕ್ಕವ ನಾಗಿದ್ದು ಈ ವಿಷಯಗಳಲ್ಲಿ ಕ್ರಮ ತಪ್ಪಿದ್ದರೆ ಹೇಗೋ ಹಾಗೆ ನನ್ನನ್ನು ಕ್ಷಮಿಸಬೇಕು. ಈ ನನ್ನ ಬೇಡಿಕೆ ನ್ಯಾಯ ಸಮ್ಮತವಾದದ್ದೆಂದು ತೋರುತ್ತದೆ. ನನ್ನ ಮಾತಿನ ರೀತಿ ಸಮರ್ಪಕವಾಗಿರಲಿ ಇಲ್ಲದಿರಲಿ, ಅದನ್ನು ಬಿಟ್ಟು ನಾನು ಹೇಳುವುದು ನ್ಯಾಯವಾಗಿದೆಯೆ ಇಲ್ಲವೆ ಎಂಬುದನ್ನು ಮಾತ್ರ ಯೋಚಿಸ ಬೇಕು. ನ್ಯಾಯಸ್ಥಾನದಲ್ಲಿ ಮಾತಾಡುವವನು ಸತ್ಯವನ್ನು ನುಡಿಯಬೇಕು; ತೀರ್ಪು ಕೊಡುವವನು ಧರ್ಮದೃಷ್ಟಿಯಿಂದ ತೀರ್ಪು ಕೊಡಬೇಕು; ಇತರ ವಿಷಯಗಳು ಅಷ್ಟು ಮುಖ್ಯವಲ್ಲ.

ಮೊದಲು ನನ್ನ ಮೇಲಿನ ಹಳೆಯ ಅಪವಾದಗಳಿಗೆ ಉತ್ತರ ಕೊಡ ಬೇಕು. ಬಹಳ ದಿನಗಳಿಂದಲೂ ನನ್ನ ಮೇಲೆ ಜನಗಳು ಕೆಲವು ತಪ್ಪುಗಳನ್ನು ಹೊರಿಸುತ್ತ ಬಂದಿದ್ದಾರೆ; ಈಗ ನನ್ನನ್ನು ನ್ಯಾಯಸ್ಥಾನಕ್ಕೆ ಎಳೆದಿರುವವರು ನನ್ನಲ್ಲಿ ಕೆಲವು ಹೊಸ ದೋಷಗಳನ್ನು ಕಂಡು ಹಿಡಿದಿದ್ದಾರೆ. ಅನೇಕ ವರ್ಷ ಗಳಿಂದ ನನಗೆ ವಿರೋಧವಾಗಿ ಜನಗಳು ಹುಟ್ಟಿಸಿರುವ ಈ ಸುದ್ದಿಗಳು ಅವರಿಂದ ಕಲ್ಪಿತವಾದುವು. ಅವುಗಳಿಗೆ ಯಾವ ಆಧಾರವೂ ಇಲ್ಲ. ಆದರೂ ಈ ಜನರನ್ನು ಕಂಡರೆ ನಾನು ಹೆದರಬೇಕಾಗಿದೆ. ಈಗ ನನ್ನನ್ನು ದೂರುತ್ತಿ ರುವ ಅನಿಟಸ್ ಮತ್ತು ಅವನ ಸ್ನೇಹಿತರಿಗಿಂತಲೂ ಈ ಹಿಂದಿನವರ ಭಯ ನನಗೆ ಹೆಚ್ಚು. ಏಕೆಂದರೆ ನೀವೆಲ್ಲರೂ ಇನ್ನೂ ಚಿಕ್ಕವರಾಗಿದ್ದಾಗಲೇ ಅವರು

ನಿಮ್ಮ ಮನಸ್ಸನ್ನು ವಶಪಡಿಸಿಕೊಂಡು ನಿಮ್ಮೆದುರಿಗೆ ನನ್ನನ್ನು ದೂಷಿಸುತ್ತ ಬಂದಿದ್ದಾರೆ. "ಸಾಕ್ರೆಟೀಸ್ ಎಂಬ ಜ್ಞಾನಿಯೊಬ್ಬನು ಭೂಮಿ ಆಕಾಶಗಳ ಸ್ವರೂಪವನ್ನು ಪರೀಕ್ಷಿಸಿ ಅವುಗಳ ಮರ್ಮವನ್ನು ಭೇದಿಸಲು ಯತ್ನಿಸುತ್ತಿದ್ದಾನೆ. ಅವನು ತಪ್ಪು ಸರಿಯಾಗಿ ತೋರುವಂತೆ ಮಾಡಬಲ್ಲನು" ಎಂದು ಅವರು ಅನೇಕ ವೇಳೆ ನಿಮಗೆ ಹೇಳಿದ್ದಾರೆ. ಇವರ ಮಾತನ್ನು ಕೇಳುವವರು ನನ್ನಂತೆ ಜ್ಞಾನಾರ್ಜನೆಗಾಗಿ ಪ್ರಯತ್ನಿಸುವವರಿಗೆ ದೇವರಲ್ಲಿ ನಂಬಿಕೆಯಿಲ್ಲವೆಂದು ಭಾವಿಸುವರು. ಆದ್ದರಿಂದ ನನಗೆ ಈ ಜನಗಳಿಂದ ಬಹಳ ಅಪಾಯವುಂಟು. ನೀವು ಯಾರು ಏನು ಹೇಳಿದರೂ ನಂಬುವಷ್ಟು ಚಿಕ್ಕವಯಸ್ಸಿನವರಾಗಿದ್ದಾಗಿನಿಂದಲೂ ಅವರು ನನ್ನನ್ನು ದೂರುತ್ತಿದ್ದಾರೆ; ಅದಲ್ಲದೆ ಹಾಗೆ ಅವರು ನನ್ನನ್ನು ಹಳಿಯುತ್ತಿದ್ದಾಗ ನನ್ನ ಕಡೆಯುವರಾಗಿ ಅವರಿಗೆ ಪ್ರತ್ಯುಕ್ತಿಯನ್ನು ಹೇಳುವವರು ಯಾರೂ ಇರಲಿಲ್ಲ. ಇದಕ್ಕಿಂತಲೂ ವಿಚಿತ್ರವಾದ ಸಂಗತಿಯೇನೆಂದರೆ, ಹಾಸ್ಯಕವಿಯೊಬ್ಬನನ್ನು ಬಿಟ್ಟರೆ ಉಳಿದ ದೋಷಾರೋಪಕರ ಹೆಸರು ಸಹ ನನಗೆ ತಿಳಿಯದು. ನನ್ನ ಮೇಲಿನ ಹೊಟ್ಟೆಯ ಕಿಚ್ಚಿನಿಂದಲೋ ಅಥವಾ ನಿಜವಾಗಿಯೂ ನಾನು ದೋಷಿಯೆಂಬ ನಂಬಿಕೆಯಿಂದಲೋ ನಿಮ್ಮ ಮನಸ್ಸಿನಲ್ಲಿ ನನಗೆ ವಿರೋಧವಾದ ಪರಿಣಾಮವನ್ನುಂಟುಮಾಡಲು ಯತ್ನಿಸುತ್ತಿರುವ ಈ ಜನರಿಂದ ತಪ್ಪಿಸಿಕೊಳ್ಳುವುದು ಬಹಳ ಪ್ರಯಾಸ. ಅವರು ಯಾರೆನ್ನುವುದೂ ತಿಳಿಯದೆ ಇರುವುದರಿಂದ ಅವರನ್ನು ನ್ಯಾಯಸ್ಥಾನಕ್ಕೆ ಕರೆಯಿಸಿ ಪ್ರಶ್ನೆಹಾಕಿ ಚರ್ಚೆ ಮಾಡುವಂತಿಲ್ಲ. ಉತ್ತರ ಕೊಡುವವರು ಯಾರೂ ಇಲ್ಲದಿದ್ದರೂ ಈಗ ನಾನು ಪ್ರಶ್ನೆಹಾಕಬೇಕಾಗಿದೆ; ಗಾಳಿಯೊಡನೆ ಯುದ್ಧ ಮಾಡಬೇಕಾಗಿದೆ. ನಾನು ನಿಮ್ಮಲ್ಲಿ ಮೊದಲು ಅರಿಕೆ ಮಾಡಬೇಕಾದದ್ದು ಈ ವಿಷಯ. ನನ್ನ ಮೇಲೆ ದೋಷಾರೋಪಣೆ ಮಾಡುವವರು ಎರಡು ಪಂಗಡದವರಿದ್ದಾರೆ—ಮೆಲಿಟಸ್ ಮತ್ತು ಅವನ ಸ್ನೇಹಿತರು ಮತ್ತು ಹಿಂದಿನಿಂದಲೂ ನನ್ನನ್ನು ದೂಷಿಸುತ್ತ ಬಂದಿರುವ ನನ್ನ ಹಳೆಯ ಶತ್ರುಗಳು. ಈ ಎರಡನೆಯ ವರ್ಗದವರೇ ಮೊದಲು ನಿಮ್ಮಲ್ಲಿ ಅಪಾದನೆಯನ್ನು ತಂದು ಬಿಡುವಿಲ್ಲದೆಯೇ ನನ್ನನ್ನು ದೂರುತ್ತಿರುವವರು. ಆದ್ದರಿಂದ ಮೊದಲು ನಾನು ಅವರಿಗೆ ಉತ್ತರ ಕೊಡುತ್ತೇನೆ.

ನೀವು ನನ್ನ ವಿಷಯದಲ್ಲಿ ಬಹು ದಿನಗಳಿಂದಲೂ ಮಾಡಿಕೊಂಡಿರುವ ಪೂರ್ವನಿರ್ಣಯಗಳನ್ನು ಈಗ ನನಗಿರುವ ಅಲ್ಪವಾದ ಅವಧಿಯಲ್ಲಿ ಹೋಗಲಾಡಿಸಿ ನನ್ನ ನಿರಪರಾಧಿತ್ವವನ್ನು ಸಾಧಿಸುವುದು ಬಹು ಕಷ್ಟದ ಕೆಲಸವೆಂದು ಬಲ್ಲೆನು. ಆದರೂ ಶಾಸನದ ಪ್ರಕಾರ ನಾನು ನನ್ನ ಪರವಾದ ಹೇಳಿಕೆಯನ್ನು ಕೊಡಬೇಕಾದದ್ದರಿಂದ ಕೈಯಲ್ಲಾದ ಪ್ರಯತ್ನವನ್ನು ಮಾಡುತ್ತೇನೆ. ಫಲಿತಾಂಶ ದೇವರನ್ನು ಕೂಡಿದ್ದು. ನಾನು ನಿರ್ದೋಷಿಯೆಂದು ಸ್ಥಿರವಾಗುವುದರಿಂದ ನನಗೂ ನಿಮಗೂ ಒಳ್ಳೆಯದಾಗುವುದಾದರೆ, ನನಗೆ ಜಯವಾಗಲಿ.

ನನ್ನ ಮೇಲೆ ಬಹಳ ಕಾಲದಿಂದಲೂ ಅಪವಾದವಿದ್ದದ್ದರಿಂದ ನನ್ನನ್ನು ಈಗ ನ್ಯಾಯಸ್ಥಾನಕ್ಕೆ ಎಳೆಯುವುದಕ್ಕೆ ಮೆಲೆಟಸ್ಸಿಗೆ ಉತ್ತೇಜನ ದೊರೆಯಿತು. ನನ್ನ ಮೇಲೆ ಹೀಗೆ ಜನರು ಕ್ಷುದ್ರವನ್ನಾಡಲು ಕಾರಣವೇನೆಂದು ಈಗ ವಿಚಾರಿಸಬೇಕು. ಅವರನ್ನು ಈ ಜಗಳದಲ್ಲಿ ವಾದಿಗಳೆಂದು ಭಾವಿಸೋಣ; ಅವರ ವಾಙ್ಮೂಲವೇನು? "ಸಾಕ್ರೆಟೀಸನು ಕೇಡಿಗ; ಎಲ್ಲರಂತೆ ಸುಮ್ಮನಿರದೆ ಭೂಮಿ ಆಕಾಶಗಳಲ್ಲಿ ಏನು ರಹಸ್ಯವಿರುವುದೋ ಎಂದು ತಡಕುತ್ತಿರುವನು; ದುರ್ವಾದವು ಉತ್ತಮವಾದವೆಂದು ತೋರುವಂತೆ ತಾನು ಮಾಡುವುದಲ್ಲದೆ ಇತರರಿಗೂ ಈ ದುರ್ವಿದ್ಯೆಯನ್ನು ಕಲಿಸುತ್ತಾನೆ"—ಇದೇ ಅವರ ಹೇಳಿಕೆ. ಅರಿಸ್ಟೋಫೆನೀಸನ ಪ್ರಹಸನವೊಂದರಲ್ಲಿ ಸಾಕ್ರೆಟೀಸ್ ಎಂದು ಹೆಸರಿಟ್ಟುಕೊಂಡು ಬರುವ ವ್ಯಕ್ತಿಯೊಬ್ಬನು ತಾನು ಅಂತರಿಕ್ಷದಲ್ಲಿ ಸಂಚರಿಸುವುದಾಗಿ ಹೇಳಿದ್ದನ್ನೂ ಇನ್ನೂ ಏನೇನೋ ನನಗೆ ತಿಳಿಯದ ಅಸಂಬದ್ಧ ಪ್ರಲಾಪಮಾಡಿದ್ದನ್ನೂ ನೀವೂ ಸಹ ಕೇಳಿರುವಿರಿ. ಭೌತಶಾಸ್ತ್ರದಲ್ಲಿ ಜ್ಞಾನವನ್ನು ಪಡೆಯುವುದು ಅವಮಾನಕರವೆಂದು ನನ್ನ ಅಭಿಪ್ರಾಯವಲ್ಲ; ಆ ಶಾಸ್ತ್ರವನ್ನು ಅಲ್ಲಗಳೆದೆನೆಂಬ ಅಪವಾದವನ್ನೇನಾದರೂ ಮೆಲೆಟಸ್ ನನ್ನ ಮೇಲೆ ತಂದರೆ ನನಗೆ ಬಹಳ ಪರಿತಾಪವುಂಟಾಗುವುದು. ಆದರೆ ನಾನು ಭೌತಶಾಸ್ತ್ರದ ಅಭ್ಯಾಸಕ್ಕೆ ಕೈಹಾಕಿದವನೇ ಅಲ್ಲ. ನನ್ನ ಮಾತು ಸತ್ಯವೆಂದು ಇಲ್ಲಿರುವವರನೇಕರು ಬಲ್ಲರು. ಅವರನ್ನು ನಾನು ಸಾಕ್ಷಿಯಾಗಿ ಕೋರುತ್ತೇನೆ. ನನ್ನ ಮಾತುಗಳನ್ನು ಅನೇಕ ವೇಳೆ ಕೇಳಿರುವವರು ನೀವು ಇಷ್ಟು ಜನರಿದ್ದೀರಲ್ಲ, ಈ ಸಭಿಕರಿಗೆ ಹೇಳಿ. ಭೌತಶಾಸ್ತ್ರದ ವಿಷಯವಾಗಿ ನಾನು ಯಾವಾಗಲಾದರೂ ನಾಲ್ಕು ಮಾತುಗಳನ್ನಾದರೂ ಆಡಿರುವೆನೆ? . . . . . ಅವರ ಉತ್ತರವನ್ನು

ಕೇಳಿದಿರಾ ? ಈ ದೂರು ಎಷ್ಟು ನಿಜವೋ ಉಳಿದುವೂ ಹಾಗೆಯೇ ಎಂದು ನೀವು ಊಹಿಸಿಕೊಳ್ಳಬಹುದು.

ನಾನು ದ್ರವ್ಯರೂಪವಾದ ಪ್ರತಿಫಲವನ್ನು ತೆಗೆದುಕೊಂಡು ಜನಗಳಿಗೆ ಬೋಧಿಸುತ್ತೇನೆಂದೂ ಈ ಮೂಲಕ ಬಹಳ ಹಣವನ್ನು ಗಳಿಸುತ್ತೇನೆಂದೂ ನಿಮಗೆ ಯಾರಾದರೂ ಹೇಳಿರಬಹುದು. ಅದು ನಿಜವಲ್ಲ. ಲಿಯಾಂಟಿನಿಯ ಗಾರ್ಗಿಯಾಸ್, ಕ್ರಿಯಾನಿನ ಪ್ರಾಡಿಕಸ್, ಈಲಿಸ್ಸಿನ ಹಿಪ್ಪಿಯಾಸ್-ಇವರ ಶಕ್ತಿಯನ್ನು ನೋಡಿ. ನಮ್ಮ ಯುವಕರು ಯಾವ ವೆಚ್ಚವೂ ಇಲ್ಲದೆ ತಮ್ಮ ಪಟ್ಟಣಿಗರ ಸಹವಾಸದಲ್ಲಿರಬಹುದು ; ಆದರೂ ಅವರು ವಿದೇಶೀಯರಾದ ಈ ಜನರ ಸಹವಾಸವನ್ನು ಅಪೇಕ್ಷಿಸಿ, ಅವರಿಗೆ ವಿಶೇಷ ಹಣವನ್ನು ಪ್ರತಿಫಲವಾಗಿ ಕೊಡುವುದಲ್ಲದೆ " ತಮ್ಮಿಂದ ಬಹಳ ಉಪಕಾರವಾಯಿತು" ಎಂದು ಕೃತಜ್ಞತೆಯನ್ನು ಬೇರೆ ಸೂಚಿಸುತ್ತಾರೆ. ಈ ಬೋಧಕರಿಗಿರುವ ಶಕ್ತಿ ನನಗೂ ಇದ್ದಿದ್ದರೆ ಚೆನ್ನಾಗಿತ್ತು. ಈಗ ಪೇರೋಸ್ ಪಟ್ಟಣದಿಂದ ಇಲ್ಲಿಗೆ ಒಬ್ಬ ವಿದ್ವಾಂಸನು ಬಂದಿರುವನಂತೆ. ಅವನ ವಿಷಯ ನನಗೆ ತಿಳಿದದ್ದು ಹೀಗೆ: ಹಿಪೋನಿಕಸ್ಸನ ಮಗ ಕಾಲಿಯಾಸ್ ಸೋಫಿಸ್ಟರಿಗೆ ಈ ಊರಿನಲ್ಲಿ ಇತರರೆಲ್ಲರಿಗಿಂತ ಹೆಚ್ಚು ಹಣವನ್ನು ತೆತ್ತಿರುವನು. ನಾನು ಮೊನ್ನೆ ಅವನನ್ನು ಕಂಡಾಗ " ನಿನಗೆ ಇಬ್ಬರು ಮಕ್ಕಳು ಇದ್ದಾರಲ್ಲ, ಅವರು ಎರಡು ಕುದುರೆಯ ಮರಿಗಳೋ ಕರುಗಳೋ ಆಗಿದ್ದರೆ ಅವುಗಳನ್ನು ಸರಿಯಾಗಿ ಬೆಳಸಿ ತಮ್ಮ ಜಾತಿಗೆ ಯೋಗ್ಯವಾದ ಸದ್ಗುಣಗಳು ಅವುಗಳಲ್ಲಿ ಅಭಿವೃದ್ಧಿ ಹೊಂದುವಂತೆ ನೋಡಿಕೊಳ್ಳಲು ಯಾವನಾದರೂ ಅಶ್ವಶಿಕ್ಷಕನನ್ನೋ ಆರಂಬಗಾರನನ್ನೋ ನಿಯಮಿಸಿಕೊಳ್ಳಬೇಕಾಗಿತ್ತು. ಮನುಷ್ಯವರ್ಗಕ್ಕೆ ಸೇರಿದ ನಿನ್ನ ಮಕ್ಕಳನ್ನು ಸರಿಯಾದ ರೀತಿಯಲ್ಲಿ ಬೆಳಸುವುದಕ್ಕೆ ಶಿಕ್ಷಕರು ಯಾರನ್ನು ನಿಯಮಿಸಬೇಕೆಂದಿದ್ದೀಯೆ? ಮನುಷ್ಯಯೋಗ್ಯವಾದ ಮತ್ತು ಪೌರಯೋಗ್ಯವಾದ ಸದ್ಗುಣಗಳನ್ನು ಚೆನ್ನಾಗಿ ಬಲ್ಲವರು ಯಾರಿದ್ದಾರೆ? ನೀನು ಮಕ್ಕಳೊಂದಿಗನಾದದ್ದರಿಂದ ಈ ವಿಷಯದಲ್ಲಿ ಯೋಚನೆಮಾಡಿಯೇ ಇರಬೇಕಲ್ಲವೆ ? ಅಂಥವರು ಯಾರಾದರೂ ಇಲ್ಲಿದ್ದಾರೆಯೆ ? " ಎಂದು ಕೇಳಲು, ಅವನು " ಇಲ್ಲದೆ ಏನು " ಎಂದನು. ನಾನು " ಯಾರು ? ಅವರ ಸ್ಥಳ ಯಾವುದು ? ಶಿಕ್ಷಣಕ್ಕೆ ಅವರು ಎಷ್ಟು ಹಣವನ್ನು ಕೇಳಬಹುದು ? " ಎಂದೆನು. ಅದಕ್ಕೆ ಅವನು " ಆತನ ಹೆಸರು ಎವೆನಸ್ ;

ಪೇರೋಸ್ ಪಟ್ಟಣದವನು. ಆತನಿಂದ ಶಿಕ್ಷಣ ಪಡೆಯಬೇಕಾದರೆ ಐದು ಮೈನೆಗಳನ್ನು ಕೊಡಬೇಕು" ಎಂದು ಉತ್ತರ ಕೊಟ್ಟನು. ದೊಡ್ಡ ಜ್ಞಾನಿಯಾಗಿದ್ದು ಹೆಚ್ಚು ಹಣವನ್ನಪೇಕ್ಷಿಸದೆ ಹೀಗೆ ಜನಗಳಿಗೆ ಬೋಧಿಸುವವನು ನಿಜವಾಗಿಯೂ ಮಹಾಪುರುಷನೇ ಎಂದು ಮನಸ್ಸಿನಲ್ಲಿಯೇ ನಾನು ಆತನನ್ನು ಅಭಿನಂದಿಸಿದೆನು. ಇಂತಹ ಶಕ್ತಿ ನನಗೂ ಇದ್ದಿದ್ದರೆ ನಾನು ಹೆಮ್ಮೆಯಿಂದ ಮೆರೆಯುತ್ತಿದ್ದೆನು. ಆದರೆ ನನಗೆ ಅಷ್ಟು ತಿಳಿವಳಿಕೆಯಿಲ್ಲ.

ನಿಮ್ಮಲ್ಲಿ ಯಾರಾದರೂ "ಅದೆಲ್ಲಾ ಸರಿ ಸಾಕ್ರೆಟೀಸ್, ನಿನ್ನ ವಿಷಯವಾಗಿ ಹಬ್ಬಿರುವ ಅಪವಾದಕ್ಕೆ ಕಾರಣವೇನು ? ನೀನು ಎಲ್ಲರಂತೆಯೇ ನಡೆದುಕೊಂಡು, ಎಲ್ಲೂ ಇಲ್ಲದ ಹವ್ಯಾಸಗಳನ್ನು ಹತ್ತಿಸಿಕೊಳ್ಳದೆ ಇದ್ದಿದ್ದರೆ ಎಲ್ಲರ ಬಾಯಲ್ಲೂ ನಿನ್ನ ಮಾತು ಏಕೆ ಇರುತ್ತಿತ್ತು, ಹೇಳು. ನಿನ್ನ ಕಥೆಯನ್ನೆಲ್ಲಾ ಪೂರ್ತಿ ಕೇಳಿ ತಿಳಿಯದೆ ನಾವು ತೀರ್ಪುಕೊಡಬಾರದು" ಎನ್ನಬಹುದು. ಈ ಪ್ರಶ್ನೆ ಬರುವುದು ಸಹಜ. ಜನರಿಗೆ ನನ್ನಲ್ಲಿ ವಿರೋಧವುಂಟಾಗಿ ನನಗೆ ಈ ಅಪಕೀರ್ತಿ ಬಂದಿರುವುದಕ್ಕೆ ಕಾರಣವೇನೆಂಬುದನ್ನು ನಿಮಗೆ ತಿಳಿಸುತ್ತೇನೆ. ಕೆಲವರಿಗೆ ನಾನು ಆಡುವುದು ಕುಚೋದ್ಯದ ಮಾತುಗಳೆಂದು ತೋರಬಹುದು ; ಆದರೆ ನಾನೇನೋ ಯಾವುದನ್ನೂ ಮರೆಮಾಜದೆ ವಾಸ್ತವವಾದ ವಿಷಯವನ್ನೂ ತಿಳಿಸುತ್ತೇನೆ.

ನನಗೆ ಪ್ರಸಿದ್ಧಿ ಬರುವುದಕ್ಕೆ ನನ್ನಲ್ಲಿರುವ ಒಂದು ವಿಧವಾದ ಜ್ಞಾನವೇ ಕಾರಣವೆಂದು ತೋರುತ್ತದೆ. ಅದು ಮನುಷ್ಯಮಾತ್ರನಾದವನು ಸಂಪಾದಿಸಬಹುದಾದ ಜ್ಞಾನ ; ನಾನು ಸಂಪಾದಿಸಿರುವುದು ಅಷ್ಟು ಮಾತ್ರ. ಮೇಲೆ ಹೇಳಿದ ಜನರಾದರೋ ಯಾವುದೋ ಒಂದು ಅಮಾನುಷವಾದ ಜ್ಞಾನವನ್ನು ಪಡೆದಿದ್ದಾರೆ ; ಅದು ಎಂಥಾದ್ದೆನ್ನುವುದು ನನಗೆ ತಿಳಿಯದೆ ಇರುವುದರಿಂದ ನಾನು ಅದನ್ನು ವರ್ಣಿಸಲಾರೆ. ಆ ವಿದ್ಯೆಯನ್ನು ನಾನು ಬಲ್ಲೆನೆಂದು ಯಾರಾದರೂ ಹೇಳಿದರೆ ಅವರು ನನಗೆ ಅಪಕೀರ್ತಿ ತರಬೇಕೆಂಬ ಉದ್ದೇಶದಿಂದ ಸುಳ್ಳಾಡುವರು. ಅಥೆನ್ಸಿನ ಜನಗಳೇ, ಈಗ ನಾನು ಹೇಳುವುದು ಜಂಭದ ಮಾತಿನಂತಾಗಲಿ ನಂಬಲಾರದ ಮಾತಿನಂತಾಗಲಿ ತೋರಿದರೂ ನೀವು ನನಗೆ ಅಡಚಣೆಮಾಡದೆ ತಾಳ್ಮೆಯಿಂದ ಕೇಳಬೇಕೆಂದು ಬೇಡುತ್ತೇನೆ. ಏಕೆಂದರೆ ಈಗ ನನ್ನ ಬಾಯಿಂದ ಹೊರಡುವುದು ನನ್ನ ಮಾತಲ್ಲ ; ನಮ್ಮೆಲ್ಲರಿಗಿಂತಲೂ

ಗಣ್ಯರಾದವರ ಮಾತು. ನನ್ನಲ್ಲಿ ಜ್ಞಾನ—ಅದಕ್ಕೆ ಆ ಹೆಸರು ಸಲ್ಲಬಹು ದಾದರೆ—ಇದೆಯೆಂದು ತೋರಿಸುವುದಕ್ಕೂ ಅದರ ಸ್ವಭಾವವನ್ನು ವಿವರಿಸು ವುದಕ್ಕೂ ನಾನು ಡೆಲ್ಫಿಯ ದೇವರನ್ನೇ ಸಹಾಯಕ್ಕೆ ಕೋರುತ್ತೇನೆ. ನಿಮಗೆ ಕೇರಿಫನ್ನನ ಗುರುತಿದ್ದಿರಬೇಕು; ಅವನೂ ನಾನೂ ಚಿಕ್ಕಂದಿನಿಂದಲೂ ಜೊತೆಗಾರರು; ಅವನು ನಿಮ್ಮ ಜೊತೆಗಾರನೂ ಆಗಿ ಮೊನ್ನೆ ನಿಮ್ಮೊಡನೆ ದೇಶಾಂತರವಾಸದಲ್ಲಿದ್ದು ನಿಮ್ಮೊಡನೆಯೇ ನಗರಕ್ಕೆ ಮರಳಿ ಬಂದನು. ಅವನು ಯಾವ ಕೆಲಸದಲ್ಲಿಯೇ ಆಗಲಿ ಎಷ್ಟು ದುಡುಕಿನ ಸ್ವಭಾವದವನೆಂಬುದನ್ನು ನೀವು ಬಲ್ಲಿರಿ. ಒಂದು ದಿನ ಅವನು ಡೆಲ್ಫಿಗೆ ಹೋಗಿ ಧೈರ್ಯವಾಗಿ ಆ ದೇವ ವಾಣಿಯನ್ನು—ನಾನು ಹೇಳುವುದನ್ನು ಅಡ್ಡಿಮಾಡದೆ ಕೇಳಬೇಕೆಂದು ಮತ್ತೆ ಬೇಡುತ್ತೇನೆ—"ಸಾಕ್ರೆಟೀಸನಿಗಿಂತ ಹೆಚ್ಚು ಜ್ಞಾನಿಗಳು ಯಾರಾದರೂ ಇರುವರೇ ?" ಎಂದು ಕೇಳಿದನು. ಪಿಥಿಯದ ಭವಿಷ್ಯದರ್ಶಿನಿ(prophetess) "ಇಲ್ಲ" ಎಂದು ಉತ್ತರಕೊಟ್ಟಳು. ಈಗ ಕೇರಿಫನ್ನನೇನೋ ಸತ್ತು ಹೋಗಿದ್ದಾನೆ. ಆದರೆ ಈಗ ನ್ಯಾಯಸ್ಥಾನದಲ್ಲಿಯೇ ಇರುವ ಅವನ ಸಹೋದರನು ನನ್ನ ಮಾತನ್ನು ದೃಢಪಡಿಸಬಲ್ಲನು.

ನನ್ನ ಮೇಲೆ ಅಪವಾದ ಬಂದದ್ದು ಹೇಗೆಂಬುದನ್ನು ನಿಮಗೆ ವಿಶದಪಡಿಸ ಬೇಕಾದ್ದರಿಂದ ನಾನು ಈ ವಿಷಯಗಳನ್ನೆಲ್ಲಾ ತಿಳಿಸಬೇಕಾಗಿ ಬಂತು. ಡೆಲ್ಫಿ ಯಲ್ಲಿ ಬಂದ ಉತ್ತರದ ವಿಷಯವನ್ನು ಕೇಳಿದಾಗ ನಾನು 'ಇದೇನು, ಹೆಚ್ಚಾ ಗಲಿ ಕಡಿಮೆಯಾಗಲಿ ಜ್ಞಾನವೆನ್ನುವುದು ನನ್ನಲ್ಲಿಲ್ಲವೇ ಇಲ್ಲ; ಆದರೆ ದೇವರ ಮಾತನ್ನು ಕೇಳಿದರೆ ನನ್ನಂತಹ ಜ್ಞಾನಿ ಇನ್ನೊಬ್ಬನೂ ಇಲ್ಲವೆಂದಾಗುತ್ತದೆ. ದೇವವಾಕ್ಯವು ಎಂದಿಗೂ ಸಟೆಯಾಗಿರಲಾರದು. ಇದರಲ್ಲಿ ಗೂಢಾರ್ಥವೇನಿರ ಬಹುದು? ಈ ಒಗಟೆಯನ್ನು ಒಡೆಯುವುದು ಹೇಗೆ? ಎಂದು ಯೋಚಿಸಿದೆನು. ಬಹಳ ಕಾಲ ಆ ಮಾತಿನ ಅರ್ಥವನ್ನು ಊಹಿಸಲಾರದೆ ಹೋದೆನು. ಅನಂತರ ನನಗೆ ಇಷ್ಟವಿಲ್ಲದಿದ್ದರೂ ಈ ವಿಷಯವನ್ನು ಪರೀಕ್ಷಿಸಿನೋಡಬೇಕಾಗಿ ಬಂತು. ಬಹಳ ಕಾಲ ಯೋಚಿಸಿದ ಮೇಲೆ ಆ ಒಗಟೆಯನ್ನು ಒಡೆಯುವುದಕ್ಕೆ ಒಂದು ಉಪಾಯ ಹೊಳೆಯಿತು. ನನಗಿಂತಲೂ ಜ್ಞಾನಿಗಳಾದವರು ಯಾರಾದರೂ ಒಬ್ಬರು ಸಿಕ್ಕಿದರೆ ಸಾಕು. ನಾನು ಡೆಲ್ಫಿಗೆ ಹೋಗಿ 'ಅಗೋ, ನನಗಿಂತ ಜ್ಞಾನಿಯಾದವನು ಒಬ್ಬನಿದ್ದಾನೆ. ಆದರೂ ದೇವವಾಣಿ ನಾನೇ ಎಲ್ಲರಿ

ಗಿಂತಲೂ ಜ್ಞಾನಿಯೆಂದು ನುಡಿಯಿತಲ್ಲ ಎಂದು ಆಕ್ಷೇಪಿಸಬಹುದು. ಹೀಗೆಂದುಕೊಂಡು ಮಹಾವಿದ್ವಾಂಸನೆಂದು ಹೆಸರುಗೊಂಡಿದ್ದ ಒಬ್ಬ-ಆತನ ಹೆಸರನ್ನು ನಾನು ಹೇಳುವುದಿಲ್ಲ, ಅವನು ರಾಜಕೀಯ ಕಾರ್ಯಗಳಲ್ಲಿ ತೊಡ ಗಿರುವವನು-ರಾಜ್ಯಶಾಸ್ತ್ರಜ್ಞ (politician)ನ ಬಳಿಗೆ ಹೋಗಿ ಆತನೊಡನೆ ಸಂಭಾಷಣೆಗೆ ಮೊದಲು ಮಾಡಿದೆನು. ಜನರೇನೋ ಆತನು ಜ್ಞಾನಿಯೆಂದೇ ತಿಳಿದಿರುವರು. ಆತನೂ ತನ್ನ ವಿಷಯದಲ್ಲಿ ಅದೇ ಅಭಿಮಾನವನ್ನು ಇನ್ನೂ ಹೆಚ್ಚಾಗಿ ಇಟ್ಟುಕೊಂಡಿದ್ದಾನೆ. ಆದರೆ ನಾನು ಸ್ವಲ್ಪ ಹೊತ್ತು ಆತನೊಡನೆ ಮಾತಾಡುವುದರೊಳಗೆ ಆತನಲ್ಲಿ ನಿಜವಾದ ಜ್ಞಾನವೇನೂ ಇಲ್ಲವೆಂದು ತೋರಿತು. ಅನಂತರ ನಾನು ಆತನಿಗೆ "ನೀನು ಜ್ಞಾನಿಯೆಂದು ಭಾವಿಸಿಕೊಂಡಿದ್ದೀಯೆ. ಆದರೆ ನಿಜವಾಗಿಯೂ ಜ್ಞಾನಿಯಲ್ಲ" ಎಂದು ಹೇಳಹೋಗಲು ಅವನಿಗೆ ನನ್ನಮೇಲೆ ದ್ವೇಷವುಂಟಾಯಿತು. ಜೊತೆಗೆ ಅಲ್ಲಿ ಕುಳಿತಿದ್ದ ಅವನ ಸ್ನೇಹಿತರೆಲ್ಲರೊಡನೆಯೂ ನಾನು ದ್ವೇಷ ಕಟ್ಟಿಕೊಂಡಂತಾಯಿತು. ಆದ್ದರಿಂದ ನಾನು "ಸತ್ಯವಾದದ್ದೂ ಸುಂದರವಾದದ್ದೂ ನನಗೂ ಏನೂ ತಿಳಿಯದು, ಇವನಿಗೂ ತಿಳಿಯದು. ಆದರೆ ನಾನು ಇವನಿಗಿಂತ ಒಂದು ವಿಷಯದಲ್ಲಿ ಉತ್ತಮವೆನ್ನಬಹುದು. ಇವನಿಗೆ ಏನೂ ತಿಳಿವಳಿಕೆಯಿಲ್ಲದಿದ್ದರೂ ತಾನು ಜ್ಞಾನಿಯೆಂದು ಭ್ರಮೆಗೊಂಡಿರುವನು. ನನಗೆ ತಿಳಿವಳಿಕೆಯಿಲ್ಲ. ಆದರೆ ತಿಳಿವಳಿಕೆಯಿದೆಯೆಂಬ ಭ್ರಮೆಯೂ ಇಲ್ಲ' ಎಂದುಕೊಂಡು ಅಲ್ಲಿಂದ ಹೊರಟೆನು. ಅನಂತರ ಆತನಿಗಿಂತಲೂ ದೊಡ್ಡ ವಿದ್ವಾಂಸನೆಂದು ಹೆಸರು ಪಡೆದಿದ್ದ ಮತ್ತೊಬ್ಬನ ಬಳಿಗೆ ಹೋಗಲು ಅಲ್ಲಿಯೂ ಇದೇ ಕಥೆಯಾಯಿತು. ಆತನೊಡನೆಯೂ ಅಲ್ಲಿದ್ದ ಇತರರೊಡನೆಯೂ ಮನಸ್ತಾಪವನ್ನು ಕಟ್ಟಿಕೊಳ್ಳಬೇಕಾಯಿತು.

ಹೀಗೆಯೇ ಒಬ್ಬರಾದ ಮೇಲೆ ಮತ್ತೊಬ್ಬರ ಬಳಿಗೆ ಹೋದೆನು. ಇವರಲ್ಲಿಯೂ ಶತ್ರುತ್ವವನ್ನು ಬೆಳಸುತ್ತಿದ್ದೆನೆಂದು ನನಗೆ ಗೊತ್ತಾಗದೆ ಇರಲಿಲ್ಲ; ಹಾಗಾದದ್ದಕ್ಕೆ ನನ್ನ ಮನಸ್ಸಿನಲ್ಲಿ ಶಂಕೆಯೂ ವಿಷಾದವೂ ಉಂಟಾದುವು. ಆದರೂ ದೇವರ ಆಜ್ಞೆಯನ್ನು ಉಲ್ಲಂಘಿಸಬಾರದೆಂದು ನಾನು ಆ ಕೆಲಸದಿಂದ ನಿವೃತ್ತನಾಗಲಿಲ್ಲ. "ಜ್ಞಾನಿಗಳೆಂದು ತೋರುವ ಎಲ್ಲರೊಡನೆಯೂ ಸಂಭಾಷಣೆ ಮಾಡಲೇ ಬೇಕು, ದೇವವಾಣಿಯ ಅರ್ಥವೇನೆಂಬುದನ್ನು ತಿಳಿಯಲೇ

ಬೇಕು" ಎಂದು ನಿಶ್ಚಯ ಮಾಡಿಕೊಂಡೆನು. ಅಥೆನ್ಸಿನ ಜನರೇ, ಸಿರಿಯಸ್ಸಿನ ಆಣೆ, ನಾನು ನಿಮ್ಮೊಂದಿಗೆ ಸತ್ಯವನ್ನೇ ನುಡಿಯುತ್ತೇನೆ-ನಾನು ಹೀಗೆ ಪರೀಕ್ಷಿಸಿ ನೋಡಿದ್ದರಲ್ಲಿ ಜ್ಞಾನಿಗಳೆಂದು ಹೆಸರುಗೊಂಡಿದ್ದವರೆಲ್ಲರೂ ಹಾಗೆ ಪ್ರಸಿದ್ಧರಲ್ಲದವರಿಗಿಂತ ದಡ್ಡರೇ ಆಗಿದ್ದರು. ಹಾಗೆ ಪ್ರಖ್ಯಾತರಾಗದಿದ್ದವರೇ ಅವರಿಗಿಂತ ಪ್ರಾಜ್ಞರೆಂದೂ ಒಳ್ಳೆಯವರೆಂದೂ ತೋರಿತು. ನಾನು ಹರ್ಕ್ಯುಲೀಸನಂತೆ ಕಷ್ಟಪಟ್ಟು ತಿರುಗಿ ತಿರುಗಿ ಕೊನೆಗೆ ದೇವವಾಣಿ ಸತ್ಯವೆಂದು ದೃಢಮಾಡಿಕೊಂಡ ಕಥೆಯನ್ನೆಲ್ಲಾ ನಿಮಗೆ ಹೇಳುತ್ತೇನೆ. ರಾಜನೀತಿಜ್ಞರನ್ನು ಮುಗಿಸಿ ಬಳಿಕ ರುದ್ರನಾಟಕ, ಸ್ತೋತ್ರಗೀತ (Dithyramb) ಮೊದಲಾದ ಕಾವ್ಯಗಳನ್ನು ಬರೆದವರ ಬಳಿಗೆ ಹೋದೆನು. ಅವರು ನನಗಿಂತ ಪ್ರಾಜ್ಞರೆಂದೂ ಅವರೆದುರಿಗೆ ನನ್ನ ಮೌಢ್ಯ ಒಂದು ನಿಮಿಷದಲ್ಲಿ ಹೊರಬೀಳುವುದೆಂದೂ ಭಾವಿಸಿದ್ದೆನು. ಜಾಗರೂಕತೆಯಿಂದ ಚೆನ್ನಾಗಿ ರಚಿಸಿದ್ದೆಂದು ತೋರಿದ ಕೆಲವು ಭಾಗಗಳನ್ನು ಅವರು ಬರೆದ ಕಾವ್ಯಗಳಿಂದಲೇ ಆರಿಸಿಕೊಂಡು ಅವುಗಳ ಅರ್ಥವನ್ನು ಹೇಳಬೇಕೆಂದು ಅವರನ್ನು ಕೇಳಿಕೊಂಡೆನು. ನನ್ನ ಮಾತನ್ನು ನೀವು ನಂಬುವಿರೋ ಇಲ್ಲವೋ, ಈ ವಿಷಯವನ್ನು ನಿಮಗೆ ಹೇಳುವುದಕ್ಕೆ ನನಗೇ ನಾಚಿಕೆಯಾಗುತ್ತದೆ—ಇಲ್ಲಿ ನೆರೆದಿರುವವರಲ್ಲಿ ಯಾರಾದರೂ ಸರಿಯೆ, ಆ ಕಾವ್ಯಗಳ ವಿಷಯವಾಗಿ ಕವಿಗಳಿಗಿಂತಲೂ ಚೆನ್ನಾಗಿ ನೀವು ಮಾತಾಡುತ್ತಿದ್ದಿರಿ. ಅವರು ಕಾವ್ಯಗಳನ್ನು ರಚಿಸಿದ್ದು ತಮ್ಮ ಜ್ಞಾನಬಲದಿಂದಲ್ಲ, ಪ್ರತಿಭೆಯಿಂದ, ಒಂದು ವಿಧವಾದ ಆವೇಶದಿಂದ. ಅವರು ಭವಿಷ್ಯಜ್ಞರಂತೆಯೂ ಡೆಲ್ಫಿಯಂಥ ಸ್ಥಳಗಳಲ್ಲಿರುವ ದೇವವಾಣಿಯಂತೆಯೂ ಅದ್ಭುತವಾದ ವಿಷಯಗಳನ್ನು ಕುರಿತು ಬರೆಯುತ್ತಾರೆ. ಆದರೆ ಅವರಿಗೆ ತಮ್ಮ ಮಾತಿನ ಅರ್ಥ ತಿಳಿಯದು. ಇದಲ್ಲದೆ ಇನ್ನೂ ಒಂದು ವಿಷಯ ನನಗೆ ತಿಳಿಯಬಂತು. ತಾವು ಕವನಗಳನ್ನು ಬರೆದದ್ದರಿಂದ ಇತರ ವಿಷಯಗಳಲ್ಲಿಯೂ ತಮ್ಮಂಥ ಜ್ಞಾನಿಗಳು ಯಾರೂ ಇಲ್ಲವೆಂದು ಈ ಕವಿಗಳು ನಂಬಿದ್ದರು. ಇದನ್ನು ನೋಡಿ ರಾಜನೀತಿಜ್ಞರಿಗಿಂತಲೂ ಕವಿಗಳಿಗಿಂತಲೂ ಈ ವಿಷಯದಲ್ಲಿ ನಾನೇ ಮೇಲು ಎಂದುಕೊಳ್ಳಬೇಕಾಯಿತು.

ಕೊನೆಗೆ ನಾನು ಶಿಲ್ಪಿಗಳ ಬಳಿಗೆ ಹೋದೆನು. ನಾನು ಅಜ್ಞನೆಂದೂ ಅವರು ಎಷ್ಟೋ ವಿಷಯಗಳಲ್ಲಿ ತಿಳುವಳಿಕೆಯುಳ್ಳವರೆಂದೂ ನಾನು ಎಣಿಸಿ

ದ್ದದ್ದು ತಪ್ಪಲ್ಲ. ನನಗೆ ತಿಳಿಯದ ಎಷ್ಟೋ ವಿಷಯಗಳನ್ನು ಅವರು ಬಲ್ಲರು ; ಅಷ್ಟರಮಟ್ಟಿಗೆ ಅವರು ನನಗಿಂತಲೂ ಜ್ಞಾನಿಗಳು. ಆದರೆ ಕವಿಗಳಂತೆಯೇ ಅವರೂ ತಮ್ಮ ಕೆಲಸದಲ್ಲಿ ತಾವು ನಿಪುಣರಾದ ಮಾತ್ರಕ್ಕೇ ತಮಗೆ ಇತರ ಘನವಾದ ವಿಷಯಗಳಲ್ಲಿಯೂ ಕೂಡ ಜ್ಞಾನವಿರುವುದೆಂದು ನಂಬಿದ್ದರು. ಅವರಲ್ಲಿ ವಿವೇಕಕ್ಕಿಂತ ಈ ನ್ಯೂನತೆಯೇ ಹೆಚ್ಚಾಗಿ ಕಂಡುಬಂತು. ಆಗ ನಾನು "ಜ್ಞಾನವೂ ಇಲ್ಲದೆ ಅಜ್ಞಾನವೂ ಇಲ್ಲದೆ ನನ್ನ ಹಾಗಿರುವುದು ಮೇಲೋ ಅಥವಾ ಜ್ಞಾನಾಜ್ಞಾನಗಳ ವಿಷಯದಲ್ಲಿ ಈ ಜನಗಳಂತಿರುವುದು ಮೇಲೋ?" ಎಂದು ಯೋಚಿಸಿ ನೋಡಿದ್ದರಲ್ಲಿ ನನ್ನಂತೆ ಇರುವುದೇ ಉತ್ತಮವೆಂದು ತೋರಿತು.

ನಾನು ಹೀಗೆ ಜನಗಳನ್ನು ಕಂಡಾಗ ಪ್ರಶ್ನೆಹಾಕಿ ಪರೀಕ್ಷಿಸುತ್ತ ಬಂದದ್ದರಿಂದ ಬಹು ಜನರಿಗೆ ನನ್ನ ಮೇಲೆ ತೀವ್ರವಾದ ವೈರವುಂಟಾಯಿತು ; ಅನೇಕ ಸುಳ್ಳು ಅಪವಾದಗಳು ಹುಟ್ಟಿದುವು. ಯಾವುದಾದರೂ ವಿಷಯದಲ್ಲಿ ಇತರರಿಗೆ ತಿಳಿವಳಿಕೆಯಿಲ್ಲವೆಂದು ತೋರಿಸಿಕೊಟ್ಟ ಮಾತ್ರಕ್ಕೇ ಆ ವಿಷಯದಲ್ಲಿ ನನಗೆ ತಿಳಿವಳಿಕೆ ಇದೆಯೆಂದು ಭಾವಿಸಿ ಕೆಲವರು ನನ್ನನ್ನು ಜ್ಞಾನಿಯೆಂದು ಕರೆಯುವರು. ಆದರೆ ನಿಜವಾಗಿ ಜ್ಞಾನಿಯೆಂದರೆ ದೇವರೊಬ್ಬನೇ ; ಮನುಷ್ಯಮಾತ್ರರಾದವರ ತಿಳಿವಳಿಕೆಗೆ ಏನೇನೂ ಬೆಲೆಯಿಲ್ಲವೆಂದು ತೋರಿಸುವುದೇ ದೇವವಾಣಿಯ ಉದ್ದೇಶವಿರಬೇಕು. ಅದು ಹೇಳಿದ್ದು ಸಾಕ್ರೆಟೀಸನು ಜ್ಞಾನಿಯೆಂದಲ್ಲ. ನನ್ನನ್ನು ಉದಾಹರಣೆಯಾಗಿಟ್ಟುಕೊಂಡು, "ಸಾಕ್ರೆಟೀಸನಂತೆ ಮನುಷ್ಯರ ಜ್ಞಾನವು ಅತ್ಯಲ್ಪವಾದ ಬೆಲೆಯುಳ್ಳದ್ದೆಂದು ಯಾವನು ತಿಳಿದುಕೊಳ್ಳುವನೋ ಅವನು ಇತರರೆಲ್ಲರಿಗಿಂತಲೂ ಜ್ಞಾನಿ" ಎಂಬ ತತ್ವವನ್ನು ಅದು ಹೊರಗೆಡಹಿತು. ನಾನು ಈಗಲೂ ದೇವರ ಆಜ್ಞೆಯಂತೆ, ನಮ್ಮೂರಿನವರಾಗಲಿ ಹೊರಗಿನವರಾಗಲಿ ಬುದ್ಧಿವಂತರೆನ್ನಿಸಿಕೊಳ್ಳುವ ಜನರನ್ನು ಕಂಡರೆ ಅವರ ತಿಳಿವಳಿಕೆ ಎಷ್ಟಿದೆಯೆಂದು ಪರೀಕ್ಷಿಸುತ್ತೇನೆ; ತಿಳಿವಳಿಕೆಯಿಲ್ಲವೆಂದು ಕಂಡುಬಂದರೆ, ದೇವವಾಣಿ ಸತ್ಯವೆಂದು ಸ್ಪಷ್ಟಪಡಿಸುವುದಕ್ಕಾಗಿ ತಾವು ಜ್ಞಾನಿಗಳಲ್ಲವೆಂದು ಅವರಿಗೆ ತೋರಿಸಿಕೊಡುತ್ತೇನೆ. ನನ್ನ ಮನಸ್ಸು ಈ ಕೆಲಸದಲ್ಲೇ ನೆಟ್ಟುಹೋಗಿ ನನಗೆ ನಮ್ಮ ನಗರದ ಅಥವಾ ನನ್ನ ಸ್ವಂತದ ಇನ್ನು ಯಾವ ಕೆಲಸಕ್ಕೂ ಗಮನಕೊಡುವುದು ಅಸಾಧ್ಯ

ವಾಗಿದೆ. ಹೀಗಾಗಿ ಈ ದೇವರ ಸೇವೆಯನ್ನು ಹಿಡಿದದ್ದರಿಂದ ನಾನು ತೀರ ಬಡವನಾಗಿದ್ದೇನೆ.

ಇದಲ್ಲದೆ ಮತ್ತೊಂದು ವಿಷಯ. ಬೇರೆ ಏನೂ ಕೆಲಸವಿಲ್ಲದ ಐಶ್ವರ್ಯವಂತರಾದ ಯುವಕರು ತಾವಾಗಿಯೇ ನನ್ನ ಬಳಿಗೆ ಒರುತ್ತಿದ್ದರು. ನಾನು ಜನಗಳನ್ನು ಪರೀಕ್ಷಿಸಿ ಅವರ ಅಜ್ಞಾನವನ್ನು ಹೊರಗೆಡಹುವುದನ್ನು ನೋಡಲು ಅವರಿಗೆ ಇಷ್ಟ. ಅವರೂ ಅನೇಕ ವೇಳೆ ನನ್ನಂತೆಯೇ ಜನಗಳಿಗೆ ಪ್ರಶ್ನೆ ಹಾಕಿ, ಬುದ್ಧಿವಂತರೆಂದು ತಿಳಿದುಕೊಂಡಿರುವವರಲ್ಲಿ ಬಹಳ ಮಂದಿ ನಿಜವಾಗಿ ತಿಳಿವಳಿಕೆಯಿಲ್ಲದವರೆಂದು ಕಂಡುಹಿಡಿದರು. ಅವರ ಪರೀಕ್ಷೆಗೆ ಸಿಕ್ಕಿಬಿದ್ದವರಿಗೆಲ್ಲಾ ನನ್ನ ಮೇಲೆ ಕೋಪ. "ಈ ಸಾಕ್ರೆಟೀಸನ ಮನೆ ಹಾಳಾಗ, ಈ ಕೇಡಿಗ ಬಂದು ಊರಿನ ತರುಣರನ್ನೆಲ್ಲಾ ಬುದ್ಧಿ ಕೆಡಿಸಿದ" ಎಂಬುಕೊಳ್ಳುವರು. "ಅದೇಕೆ? ಅವನು ಏನು ಕೆಟ್ಟದ್ದು ಮಾಡುತ್ತಾನೆ ಅಥವಾ ಕಲಿಸುತ್ತಾನೆ?" ಎಂದು ಯಾರಾದರೂ ಕೇಳಿದರೆ ಏನು ಉತ್ತರಕೊಡುವುದಕ್ಕೂ ಅವರಿಗೆ ತಿಳಿಯುವುದಿಲ್ಲ. ತಮಗೆ ಗೊತ್ತಿದ್ದರಲ್ಲವೆ ಮತ್ತೊಬ್ಬರಿಗೆ ಹೇಳುವುದು? ಆದರೆ ಪ್ರಶ್ನೆ ಕೇಳಿದವರೆದುರಿಗೆ ಪೆಚ್ಚಾಗದಂತೆ ಏನಾದರೂ ಹೇಳಬೇಕು. ಆದ್ದರಿಂದ ತತ್ವಜ್ಞಾನಿಗಳ ಮೇಲೆ ಸಾಧಾರಣವಾಗಿ ತರುವ ದೂರನ್ನು ನನ್ನ ಮೇಲೂ ತಂದಿದ್ದಾರೆ. ಅಂತರಿಕ್ಷದ ಮತ್ತು ಪಾತಾಳದ ವಿಷಯವನ್ನು ಬೋಧಿಸುತ್ತಾರೆನ್ನುವುದೂ ದೇವರನ್ನು ನಂಬುವುದಿಲ್ಲವೆನ್ನುವುದೂ ಕೆಟ್ಟದ್ದು ಒಳ್ಳೆಯದಾಗಿ ತೋರುವಂತೆ ಮಾಡುತ್ತಾರೆನ್ನುವುದೂ ತತ್ವವಿಚಾರಕರ ಮೇಲೆ ಸಾಧಾರಣವಾಗಿ ಬರುವ ಅಪವಾದಗಳಷ್ಟೆ. ಈಗ ಅದೆಲ್ಲಾ ನನ್ನ ಮೇಲೆ ಬಂದಿದೆ. ಆದರೆ ಒಳಗುಟ್ಟು ಏನೆಂದರೆ—ಈ ದೂರು ತರುವವರ ಅಜ್ಞಾನ ಹೊರಬಿದ್ದುಹೋಯಿತು. ಆದರೆ ಹಾಗೆಂದು ಒಪ್ಪಿಕೊಳ್ಳುವುದಕ್ಕಾಗುತ್ತದೆಯೆ?

ಹೀಗೆ ನನ್ನ ಮೇಲೆ ಅಪಕೀರ್ತಿಯನ್ನು ಹೊರಿಸಿರುವವರು ಬಹಳ ಮಂದಿ. ಅವರು ಧೂರ್ತರು, ಮುಂದೆ ನುಗ್ಗುವ ಸ್ವಭಾವವುಳ್ಳವರು, ಮಾತಾಡಿ ಜನರ ಮನಸ್ಸನ್ನು ಚೆನ್ನಾಗಿ ಅಪಹರಿಸಬಲ್ಲವರು. ಮೆಲೆಟಸ್, ಆನಿಟಸ್, ಲೈಕನ್—ಇವರೆಲ್ಲ ನನ್ನ ಮೇಲೆ ಕತ್ತಿಕಟ್ಟಿ ಬಂದಿರುವುದಕ್ಕೆ ನಾನು ಇದುವರೆಗೂ ನಿಮಗೆ ಹೇಳಿದ್ದೇ ಕಾರಣ. ಕವಿಗಳ ಪರವಾಗಿ ಮೆಲೆಟಸ್, ಕೆಲಸಗಾರರ (ಶಿಲ್ಪಿಗಳ)ಮತ್ತು ರಾಜನೀತಿಜ್ಞರ ಪರವಾಗಿ ಆನಿಟಸ್,

ಲಾಕ್ಷಣಿಕರ ಪರವಾಗಿ ಲೈಕನ್—ಈ ಮೂವರೂ ನನ್ನ ಮೇಲೆ ಹಗೆ ತೀರಿಸಿಕೊಳ್ಳಲು ಬದ್ಧಕಂಕಣರಾಗಿ ಹೊರಟಿದ್ದಾರೆ. ಮಹನೀಯರೇ, ಇದೇ ನಿಜವಾದ ಸಂಗತಿ; ಇದ್ದ ವಿಷಯವೊಂದನ್ನೂ ಮರೆಮಾಜದೆ ನಿಮಗೆ ತಿಳಿಸಿದ್ದೇನೆ. ಹೀಗೆ ನಾನು ಇದ್ದದ್ದನ್ನು ಇದ್ದ ಹಾಗೆ ಹೇಳುವುದೇ ಈ ಜನಗಳ ದ್ವೇಷಕ್ಕೆ ಒಂದು ಕಾರಣ. ಆದ್ದರಿಂದ ನಾನು ಹೇಳುವುದು ಸತ್ಯವೆನ್ನುವುದಕ್ಕೆ ಅವರ ದ್ವೇಷವೇ ಒಂದು ಪ್ರಮಾಣ. ನನ್ನ ಮೇಲೆ ಅಪವಾದ ಬರುವುದಕ್ಕೆ ಕಾರಣವನ್ನು ವಿವರಿಸಿದ್ದಾಯಿತು; ಇದು ವಾಸ್ತವವೆಂದು ಈ ವಿಚಾರಣೆ ಮುಗಿಯುವುದರೊಳಗೆ ನಿಮಗೇ ತಿಳಿಯುವುದು. ಇನ್ನು ನನ್ನನ್ನು ದೂಷಿಸುವವರಲ್ಲಿ ಎರಡನೆಯ ವರ್ಗದವರ ವಿಷಯವಾಗಿ ಸ್ವಲ್ಪ ಹೇಳಬೇಕು. ಇವರ ಮುಖಂಡನು ತಾನು ಸತ್ಪುರುಷನೆಂದೂ ದೇಶವಾತ್ಸಲ್ಯ ಭರಿತನಾದವನೆಂದೂ ಹೇಳಿಕೊಳ್ಳುವ ಮೆಲೆಟಸ್. ಇವನೂ ಇವನ ಕಡೆಯವರೂ ಹೇಳುವುದೇನು? "ಸಾಕ್ರೆಟೀಸನು ರಾಜ್ಯಕ್ಕೆ ಅನಿಷ್ಟವನ್ನುಂಟುಮಾಡುತ್ತಾನೆ; ಯುವಕರನ್ನು ದುರ್ಮಾರ್ಗಕ್ಕೆಳೆಯುತ್ತಾನೆ; ನಮ್ಮ ದೇಶದ ದೇವರುಗಳಲ್ಲಿ ನಂಬಿಕೆಯಿಲ್ಲದೆ ಬೇರೆ ಯಾವುದೋ ದೇವತೆಗಳನ್ನು ಪೂಜಿಸುತ್ತಾನೆ"—ಇದೇ ತಾನೆ ಇವರ ಆಪಾದನೆ. ಇವರು ಹೇಳುವುದನ್ನು ಒಂದೊಂದಾಗಿ ಪರಿಶೀಲಿಸಿ ನೋಡೋಣ. ನಾನು ಕೆಡುಕುಮಾಡುತ್ತೇನಂತೆ, ಯುವಕರನ್ನು ಕೆಡಿಸುತ್ತೇನಂತೆ. ಆದರೆ ನಾನು ಕಂಠೋಕ್ತವಾಗಿ ಹೇಳುತ್ತೇನೆ, ಕೇಳಿ. ಮೆಲೆಟಸ್ಸೇ ಕೇಡಿಗ; ಏಕೆಂದರೆ ಅವನು ಹುಡುಗಾಟದಲ್ಲಿ ಹೇಳಬೇಕಾದದ್ದನ್ನು ಸತ್ಯವೆಂದೆಣಿಸುವವನಂತೆ ನಟಿಸುತ್ತಿದ್ದಾನೆ. ಮೇಲೆ ಹೇಳಿದ ವಿಷಯಗಳಲ್ಲಿ ತನಗೆ ಏನೂ ಆಸಕ್ತಿಯಿಲ್ಲದಿದ್ದರೂ, ಆ ವಿಷಯಗಳ ಜ್ಞಾನ ಸ್ವಲ್ಪವೂ ಇಲ್ಲದಿದ್ದರೂ ಅವನ್ನು ಚೆನ್ನಾಗಿ ತಿಳಿದವನಂತೆಯೂ ನ್ಯಾಯಪಕ್ಷಪಾತಿಯಂತೆಯೂ ನಟಿಸಿ ನನ್ನನ್ನು ನ್ಯಾಯಸ್ಥಾನಕ್ಕೆ ಎಳೆದಿದ್ದಾನೆ. ನಾನು ಹೇಳುವುದು ಸತ್ಯವೆಂದು ನಿಮಗೆ ಸ್ಪಷ್ಟಪಡಿಸಿಕೊಡುತ್ತೇನೆ.

ಮೆಲೆಟಸ್, ಇಲ್ಲಿ ಬಾ. ನಿನ್ನನ್ನು ಒಂದು ಮಾತು ಕೇಳಬೇಕಾಗಿದೆ. ಯುವಕರು ಸನ್ಮಾರ್ಗದಲ್ಲಿಯೇ ಇರುವ ವಿಷಯದಲ್ಲಿ ನಿನಗೆ ಬಹಳ ಆಸಕ್ತಿಯಿಲ್ಲವೆ?

ಮೆಲೆ—ಹೌದು.

ಸಾ—ಹಾಗಾದರೆ ಅವರನ್ನು ಸನ್ಮಾರ್ಗಕ್ಕೆ ತರುವವರು ಯಾರೆಂಬುದನ್ನು ಈ ಮಹನೀಯರಿಗೆ ಹೇಳು. ಈ ವಿಷಯದಲ್ಲಿ ಅಷ್ಟೊಂದು ಆಸಕ್ತಿಯಿದ್ದರೆ, ಅವರನ್ನು ಕೆಟ್ಟದಾರಿಗೆ ಎಳೆಯುತ್ತಿರುವವನೆಂದು ನನ್ನನ್ನು ದೂರುವ ನಿನಗೆ ಇದೂ ಗೊತ್ತಿರಬೇಕು. ಹೇಳು, ಯುವಕರನ್ನು ಅಭಿವೃದ್ಧಿಗೆ ತರುವವರು ಯಾರು? ಏಕೆ ಸುಮ್ಮನಿರುವೆ? ಏನು ಹೇಳಬೇಕೋ ತೋರುವುದಿಲ್ಲ ವಲ್ಲವೆ? ಇದು ನಿನಗೆ ಅವಮಾನಕರವಲ್ಲವೆ ಯೋಚಿಸಿನೋಡು. ಈ ವಿಷಯದಲ್ಲಿ ನಿನಗೆ ಏನೂ ಆಸಕ್ತಿಯಿಲ್ಲವೆನ್ನುವುದಕ್ಕೆ ಇದೇ ನಿದರ್ಶನ ಸಾಲದೆ? ಹೇಳು, ಬಾ. ಯುವಕರನ್ನು ಅಭಿವೃದ್ಧಿಗೆ ತರುವವರು ಯಾರು?

ಮೆಲೆ—ಧರ್ಮಶಾಸ್ತ್ರಗಳು.

ಸಾ—ಮೆಲೆಟಸ್, ನನ್ನ ಮಾತಿನ ಅರ್ಥ ಅದಲ್ಲ. ಧರ್ಮಶಾಸ್ತ್ರಗಳೆಲ್ಲವನ್ನೂ ಓದಿ ಪಾರಂಗತರಾಗಿರುವವರು ಯಾರು ಹೇಳು.

ಮೆಲೆ—ಈಗ ಇಲ್ಲಿರುವ ನ್ಯಾಯಾಧೀಶರು.

ಸಾ—ಏನು ಮೆಲೆಟಸ್, ಈ ನ್ಯಾಯಾಧೀಶರು ಯುವಕರಿಗೆ ಬೋಧಿಸಿ ಅವ ರನ್ನು ಅಭಿವೃದ್ಧಿಗೆ ತರಬಲ್ಲರೆನ್ನುವೆಯಾ?

ಮೆಲೆ—ಧಾರಾಳವಾಗಿ.

ಸಾ—ಈ ನ್ಯಾಯಾಧೀಶರೆಲ್ಲರಿಗೂ ಆ ಶಕ್ತಿ ಇದೆಯೋ ಅಥವಾ ಕೆಲವರನ್ನು ಬಿಟ್ಟು ಉಳಿದವರಿಗೆ ಮಾತ್ರ ಇದೆಯೋ?

ಮೆಲೆ—ಎಲ್ಲರಿಗೂ ಇದೆ.

ಸಾ—ಬಹಳ ಸಂತೋಷಕರವಾದ ವಿಷಯ. ನಮ್ಮ ಭಾಗಕ್ಕೆ ದೇವರು ಒಳ್ಳೆ ಯವನು. ಇಲ್ಲಿಯ ಯುವಕರ ಏಳಿಗೆಗೆ ಸಹಾಯಮಾಡುವುದಕ್ಕೆ ಬಹಳ ಜನಗಳು ಸಿಕ್ಕಿದ ಹಾಗಾಯಿತು. ಈ ಸಭೆಯುಲ್ಲಿ ನೆರೆದಿರುವ ಇತರರ ವಿಷಯದಲ್ಲಿ ಏನು ಹೇಳುವೆ? ಅವರೂ ಯುವಕರನ್ನು ಉತ್ತಮಸ್ಥಿತಿಗೆ ತರಬಲ್ಲರೋ?

ಮೆಲೆ—ಹೌದು.

ಸಾ—ಈ ಸಭಿಕರೋ ?

ಮೆಲೆ—ಅವರೂ ಹಾಗೆಯೇ.

ಸಾ—ಹಾಗಾದರೆ ಅಥೆನ್ಸಿನ ಜನರೆಲ್ಲರೂ, ನನ್ನೊಬ್ಬನ ಹೊರತು ಉಳಿದವರೆಲ್ಲರೂ, ಯುವಕರನ್ನು ಸನ್ಮಾರ್ಗಕ್ಕೆ ತರುವವರೇ ಆಗಿದ್ದಾರೆ. ನಾನೊಬ್ಬನೇ ಅವರನ್ನು ಕೆಟ್ಟದಾರಿಗೆ ಎಳೆಯುವವನು. ಹಾಗೆಯೇ ತಾನೆ ನೀನು ಹೇಳುವುದು ?

ಮೆಲೆ—ಅದೇ ನಾನು ಹೇಳುವುದು. ಅದರಲ್ಲಿ ಸಂದೇಹವೇ ಇಲ್ಲ. ಅದೇ ಮಾತನ್ನು ಯಾರೆದುರಿಗೆ ಬೇಕಾದರೂ ಒತ್ತಿ ಹೇಳುತ್ತೇನೆ.

ಸಾ—ನಿನ್ನ ಮಾತು ನಿಜವಾದರೆ ನನ್ನಂಥ ನಿರ್ಭಾಗ್ಯನೇ ಇಲ್ಲವೆನ್ನಬೇಕು. ಅದಿರಲಿ. ಈಗ ಇನ್ನೊಂದು ಮಾತು ಕೇಳುತ್ತೇನೆ. ಕುದುರೆಗಳ ವಿಷಯವಾಗಿ ಸ್ವಲ್ಪ ಮಾತಾಡೋಣ. ಅವುಗಳಿಗೂ ಲೋಕದವರೆಲ್ಲಾ ಒಳ್ಳೆಯದು ಮಾಡುವರೆಂದೂ ಒಬ್ಬನು ಮಾತ್ರ ಕೆಡುಕುಮಾಡುವನೆಂದೂ ಹೇಳಬಹುದೇ ? ನಿಜಸ್ಥಿತಿ ಇದಕ್ಕೆ ಪೂರ್ಣವಾಗಿ ವಿರುದ್ಧವಾಗಿದೆಯಲ್ಲವೆ? ಅವುಗಳಿಗೆ ಒಳ್ಳೆಯದನ್ನು ಮಾಡಬಲ್ಲವನು ಒಬ್ಬನೇ; ಅಥವಾ ಸಾವಿರಕ್ಕೆ ಹತ್ತು ಜನ ಸಿಕ್ಕಬಹುದು. ಕುದುರೆಗಳನ್ನು ಸಾಕುವ ರೀತಿಯನ್ನು ಬಲ್ಲವನೊಬ್ಬನು ಮಾತ್ರ ಅವುಗಳಿಗೆ ಉಪಕಾರಿ. ಉಳಿದವರ ಕೈಗೆ ಸಿಕ್ಕಿದರೆ ಅವುಗಳಿಗೆ ಕೇಡಾಗುವುದು ನಿಶ್ಚಯ. ಕುದುರೆಗಳ ಅಥವಾ ಇತರ ಪ್ರಾಣಿಗಳ ವಿಷಯದಲ್ಲಿ ಈಗ ನಾನು ಹೇಳಿದ ಮಾತು ಸಲ್ಲುವುದೋ ಇಲ್ಲವೋ ಮೆಲೆಟಸ್ ? ಸಲ್ಲುವುದೆಂದು ನಿಸ್ಸಂದೇಹವಾಗಿ ಹೇಳಬಹುದು. ನೀನೂ ಆನಿಟಸ್ಸನೂ ಅದಕ್ಕೆ ಒಪ್ಪಿದರೂ ಸರಿ, ಒಪ್ಪದಿದ್ದರೂ ಸರಿ; ಪ್ರಪಂಚದಲ್ಲಿರುವವರೆಲ್ಲರೂ ಅವರ ಭಾಗಕ್ಕೆ ಸನ್ಮಾರ್ಗದರ್ಶಿಗಳೇ ಆಗಿದ್ದು ಅವರನ್ನು ಕೆಟ್ಟದಾರಿಗೆ ಎಳೆಯುವವನು ಒಬ್ಬನೇ ಒಬ್ಬನಾದರೆ ನಮ್ಮ ಯುವಕರು ಅದೃಷ್ಟಶಾಲಿಗಳೆಂದೇ ಹೇಳಬೇಕು. ಇದುವರೆಗೆ ಮಾತಾಡಿದ್ದರಲ್ಲಿ ನೀನು ಈ ವಿಷಯಕ್ಕೆ ಸ್ವಲ್ಪವೂ ಗಮನಕೊಟ್ಟಿಲ್ಲವೆಂದು ಸ್ಪಷ್ಟಪಡಿಸಿದ್ದೀಯೆ. ಯಾವ ವಿಷಯವಾಗಿ ನೀನು ನನ್ನ ಮೇಲೆ ದೂರು ತಂದಿರುವೆಯೋ ಆ ವಿಷಯದಲ್ಲಿ ನೀನು ಏನೂ ಯೋಚನೆ ಮಾಡಿಲ್ಲ.

ಮೆಲಿಟಸ್, ಈಗ ನಿನ್ನನ್ನು ಮತ್ತೊಂದು ಪ್ರಶ್ನೆ ಕೇಳುವೆನು. ಸತ್ಪುರುಷರೊಡನೆ ವಾಸಮಾಡುವುದೊಳ್ಳೆಯದೋ ಅಥವಾ ದುಷ್ಟರೊಡನೆ ವಾಸಮಾಡುವುದೊಳ್ಳೆಯದೋ? ಇದಕ್ಕೆ ಸುಲಭವಾಗಿ ಉತ್ತರಕೊಡಬಹುದಲ್ಲ, ಹೇಳು. ತಮ್ಮ ನೆರೆಯವರಿಗೆ ಸತ್ಪುರುಷರು ಉಪಕಾರವನ್ನೂ ದುಷ್ಟರು ಕೆಡಕನ್ನೂ ಮಾಡುವರಲ್ಲವೇ?

ಮೆಲಿ—ಹೌದು.

ಸಾ—"ನೆರೆಯವರಿಂದ ನಮಗೆ ಉಪಕಾರವೇನೂ ಬೇಡ, ಕೆಡುಕೇ ಆಗಲಿ" ಎಂದು ಬಯಸುವ ಜನರು ಎಲ್ಲಾದರೂ ಉಂಟೆ? ಹೇಳು, ಶಾಸನದಲ್ಲಿ ನೀನು ನನ್ನ ಪ್ರಶ್ನೆಗಳಿಗೆ ಉತ್ತರಕೊಡಬೇಕೆಂಬ ನಿಬಂಧನೆಯಿದೆ—ಕೆಡುಕಾಗಲೆಂದು ಯಾರಾದರೂ ಹಾರೈಸುತ್ತಾರೆಯೆ?

ಮೆಲಿ—ಎಂದಿಗೂ ಇಲ್ಲ.

ಸಾ—ಈಗ ನಾನು ಯುವಕರನ್ನು ಕೆಡಿಸಿ ಅವರನ್ನು ದುಶ್ಶೀಲರನ್ನಾಗಿ ಮಾಡುತ್ತಿರುವೆನೆಂದು ಹೇಳುವೆಯಲ್ಲ, ನಾನು ಉದ್ದೇಶಪೂರ್ವಕವಾಗಿ ಹಾಗೆ ಮಾಡುತ್ತೇನೋ ಅಥವಾ ವಿಚಾರಹೀನನಾಗಿ ನನ್ನ ಕೆಲಸದ ಫಲಿತಾಂಶವೇನಾಗುವುದೆಂದು ಯೋಚಿಸದೆ ಹಾಗೆ ಮಾಡುತ್ತೇನೋ? ನಿನ್ನ ಅಭಿಪ್ರಾಯವೇನು?

ಮೆಲಿ—ನೀನು ಉದ್ದೇಶಪೂರ್ವಕವಾಗಿಯೇ ಹಾಗೆ ಮಾಡುತ್ತಿದ್ದೀಯೆ.

ಸಾ—ಇದೇನು ಮೆಲಿಟಸ್, ಸತ್ಪುರುಷರು ತಾವು ಯಾರೊಡನೆ ವ್ಯವಹಾರ ನಡೆಸಿದರೂ ಅವರಿಗೆ ಉಪಕಾರಮಾಡುತ್ತಾರೆಂದು ನೀನು ಒಪ್ಪಿದ್ದೀಯೆ. ಮೆಲಿಟಸ್, ನೀನೇನೋ ದೊಡ್ಡ ಜ್ಞಾನಿಯಿರಬಹುದು. ಆದರೂ ಚಿಕ್ಕ ವಯಸ್ಸಿನವನಾದ ನಿನಗೆ ತಿಳಿದ ಈ ತತ್ವವು ನನಗೆ ಇಷ್ಟು ವಯಸ್ಸಾದ ಮೇಲೂ ತಿಳಿಯದೆ ಇರುವುದುಂಟೆ? ನಾನು ಅಷ್ಟು ಬುದ್ಧಿಹೀನ, ನೀನು ಅಷ್ಟು ಜ್ಞಾನಿ ಎನ್ನುವೆಯಾ? ನಾನು ನನ್ನ ನೆರೆಯವನನ್ನು ಕೆಟ್ಟದಾರಿಗೆ ಎಳೆದರೆ ನಾಳೆ ಅವನು ನನಗೇ ಕೇಡನ್ನು ಬಗೆಯುತ್ತಾನೆನ್ನುವುದನ್ನು ತಿಳಿದು ತಿಳಿದೂ ನಾನು ಅವನನ್ನು ಹಾಗೆ ಕೆಡಿಸುತ್ತೇನೆಯೆ? ನಿನ್ನ ಮಾತಿನಲ್ಲಿ ನನಗಾಗಲಿ ಇತರರಿಗಾಗಲಿ ಎಂದಿಗೂ ನಂಬಿಕೆ ಹುಟ್ಟ

ಲಾರದು. ನಾನು ಯುವಕರನ್ನು ಮನಃಪೂರ್ವಕವಾಗಿ ಕೆಡಿಸುತ್ತೇನೆಂದರೂ ಸರಿಯೆ ಅಜ್ಞಾನದಿಂದ ಕೆಡಿಸುತ್ತೇನೆಂದರೂ ಸರಿಯೆ, ನಿನ್ನ ಮಾತು ಸುಳ್ಳಾಗುವುದು. ನಾನು ಈ ಕೆಲಸವನ್ನು ಅಜ್ಞಾನದಿಂದ ಮಾಡಿದ್ದರೆ, ನನ್ನನ್ನು ನ್ಯಾಯಸ್ಥಾನಕ್ಕೆಳೆಯುವ ಬದಲು ನೀನು ನನ್ನೊಬ್ಬನನ್ನೇ ಕರೆದು ಬುದ್ಧಿವಾದ ಹೇಳಿ ಎಚ್ಚರಿಕೆ ಕೊಡಬೇಕಾಗಿತ್ತು. ಹಾಗೆ ಯಾರಾದರೂ ನನಗೆ ಸದುಪದೇಶಮಾಡಿದ್ದರೆ ನಾನು ತಿಳಿಯದೆ ಮಾಡಿದ ಅಪರಾಧವನ್ನು ಖಂಡಿತ ಅಲ್ಲಿಗೇ ನಿಲ್ಲಿಸುತ್ತಿದ್ದೆ. ಆದರೆ ನೀನು ನನ್ನ ಸಹವಾಸವನ್ನೇ ದೂರಮಾಡಿದೆ; ನನಗೆ ಸರಿಯಾಗಿ ಬುದ್ಧಿ ಹೇಳದೆ ದಂಡನೆಗೆ—ಶಿಕ್ಷಣಕ್ಕಲ್ಲ—ಏರ್ಪಟ್ಟಿರುವ ಈ ನ್ಯಾಯಸ್ಥಾನಕ್ಕೆ ನನ್ನನ್ನು ಬರಮಾಡಿದ್ದೀಯೆ.

ಮೆಲೆಟಸ್ ಈ ವಿಷಯಕ್ಕೆ ಸ್ವಲ್ಪವೂ ಗಮನಕೊಟ್ಟಿಲ್ಲವೆಂದು ಅಥೆನ್ಸಿನ ಮಹಾಜನರಿಗೆ ಸ್ಪಷ್ಟವಾಗಿರಬೇಕು. ಆದರೂ ಮೆಲೆಟಸ್, ನಾನು ಯಾವ ರೀತಿಯಲ್ಲಿ ಯುವಕರನ್ನು ಕೆಡಿಸುತ್ತೇನೆನ್ನುವೆಯೋ ಅದನ್ನು ತಿಳಿಯಬೇಕೆಂಬ ಕುತೂಹಲವಿದೆ. ನಿನ್ನ ಆಪಾದನೆಯನ್ನು ನೋಡಿದರೆ, ರಾಷ್ಟ್ರದವರೆಲ್ಲರೂ ಪೂಜಿಸುವ ದೇವತೆಗಳನ್ನು ಬಿಟ್ಟು ಇತರ ದೇವತೆಗಳನ್ನೋ ಅಥವಾ ದೇವತಾ ಶಕ್ತಿಗಳನ್ನೋ ಪೂಜಿಸುವಂತೆ ನಾನು ಜನರಿಗೆ ಬೋಧಿಸಿದ್ದೇನೆಂದು ಊಹಿಸಬೇಕಾಗುವುದು. ಈ ರೀತಿಯಾಗಿ ಯುವಕರನ್ನು ಕೆಡಿಸುತ್ತೇನೆಂದು ತಾನೆ ನೀನು ಹೇಳುವುದು?

ಮೆಲೆ—ಹೌದು. ಹಾಗೆಂದು ದೃಢವಾಗಿ ಹೇಳಬಲ್ಲೆ.

ಸಾ—ಹಾಗಾದರೆ ಈಗ ನಾವು ಯಾರ ವಿಷಯವಾಗಿ ಮಾತಾಡುತ್ತಿದ್ದೇವೋ ಆ ದೇವತೆಗಳ ಸಾಕ್ಷಿಯಾಗಿ ನಿನ್ನ ಅಭಿಪ್ರಾಯ ನಮಗೆಲ್ಲರಿಗೂ ಸ್ಪಷ್ಟವಾಗಿ ತಿಳಿಯುವಂತೆ ಹೇಳು. ನಿನ್ನ ಆಪಾದನೆಯೇನು? ನಾನು ಎಲ್ಲರೂ ಪೂಜಿಸುವ ದೇವರನ್ನು ಬಿಟ್ಟು ಬೇರೆ ದೇವರಲ್ಲಿ ಭಕ್ತಿಯಿಟ್ಟು ಆ ದೇವರನ್ನು ಪೂಜಿಸುವಂತೆ ಜನರಿಗೆ ಬೋಧಿಸುತ್ತೇನೆಂದೆ? ಅಥವಾ ನಾನು ನಿರೀಶ್ವರವಾದಿಯಾಗಿ ದೇವರಿಲ್ಲವೆಂದು ಇತರರಿಗೂ ಬೋಧಿಸುತ್ತೇನೆಂದೆ?

ಮೆಲೆ—ನೀನು ನಿರೀಶ್ವರವಾದಿಯೆಂದೇ ನಾನು ಹೇಳುವುದು.

ಸಾ—ಆಶ್ಚರ್ಯ, ಮೆಲಿಟಸ್; ಹಾಗೆ ಹೇಳುವುದಕ್ಕೆ ಆಧಾರವೇನು? ಸೂರ್ಯ ಚಂದ್ರರು ದೇವತೆಗಳೆಂದು ಎಲ್ಲರಂತೆ ನಾನು ನಂಬುವುದಿಲ್ಲ ವೆನ್ನುವೆಯಾ?

ಮೆಲಿ—ನ್ಯಾಯಾಧೀಶರೇ, ಈತನಿಗೆ ಸತ್ಯವಾಗಿಯೂ ಹಾಗೆ ನಂಬಿಕೆಯಿಲ್ಲ. ಅವನು ಹೇಳುವುದು ಸೂರ್ಯ ಕಲ್ಲೆಂದು; ಚಂದ್ರ ಬರಿಯ ಮಣ್ಣೆಂದು.

ಸಾ—ಮೆಲಿಟಸ್, ನೀನೆಲ್ಲೋ ಅನಗ್ಸಾಗೊರಾಸನನ್ನು ದೂಷಿಸುತ್ತಿರುವಂತೆ ಕಾಣುತ್ತದೆ. ಈ ವಾದ ಆತನ ಪುಸ್ತಕಗಳಲ್ಲಿದೆಯೆಂದು ನ್ಯಾಯಾಧೀಶ ರಿಗೆ ತಿಳಿಯದೆ? ಅವರು ಅಷ್ಟುಮಟ್ಟಿಗೆ ಅಕ್ಷರಸ್ಥರಲ್ಲವೆಂದು ಭಾವಿಸಿ ದೆಯಾ? ಈ ಅಭಿಪ್ರಾಯಗಳನ್ನು ನಾಟಕ ಶಾಲೆಗಳಲ್ಲಿ ಒಂದು ಡ್ರಾಕ್ಮಾ ಕೊಟ್ಟರೆ ಯಾರು ಬೇಕಾದರೂ ಕೇಳಬಹುದು. ಆದರೂ ಯುವಕರಿಗೆಲ್ಲಾ ಈ ವಾದವನ್ನು ನಾನು ಕಲಿಸಿದೆನೆಂದು ದೂರು. ಏಸು ಮೆಲಿಟಸ್, ನಿಜ ವಾಗಿಯೂ ನನಗೆ ದೇವರಲ್ಲಿ ನಂಬಿಕೆಯಿಲ್ಲವೆನ್ನುತ್ತೀಯಾ?

ಮೆಲಿ—ಸ್ಯೂಸಿನ ಆಣೆಗೂ ಹೇಳುತ್ತೇನೆ, ನಿನಗೆ ದೇವರಲ್ಲಿ ನಂಬಿಕೆಯಿಲ್ಲ.

ಸಾ—ಮೆಲಿಟಸ್, ನಿನ್ನ ಮಾತಿನಲ್ಲಿ ನಿನಗೇ ನಂಬಿಕೆಯಿಲ್ಲವೆಂದು ನನಗೆ ತೋರುತ್ತದೆ; ಇತರರು ಯಾರಿಗೂ ಖಂಡಿತ ನಂಬಿಕೆ ಹುಟ್ಟಲಾರದು. ಅಥೆನ್ಸಿನ ಜನರೇ, ಈತನು ಹಿಂದುಮುಂದು ನೋಡದೆ, ವಿವೇಚನೆಯಿಲ್ಲದೆ ನನ್ನ ಮೇಲೆ ಈ ದೂರು ತಂದಿರುವಂತೆ ತೋರುತ್ತದೆ. ಈಗ ನಮ್ಮೆಲ್ಲರ ಮುಂದೆ ಏನೋ ಒಂದು ಒಗಟಿಯನ್ನಿಟ್ಟಹಾಗಿದೆ. "ಸಾಕ್ರೆಟೀಸ್ ಬಹಳ ಬುದ್ಧಿವಂತನೆಂದು ಹೆಸರು ಪಡೆದಿರುವನಲ್ಲ, ನಾನು ಸ್ವಲ್ಪ ಯುಕ್ತಿಮಾಡಿ ಅಸಂಬದ್ಧವಾಗಿ ವಾದಮಾಡಿದರೆ ಅವನು ನನ್ನ ತಪ್ಪನ್ನು ಕಂಡುಹಿಡಿಯ ಬಲ್ಲನೆ? ಅವನನ್ನೂ ಇತರರನ್ನೂ ಮೋಸಗೊಳಿಸಲು ಸಾಧ್ಯವೆ, ನೋಡೋಣ" ಎಂದುಕೊಂಡು ಅವನು ನ್ಯಾಯಸ್ಥಾನಕ್ಕೆ ಬಂದಿರಬೇಕು. ನನಗೇನೋ ಇವನು ತನ್ನ ಮಾತಿಗೆ ತಾನೇ ವಿರುದ್ಧವಾಗಿ ಮಾತಾಡು ವಂತೆ ತೋರುತ್ತದೆ. ಇವನ ಮಾತನ್ನು ಕೇಳಿದರೆ "ಸಾಕ್ರೆಟೀಸನು ದೈವ ಭಕ್ತ, ಆದರೆ ದೇವರಲ್ಲಿ ನಂಬಿಕೆಯಿಲ್ಲದವನು" ಎಂದು ಹೇಳಿದಂತಿದೆ.

ಮಹಾಜನರೇ, ಈತನ ವಾದ ಅಸಂಬದ್ಧವಾಗಿದೆಯೋ ಇಲ್ಲವೋ

GANDHI SMARAKA GRANTHALAYA
BANGALORE-1

ಎನ್ನುವುದನ್ನು ನನ್ನೊಡನೆ ನೀವೂ ಪರ್ಯಾಲೋಚಿಸಬೇಕು. ಮೆಲೆಟಸ್, ನನ್ನ ಪ್ರಶ್ನೆಗಳಿಗೆ ಉತ್ತರಕೊಡು .. ..ಸಭಿಕರನ್ನು ಮತ್ತೆ ಬೇಡಿಕೊಳ್ಳುತ್ತೇನೆ. ನಾನು ಎಂದಿನಂತೆ ಪ್ರಶ್ನೆ ಹಾಕುತ್ತಾ ಬಂದರೆ ನನ್ನನ್ನು ತಡೆಯಬೇಡಿ. ಮೆಲೆಟಸ್, ಯಾರಿಗಾದರೂ ಮಾನವ ಜೀವನದಲ್ಲಿ ನಂಬಿಕೆಯಿದ್ದು ಮನುಷ್ಯನಲ್ಲಿ ನಂಬಿಕೆಯಿಲ್ಲದಿರುವುದು ಸಾಧ್ಯವೆ?.....ಸಭಿಕರೇ, ಈತನು ಗಲಭೆಯನ್ನೆಬ್ಬಿಸದೆ ನನ್ನ ಪ್ರಶ್ನೆಗಳಿಗೆ ಉತ್ತರ ಕೊಡುವಂತೆ ಮಾಡಬೇಕು....ಕುದುರೆಯ ಸವಾರಿಯಲ್ಲಿ ನಂಬಿಕೆಯಿರುವವನಿಗೆ ಕುದುರೆಯಲ್ಲಿ ನಂಬಿಕೆಯಿಲ್ಲದಿರುವುದು ಸಾಧ್ಯವೆ? ಕೊಳಲಗಾನ ಸತ್ಯವೆಂದು ನಂಬುವವನು ಕೊಳಲು ಮಿಥ್ಯವೆನ್ನುತ್ತಾನೆಯೆ? ಮೆಲೆಟಸ್, ನೀನು ಉತ್ತರಕೊಡುವುದಿಲ್ಲ. ನಿನಗಾಗಿ ನಾನೇ ಉತ್ತರ ಕೊಡುತ್ತೇನೆ. ಎಂದಿಗೂ ಇಲ್ಲ. ಅದು ಹೋಗಲಿ, ದಯವಿಟ್ಟು ಈ ಪ್ರಶ್ನೆಗಾದರೂ ಉತ್ತರ ಕೊಡು. ಅಮಾನುಷವಾದ, ದೈವಿಕವಾದ (spiritual) ಕಾರ್ಯಗಳು ಪ್ರಪಂಚದಲ್ಲಿ ನಡೆಯುತ್ತವೆಯೆಂದು ನಂಬುವವನು ಅಮಾನುಷವಾದುದೇನೂ ಇಲ್ಲ, ದೈವವೆನ್ನುವುದು ಸುಳ್ಳು ಎಂದು ಹೇಳಲಾಗುತ್ತದೆಯೆ?

ಮೆಲೆ—ಇಲ್ಲ.

ಸಾ—ಈ ಸಭಿಕರು ಒತ್ತಾಯ ಮಾಡಿದ ಮೇಲಾದರೂ ಉತ್ತರ ಕೊಟ್ಟೆಯಲ್ಲ, ಸಂತೋಷ. ಆದರೆ ನಾನು ಅಮಾನುಷವಾದ, ದೈವಿಕವಾದ—ಹಳೆಯ ದೈವವೋ ಹೊಸ ದೈವವೋ ಆ ಮಾತು ಸದ್ಯಕ್ಕೆ ಹಾಗಿರಲಿ—ಶಕ್ತಿಯಲ್ಲಿ ನಂಬಿಕೆಯಿಟ್ಟಿರುವೆನೆಂದೂ ಆ ವಿಷಯವನ್ನು ಜನಗಳಿಗೆ ಬೋಧಿಸುವೆನೆಂದೂ ನಿನ್ನ ಹೇಳಿಕೆಯಲ್ಲಿ ಪ್ರಮಾಣ ಮಾಡಿರುವೆಯಲ್ಲವೆ? ಇಂಥ ಶಕ್ತಿಗಳಿವೆ ಎಂದು ಒಪ್ಪಿದ ಮೇಲೆ ದೇವತೆಗಳಲ್ಲಿ ನಂಬಿಕೆಯಿಲ್ಲದಿರುವುದು ಹೇಗೆ ಸಾಧ್ಯ?........ಏಕೆ ಸುಮ್ಮನಿರುವೆ? ನಿನಗೆ ಬದಲಾಗಿ ನಾನೇ ಉತ್ತರ ಕೊಡುತ್ತೇನೆ: ಅಸಾಧ್ಯ. ಈ ಶಕ್ತಿಗಳು ದೇವತೆಗಳೆಂದೋ ಅಥವಾ ದೇವತೆಗಳ ಮಕ್ಕಳೆಂದೋ ನಾವು ತಿಳಿದಿದ್ದೇವೆ. ಹೌದೋ ಅಲ್ಲವೋ?

ಮೆಲೆ—ಹೌದು.

ಸಾ—ಇದನ್ನು ಒಪ್ಪಿದ ಮೇಲೆ ನನಗೆ ದೇವತೆಗಳಲ್ಲಿ ನಂಬಿಕೆಯಿದೆಯೆಂದೂ ಒಪ್ಪಿದಹಾಗಾಯಿತು. ನೀನು ಹೇಳುವಂತೆ ಈ ಶಕ್ತಿಗಳು ದೇವತೆಗಳೇ ಆದರೆ ನೀನು ನನ್ನ ವಿಷಯದಲ್ಲಿ ಒಂದು ಒಗಟಿಯನ್ನು ಹೇಳಿದ ಹಾಗಾಗ ಲಿಲ್ಲವೆ ನೋಡು. ಮೊದಲು ನಾನು ದೇವತೆಗಳಲ್ಲಿ ನಂಬಿಕೆಯಿಲ್ಲದವ ನೆಂದು ಹೇಳಿ ಮತ್ತೆ ದೇವತೆಗಳಲ್ಲಿ ನನಗೆ ನಂಬಿಕೆಯಿದೆಯೆಂದು ಹೇಳಿ ದಂತಾಯಿತು. ಈ ಶಕ್ತಿಗಳು ದೇವತೆಗಳೆಂದು ಒಪ್ಪದೆ, ಅವು ವನದೇವಿ ಯರಲ್ಲಿಯೂ ಜಲದೇವಿಯರಲ್ಲಿಯೂ ದೇವತೆಗಳಿಗೆ ಹುಟ್ಟಿದ ಮಕ್ಕಳೆ ನ್ನೋಣ. ಹಾಗೆ ದೇವತೆಗಳ ಮಕ್ಕಳು ಇದ್ದಾರೆಂದು ಒಪ್ಪಿದ ಮೇಲೆ ದೇವತೆಗಳಿಲ್ಲವೆಂದು ಯಾರಾದರೂ ಹೇಳುತ್ತಾರೆಯೆ? ಹೇಸರಗತ್ತೆಗಳಿವೆ ಎಂದು ಹೇಳಿ ಕುದುರೆಗಳೂ ಕತ್ತೆಗಳೂ ಇಲ್ಲವೆಂದು ಹೇಳಿದರೆ ಅದು ಹೇಗೆ ಹುಚ್ಚು ಮಾತಾಗುತ್ತದೆಯೋ ಇದೂ ಹಾಗೆಯೇ ಆಗುತ್ತದೆ. ಮೆಲಿಟಸ್, ನನ್ನ ಮೇಲೆ ಮತ್ತೆ ಯಾವ ತಪ್ಪನ್ನೂ ಹೊರಿಸಲು ತೋರದೆ ಹೋದದ್ದರಿಂದ ನೀನು ಈ ತಪ್ಪನ್ನು ಹುಡುಕಿರಬೇಕು ಅಥವಾ ನನ್ನ ಬುದ್ಧಿಶಕ್ತಿಯನ್ನು ಪರೀಕ್ಷೆ ಮಾಡುವುದಕ್ಕೋಸ್ಕರ ಹೀಗೆ ಮಾಡಿರಬೇಕು. ಆದರೆ ಸ್ವಲ್ಪವಾದರೂ ಬುದ್ಧಿಯಿರುವವರು ಯಾರೂ ಇಂಥ ಸುಳ್ಳಿನಿಂದ ಮೋಸಹೋಗಲಾರರು. ದೈವಿಕವಾದ ಶಕ್ತಿಗಳೂ ವಸ್ತುಗಳೂ ಇರುವು ವೆಂದು ನಂಬುವವನೇ ದೇವತೆಗಳು ಇಲ್ಲವೆಂದೂ ನಂಬುವುದು ಅಸಾಧ್ಯ.

ಅದು ಹೋಗಲಿ. ನಾನು ಮೊದಲು ಹೇಳಿದಂತೆ ಅನೇಕ ಜನಗಳಿಗೆ ನನ್ನ ಮೇಲೆ ತುಂಬ ಶತ್ರುತ್ವವಿದೆಯೆನ್ನುವುದು ನಿಜ. ಈ ವಿವಾದದಲ್ಲಿ ಕೊನೆಗೆ ತೀರ್ಮಾನವೇನಾದರೂ ನನಗೆ ವಿರುದ್ಧವಾಗಿ ಆದರೆ, ಅದಕ್ಕೆ ಕಾರಣ ಮೆಲಿಟಸ್ ಅಲ್ಲ, ಆನಿಟಸ್ಸನೂ ಅಲ್ಲ; ಈ ಜನರ ಹೊಟ್ಟೆಕಿಚ್ಚು ಮತ್ತು ಶತ್ರುತ್ವ. ಹಿಂದೆ ಸಜ್ಜನರು ಎಷ್ಟೋ ಮಂದಿ ಇದರಿಂದ ನಾಶವಾಗಿದ್ದಾರೆ; ಮುಂದೆ ಎಷ್ಟೋ ಮಂದಿ ನಾಶವಾಗುತ್ತಾರೆ. ಹೀಗೆ ಜನರ ಕಿಚ್ಚಿಗೆ ತುತ್ತಾ ಗುವವರಲ್ಲಿ ನಾನೇ ಕೊನೆಯವನಲ್ಲ. "ನಿನ್ನನ್ನು ಮರಣಕ್ಕೆ ಗುರಿಮಾಡುವ ಈ ಜೀವನ ಪಥವನ್ನು ಹಿಡಿದಿರುವೆಯಲ್ಲ, ನಿನಗೆ ನಾಚಿಕೆಯಾಗುವುದಿಲ್ಲವೆ?" ಎಂದು ನಿಮ್ಮಲ್ಲಿ ಯಾರಾದರೂ ಕೇಳಬಹುದು. ಅವರಿಗೆ ನಾನು ಕೊಡುವ ಉತ್ತರವಿದು: ನಿಮ್ಮದು ತಪ್ಪು ತಿಳಿವಳಿಕೆ. ಸ್ವಲ್ಪವಾದರೂ ಮಹತ್ವವುಳ್ಳ

GANDHI SMARAKA GRANTHALAYA
BANGALORE-1,
K000016

ಯಾವನೇ ಆಗಲಿ ತಾನು ಮಾಡುವ ಕೆಲಸ ತಪ್ಪೇ ಸರಿಯೆ, ಸತ್ಪುರುಷರ ಕೆಲಸವೆ ಅಥವಾ ದುಷ್ಟರ ಕೆಲಸವೆ, ಎಂಬುದಕ್ಕೆ ಗಮನಕೊಡಬೇಕೇ ಹೊರತು ಸಾವು ಬದುಕಿನ ಯೋಚನೆಯನ್ನು ಮನಸ್ಸಿಗೆ ಹತ್ತಿಸಿಕೊಳ್ಳ ಕೂಡದು. ನಿಮ್ಮ ವಾದದ ಪ್ರಕಾರ ಟ್ರಾಯ್ ಪಟ್ಟಣದ ಮುಂದೆ ಮಡಿದ ದೇವಾಂಶಸಂಭೂತರಾದ ವೀರರೆಲ್ಲರೂ, ಅದರಲ್ಲಿಯೂ ಥೀಟಿಸ್ಸಳ ಮಗ ಅಕಿಲೀಸನೂ ಕೆಟ್ಟವರೆನ್ನಬೇಕಾಗುತ್ತದೆ. ಅಕಿಲೀಸನಿಗೆ ಅವಮಾನವೆಂದರೆ ಹೆದರಿಕೆ; ಅಪಾಯವೆಂದರೆ ತಿರಸ್ಕಾರ. ಅವನು ಹೆಕ್ಟರನನ್ನು ಕೊಲ್ಲಬೇಕೆಂದು ಆತುರದಲ್ಲಿದ್ದಾಗ ದೇವರಮಣಿಯಾದ ಅವನ ತಾಯಿ ಅವನ ಬಳಿಗೆ ಬಂದು "ಮಗನೇ, ನಿನ್ನ ಸ್ನೇಹಿತ ಪೆಟ್ರೋಕ್ಲಸ್ಸನ್ನು ಕೊಂದ ಹೆಕ್ಟರನ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ ನೀನು ಆತನನ್ನು ಕೊಂದರೆ, ಅನಂತರ ನೀನೂ ಸಾಯಬೇಕಾಗುತ್ತದೆ. ಹೆಕ್ಟರ್ ಸತ್ತ ಕೂಡಲೆ ನೀನೂ ಸಾಯಬೇಕೆಂದು ವಿಧಿ ನಿಯಮವಿದೆ" ಎಂದಳು. ಅಪಾಯ, ಮರಣ ಎಂದರೆ ಅಕಿಲೀಸನಿಗೆ ಲಕ್ಷ್ಯವಿಲ್ಲ. ಸ್ನೇಹಿತನ ಮರಣಕ್ಕೆ ಪ್ರತೀಕಾರ ಮಾಡದೆ ಹೇಡಿಯಾಗಿ ಬದುಕುವುದಕ್ಕೆ ಆತನು ಹೆಚ್ಚು ಅಂಜುತ್ತಿದ್ದನು. ತಾಯಿಯ ಮಾತನ್ನು ಕೇಳಿ "ನಾನು ಆ ಕೇಡಿಗನ ಮೇಲೆ ಹಗೆ ತೀರಿಸಿಕೊಂಡ ಬಳಿಕ ಸಾವು ಬಂದರೆ ಬರಲಿ. ಗ್ರೀಕರ ಹಡಗುಗಳ ಬಳಿಯಲ್ಲಿ ಎಲ್ಲರಿಗೂ ನಗುಪಾಟಲಾಗಿ ಭೂಮಿಗೆ ಹೊರೆಯೆನ್ನಿಸಿಕೊಂಡು ಬಾಳುವುದಕ್ಕಿಂತ ಮರಣವೇ ಲೇಸು" ಎಂದನು. ಆತನು ಅಪಾಯಕ್ಕೂ ಮರಣಕ್ಕೂ ಅಂಜಿದನೆ? ಯಾವುದಾದರೂ ಒಂದು ಸ್ಥಾನ ನಮಗೆ ಉತ್ತಮವಾದದ್ದೆಂದು ಆರಿಸಿಕೊಂಡ ಮೇಲೆ, ಅಥವಾ ನಮ್ಮ ನಾಯಕನು ನಮಗೆ ಒಂದು ಸ್ಥಾನದಲ್ಲಿರಬೇಕೆಂದು ನಿಯಮಿಸಿದ ಮೇಲೆ, ಎಂಥ ಅಪಾಯ ಬಂದರೂ ಆ ಸ್ಥಾನವನ್ನು ಬಿಟ್ಟು ಕದಲ್ಲ ಕೂಡದು; ಮರಣಕ್ಕೂ ಅಂಜಕೂಡದು, ಅಪಯಶಸ್ಸಿಗೂ ಅಂಜಕೂಡದು. ನನ್ನ ಮನಸ್ಸಿಗೆ ಇದೇ ಉತ್ತಮವಾದ ನಡವಳಿಕೆ.

ಪೋಟಿಡಿಯ, ಆಂಫಿಪೊಲಿಸ್, ಡೀಲಿಯಂ—ಮುಂತಾದ ಕಡೆಗಳಲ್ಲಿ ಯುದ್ಧವಾದಾಗ ನಿಮ್ಮಿಂದ ನಿಯಮಿತರಾದ ಸೇನಾನಾಯಕರು ನನಗೆ ಒಂದು ಸ್ಥಳದಲ್ಲಿರಬೇಕೆಂದು ಆಜ್ಞಾಪಿಸಿದರು. ಆಗ ಅಲ್ಲಿದ್ದರೆ ಮರಣ ನಿಶ್ಚಯವೆಂದು ತೋರಿದರೂ ಲೆಕ್ಕಿಸದೆ ನಾನು ಅಲ್ಲಿಯೇ ನಿಂತೆನು; ನನ್ನ

ಜೊತೆಯಲ್ಲಿದ್ದವರೂ ಹಾಗೆಯೇ ನಿಂತರು. ಆಗ ಹಾಗೆ ನಾಯಕನ ಆಜ್ಞೆಯನ್ನು ಪಾಲಿಸಿದ ನಾನು ಈಗ ದೇವರೇ ನನ್ನನ್ನು ತತ್ವಾನ್ವೇಷಣ ಕಾರ್ಯಕ್ಕೆ ನಿಯಮಿಸಿದ್ದಾನೆಂದು ನಂಬಿಕೆಯಿರುವಾಗ, ಮರಣಕ್ಕೇ ಆಗಲಿ ಇತರ ಶಿಕ್ಷೆಗೇ ಆಗಲಿ ಹೆದರಿ, ನನ್ನ ಕರ್ತವ್ಯವನ್ನು ಬಿಟ್ಟರೆ ಮಹತ್ತರವಾದ ಪಾಪವನ್ನಾಚರಿಸಿದಂತಾಗುತ್ತದೆ. ನಾನು ಹಾಗೇನಾದರೂ ಮಾಡಿದ್ದೇ ಆದರೆ ನನ್ನನ್ನು ನ್ಯಾಯಸ್ಥಾನಕ್ಕೆಳೆದು, ದೇವರಲ್ಲಿ ನಂಬಿಕೆಯಿಲ್ಲದವನೆಂದೂ ದೇವವಾಣಿಯ ಆಜ್ಞೆಯನ್ನು ನಿರಾಕರಿಸಿದವನೆಂದೂ ಮರಣಕ್ಕೆ ಹೆದರುವವನೆಂದೂ ತಿಳಿವಳಿಕೆಯಿಲ್ಲದಿದ್ದರೂ ಜ್ಞಾನಿಯೆಂದು ಹೆಮ್ಮೆಪಡುವವನೆಂದೂ ಶಿಕ್ಷಿಸಬಹುದು. ತಿಳಿವಳಿಕೆಯಿಲ್ಲದಿದ್ದರೂ ತಾನು ಜ್ಞಾನಿಯೆಂದು ಭಾವಿಸಿಕೊಳ್ಳುವುದು ಹೇಗೋ ಸಾವಿಗೆ ಹೆದರುವುದೂ ಹಾಗೆಯೇ; ಏಕೆಂದರೆ ಹಾಗೆ ಅಂಜುವವರು ತಮಗೆ ತಿಳಿಯದ ವಿಷಯ ತಿಳಿದಿದೆಯೆಂದು ಭಾವಿಸುತ್ತಾರೆ. ಮನುಷ್ಯರಿಗೆ ಸಾವಿಗಿಂತಲೂ ಲೇಸಾದದ್ದು ಮತ್ತಾವುದೂ ಇಲ್ಲದಿರಬಹುದು; ಆ ರಹಸ್ಯವನ್ನು ಬಲ್ಲವರು ಯಾರು? ಆದರೂ ಅದಕ್ಕಿಂತ ದೊಡ್ಡ ವಿಪತ್ತು ಯಾವುದೂ ಇಲ್ಲವೆಂದು ನಿರ್ಧರವಾಗಿ ತಿಳಿದಿರುವವರಂತೆ ಈ ಜನರು ಹೆದರುತ್ತಾರೆ. ಹೀಗೆ ತಿಳಿಯದ ವಿಷಯವನ್ನು ತಿಳಿದಿದ್ದೇವೆಂದು ಭಾವಿಸುವುದು ವಿಶೇಷವಾದ ಅಜ್ಞಾನದ ಲಕ್ಷಣವಲ್ಲವೆ? ಇದೊಂದು ವಿಷಯದಲ್ಲಿ ನನ್ನ ಅಭಿಪ್ರಾಯವೂ ಇತರರ ಅಭಿಪ್ರಾಯವೂ ಬೇರೆ ಬೇರೆಯಾಗಿರಬಹುದು; ಇದೊಂದರಲ್ಲಿ ನಾನು ಇತರರಿಗಿಂತ ಜ್ಞಾನಿಯೆಂದುಕೊಂಡರೂ ಎಂದುಕೊಳ್ಳಬಹುದು. ನನ್ನ ಜ್ಞಾನವಿರುವುದು ಇಷ್ಟೆ: ಮರಣವಾದ ಮೇಲೆ ಬರುವ ಲೋಕದ ವಿಷಯ ನನಗೆ ಏನೂ ತಿಳಿಯದಿದ್ದರೂ ಅದು ನನಗೆ ತಿಳಿದಿದೆಯೆಂದು ನಾನು ಭಾವಿಸುವುದಿಲ್ಲ. ಆದರೆ ಮನುಷ್ಯರೇ ಆಗಲಿ ದೇವತೆಗಳೇ ಆಗಲಿ, ನನಗಿಂತಲೂ ಶ್ರೇಷ್ಠರಾದವರ ಆಜ್ಞೆಯನ್ನು ಉಲ್ಲಂಘಿಸುವುದು ಹೀನವಾದದ್ದೆಂದೂ ನೀಚಕೃತ್ಯವೆಂದೂ ನಾನು ಚೆನ್ನಾಗಿ ತಿಳಿದಿದ್ದೇನೆ. ಆದ್ದರಿಂದ ನಾನು "ಇದು ಒಳ್ಳೆಯದಿದ್ದರೂ ಇರಬಹುದು" ಎಂದು ಸಂದೇಹವಿರುವ ಕಾರ್ಯದಲ್ಲಿ ತೊಡಗಲು ಹೆದರುವುದಕ್ಕಿಂತಲೂ ಹೆಚ್ಚಾಗಿ, ಅಧರ್ಮವೆಂದು ಚೆನ್ನಾಗಿ ತಿಳಿದಿರುವ ಕಾರ್ಯದಲ್ಲಿ ತೊಡಗಲು ಹೆದರುತ್ತೇನೆ. "ಸಾಕ್ರೆಟೀಸನನ್ನು ವಿಚಾರಣೆಗೆ ತಂದ ಮೇಲೆ ಮರಣ ದಂಡನೆಯನ್ನು ವಿಧಿಸಲೇ ಬೇಕು, ಇಲ್ಲವೇ ವಿಚಾರ

ಣೆಗೆ ತರಲೇಬಾರದಾಗಿತ್ತು. ಹಾಗೆ ದಂಡನೆಯನ್ನು ವಿಧಿಸದಿದ್ದರೆ ನಿಮ್ಮ ಮಕ್ಕಳು ಅವನ ಬೋಧನೆಯನ್ನು ಅನುಸರಿಸಿ ಹಾಳಾಗಿ ಹೋಗುವರು" ಎಂದು ಅನಿಟಸ್ ನಿಮಗೆ ಸಾರಿ ಹೇಳುತ್ತಿದ್ದಾನೆ. ಆದರೂ ನೀವು ಅವನ ಮಾತಿಗೆ ಕಿವಿಗೊಡದೆ ನನ್ನನ್ನು ಬಿಡುಗಡೆ ಮಾಡಿ, "ಸಾಕ್ರೆಟೀಸ್, ಈ ಸಾರಿ ನಾವು ಅನಿಟಸ್ಸಿನ ಮಾತನ್ನು ಕೇಳುವುದಿಲ್ಲ. ಪುನಃ ತತ್ವಾನ್ವೇಷಣಕಾರ್ಯ ದಲ್ಲಿ ತೊಡಗುವುದಿಲ್ಲವೆಂದು ಭಾಷೆ ಕೊಡುವುದಾದರೆ ನಿನ್ನನ್ನು ಬಿಡುಗಡೆ ಮಾಡುತ್ತೇವೆ. ಮತ್ತೇನಾದರೂ ಅದೇ ಕಾರ್ಯದಲ್ಲಿ ಉದ್ಯುಕ್ತನಾದರೆ ಮಾತ್ರ ನಿನಗೆ ಸಾವು ಸಿದ್ಧ'' ಎಂದು ಹೇಳಬಹುದು. ಆದರೆ ನಾನು ಇಂಥ ನಿಬಂಧನೆಗಳಿಗೆ ಒಪ್ಪುವವನಲ್ಲ. "ಅಥೆನ್ಸಿನ ಜನರೇ, ನನಗೆ ನಿಮ್ಮಲ್ಲಿ ಮರ್ಯಾದೆಯಿದೆ, ಪ್ರೇಮವಿದೆ. ಆದರೂ ದೇವವಾಣಿಯ ಆಜ್ಞಾನುಸಾರ ವಾಗಿ ನಡೆಯಬೇಕೋ ನಿಮ್ಮ ಆಜ್ಞಾನುಸಾರವಾಗಿ ನಡೆಯಬೇಕೋ" ಎಂಬ ಧರ್ಮಸಂಕಟ ಬಂದಲ್ಲಿ ನಾನು ನಿಮ್ಮ ಆಜ್ಞೆಯನ್ನುಲ್ಲಂಘಿಸಿ ದೇವರ ಆಜ್ಞೆ ಯನ್ನು ಪಾಲಿಸತಕ್ಕವನೇ ಸರಿ. ನಾನು ಬದುಕಿರುವವರೆಗೆ, ನನ್ನ ದೇಹ ದಲ್ಲಿ ಶಕ್ತಿಯಿರುವವರೆಗೆ ನಾನು ತತ್ವಾನ್ವೇಷಣೆಯನ್ನು ಬಿಡುವುದಿಲ್ಲ. ನನಗೆ ಸತ್ಯವೆಂದು ತೋರಿದ್ದನ್ನು ನಿಮಗೂ ಸ್ಪಷ್ಟಪಡಿಸದೆ ಇರುವುದಿಲ್ಲ. ನಾಳೆ ನಿಮ್ಮಲ್ಲಿ ಯಾರಾದರೂ ದಾರಿಯಲ್ಲಿ ಸಿಕ್ಕಿದರೆ ಎಂದಿನಂತೆ "ಸ್ವಾಮಿ, ಬಾಹುಬಲ ಜ್ಞಾನಬಲಗಳೆರಡಕ್ಕೂ ಪ್ರಪಂಚದಲ್ಲಿ ಪ್ರಸಿದ್ಧವಾಗಿರುವ ಅಥೆನ್ಸ್ ಪಟ್ಟಣದಲ್ಲಿ ಹುಟ್ಟಿಯೂ ನೀವು ಐಶ್ವರ್ಯ, ಸನ್ಮಾನ, ಒಳ್ಳೆಯ ಹೆಸರು— ಇವುಗಳ ಸಂಪಾದನೆಯಲ್ಲಿ ಮಗ್ನರಾಗಿ, ಜ್ಞಾನಾರ್ಜನೆ ತತ್ವಾನ್ವೇಷಣ ಆತ್ಮ ಪರಿಪೂರ್ಣತೆಗಳನ್ನು ಮರೆತಿರುವಿರಲ್ಲ, ಇದು ನಾಚಿಕೆಗೇಡಲ್ಲವೆ?'' ಎಂದು ಪ್ರಶ್ನೆ ಹಾಕುತ್ತೇನೆ. ನೀವೇನಾದರೂ ಈ ವಿಷಯದಲ್ಲಿ ಚರ್ಚೆಯನ್ನು ಪ್ರಾರಂಭಿಸಿ ನಿಮಗೆ ಜ್ಞಾನಾರ್ಜನೆಯಲ್ಲಿಯೂ ಆಸಕ್ತಿಯಿದೆಯೆಂದು ಹೇಳಿದರೆ ಅಷ್ಟಕ್ಕೇ ತೃಪ್ತನಾಗದೆ ನಿಮ್ಮನ್ನು ಮತ್ತೆ ತಡೆದು ಪ್ರಶ್ನೆ ಮರುಪ್ರಶ್ನೆಗಳನ್ನು ಹಾಕುತ್ತೇನೆ. ಆಗ ನಿಮ್ಮಲ್ಲಿ ಇವೆ ಎಂದು ನೀವು ತಿಳಿದುಕೊಂಡಿರುವ ಸದ್ಗುಣಗಳು ಇಲ್ಲವೆಂದು ತೋರಿಬಂದರೆ "ನೀವು ಮುಖ್ಯವಾದ, ಶ್ರೇಯಸ್ಕರ ವಾದ ವಿಷಯಗಳಿಗೆ ಬದಲಾಗಿ ತುಚ್ಛವಾದ ವಿಷಯಗಳಿಗೆ ಮನಸ್ಸುಕೊಟ್ಟಿ ರುವಿರಿ'' ಎಂದು ಹೇಳಿ ನಿಮ್ಮ ಲೋಪವನ್ನು ತೋರಿಸಿಕೊಡುತ್ತೇನೆ.

ಅಥೆನ್ಸಿನವರಾಗಲಿ ಹೊರಗಿನವರಾಗಲಿ, ಯುವಕರಾಗಲಿ ವೃದ್ಧರಾಗಲಿ, ಎಲ್ಲ ರಲ್ಲಿಯೂ ನಾನು ಹೀಗೆಯೇ ನಡೆದುಕೊಳ್ಳುತ್ತೇನೆ. ಅಥೆನ್ಸಿನವರು ನನಗೆ ಸಮೀಪ ಬಂಧುಗಳಾದ್ದರಿಂದ ಅವರ ವಿಷಯದಲ್ಲಿ ಮತ್ತಷ್ಟು ಶ್ರದ್ಧೆಯಿಂದ ಈ ಕೆಲಸವನ್ನು ಮಾಡುತ್ತೇನೆ. ನಾನು ಭಗವಂತನ ಪ್ರೇರಣೆಯಿಂದ ಈ ಕೆಲಸಕ್ಕೆ ಕೈಹಾಕಿದ್ದೇನೆಂದೂ ಅಥೆನ್ಸಿಗೆ ಹಿಂದೆ ಯಾರಿಂದಲೂ ಆಗದಷ್ಟು ಶ್ರೇಯಸ್ಸು ಈಗ ನನ್ನ ಸೇವೆಯಿಂದ ಆಗುತ್ತದೆಂದೂ ನನ್ನ ನಂಬಿಕೆ. ಈಗ ನಾನು ಹೇಳುತ್ತಿರುವುದೇನು ? ಶರೀರಪೋಷಣೆ ದ್ರವ್ಯಾರ್ಜನೆಗಳಿಗಿಂತ ಆತ್ಮ ಪರಿಪೂರ್ಣತೆಗೆ ಹೆಚ್ಚು ಗಮನಕೊಡಿರೆಂದು ; ಪ್ರತಿಯೊಬ್ಬ ವ್ಯಕ್ತಿಗೂ ಪ್ರತಿಯೊಂದು ರಾಷ್ಟ್ರಕ್ಕೂ ಸದ್ಗುಣವು ಹೊನ್ನಿನಿಂದ ಬರುವುದಿಲ್ಲ, ಸದ್ಗುಣಗಳಿಂದ ಹೊನ್ನೂ ಇತರ ಉತ್ತಮ ಫಲಗಳೆಲ್ಲವೂ ಬರುತ್ತವೆಯೆಂದು. ಇದೇ ನನ್ನ ಬೋಧನೆ. ಇದರಿಂದ ಯುವಕರು ಕೆಟ್ಟುಹೋಗುವುದಾದರೆ ನನ್ನಿಂದ ಅಥೆನ್ಸಿಗೆ ಅಪಾಯವೇ ಸರಿ. ಆದರೆ ನಾನು ಇಷ್ಟಲ್ಲದೆ ಇನ್ನೇನಾದರೂ ಬೋಧಿಸುತ್ತೇನೆಂದು ಯಾರಾದರೂ ಹೇಳಿದರೆ ಅವರು ಅಸತ್ಯವನ್ನು ನುಡಿಯುತ್ತಾರೆ. ಆದ್ದರಿಂದ ಮಹನೀಯರೇ, ನೀವು ಆನಿಟಸ್ ಹೇಳುವಂತೆ ನನ್ನನ್ನು ಮರಣಕ್ಕಾದರೂ ಗುರಿಮಾಡಿ ಅಥವಾ ಬಿಡುಗಡೆ ಮಾಡಿದರೂ ಮಾಡಿ ; ಆದರೆ ನಾನು ಹತ್ತು ಸಲ ಮರಣ ಯಾತನೆಯನ್ನು ಅನುಭವಿಸಬೇಕಾದರೂ ನನ್ನ ನಡತೆಯನ್ನೇನೋ ಬದಲಾಯಿಸುವುದಿಲ್ಲವೆಂದು ಮಾತ್ರ ತಿಳಿಯಿರಿ.

ಅಥೆನ್ಸಿನ ಮಹನೀಯರೇ, ಗಲಭೆ ಮಾಡದೆ ನನ್ನ ಮಾತುಗಳನ್ನು ಕೇಳಬೇಕು; ಹಾಗೆ ಕೇಳಬೇಕೆಂಬುದು ನನ್ನ ನಿಮ್ಮ ಒಪ್ಪಂದ. ಈಗ ನಾನು ಹೇಳುವ ಮಾತುಗಳು ನಿಮ್ಮ ಕೋಪವನ್ನು ಉದ್ರೇಕಗೊಳಿಸಬಹುದು; ಆದರೆ ಅದನ್ನು ತಡೆದುಕೊಳ್ಳಿ; ನನ್ನ ಮಾತುಗಳನ್ನು ಕೇಳುವುದರಿಂದ ನಿಮಗೆ ಒಳ್ಳೆಯದಾಗುತ್ತದೆಂದು ನನ್ನ ನಂಬಿಕೆ. ನಿಮ್ಮ ಕೋಪದಲ್ಲಿ ನೀವು ನನ್ನನ್ನು ಕೊಲ್ಲಿಸಿದರೆ ಅದರಿಂದ ನನಗಿಂತ ನಿಮಗೇ ಹೆಚ್ಚು ಹಾನಿ. ನನ್ನನ್ನು ಆನಿಟಸ್, ಮೆಲೆಟಸ್ ಇವರು ಯಾರೂ ನೋಯಿಸಲಾರರು. ಯಾರೇ ಆಗಲಿ ತಮಗಿಂತ ಉತ್ತಮರಾದವರಿಗೆ ಹಾನಿಯುಂಟು ಮಾಡಲಾರರು. ಆನಿಟಸ್ ನನ್ನನ್ನು ಕೊಲ್ಲಿಸಬಹುದು, ಗಡಿಪಾರು ಮಾಡಿಸಬಹುದು. ನನ್ನ ಪೌರಯೋಗ್ಯವಾದ ಹಕ್ಕುಗಳನ್ನು ಕಿತ್ತುಕೊಳ್ಳಬಹುದು.

ಆದರೆ ಇಷ್ಟು ಮಾಡಿದ್ದರಿಂದ ನನ್ನನ್ನು ಬಹಳ ಕಷ್ಟಕ್ಕೆ ಈಡುಮಾಡಿದಂತಾಯಿತೆಂದು ಭಾವಿಸಿದರೆ ಅದು ಬರಿಯ ಭ್ರಾಂತಿ. ಈಗ ಅವನು ಮಾಡುತ್ತಿರುವ ಹಾಗೆ ಅನ್ಯಾಯವಾಗಿ ಮತ್ತೊಬ್ಬನ ಪ್ರಾಣಹರಣಮಾಡಿದರೆ ಅದರಿಂದ ಆನಿಟಸ್ಸಿಗೇ ಹೆಚ್ಚು ಹಾನಿಯುಂಟಾಗುತ್ತದೆ.

ಈಗ ನಾನು ಇಲ್ಲಿ ವಾದಿಸುತ್ತಿರುವುದು ನನ್ನ ಪ್ರಾಣದ ಸಲುವಾಗಿ ಅಲ್ಲ, ನಿಮ್ಮ ಸಲುವಾಗಿ; ನನ್ನನ್ನು ನಿಮ್ಮ ಬಳಿಗೆ ಕಳುಹಿಸಿಕೊಟ್ಟ ದೇವರಿಗೆ ವಿರೋಧವಾಗಿ ನೀವು ನಡೆಯದಿರಲೆಂದು. ಅಥೆನ್ಸಿನ ಜನರಲ್ಲಿ ನಾನು ಮಾಡಬೇಕಾಗಿರುವ ಅರಿಕೆ ಇದು. ಈಗ ಅಥೆನ್ಸ್ ನಗರ ತನ್ನ ಶರೀರದ ಗಾತ್ರದ ನಿಮಿತ್ತದಿಂದಲೇ ನಡಗೆಯಲ್ಲಿ ಲವಲವಿಕೆಯಿಲ್ಲದಿರುವ ಒಂದು ಉತ್ತಮಾಶ್ವದಂತಿದೆ. ನಾನು—ಸ್ವಲ್ಪ ವಿಚಿತ್ರವಾದ ಒಂದು ರೂಪಕವನ್ನು ಉಪಯೋಗಿಸಬಹುದಾದರೆ—ಆ ಕುದುರೆಯನ್ನು ಕಡಿದು ಚುರುಕು ಮಾಡಲು ಪರಮಾತ್ಮನು ಕಳುಹಿಸಿಕೊಟ್ಟ ತೊಣಚಿ. ದಿನವೆಲ್ಲಾ ನಿಮ್ಮನ್ನು ಕಡಿದು ಎಚ್ಚರಿಸಿ ನಿಮ್ಮ ದೋಷಗಳನ್ನು ತೋರಿಸಲೆಂದೇ ನನ್ನನ್ನು ದೇವರು ಈ ಕೆಲಸಕ್ಕೆ ಪ್ರೇರಿಸಿರಬೇಕು. ಈಗ ನನ್ನನ್ನು ಕೊಂದರೆ ಪುನಃ ನನ್ನಂಥವನು ನಿಮಗೆ ಸಿಕ್ಕುವುದು ಕಷ್ಟ; ಆದ್ದರಿಂದ ನನ್ನನ್ನು ಬಿಟ್ಟುಬಿಡಿ. ನಿದ್ದೆಯಿಂದ ಎದ್ದವರಿಗೆ ತಮ್ಮನ್ನು ಎಬ್ಬಿಸಿದವರ ಮೇಲೆ ಸಿಟ್ಟಾಗುವಂತೆ ನಿಮಗೂ ನನ್ನ ಮೇಲೆ ಈಗ ಸಿಟ್ಟಾಗಬಹುದು. ಆನಿಟಸ್ಸಿನ ಮಾತಿನಂತೆ ನನ್ನನ್ನು ಕೊಲ್ಲಿಸಿದರೆ ಮುಂದೆ ದೇವರು ಕರುಣದಿಂದ ನನ್ನಂಥವನೊಬ್ಬನನ್ನು ಕಳುಹಿಸುವವರೆಗೂ ಒಬ್ಬರ ಅಡಚಣೆಯೂ ಇಲ್ಲದೆ ನೀವು ಜೀವಾವಧಿ ನಿದ್ರೆಯಲ್ಲಿರಬಹುದು. ದೇವರೇ ನನ್ನನ್ನು ನಿಮ್ಮಲ್ಲಿಗೆ ಕಳುಹಿಸಿದ್ದಾನೆಂಬುದಕ್ಕೆ ಇದೊಂದು ಪ್ರಮಾಣವೇ ಸಾಕು: ನಾನು ನನ್ನ ಸ್ವಂತ ಕೆಲಸವೊಂದಕ್ಕೂ ಗಮನ ಕೊಡದೆ ನಿಮ್ಮ ತಂದೆಯಂತೆ, ಅಣ್ಣನಂತೆ ನಿಮ್ಮ ಬಳಿಗೆ ಬಂದು ನೀವು ಸದ್ಗುಣಿಗಳಾಗಬೇಕೆಂದು ಬೋಧಿಸಬೇಕಾದದ್ದೇನು? ಇದು ಮನುಷ್ಯ ಸ್ವಭಾವಕ್ಕೇ ವಿರುದ್ಧವಲ್ಲವೆ? ನನ್ನ ಬೋಧನೆಗೆ ಪ್ರತಿಫಲವಾಗಿ ನೀವೇನಾದರೂ ದ್ರವ್ಯವನ್ನು ಕೊಟ್ಟಿದ್ದರೆ ನನ್ನ ನಡತೆ ಸಹಜವೆನ್ನಬಹುದು. ಆದರೆ ನಾನು ಒಬ್ಬರಿಂದ ಹಣವನ್ನು ಅಪೇಕ್ಷಿಸಿದೆನೆಂದಾಗಲಿ ತೆಗೆದುಕೊಂಡೆನೆಂದಾಗಲಿ ಹೇಳಲು ಈಗ ನನ್ನನ್ನು ನಿಂದಿಸುತ್ತಿರುವ ಜನರಿಗೂ ಧೈರ್ಯವಿಲ್ಲ. ಹಾಗೆ

ಹೇಳುವುದಕ್ಕೆ ಏನೂ ಪ್ರಮಾಣವಿಲ್ಲ; ಆದರೆ ನಾನು ಹಣದಾಸೆಗಾಗಿ ಕಷ್ಟ ಪಡಲಿಲ್ಲವೆನ್ನುವುದಕ್ಕೆ ಅತ್ಯುತ್ತಮವಾದ ಪ್ರಮಾಣವಾಗಿ ನನ್ನ ಬಡತನವಿದೆ.

"ಜನರ ಬಳಿಗೆ ಹೋಗಿ ಅವರಿಗೆ ಬುದ್ಧಿ ಹೇಳಿ ಎಲ್ಲರ ಕೆಲಸಗಳಲ್ಲಿಯೂ ಕೈಹಾಕುವ ಈ ಸಾಕ್ರೆಟೀಸನು ಧೈರ್ಯವಾಗಿ ಮುಂದೆ ಬಂದು ರಾಷ್ಟ್ರದ ಅಧಿಕಾರಿಗಳಿಗೇ ಏಕೆ ಬುದ್ಧಿ ಹೇಳಬಾರದು?" ಎಂದು ಕೆಲವರು ಆಶ್ಚರ್ಯ ಪಡಬಹುದು. ಅದು ಏಕೆಂಬುದನ್ನು ನಿಮಗೆ ಈಗ ತಿಳಿಸುತ್ತೇನೆ. ನನ್ನನ್ನು ಒಂದು ದೈವಶಕ್ತಿ ಪ್ರೇರಿಸುವುದೆಂದೂ, ನನಗೆ ಸಲಹೆ ಕೊಡುವುದೆಂದೂ ನಾನು ಅನೇಕ ವೇಳೆ ಹೇಳಿರುವುದು ನಿಮಗೆ ನೆನಪಿರಬಹುದು. ಆ ದೈವ ಶಕ್ತಿಯನ್ನೇ ಮೆಲೆಟಸ್ ತನ್ನ ಹೇಳಿಕೆಯಲ್ಲಿ ಹಾಸ್ಯಕ್ಕೆ ಗುರಿಮಾಡಿರುವುದು. ಈ ಶಕ್ತಿ—ಅದೊಂದು ವಿಧವಾದ ವಾಣಿ—ನಾನು ಹುಡುಗನಾಗಿರುವಾಗಲೇ ನನ್ನನ್ನು ಪ್ರೇರಿಸಲಾರಂಭಿಸಿತು. ಯಾವುದಾದರೂ ಕೆಲಸವನ್ನು ನಾನು ಮಾಡಬೇಕೆಂದಿರುವಾಗ ಅದು ನನ್ನನ್ನು ತಡೆಯುವುದೇ ಹೊರತು, ಇಂಥ ಕೆಲಸವನ್ನು ಮಾಡು ಎಂದು ಆಜ್ಞಾಪಿಸುವುದಿಲ್ಲ. ಅದು ರಾಜಕೀಯ ವಿಷಯಗಳಿಗೆ ಕೈಹಾಕಬೇಡವೆಂದು ನನ್ನನ್ನು ತಡೆಯಿತು. ತಡೆದದ್ದು ಸರಿಯೆಂದೇ ನನಗೆ ತೋರುತ್ತದೆ. ಹಾಗೇನಾದರೂ ಆ ವಿಷಯಗಳಿಗೆ ಕೈಹಾಕಿದ್ದರೆ ನಾನು ಎಷ್ಟೋ ವರ್ಷಗಳ ಹಿಂದೆಯೇ ಮರಣಕ್ಕೆ ಗುರಿಯಾಗುತ್ತಿದ್ದೆ. ಅದರಿಂದ ನನಗಾಗಲಿ ನಿಮಗಾಗಲಿ ಪ್ರಯೋಜನವೇನೂ ಆಗುತ್ತಿರಲಿಲ್ಲ. ಇದ್ದದ್ದನ್ನು ಇದ್ದಹಾಗೆ ಹೇಳುವೆನೆಂದು ನನ್ನ ಮೇಲೆ ಕೋಪಿಸಬೇಡಿ. ರಾಷ್ಟ್ರದಲ್ಲಿ ನ್ಯಾಯವಿರುದ್ಧವಾಗಿಯೂ ಧರ್ಮವಿರುದ್ಧವಾಗಿಯೂ ನಡೆಯುವ ಕೃತ್ಯಗಳನ್ನು ತಡೆಯುವ ಉದ್ದೇಶದಿಂದ ನಿಮ್ಮನ್ನಾಗಲಿ ಜನಗಳ ಗುಂಪು ಯಾವುದನ್ನಾಗಲಿ, ಪ್ರತಿಭಟಿಸಿ ನಿಲ್ಲುವವನಿಗೆ ಸಾವು ಸಿದ್ಧ. ಸತ್ಯಕ್ಕಾಗಿ ಹೋರಾಡುವವನು ಕೆಲವು ದಿನ ಬದುಕಿರಬೇಕೆಂಬ ಇಚ್ಛೆಯಿದ್ದರೆ, ರಾಜಕೀಯ ವಿಷಯಗಳ ಗೋಜಿಗೆ ಹೋಗದೆ ಸಾಧಾರಣ ಪೌರರಂತೆಯೇ ಇರಬೇಕು.

ನಾನು ಹೇಳುವುದು ನಿಜವೆನ್ನುವುದಕ್ಕೆ ನಿಮಗೆ ಬೇಕಾದಷ್ಟು ಪ್ರಮಾಣಗಳನ್ನು ಕೊಡಬಲ್ಲೆನು; ಬರಿಯ ಮಾತಿನ ಪ್ರಮಾಣಗಳಲ್ಲ, ನೀವು ಅದಕ್ಕಿಂತ ಹೆಚ್ಚು ಬೆಲೆ ಕೊಡುವ ಕಾರ್ಯ ಪ್ರಮಾಣಗಳು. ನನ್ನ ಜೀವನದ

ಕಥೆ ಒಂದನ್ನು ಮಾತ್ರ ನಿಮಗೆ ಹೇಳುತ್ತೇನೆ. ಅದರಿಂದ ನಾನು ಸಾವಿಗೆ ಹೆದರಿ ಅನ್ಯಾಯಕ್ಕೆ ತಲೆ ಬಾಗುತ್ತಿರಲಿಲ್ಲವೆಂದೂ ಹಾಗೆ ತಲೆಬಾಗದೆ ಇದ್ದಾಗ ನನ್ನ ಪ್ರಾಣಕ್ಕೆ ಅಪಾಯವುಂಟಾಗುತ್ತಿತ್ತೆಂದೂ ವ್ಯಕ್ತವಾಗುತ್ತದೆ. ನಾನು ಈಗ ಹೇಳುವುದು ಎಲ್ಲರಿಗೂ ತಿಳಿದಂತೆ ನಿಶ್ಚಯವಾದ ವಿಷಯ. ಈ ರಾಷ್ಟ್ರದಲ್ಲಿ ನಾನು ಅಧಿಕಾರ ವಹಿಸಿದ್ದೆಂದರೆ ಸೆನೇಟರ್ ಅಧಿಕಾರ ವೊಂದೇ. ನ್ಯೂಸೆ ಯುದ್ಧವಾದ ಮೇಲೆ ತಮ್ಮ ಕೈಕೆಳಗಿನ ಸೈನಿಕರ ಶವ ಗಳನ್ನು ಶತ್ರುಗಳಿಗೆ ಸಿಕ್ಕದಂತೆ ಎತ್ತಿಕೊಂಡು ಬಾರದೆ ಇದ್ದ ತಪ್ಪಿಗೆ ಹತ್ತು ಜನ ಸೇನಾನಾಯಕರನ್ನು ಶಾಸನಕ್ಕೆ ವಿರುದ್ಧವಾಗಿ—ಅದು ಶಾಸನಕ್ಕೆ ವಿರುದ್ಧವೆಂದು ಕೆಲವು ದಿನಗಳಾದ ಮೇಲೆ ನೀವೆಲ್ಲರೂ ಒಪ್ಪಿದಿರಿ—ಒಟ್ಟಿಗೆ ಒಂದು ಗುಂಪಾಗಿ ವಿಚಾರಣೆ ಮಾಡಬೇಕೆಂದು ಅಥೆನ್ಸಿನವರು ಹವಣಿಸುತ್ತಿ ದ್ದರು. ಆಗ ನಮ್ಮವರಾದ ಆಂಟಿಯೋಕಸ್ ಪಂಗಡದವರು ರಾಷ್ಟ್ರದಲ್ಲಿ ಮುಖ್ಯಸ್ಥರಾಗಿದ್ದರು. ಹೀಗೆ ಒಟ್ಟಿಗೆ ಆ ಸೇನಾನಾಯಕರ ವಿಚಾರಣೆ ಮಾಡುವುದು ನ್ಯಾಯವಿರುದ್ಧವೆಂದು ಧೈರ್ಯವಾಗಿ ಹೇಳಿ ನನ್ನ ಅಸಮ್ಮತಿ ಯನ್ನು ಸ್ಪಷ್ಟವಾಗಿ ತಿಳಿಸಿದವನು ಪ್ರೈಟೇನರಲ್ಲಿ ನಾನೊಬ್ಬನೇ. ಆಗ ಅಧಿ ಕಾರಿಗಳು ನನ್ನನ್ನು ಕೆಲಸದಿಂದ ತೆಗೆಯಬೇಕೆಂದೂ ದಸ್ತಗಿರಿ ಮಾಡಬೇ ಕೆಂದೂ ಯೋಚಿಸುತ್ತಿದ್ದರು. ನೀವೆಲ್ಲರೂ ನನ್ನ ಮೇಲೆ ತಿರುಗಿ ಬಿದ್ದು ನಾನು ನಿಮ್ಮ ಮಾತಿಗೆ ಒಪ್ಪಬೇಕೆಂದೂ ಕೂಗಾಡುತ್ತಿದ್ದಿರಿ. ಆದರೆ ಕಾರಾಗೃಹ ವಾಸಕ್ಕೂ ಸಾವಿಗೂ ಹೆದರಿ ನಿಮ್ಮ ಅಧರ್ಮವಾದ ನಡವಳಿಕೆಗಳಲ್ಲಿ ಭಾಗಿ ಯಾಗದೆ ಧರ್ಮಕ್ಕಾಗಿ ಏನು ವಿಪತ್ತು ಬಂದರೂ ಸಹಿಸಬೇಕೆಂದು ನಾನು ನಿಶ್ಚಯಿಸಿದೆನು. ಇದು ನಡೆದದ್ದು ನಮ್ಮ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ನಾಶ ವಾಗುವುದಕ್ಕೆ ಮುಂಚೆ. ಮತ್ತೊಂದು ಸಲ ಅಥೆನ್ಸಿನಲ್ಲಿ ಮೂವತ್ತು ಜನ ಘಾತುಕರ ಪ್ರಭುತ್ವ (The Oligarchy of the Thirty) ನಡೆಯು ತ್ತಿದ್ದಾಗ ಆ ಅಧಿಕಾರಿಗಳು ನನ್ನನ್ನು ಕರೆಸಿ ಸಾಲಾಮಿಸ್ಸಿನಿಂದ ಲೆಯಾ ನನ್ನು ಕರೆತರುವಂತೆ ಆಜ್ಞಾಪಿಸಿದರು. ಆತನನ್ನು ಇಲ್ಲಿ ಕೊಲ್ಲಿಸುವುದೇ ಅವರ ಉದ್ದೇಶ. ತಮ್ಮ ನೀಚ ಕೃತ್ಯಗಳಲ್ಲಿ ಸಾಧ್ಯವಾದಷ್ಟು ಹೆಚ್ಚು ಜನ ರನ್ನು ಭಾಗಿಗಳಾಗಿ ಮಾಡಬೇಕೆಂದು ಅವರು ಅನೇಕರಿಗೆ ಇಂಥ ಕೆಲಸಗಳನ್ನು ನಿಯಮಿಸುವ ಪದ್ಧತಿ. ಆಗಲೂ ನಾನು ಮರಣಕ್ಕೆ ಎಳ್ಳಷ್ಟೂ ಅಂಜುವ

ವನಲ್ಲವೆಂದೂ ಧರ್ಮಕ್ಕೂ ಸತ್ಯಕ್ಕೂ ವಿರೋಧವಾಗಿ ನಡೆಯಲು ಮಾತ್ರ ಅಂಜುವೆನೆಂದೂ ಮಾತಿನಲ್ಲಿ ಮಾತ್ರವೇ ಅಲ್ಲದೆ ಕಾರ್ಯದಲ್ಲಿಯೂ ವ್ಯಕ್ತಪಡಿಸಿದೆನು. ಅವರ ಶಕ್ತಿಗೂ ಪದವಿಗೂ ಹೆದರಿ ಅಧರ್ಮವನ್ನಾಚರಿಸಲಿಲ್ಲ. ನನ್ನ ಜೊತೆಯ ನಾಲ್ಕು ಜನರೇನೋ ಸಾಲಾಮಿಸ್ಸಿಗೆ ಹೋಗಿ ಲಿಯಾನನ್ನು ಕರೆತಂದರು. ನಾನು ನೆಟ್ಟಗೆ ಮನೆಗೆ ಹೋದೆನು. ಆ ಮೂವತ್ತು ಜನರ ಅಧಿಕಾರವನ್ನು ರಾಷ್ಟ್ರದವರು ಮುರಿಯದೆ ಇದ್ದಿದ್ದರೆ ಬಹುಶಃ ಅವರು ನನ್ನನ್ನು ಕೊಲ್ಲಿಸುತ್ತಿದ್ದರು. ನಾನು ಹೇಳುವುದು ನಿಜವೆನ್ನುವುದಕ್ಕೆ ಇಲ್ಲಿಯೇ ಬಹಳ ಜನ ಸಾಕ್ಷಿಗಳಿದ್ದಾರೆ.

ರಾಜಕೀಯ ವಿಷಯಗಳಲ್ಲಿ ತೊಡಗಿರುವಾಗಲೂ ಧರ್ಮಕ್ಕೆ ಬೆಂಬಲವಾಗಿ ನಿಲ್ಲುವುದು ಸತ್ಪುರುಷರ ಕರ್ತವ್ಯವೆಂದು ಭಾವಿಸಿ ಆ ಉತ್ತಮ ಭಾವನೆಗೆ ಅನುಗುಣವಾಗಿಯೇ ನಡೆದುಕೊಂಡಿದ್ದರೆ ನಾನು ನಿಜವಾಗಿ ಇಷ್ಟು ದಿನಗಳವರೆಗೆ ಜೀವಿಸಿರುತ್ತಿದ್ದೆನೆ? ಇಲ್ಲ, ಎಂಥವರಿಗಾದರೂ ಅದು ಅಸಾಧ್ಯ. ಆದರೆ ಸ್ವಂತದ ಕೆಲಸದಲ್ಲಿಯೂ ಸಾಮಾಜಿಕ ಕೆಲಸಗಳಲ್ಲಿಯೂ ತೊಡಗಿದಾಗ ನಾನು ಅಧರ್ಮ ಪ್ರವೃತ್ತಿಯುಳ್ಳಿರುವವರಿಗೆ—ಅವರು ನನ್ನ ಶಿಷ್ಯರೆನ್ನಿಸಿಕೊಳ್ಳುವವರಾಗಲಿ, ಇತರರಾಗಲಿ—ಎಂದಿಗೂ ಅಡಿಯಾಳಾಗಿ ನಡೆದುಕೊಂಡಿಲ್ಲ. ಅವರನ್ನು ನನ್ನ ಶಿಷ್ಯರೆಂದು ಕರೆಯುವುದು ತಪ್ಪು. ಏಕೆಂದರೆ ನಾನು ಯಾವಾಗಲೂ ಗುರುವಾಗಿಲ್ಲ. ಯುವಕರಾಗಲಿ ವೃದ್ಧರಾಗಲಿ ನನ್ನ ಮಾತುಗಳನ್ನು ಕೇಳಬೇಕೆಂದು ಅಪೇಕ್ಷಿಸಿದರೆ ನಾನು ಅವರಿಗೆ ಅವಕಾಶ ಕೊಡದೆ ಇರುವುದಿಲ್ಲ. ಹಣವನ್ನು ಕೊಟ್ಟಾಗ ಮಾತ್ರ ಸಂವಾದಮಾಡಬೇಕು, ಪ್ರತಿಫಲವಿಲ್ಲದಾಗ ಮಾಡಬಾರದು ಎಂಬ ನಿಯಮವನ್ನು ನಾನು ಇಟ್ಟುಕೊಂಡಿಲ್ಲ. ನನ್ನ ಸಂವಾದವನ್ನು ಕೇಳುವುದಕ್ಕೆ ಎಲ್ಲರಿಗೂ ಹಕ್ಕಿದೆ; ಧನಿಕರಿಗೆ ಹೇಗೋ ಬಡವರಿಗೂ ಹಾಗೆಯೇ ಹಕ್ಕಿದೆ. ನನ್ನದು ಪ್ರಶ್ನೆ ಹಾಕುವ ಪದ್ಧತಿ. ಅದನ್ನು ಕೇಳಿದವರು ಯಾರಾದರೂ ಉತ್ತರ ಕೊಡಬಹುದು. ನನ್ನ ಸಂವಾದವನ್ನು ಕೇಳಿದವರು ಸನ್ಮಾರ್ಗಿಗಳಾಗಿ ಪರಿಣಮಿಸಲಿ ದುರ್ಮಾರ್ಗಿಗಳಾಗಿ ಪರಿಣಮಿಸಲಿ, ಅವರ ನಡತೆಗೆ ನಾನು ಉತ್ತರವಾದಿಯಲ್ಲ. ಏಕೆಂದರೆ ನಾನು ಅವರಿಗೆ ಯಾವ ವಿಷಯವನ್ನೂ ಬೋಧಿಸುತ್ತೇನೆಂದು ಹೇಳಲೂ

ಇಲ್ಲ, ಬೋಧಿಸಲೂ ಇಲ್ಲ. ಸರ್ವರೂ ಕೇಳದೆ ಇರುವಂಥ ರಹಸ್ಯವನ್ನೇನಾದರೂ ನನ್ನಿಂದ ತಿಳಿದುಕೊಂಡೆವೆಂದು ಯಾರಾದರೂ ಹೇಳಿದರೆ ಅವರು ಸುಳ್ಳಾಡುವರು.

ಹಾಗಾದರೆ ಕೆಲವರು ನನ್ನೊಡನೆ ಮಾತಾಡುವುದರಲ್ಲಿ ಸಂತೋಷಗೊಳ್ಳುವುದೇತಕ್ಕೆ? ಅದಕ್ಕೆ ಕಾರಣವನ್ನು ನಿಮಗೆ ಆಗಲೇ ತಿಳಿಸಿದ್ದೇನೆ. ತಾವು ಜ್ಞಾನಿಗಳೆಂದುಕೊಂಡಿರುವವರನ್ನು ನಾನು ಪ್ರಶ್ನೆ ಹಾಕಿ ಪರೀಕ್ಷಿಸುವಾಗ ನಿಂತು ಕೇಳುವುದು ಯುವಕರಿಗೆ ಇಷ್ಟ; ಹಾಗೆ ಕೇಳುವುದು ಸ್ವಲ್ಪ ವಿನೋದವಾಗಿರುತ್ತದೆ. ನಾನು ಈ ಕೆಲಸವನ್ನು ಮಾಡಬೇಕೆಂದು ಕನಸುಗಳ ಮೂಲಕವೂ, ದೇವವಾಣಿಯ ಮೂಲಕವೂ, ಇನ್ನೂ ಇತರ ವಿಧಗಳಲ್ಲಿಯೂ ದೇವರಿಂದ ಪ್ರೇರಿತನಾಗಿದ್ದೇನೆ. ಇದು ಸತ್ಯ, ನನ್ನ ದೃಢವಾದ ನಂಬಿಕೆ. ನಾನು ಈಗ ಯುವಕರನ್ನು ದುರ್ಮಾರ್ಗಕ್ಕೆ ಎಳೆಯುತ್ತಿರುವುದಾದರೆ, ಹಿಂದೆ ಹಾಗೆ ಎಳೆದಿರುವುದಾದರೆ, ನನ್ನ ಸಹವಾಸದಿಂದ ಕೆಟ್ಟುಹೋದ ಜನರಲ್ಲಿ ಕೆಲವರಾದರೂ ತಮಗೆ ವಯಸ್ಸಾಗಿ ತಾವು ನನ್ನ ಸಲಹೆಗಳಿಂದ ಕೆಟ್ಟೆವೆಂದು ತಿಳಿದ ಮೇಲೆ ಮುಂದೆ ಬಂದು ಈಗ ನನಗೆ ಪ್ರತಿಕಕ್ಷಿಗಳಾಗಿ ನಿಲ್ಲುತ್ತಿರಲಿಲ್ಲವೆ? ಅಥವಾ ತಾವು ಮುಂದಾಳಾಗಿ ಬಂದು ಈ ಕೆಲಸವನ್ನು ಮಾಡುವುದಕ್ಕೆ ಮನಸ್ಸು ಬಾರದಿದ್ದರೆ ಅವರ ಸಂಬಂಧಿಗಳು, ಅಣ್ಣತಮ್ಮಂದಿರು ಮೊದಲಾದವರು ಈಗ ಬಂದು ನನ್ನಿಂದ ತಮ್ಮವರಿಗೆ ಎಷ್ಟು ಕೆಡುಕಾಗಿದೆ ಎಂಬುದನ್ನು ನಿಮ್ಮ ಮುಂದೆ ಹೇಳುತ್ತಿರಲಿಲ್ಲವೆ? ನನ್ನ ಸಂವಾದಗಳನ್ನು ಕೇಳಿದವರು ಇಲ್ಲಿ ಅನೇಕರಿದ್ದಾರೆ. ಇದು ಅವರಿಗೆ ಸುಸಮಯ. ನನ್ನ ವಯಸ್ಸಿನವನೂ ನನ್ನ ತುಕಡಿಯವನೂ ಆದ ಕ್ರೈಟೊ, ಅವನ ಮಗ ಕ್ರೈಟೊಬ್ಯುಲಸ್, ಈಸ್ಕೈನಸ್ಸಿನ ತಂದೆ ಸ್ಫೆಟಸ್ಸಿನ ಲೈಸೇನಿಯಸ್, ಎಪಿಜೆನಸ್ಸಿನ ತಂದೆ ಕೆಫೆಸಸ್ಸಿನ ಆಂಟಿಫನ್—ಇವರೆಲ್ಲರೂ ಇಲ್ಲಿಯೇ ಇದ್ದಾರೆ. ನನ್ನ ಸಹವಾಸದಲ್ಲಿದ್ದ ಇತರರ ಅಣ್ಣತಮ್ಮಂದಿರೂ ಇಲ್ಲಿದ್ದಾರೆ. ಥಿಯಾಸ್ಡೊಟೈಡೀಸನ ಮಗ ನಿಕೋಸ್ಟ್ರೇಟಸ್, ಥಿಯಾಡೊಟಸ್ಸಿನ ಸಹೋದರ—ಥಿಯಾಡೊಟಸ್ ಈಗ ಸತ್ತುಹೋಗಿರುವುದರಿಂದ ಅವನೇನೂ ತನ್ನ ಸಹೋದರನನ್ನು ತಡೆಯುವಂತಿಲ್ಲ—ಡೆಮಾಡಕಸ್ಸಿನ ಮಗನೂ ಥಿಯಾಜಸ್ಸಿನ ಸಹೋದರನೂ ಆದ ಪಾರಾಲಸ್, ಇಲ್ಲಿರುವ ನಮ್ಮ ಪ್ಲೇಟೋವಿನ ಸಹೋದರನೂ ಅರಿಸ್ಟನ್ನಿನ ಮಗನೂ ಆದ ಆಡಿಮಾಂಟಸ್, ಈಯಾಂಟೊ

ಡೋರಸ್—ಅವನ ಸಹೋದರ ಅಪಾಲೊಡೋರಸ್ ಇಲ್ಲಿ ಬಂದಿದ್ದಾನೆ—ಇಂಥ ಇನ್ನೂ ಅನೇಕ ಹೆಸರುಗಳನ್ನು ಹೇಳಬಲ್ಲೆ. ತನ್ನ ವಾದವನ್ನು ಪುಷ್ಟೀಕರಿಸುವುದಕ್ಕೆ ಮೆಲೆಟಸ್ ಇವರಲ್ಲಿ ಯಾರಾದರೂ ಒಬ್ಬರನ್ನು ಸಾಕ್ಷಿಯಾಗಿ ಕೋರಬಾರದಾಗಿತ್ತೆ? ಹಾಗೆ ಮಾಡುವುದು ಮರೆತುಹೋಯಿತೆನ್ನುವುದಾದರೆ ಈಗಲೂ ಕರಸಲಿ; ನನ್ನ ಮಾತನ್ನು ನಿಲ್ಲಿಸಿ, ನಾನು ಅವರಿಗೆ ಸಾಕ್ಷಿ ಹೇಳಲು ಅವಕಾಶಕೊಡುತ್ತೇನೆ. ಮಹನೀಯರೇ, ಅವನು ಅಂಥ ಸಾಕ್ಷಿಗಳನ್ನು ಕರಸಲಾರ. ನಾನು ಯಾರ ಸಂಬಂಧಿಗಳನ್ನೂ ಅಣ್ಣತಮ್ಮಂದಿರನ್ನೂ ಮಕ್ಕಳನ್ನೂ ದುರ್ಮಾರ್ಗಕ್ಕೆ ಎಳೆದಿರುವೆನೆಂದು ಮೆಲಿಟಸ್ಸೂ ಆನಿಟಸ್ಸೂ ಹೇಳುತ್ತಾರೆಯೋ ಆ ಜನರೆಲ್ಲರೂ ಈಗ ನನಗೆ ಬೆಂಬಲವಾಗಿದ್ದಾರೆ. ನನ್ನ ಮಾತನ್ನು ಕೇಳಿ ಕೆಟ್ಟುಹೋದವರು ನನಗೆ ಸಹಾಯಕರಾಗುವುದು ಒಂದು ವಿಧದಲ್ಲಿ ಸಹಜವೆಂದರೂ ಎನ್ನಬಹುದು. ಆದರೆ ನನ್ನಿಂದ ಕೆಟ್ಟುಹೋಗದೆ ಇರುವ ಅವರ ಸಂಬಂಧಿಗಳು, ಹಿರಿಯರು, ಇವರೆಲ್ಲರೂ ನನಗೆ ಸಹಾಯ ಮಾಡಬೇಕೆನ್ನುವುದೇನು? ಅವರು ಹಾಗೆ ಮಾಡುತ್ತಿರುವುದು ನ್ಯಾಯಕ್ಕಾಗಿ, ಸತ್ಯಕ್ಕಾಗಿ. ಮೆಲೆಟಸ್ ಹೇಳುವುದು ಸುಳ್ಳೆಂದೂ ನಾನು ಹೇಳುವುದು ಸತ್ಯವೆಂದೂ ಅವರಿಗೆ ತಿಳಿದಿರುವುದೇ ಅದಕ್ಕೆ ನಿಜವಾದ ಕಾರಣ.

ಅಥೆನ್ಸಿನವರೇ, ನನ್ನ ನಿರ್ದೋಷಿತ್ವವನ್ನು ವ್ಯಕ್ತಪಡಿಸಲು ಹೇಳಬೇಕಾಗಿರುವುದು ಇಷ್ಟೇ. ಹೀಗೆಯೇ ಇನ್ನು ಸ್ವಲ್ಪ ಹೇಳಿದರೂ ಹೇಳಬಹುದು. ನಿಮ್ಮಲ್ಲಿ ಕೆಲವರು ನನ್ನಷ್ಟು ಕಷ್ಟಕ್ಕೆ ಸಿಕ್ಕದಿದ್ದರೂ ಹೀಗೆ ಅಪರಾಧಿಸ್ಥಾನದಲ್ಲಿದ್ದಾಗ ನ್ಯಾಯಾಧೀಶರ ಮನಸ್ಸು ಕರಗಿಸುವುದಕ್ಕೆ ನಿಮ್ಮ ಮಕ್ಕಳನ್ನೂ ಇತರ ಸಂಬಂಧಿಗಳನ್ನೂ ಕರೆದು ತಂದು ಎದುರಿಗೆ ನಿಲ್ಲಿಸಿ ಕಣ್ಣೀರು ಕರೆದಿರಬಹುದು. ನಾನು ಈಗ ಬಹುಶಃ ಮರಣದಂಡನೆಗೆ ಗುರಿಯಾಗಬಹುದಾದರೂ ಹಾಗೆ ಮಾಡುವುದಿಲ್ಲ. ಹಿಂದೆ ಹಾಗೆ ಮಾಡಿದ್ದವರಿಗೆ ನನ್ನ ಈ ಮಾತು ಹೆಮ್ಮೆಯ ಮಾತಿನಂತೆ ತೋರಿ ಕೋಪ ಬಂದರೂ ಬರಬಹುದು. ಈ ಕೋಪದಿಂದ ಅವರು ನನಗೆ ಮರಣದಂಡನೆಯನ್ನು ವಿಧಿಸಬೇಕೆಂದು ಮತವನ್ನು ಕೊಟ್ಟರೂ ಕೊಡಬಹುದು. ಅಂಥವರು ಯಾರೂ ಇಲ್ಲಿ ಇಲ್ಲವೆಂದು ನಂಬುತ್ತೇನೆ—ಒಂದು ವೇಳೆ ಇದ್ದರೆ ನಾನು ಅವರಿಗೆ ಈ ರೀತಿ ಹೇಳುವುದು ಸೂಕ್ತವೆಂದು ತೋರುತ್ತದೆ: ಮಿತ್ರರೇ, ನಾನೂ ಇತರ ಮನುಷ್ಯರಂತೆಯೇ

ಮನುಷ್ಯ, ರಕ್ತಮಾಂಸಗಳುಳ್ಳ ಪ್ರಾಣಿ; ನಾನೇನೂ ಹೋಮರ್ ಹೇಳುವಂತೆ 'ಮರದಿಂದ, ಕಲ್ಲಿನಿಂದ ಜನಿಸಿದವನಲ್ಲ.' ನನ್ನದೂ ಒಂದು ಸಂಸಾರವಿದೆ, ನನಗೂ ಬಂಧುಗಳಿದ್ದಾರೆ; ಮೂರು ಜನ ಮಕ್ಕಳಿದ್ದಾರೆ—ಒಬ್ಬನು ಬೆಳೆದು ಕೈಗೆ ಬರುವವನು, ಇನ್ನಿಬ್ಬರು ಇನ್ನೂ ಚಿಕ್ಕವರು. ಆದರೂ ಅವರನ್ನು ನಿಮ್ಮೆದುರಿಗೆ ಕರೆತಂದು, "ನನ್ನಲ್ಲಿಯೂ ಅವರಲ್ಲಿಯೂ ಕರುಣೆಯಿಟ್ಟು ನನ್ನನ್ನು ಬಿಡುಗಡೆ ಮಾಡಬೇಕು" ಎಂದು ನಾನು ಕೇಳಿಕೊಳ್ಳುವುದಿಲ್ಲ. ಏಕೆನ್ನುವಿರೇನೊ? ಬರಿಯ ಸ್ವಾಭಿಮಾನದಿಂದಲ್ಲ; ನನಗೆ ನಿಮ್ಮಲ್ಲಿ ಮರ್ಯಾದೆಯಿಲ್ಲವೆಂತಲೂ ಅಲ್ಲ; ನನಗೆ ಮರಣದ ಭಯವಿಲ್ಲದಿರುವುದರಿಂದಲೂ ಅಲ್ಲ—ಆ ವಿಷಯವಾಗಿ ಈಗ ನಾನು ಮಾತಾಡುವುದಿಲ್ಲ. ಆದರೆ ನನ್ನ ಮರ್ಯಾದೆ, ನಿಮ್ಮ ಮರ್ಯಾದೆ, ನಮ್ಮ ರಾಷ್ಟ್ರದ ಮರ್ಯಾದೆ ಇವುಗಳನ್ನುಳಿಸಿಕೊಳ್ಳಬೇಕಾದರೆ ನಾನು ಹೀಗೆ ಮಾಡುವುದು ಯುಕ್ತವಲ್ಲ. ನನ್ನಂತೆ ವಯಸ್ಸಾದವನು, ಜ್ಞಾನಿಯೆಂದು ಹೆಸರು ಪಡೆದಿರುವವನು ಹೀಗೆ ಗೌರವಕ್ಕೆ ಕುಂದು ತಂದುಕೊಳ್ಳಬಾರದು. ಇತರರಿಗಿಂತ ಯಾವುದೋ ಒಂದು ವಿಧದಲ್ಲಿ ಉತ್ತಮನೆಂದು—ನಾನು ಅದಕ್ಕೆ ಪಾತ್ರನೋ ಅಲ್ಲವೋ—ನನಗೆ ಒಂದು ಕೀರ್ತಿ ಬಂದಿದೆ. ಜ್ಞಾನದಲ್ಲಿಯೋ ಧೈರ್ಯದಲ್ಲಿಯೋ ಇತರರಿಗಿಂತ ಶ್ರೇಷ್ಠನೆನಿಸಿಕೊಂಡವನು ನಿಮ್ಮಲ್ಲಿ ಹೀಗೆ ನಡೆದುಕೊಂಡರೆ ಅದು ಎಷ್ಟು ಅವಮಾನಕರ! ನಮ್ಮ ರಾಷ್ಟ್ರದಲ್ಲಿ ಹೆಸರುವಾಸಿಯಾದ ಜನರೂ ಕೂಡ ನ್ಯಾಯಸ್ಥಾನದ ಮುಂದೆ ನಿಲ್ಲಬೇಕಾದಾಗ ಒಂದು ವೇಳೆ ಮರಣ ದಂಡನೆಯಾದರೆ ತಮಗೆ ಏನೋ ದೊಡ್ಡ ವಿಪತ್ತು ಸಂಭವಿಸಿದಂತೆಯೂ, ಕೊಲ್ಲಿಸದಿದ್ದರೆ ತಾವು ಅಮರರಾಗಿರುತ್ತಿದ್ದರೇನೊ ಎನ್ನುವಂತೆಯೂ ವಿಚಿತ್ರ ಭಯವನ್ನು ತೋರಿಸುತ್ತಾರೆ. ಅಂಥವರಿಂದ ನಮ್ಮ ರಾಷ್ಟ್ರಕ್ಕೆ ಅಪಕೀರ್ತಿ ಬರುತ್ತದೆ. ಪರರಾಷ್ಟ್ರದವರು ಇದನ್ನೇನಾದರೂ ತಿಳಿದರೆ "ಅಥೆನ್ಸಿನಲ್ಲಿ ಇತರರಿಗಿಂತಲೂ ಗುಣದಲ್ಲಿ ಮೇಲ್ಮೆಯನ್ನು ಪಡೆದಿರುವವರೂ ಅನೇಕ ಸನ್ಮಾನಗಳನ್ನು ಪಡೆದಿರುವವರೂ ಸಹ ಹೆಂಗಸರಂತೆಯೇ ಹೇಡಿಗಳು". ಎಂದು ಹಳಿಯದೆ ಇರುತ್ತಾರೆಯೆ? ಮಹನೀಯರೇ, ನಮ್ಮಲ್ಲಿ ಸ್ವಲ್ಪವಾದರೂ ಹೆಸರು ಪಡೆದಿರುವವರು ಎಂದಿಗೂ ಹೀಗೆ ಮಾಡಬಾರದು. ನಿಮ್ಮಲ್ಲಿ ಮರುಕವುಂಟಾಗುವಂತೆ ಮಾಡುವುದಕ್ಕೆ ರಾಷ್ಟ್ರವನ್ನೇ ನಗುಪಾಟಲಾಗಿ

ಮಾಡುವವರ ವಿಷಯದಲ್ಲಿ ಎಂದಿಗಿಂತ ಕಠಿನ ಮನಸ್ಕರಾಗಿರುತ್ತೇವೆಂದು ನೀವು ಜನಗಳಿಗೆ ತಿಳಿಯಪಡಿಸಬೇಕು.

ನಮ್ಮ ಕೀರ್ತಿಯನ್ನುಳಿಸಿಕೊಳ್ಳುವ ಮಾತೂ ಹೋಗಲಿ, ನ್ಯಾಯಾಧೀಶರೆದುರಿಗೆ ಅಂಗಲಾಚಿಕೊಂಡು ತಮ್ಮನ್ನು ಬಿಡುಗಡೆಮಾಡಬೇಕೆಂದು ಬೇಡಿಕೊಳ್ಳುವುದು ಧರ್ಮವಿರುದ್ಧ. ಅಪರಾಧಿ ತನ್ನಲ್ಲಿ ತಪ್ಪಿಲ್ಲವೆಂದು ಪೃಥಪಡಿಸಿಕೊಡಬೇಕೇ ಹೊರತು ಕರುಣೆಯನ್ನು ಬೇಡಬಾರದು. ನ್ಯಾಯಾಧಿಪತಿ ಇರುವುದು ತೀರ್ಪು ಕೊಡುವುದಕ್ಕೆ; ಬೇಡಿದವರ ಕೋರಿಕೆಯನ್ನು ಸಲ್ಲಿಸುವುದಕ್ಕಲ್ಲ. ಆತನು ಶಾಸನಕ್ಕನುಸಾರವಾಗಿ ತೀರ್ಪು ಕೊಡುತ್ತೇನೆಂದು ಪ್ರಮಾಣ ಮಾಡಿರುತ್ತಾನೆ; ಇಚ್ಛೆ ಬಂದಾಗ ದಯೆ ತೋರಿಸುತ್ತೇನೆಂದಲ್ಲ. ಆದ್ದರಿಂದ ನಿಮ್ಮ ಪ್ರತಿಜ್ಞೆಗೆ ಭಂಗ ಬರುವಂತೆ ನಾವು ಪ್ರಯತ್ನಮಾಡಬಾರದು; ನೀವು ಭಂಗವನ್ನು ತಂದುಕೊಳ್ಳಲೂ ಬಾರದು. ಹಾಗೆ ಮಾಡಿದರೆ ನಾವು ಅಧರ್ಮವನ್ನಾಚರಿಸಿದಂತಾಗುತ್ತದೆ. ಆದ್ದರಿಂದ ಮಹನೀಯರೇ, ಈ ಅವಮಾನಕರವಾದ, ಧರ್ಮವಿರುದ್ಧವಾದ ನಡವಳಿಕೆಯನ್ನು ನನ್ನಿಂದ ನಿರೀಕ್ಷಿಸಬೇಡಿ. ನಾನು ಧರ್ಮವಿರುದ್ಧವಾಗಿ ನಡೆಯುತ್ತೇನೆಂದಲ್ಲವೆ ಮೆಲೆಟಸ್ ನನ್ನನ್ನು ದೂರಿರುವುದು? ನಾನು ಹೀಗೆ ನಡೆದುಕೊಂಡರೆ ಮೆಲೆಟಸ್ ಹೇಳುವುದು ಸತ್ಯವೆನ್ನುವುದಕ್ಕೆ ನಿದರ್ಶನ ಕೊಟ್ಟಂತಾಗುತ್ತದೆ. ನಾನು ನಿಮ್ಮೆದುರಿಗೆ ಗೋಗರೆದು ಮನಸ್ಸು ತಿರುಗಿಸಿ ನಿಮ್ಮ ಪ್ರತಿಜ್ಞೆಗೆ ವಿರೋಧವಾಗಿ ನಡೆಯುವಂತೆ ಮಾಡಿದರೆ ನಿಮಗೆ ದೇವರಲ್ಲಿ ನಂಬಿಕೆಯಿಲ್ಲದಂತೆ ಮಾಡಿದ ಹಾಗೇ ಆಗುತ್ತದೆ; ನಾನು ನಿರ್ದೋಷಿಯೆಂದು ಬಾಯಲ್ಲಿ ಹೇಳುತ್ತಿರುವಾಗಲೇ ಕಾರ್ಯತಃ ನನಗೆ ದೇವರಲ್ಲಿ ನಂಬಿಕೆಯಿಲ್ಲವೆಂದು ತೋರಿಸಿದಂತಾಗುತ್ತದೆ. ಆದರೆ ನಿಜವಾಗಿಯೂ ನನಗೆ ದೇವರಲ್ಲಿ ನಂಬಿಕೆಯಿದೆ; ನನ್ನನ್ನು ದೂರುವವರಿಗೆ ಇರುವುದಕ್ಕಿಂತಲೂ ಉತ್ತಮ ತರದ ನಂಬಿಕೆಯಿದೆ. ನನ್ನ ಮಾತನ್ನು ಇಲ್ಲಿಗೆ ನಿಲ್ಲಿಸಿ ಈ ವಿವಾದವು ನನಗೂ ನಿಮಗೂ ಶ್ರೇಯಸ್ಕರವಾದ ರೀತಿಯಲ್ಲಿ ತೀರ್ಮಾನವಾಗಲೆಂದು ಅದನ್ನು ನಿಮ್ಮ ಕೈಯಲ್ಲೂ ಭಗವಂತನ ಕೈಯಲ್ಲೂ ಬಿಟ್ಟಿದ್ದೇನೆ.

[ಸಾಕ್ರೆಟೀಸ್ ತಪ್ಪಿತಸ್ಥನೆಂದು ತೀರ್ಮಾನವಾಗುವುದು. ಅವನಿಗೆ ವಿರೋಧವಾಗಿ ೨೮೧ ಜನರೂ, ಅವನ ಪರವಾಗಿ ೨೨೦ ಜನರೂ ಮತಗಳನ್ನು ಕೊಡುವರು.]

ನೀವು ನನ್ನನ್ನು ಬಹುಮತದಿಂದ ತಪ್ಪಿತಸ್ಥನೆಂದು ನಿರ್ಧರಿಸಿದ್ದಕ್ಕೆ ನನಗೆ ವ್ಯಸನವಿಲ್ಲ; ಇಲ್ಲದಿರುವುದಕ್ಕೆ ಅನೇಕ ಕಾರಣಗಳುಂಟು. ಅದರಲ್ಲಿ ಮುಖ್ಯ ಕಾರಣವೇನೆಂದರೆ—ನಿಮ್ಮ ತೀರ್ಮಾನ ನನಗೇನೂ ಆಶ್ಚರ್ಯಕರ ವಲ್ಲ; ಅನಿರೀಕ್ಷಿತವಾದದ್ದೂ ಅಲ್ಲ. ನನ್ನ ಪರವಾಗಿ ಅಷ್ಟೊಂದು ಮತಗಳು ಬಂದಿರುವುದೇ ನನಗೆ ಆಶ್ಚರ್ಯ. ಇಲ್ಲಿ ನೆರೆದಿರುವವರಲ್ಲಿ ಮುಕ್ಕಾಲುಪಾಲು ಜನರು ನನಗೆ ವಿರೋಧವಾಗಿ ಮತವನ್ನು ಕೊಡುವರೆಂದೇ ನಾನು ಭಾವಿಸಿದ್ದೆ. ಈಗ ನೋಡುವುದರಲ್ಲಿ ಇನ್ನು ಮೂವತ್ತು ಮತಗಳು ಮಾತ್ರ ನನ್ನ ಪರವಾಗಿ ಬಂದಿದ್ದರೆ ನನಗೆ ಬಿಡುಗಡೆಯಾಗುತ್ತಿತ್ತು. ಮೆಲೆಟಸ್ಸಿನ ದೃಷ್ಟಿಯಿಂದ ನೋಡಿದರೇನೋ ನನಗೆ ಈಗಲೂ ಬಿಡುಗಡೆಯಾದಂತೆಯೇ ಎಂದು ತೋರುತ್ತದೆ. ಅಷ್ಟೇ ಅಲ್ಲ. ಆನಿಟಸ್ಸನೂ ಲೈಕನ್ನನೂ ಅವನ ಜೊತೆಗೆ ನನ್ನ ಮೇಲೆ ಆಪಾದನೆಯನ್ನು ತಾರದಿದ್ದರೆ, ಮತಗಳಲ್ಲಿ ಅವನ ಕಡೆಗೆ ಐದನೆಯ ಒಂದು ಭಾಗವೂ ಬರುತ್ತಿರಲಿಲ್ಲ; ಅವನು ಒಂದು ಸಾವಿರ ಡ್ರಾಕ್ಮಾ ದಂಡವನ್ನು ತೆರಬೇಕಾಗುತ್ತಿತ್ತು.

ಅವನು ನನಗೆ ಮರಣದಂಡನೆಯಾಗಬೇಕೆಂದು ಹೇಳುತ್ತಾನಲ್ಲವೆ? ಅದಕ್ಕೆ ಪ್ರತಿಯಾಗಿ ನಾನೇನಾದರೂ ಒಂದು ದಂಡನೆಯನ್ನು ಸೂಚಿಸಬಹುದಲ್ಲ, ಏನು ಸೂಚಿಸಲಿ? ನನ್ನ ನಡತೆಗೆ ತಕ್ಕ ಪ್ರತಿಕ್ರಿಯೆಯನ್ನು ಸೂಚಿಸಬೇಕಲ್ಲವೆ? ಬಹು ಜನರು ಕಷ್ಟಪಟ್ಟು ಆಸೆಯಿಂದ ಸಂಪಾದಿಸುವ ಧನ್ಯ ಸಂಸಾರಯೋಗಕ್ಷೇಮ, ಸೈನ್ಯದಲ್ಲಿ ಅಧಿಕಾರ, ಸಭೆಯಲ್ಲಿ ಭಾಷಣಮಾಡುವುದು—ಇವೆಲ್ಲವನ್ನೂ ನಾನು ನಿರಾಕರಿಸಿದೆನು. ರಾಷ್ಟ್ರದಲ್ಲಿ ಏಳುವ ಪಕ್ಷ ಪ್ರತಿಪಕ್ಷಗಳ ಮತ್ತು ಅವುಗಳ ಒಳಸಂಚಿನ ಹವ್ಯಾಸವನ್ನು ಹತ್ತಿಸಿಕೊಂಡರೆ ಪ್ರಾಣವನ್ನು ಕಾಪಾಡಿಕೊಳ್ಳುವುದು ಅಸಾಧ್ಯವೆಂದು ಭಾವಿಸಿ, ನನಗೆ ಧರ್ಮದೃಷ್ಟಿ ಸ್ವಲ್ಪ ಹೆಚ್ಚಾಗಿರುವುದರಿಂದ ಆ ಕೆಲಸಗಳನ್ನು ಬಿಟ್ಟೆನು. ಸುಮ್ಮನಿರಲಾಗದೆ ನನ್ನ ಜೀವಾವಧಿ ಎಲ್ಲಾ ಜನರಿಗೂ ಯಾವುದು ಅತ್ಯುತ್ತಮವಾದ ಉಪಕಾರವೆಂದು ನನಗೆ ತೋರಿತೋ ಅದನ್ನು ಕೈಯಲ್ಲಾದಮಟ್ಟಿಗೆ ಮಾಡಲು ಪ್ರಯತ್ನಿಸಿದೆನು. ಈ ಪಾಪಕ್ಕೆ ನಾನು ಯಾವ ಶಿಕ್ಷೆಯನ್ನನುಭವಿಸಿದರೆ, ಎಷ್ಟು ದಂಡ ತೆತ್ತರೆ, ಪ್ರಾಯಶ್ಚಿತ್ತವಾದೀತು? ನೀವೆಲ್ಲರೂ ಹಣಕ್ಕಿಂತ ಹೆಚ್ಚಾಗಿ ಸದ್ಗುಣಗಳಿಗೂ ತತ್ವಜ್ಞಾನಕ್ಕೂ ಆತ್ಮ ಪರಿಪೂರ್ಣತೆಗೂ ಗಮನಕೊಡು

ವಂತೆ, ರಾಷ್ಟ್ರದಲ್ಲಿನ ಒಳಸಂಚುಗಳಿಗಿಂತ ಹೆಚ್ಚಾಗಿ ರಾಷ್ಟ್ರದ ಅಭಿವೃದ್ಧಿಗೇ ಹೆಚ್ಚು ಗಮನ ಕೊಡುವಂತೆ, ನಿಮ್ಮ ಇತರ ಕ್ರಿಯೆಗಳಲ್ಲಿಯೂ ಇದೇ ಕ್ರಮ ವನ್ನು ಅನುಸರಿಸುವಂತೆ, ಮಾಡಬೇಕೆಂದು ನಾನು ಪ್ರಯತ್ನಿಸಿದೆನು. ಇದ ಕ್ಕಾಗಿ ನನಗೆ ಸಲ್ಲಬೇಕಾದ ಪ್ರತಿಫಲವೇನು? ಅದು ನನ್ನ ಸೇವೆಗೆ ತಕ್ಕದ್ದಾಗಿ ಉತ್ತಮವಾದದ್ದಾಗಿರಬೇಕು. ನಾನು ಹಣವಂತನಲ್ಲ; ನಿಮಗೆ ಇದುವರೆಗೆ ಮಾಡಿದಂತೆ ಮುಂದೆಯೂ ಉಪಕಾರ ಮಾಡಬೇಕಾದರೆ ನನಗೆ ಹೆಚ್ಚಾದ ವಿರಾಮ ಬೇಕು. ಹೀಗಿರುವಾಗ ನನಗೆ ನಿಮ್ಮಿಂದ ಏನು ಪ್ರತಿಫಲ ದೊರಕ ಬೇಕು? ಪ್ರೈಟೇನಿಯಮ್ಮಿನವರು ನನ್ನ ಜೀವನದ ವೆಚ್ಚವನ್ನು ವಹಿಸು ವುದೇ ಉಚಿತವಾದ ಪ್ರತಿಫಲವೆಂದು ತೋರುತ್ತದೆ. ಒಲಂಪಿಯದಲ್ಲಿ ಕುದುರೆಯ ಅಥವಾ ರಥದ ಜೂಜಿನಲ್ಲಿ ಗೆದ್ದು ಮೆರೆಯುವವರಿಗಿಂತ ನಾನು ಇಂಥ ಆದರಣೆಗೆ ಹೆಚ್ಚು ಅರ್ಹನೆಂದು ಹೇಳಬಹುದು. ನೀವು ಸುಖ ಪಡುತ್ತಿರುವಿರೆಂಬ ಭಾವ ಮಾತ್ರ ನಿಮ್ಮ ಮನಸ್ಸಿಗೆ ಬರುವಂತೆ ಜೂಜಿನಲ್ಲಿ ಗೆಲ್ಲುವವರು ಮಾಡುವರು; ನಾನು ನಿಮಗೆ ನಿಜವಾದ ಆನಂದದ ಅನುಭವ ಮಾಡಿಕೊಡುವೆನು. ಅವರಿಗೆ ನಿಮ್ಮ ಸಹಾಯ ಆವಶ್ಯಕವಲ್ಲ; ನಾನು ಬಡವನಾದ್ದರಿಂದ ನನಗೆ ಅದು ಆವಶ್ಯಕ. ಆದ್ದರಿಂದ ನನ್ನ ಕೆಲಸಕ್ಕೆ ತಕ್ಕ ಪ್ರತಿಫಲವನ್ನು ನಾನೇ ಸೂಚಿಸಬೇಕಾದರೆ, ಪ್ರೈಟೇನಿಯಮ್ಮಿನಿಂದ ನನ್ನ ಜೀವನವನ್ನು ನಡೆಸಬೇಕೆಂಬುದೇ ನನ್ನ ಸೂಚನೆ.

ನಾನು ಈಗ ಹೀಗೆ ಹೇಳುವುದೂ ಹಿಂದೆ ನಿಮ್ಮೆದುರಿಗೆ ಅತ್ತು ಕರೆದು ಮಾಡುವುದಿಲ್ಲವೆಂದದ್ದೂ ಧೂರ್ತತನವೆಂದು ನಿಮಗೆ ತೋರಬಹುದು. ಆದರೆ ನೀವು ಹಾಗೆಣಿಸಬಾರದು. ವಾಸ್ತವವಾದ ವಿಷಯವೇನೆಂದರೆ—ನನಗೆ ಅರಿವು ಇದ್ದಂತೆ ಮನಃಪೂರ್ವಕವಾಗಿ ನಾನು ಒಬ್ಬರಿಗೂ ಅನ್ಯಾಯ ಮಾಡಿಲ್ಲವೆಂದು ನನ್ನ ಮನಸ್ಸಿಗೆ ದೃಢವಾಗಿದೆ. ಆದರೆ ಇಲ್ಲಿ ಸಾಕಾದಷ್ಟು ಕಾಲ ದೊರೆಯಲಿಲ್ಲವಾದ್ದರಿಂದ ನಿಮ್ಮ ಮನಸ್ಸಿಗೂ ಇದನ್ನು ತಾರ್ಕಣೆಗೆ ತರುವುದು ಸಾಧ್ಯವಾಗಲಿಲ್ಲ. ಇತರ ಕೆಲವು ಪಟ್ಟಣಗಳಲ್ಲಿರುವಂತೆಯೇ ಇಲ್ಲಿಯೂ ಮರಣದಂಡನೆಗೆ ಗುರಿಯಾಗಬಹುದಾದ ಅಪರಾಧಿಗಳ ವ್ಯವಹಾರ ವನ್ನು ಒಂದು ದಿನದಲ್ಲಿ ತೀರ್ಮಾನ ಮಾಡದೆ ಹೆಚ್ಚು ಕಾಲವನ್ನು ಕೊಡಬೇ ಕೆಂಬ ನಿಬಂಧನೆಯಿದ್ದಿದ್ದರೆ, ನಿಮ್ಮ ಮನಸ್ಸಿನಲ್ಲಿ ಬೇರೂರಿರುವ ಪೂರ್ವ

ನಿರ್ಣಯವನ್ನು ಹೋಗಲಾಡಿಸಿ ನಾನು ನಿರಪರಾಧಿಯೆಂದು ಸಿದ್ಧಾಂತ ಮಾಡಿ ಕೊಡಬಹುದಾಗಿತ್ತೆಂದು ನನ್ನ ನಂಬಿಕೆ. ಮತ್ತೊಬ್ಬರಿಗೆ ಅನ್ಯಾಯ ಮಾಡಿಲ್ಲ ವೆಂದು ನಂಬಿರುವ ನಾನು ನನಗೇ ಏಕೆ ಅನ್ಯಾಯ ಮಾಡಿಕೊಳ್ಳಬೇಕು? ದಂಡನೆಗೆ ನಾನು ಅರ್ಹನಲ್ಲವೆಂದು ತಿಳಿದಿರುವಾಗ ನನಗೆ ಇಂಥ ದಂಡನೆ ಯನ್ನು ವಿಧಿಸಿ ಎಂದು ನಾನೇಕೆ ಸೂಚಿಸಲಿ? ಮೆಲೆಟಸ್ ಸೂಚಿಸಿರುವ ಶಿಕ್ಷೆಯನ್ನು ತಪ್ಪಿಸಿಕೊಳ್ಳಲೆಂದೆ? ಆ ಶಿಕ್ಷೆ—ಮರಣ—ಒಳ್ಳೆಯದೋ ಕೆಟ್ಟದ್ದೋ ತಿಳಿಯದೆಂದು ಆಗಲೇ ಹೇಳಿದ್ದೇನೆ; ಹೀಗೆ ಸಂದೇಹದಲ್ಲಿರುವು ದನ್ನು ತಪ್ಪಿಸಿಕೊಳ್ಳಲು ಕೆಟ್ಟದ್ದೆಂದು ದೃಢಪಟ್ಟಿರುವ ಶಿಕ್ಷೆಯನ್ನು ಸೂಚಿಸಲೆ? ಏನು ಶಿಕ್ಷೆಯನ್ನು ಕೋರಲಿ? ಸೆರೆಮನೆಯಲ್ಲಿಡಿರಿ ಎನ್ನಲೆ? ರಾಷ್ಟ್ರದ ಹನ್ನೊಂದು ಜನ ನ್ಯಾಯಾಧೀಶರ (The Eleven) ಗುಲಾಮನಾಗಿ ಸೆರೆಯಲ್ಲಿರುವುದು ಏನು ಸುಖ? ಅಥವಾ ನಾನು ಏನಾದರೂ ದಂಡವನ್ನು ತೆರುವೆನೆಂದೂ ಅದನ್ನು ಸಲ್ಲಿಸುವವರೆಗೆ ನನ್ನನ್ನು ಸೆರೆಮನೆಯಲ್ಲಿಟ್ಟಿರಬಹು ದೆಂದೂ ಕೇಳಿಕೊಳ್ಳಲೆ? ಹಾಗೆಂದರೆ ನಾನು ಸೆರೆಮನೆಯನ್ನೇ ಬೇಡಿ ದಂತಾಗುವುದು. ಏಕೆಂದರೆ ನನ್ನಲ್ಲಿ ಹಣವಿಲ್ಲ, ದಂಡವನ್ನು ಕೊಡಲಾರೆ. ನನ್ನನ್ನು ದೇಶಭ್ರಷ್ಟನನ್ನಾಗಿ ಮಾಡಿ ಕಳುಹಿಸಿಬಿಡಿರೆಂದು ಬೇಡಲೆ? ನೀವು ಅದಕ್ಕೆ ಒಪ್ಪಿದರೂ ಒಪ್ಪಬಹುದು. ಆದರೆ ನನ್ನ ದೇಶಬಾಂಧವರಾದ ನಿಮಗೇ ಸಂವಾದದಲ್ಲಿ ಸಹನೆಯಿಲ್ಲದೆ ಅದರಿಂದ ತಪ್ಪಿಸಿಕೊಳ್ಳಬೇಕೆಂದು ಪ್ರಯತ್ನಿಸುತ್ತಿರುವಾಗ, ಇತರ ದೇಶದವರು ನನ್ನ ಮಾತುಗಳನ್ನು ಸಹಿಸುವರೆ? ಎಂದಿಗೂ ಇಲ್ಲ. ಹಾಗೆ ಅವರು ಸಹನೆಯಿಂದ ನನ್ನ ಮಾತು ಕೇಳುವರೆಂದು ಭ್ರಾಂತಿಗೊಂಡು ನಾನು ದೇಶ ತ್ಯಾಗಮಾಡಿ ಹೋಗಬೇಕಾ ದರೆ ಜೀವದಾಸೆಯ ಪಿಶಾಚವು ನನ್ನನ್ನು ಬಲವಾಗಿಯೇ ಮೆಟ್ಟಿರಬೇಕು. ನಾನು ಎಲ್ಲಿ ಹೋದರೂ ಇಲ್ಲಿಯಂತೆಯೇ ಯುವಕರು ನನ್ನನ್ನು ಸುತ್ತುಗಟ್ಟಿ ನನ್ನ ಸಂಭಾಷಣೆಯನ್ನು ಕೇಳಲು ಮುತ್ತಿಕೊಳ್ಳುವರು. ಆ ಯುವಕರನ್ನು ನಾನು ಹತ್ತಿರ ಸೇರಿಸದೆ ಹೋದರೆ ಅವರೇ ನನ್ನನ್ನು ಹೊರಡಿಸಲು ತಮ್ಮ ಹಿರಿಯರನ್ನು ಪ್ರೇರಿಸುತ್ತಾರೆ. ನಾನು ಅವರನ್ನು ಹತ್ತಿರ ಸೇರಿಸಿದರೆ, ಊರಿನಲ್ಲಿ ಹಿರಿಯರಾಗಿರುವವರು ತಾವಾಗಿಯೇ ನನ್ನನ್ನು ಅಲ್ಲಿಂದ ಹೊರಡಿ ಸುತ್ತಾರೆ. ಇಲ್ಲ, ಅಥೆನ್ಸಿನವರೇ, ನಾನು ಹಾಗೆ ಜೀವಿಸಲಾರೆ. ಈ ವಯಸ್ಸಿ

ನಲ್ಲಿ ಊರಿನಿಂದ ಊರಿಗೆ, ಒಂದೂರಿನಿಂದ ಓಡಿಸಿದರೆ ಮತ್ತೊಂದು ಊರಿಗೆ ಅಲೆಯುತ್ತಾ ಕಾಲ ಹಾಕುವುದು ಎಂಥ ಜೀವನ !

ನಿಮ್ಮಲ್ಲಿ ಯಾರಾದರೂ " ಸಾಕ್ರೆಟೀಸ್, ನೀನು ಸುಮ್ಮನೆ ನಮ್ಮ ಪಟ್ಟಣವನ್ನು ಬಿಟ್ಟು ಇನ್ನೆಲ್ಲಿಯಾದರೂ ಹೋಗಿ, ಸಂವಾದ ಮಾಡು ವುದನ್ನು ಬಿಟ್ಟು ನೆಮ್ಮದಿಯಾಗಿ ಏಕಿರಬಾರದು ? " ಎಂದು ಕೇಳಬಹುದು. ಈ ವಿಷಯದಲ್ಲಿ ನನ್ನ ಮನೋಭಾವವನ್ನು ನಿಮಗೆ ನಂಬಿಕೆಯಾಗುವಂತೆ ಹೇಳುವುದು ಬಹಳ ಕಷ್ಟ. ನೀವು ಹೇಳುವಂಥ ಆಚರಣೆ ಈಶ್ವರಾಜ್ಞೆಗೆ ವಿರೋಧವೆಂದು ಹೇಳಿದರೆ, ಅದು ಹಾಸ್ಯವೆಂದು ಭಾವಿಸಿ ನೀವು ನನ್ನನ್ನು ನಂಬುವುದಿಲ್ಲ. ಅಥವಾ " ಹೀಗೆ ಸದ್ಗುಣ, ಜ್ಞಾನ ಮುಂತಾದ ವಿಷಯ ಗಳನ್ನು ಚರ್ಚಿಸುವುದೂ ಈ ವಿಷಯಗಳಲ್ಲಿ ನಮ್ಮ ಮತ್ತು ಇತರರ ಮನೋ ವೃತ್ತಿಯನ್ನು ಪರಿಶೀಲಿಸುವುದೂ ವಿಶೇಷ ಫಲಕಾರಿಯಾದದ್ದು ; ಈ ಪರಿ ಶೀಲನೆಯಲ್ಲಿ ಆಸಕ್ತಿಯಿಲ್ಲದವನ ಜೀವನ ವ್ಯರ್ಥ " ಎಂದು ಹೇಳಿದರೆ ಆ ಮಾತಿನಲ್ಲಿ ನಿಮಗೆ ಮೊದಲೇ ನಂಬಿಕೆಯಿಲ್ಲ. ನಾನು ಇದುವರೆಗೂ ಹೇಳಿರು ವುದೆಲ್ಲವೂ ಸತ್ಯ; ಸತ್ಯವೆಂದು ನಿಮ್ಮನ್ನು ಒಪ್ಪಿಸುವುದು ಮಾತ್ರ ಕಷ್ಟ. ಮತ್ತೆ ಹೇಳುತ್ತೇನೆ. ನಾನು ದಂಡನೆಗೆ ಅರ್ಹನೆಂದು ಭಾವಿಸಲು ಇದು ವರೆಗೂ ಏನೂ ಕಾರಣ ತೋರಿಬಂದಿಲ್ಲ. ನಾನು ಧನಿಕನಾಗಿದ್ದರೆ, ನನ್ನ ಶಕ್ತ್ಯನುಸಾರ ದಂಡವನ್ನು ತೆತ್ತು ಪಾರಾಗುವುದಕ್ಕೆ ಒಪ್ಪಬಹುದಾಗಿತ್ತು; ಏಕೆಂದರೆ ದಂಡವನ್ನು ಕೊಡುವುದರಿಂದ ನನಗೆ ಯಾವ ಕೊರತೆಯೂ ಕೆಡುಕೂ ಇರುತ್ತಿರಲಿಲ್ಲ. ಆದರೆ ನಾನು ಧನಿಕನಲ್ಲ; ನೀವು ಒಪ್ಪಿ ನನ್ನ ಶಕ್ತಿಗೆ ಅನುಗುಣವಾದ ದಂಡವನ್ನು ವಿಧಿಸಿದರೆ, ಅದನ್ನು ಬೇಕಾದರೆ ಕೊಡಬಹುದು. ನಾನು ಒಂದು ಬೆಳ್ಳಿಯ ಮೈನಾವನ್ನು ಕೊಡಬಲ್ಲೆ. ಆದ್ದರಿಂದ ನಾನು ಸೂಚಿಸುವ ದಂಡ ಅಷ್ಟೇ. ಆದರೆ ಇಲ್ಲಿರುವ ನನ್ನ ಸ್ನೇಹಿತರು ಪ್ಲೇಟೊ, ಕ್ರೈಟೊಬ್ಯುಲಸ್, ಆರಿಸ್ಟೋಬ್ಯುಲಸ್— ಇವರೆಲ್ಲರೂ ಮೂವತ್ತು ಮೈನಗಳನ್ನು ಕೊಡುವೆನೆಂದು ಹೇಳು ಎನ್ನುತ್ತಾರೆ. ಅವರು ಆಸ್ತಿವಂತರು; ನನಗೆ ಹೊಣೆಯಾಗಿರಲು ಸಿದ್ಧರಾಗಿದ್ದಾರೆ. ಆದ್ದರಿಂದ ನನಗೆ ಮೂವತ್ತು ಮೈನ ದಂಡನೆಯನ್ನು ವಿಧಿಸಬಹುದೆಂದು ಹೇಳುತ್ತೇನೆ.

[ಸಾಕ್ರೆಟೀಸನಿಗೆ ಮರಣದಂಡನೆಯನ್ನು ವಿಧಿಸುವರು]

ನನ್ನನ್ನು ಈಗ ಕೊಲ್ಲಿಸುವುದರಿಂದ ನೀವೇನೂ ಹೆಚ್ಚುಕಾಲ ನನ್ನ ತೊಂದರೆಯನ್ನು ತಪ್ಪಿಸಿಕೊಂಡಂತಾಗುವುದಿಲ್ಲ. ನಾನು ವಯಸ್ಸಾದವನು. ಇನ್ನು ನನಗೆ ಉಳಿದಿರುವ ಕೆಲವು ವರ್ಷಗಳ ಕಾಲದಲ್ಲಾದರೂ ನನ್ನ ಕಾಟವನ್ನು ತಪ್ಪಿಸಿಕೊಳ್ಳಲೆಂದು ನೀವು ನನ್ನನ್ನು ಕೊಲ್ಲಿಸಿದರೆ, ಸಾಕ್ರೆಟೀಸನಂಥ ಜ್ಞಾನಿಯನ್ನು—ನಾನು ಜ್ಞಾನಿಯಲ್ಲದಿದ್ದರೂ ನಿಮ್ಮನ್ನು ದೂರುವುದಕ್ಕಾದರೂ ಅವರು ನನ್ನನ್ನು ಜ್ಞಾನಿಯೆನ್ನುವರು— ಕೊಲ್ಲಿಸಿದಿರೆಂಬ ಅಪಯಶಸ್ಸನ್ನು ನಿಮ್ಮಲ್ಲಿ ತಪ್ಪುಹುಡುಕಲು ಕಾದಿರುವ ಜನಗಳು ನಿಮ್ಮ ತಲೆಗೆ ಕಟ್ಟುವರು. ನೀವು ಇನ್ನು ಸ್ವಲ್ಪ ದಿನ ತಾಳ್ಮೆಯಿಂದ ಇದ್ದಿದ್ದರೆ ನಿಮ್ಮ ಅಪೇಕ್ಷೆ ತೊಂದರೆಯಿಲ್ಲದೆಯೇ ಪೂರ್ಣವಾಗುತ್ತಿತ್ತು: ನನಗೆ ವಯಸ್ಸಾಗಿದೆ, ಸಾವು ಸನ್ನಿಹಿತವಾಗಿಯೇ ಇದೆ. ನಾನು ಈ ಮಾತುಗಳನ್ನು ಹೇಳುವುದು ಇಲ್ಲಿ ನೆರೆದಿರುವವರು ಎಲ್ಲರಿಗೂ ಅಲ್ಲ; ನನ್ನ ಮರಣಕ್ಕೆ ಸಮ್ಮತಿಯನ್ನು ಕೊಟ್ಟವರಿಗೆ ಮಾತ್ರ. ಅವರಿಗೆ ನಾನು ಹೇಳಬೇಕಾದದ್ದು ಇನ್ನೊಂದು ವಿಷಯವಿದೆ. ನಿಮ್ಮೆದುರಿಗೆ ಎದೆ ಕರಗುವಂಥ ಮಾತಾಡುವುದು ಯುಕ್ತವೆಂದು ನನಗೆ ತೋರಿದರೂ ಅಂಥ ಮಾತುಗಳ ಅಭಾವದ ದೆಸೆಯಿಂದ ನನಗೆ ಈ ದಂಡನೆಯಾಯಿತೆಂದು ನಿಮ್ಮಲ್ಲಿ ಯಾರಾದರೂ ಭಾವಿಸಬಹುದು. ನನಗೆ ದಂಡನೆಯಾಗಿರುವುದೇನೋ ಒಂದು ಅಭಾವದಿಂದಲೇ—ಆದರೆ ವಾಚಾಲತ್ವದ ಅಭಾವದಿಂದಲ್ಲ; ನಾಚಿಕೆಗೇಡುತನ, ಇತರರ ಮನಸ್ಸು ಮೆಚ್ಚುವಂಥ ಮಾತು ಏನಾದರೂ ಸರಿಯೆ, ಆಡಲು ಸಿದ್ಧವಾಗಿರುವುದು—ಈ ಗುಣಗಳ ಅಭಾವದಿಂದ. ನಾನು ನಿಮ್ಮೆದುರಿಗೆ ಗೋಳಿಟ್ಟು ಗೋಗರೆದಿದ್ದರೆ ನಿಮಗೆ ಸಂತೋಷವಾಗುತ್ತಿತ್ತೋ ಏನೋ. ಇತರರು ಹೀಗೆಲ್ಲಾ ಮಾಡುವುದನ್ನು ನೀವು ನೋಡಿದ್ದೀರಿ. ಆದರೆ ನನ್ನಂಥವನಿಗೆ ಹೀಗೆ ನಡೆದುಕೊಳ್ಳುವುದು ಸಲ್ಲದೆಂದು ಆಗಲೇ ನಿಮಗೆ ತಿಳಿಸಿದ್ದೇನೆ. ವಿಪತ್ತಿಗೆ ಸಿಕ್ಕಿದ ಮಾತ್ರಕ್ಕೆ ಮನುಷ್ಯನ ಗೌರವಕ್ಕೆ ಕೀಳಾದ ಕೆಲಸವನ್ನು ಮಾಡಬಾರದು. ಹಾಗೆ ಮಾಡಿ ಪ್ರಾಣವನ್ನು ಉಳಿಸಿಕೊಳ್ಳಲಿಲ್ಲವಲ್ಲ ಎಂಬ ಸಂಕಟ ಈಗಲೂ ನನಗಿಲ್ಲ. ನಿಮ್ಮ ಇಷ್ಟದಂತೆ ನಡೆದು ಬದುಕುವುದಕ್ಕಿಂತ ನನ್ನ ಇಷ್ಟದಂತೆ ನಡೆದು ಸಾಯುವುದು ಮೇಲು. ನ್ಯಾಯಸ್ಥಾನದಲ್ಲಿಯೇ ಆಗಲಿ ಯುದ್ಧರಂಗದಲ್ಲಿಯೇ ಆಗಲಿ, ಯಾವ ಉಪಾಯವನ್ನಾದರೂ ಸರಿಯೆ ಹುಡುಕಿ

ತಪ್ಪಿಸಿಕೊಳ್ಳುವುದು ಧರ್ಮವಲ್ಲ. ಯುದ್ಧ ನಡೆಯುತ್ತಿರುವಾಗ ಸೈನಿಕನು ತನ್ನ ಆಯುಧಗಳನ್ನು ಕೆಳಕ್ಕೆಸೆದು ಶತ್ರುವಿನ ಕಾಲಿಗೆ ಬಿದ್ದು ಶರಣು ಎಂದರೆ ಮರಣವನ್ನು ತಪ್ಪಿಸಿಕೊಳ್ಳಬಹುದು. ಎಂಥ ಹೇಯುವಾದ ಕೆಲಸವಾದರೂ ಅದರಲ್ಲಿ ಪ್ರವರ್ತಿಸಲು ಅಸಹ್ಯಪಡದವನಿಗೆ ಅಪಾಯವನ್ನು ತಪ್ಪಿಸಿಕೊಳ್ಳುವುದಕ್ಕೆ ಸಾವಿರ ದಾರಿ ತೋರಬಹುದು. ಆದರೆ ಮಿತ್ರರೇ, ಮರಣವನ್ನು ತಪ್ಪಿಸಿಕೊಳ್ಳುವುದು ಕಷ್ಟವಲ್ಲ, ಅಧರ್ಮವನ್ನು ತಪ್ಪಿಸಿಕೊಳ್ಳುವುದು ಕಷ್ಟ. ಅದು ಸಾವಿಗಿಂತಲೂ ಹೆಚ್ಚು ವೇಗವಾಗಿ ಓಡಬಲ್ಲುದು. ನಾನು ಮುದುಕ; ವೇಗವಾಗಿ ಓಡಲಾರೆ. ಆದ್ದರಿಂದ ನಿಧಾನವಾಗಿ ಓಡುವ ಮರಣಕ್ಕೆ ಸಿಕ್ಕಿಬಿದ್ದಿದ್ದೇನೆ. ನನ್ನ ಮೇಲೆ ಆಪಾದನೆ ತಂದಿರುವವರಾದರೋ ಚಟುವಟಿಕೆಯುಳ್ಳವರು, ಓಡಬಲ್ಲರು; ಆದರೂ ಮರಣಕ್ಕಿಂತ ವೇಗವುಳ್ಳ ಅಧರ್ಮವು ಅವರನ್ನು ಬೆನ್ನು ಹತ್ತಿ ಹಿಡಿದಿರುವುದು. ನೀವು ನನ್ನನ್ನು ದೋಷಿಯೆಂದೆಣಿಸಿರುವಿರಿ; ಅದರಿಂದ ನಾನು ಮರಣಕ್ಕೆ ತುತ್ತಾಗುತ್ತೇನೆ. ಅವರು ಧರ್ಮದೆದುರಿನಲ್ಲಿ ದೋಷಿಗಳಾಗುವರು; ಅದರಿಂದ ಅಧರ್ಮಕ್ಕೂ ಅನ್ಯಾಯಕ್ಕೂ ತುತ್ತಾಗುವರು. ನನ್ನ ಶಿಕ್ಷೆ ನನಗಿರಲಿ, ಅವರದು ಅವರಿಗಿರುವುದು. ಇದು ವಿಧಿಯ ನಿಯಮವೆಂದು ತೋರುತ್ತದೆ. ಇದೆಲ್ಲ ಹೀಗೆ ನಡೆದದ್ದೇ ಒಳ್ಳೆಯದೋ ಏನೋ.

ಮರಣೋನ್ಮುಖರಾದವರಿಗೆ ಸಾವಿಗೆ ಮುಂಚೆ ಭವಿಷ್ಯದ ತೆರೆ ಸ್ವಲ್ಪ ಓರೆಯಾಗುವುದು. ಈಗ ನನಗೆ ದಂಡನೆಯನ್ನು ವಿಧಿಸಿರುವ ನಿಮಗೆ ಒಂದು ಭವಿಷ್ಯದ್ವರ್ತಮಾನವನ್ನು ಹೇಳಬೇಕೆನ್ನಿಸುತ್ತದೆ. ನನ್ನ ಕೊಲೆಪಾತಕರಾದ ನಿಮಗೂ ಶಿಕ್ಷೆ ಸನ್ನಿಹಿತವಾಗಿದೆ; ನೀವು ನನಗೆ ವಿಧಿಸಿರುವ ಶಿಕ್ಷೆಗಿಂತಲೂ ನೂರು ಪಾಲು ಕಠಿನವಾದ ಶಿಕ್ಷೆಗೆ ನೀವು ಗುರಿಯಾಗಬೇಕಾಗುವುದು. ನಿಮ್ಮ ಜೀವನದಲ್ಲಿ ಏನುಮಾಡಿದಿರಿ ಎಂದು ನಾನು ಕೇಳಿದರೆ, ಲೆಕ್ಕ ಕೊಡಬೇಕಾಗುವುದನ್ನು ತಪ್ಪಿಸಿಕೊಳ್ಳುವೆವೆಂದುಕೊಂಡು ನೀವು ನನ್ನನ್ನು ಕೊಲ್ಲಿಸುವಿರಿ. ನಿಮ್ಮದು ತಪ್ಪು ತಿಳಿವಳಿಕೆ. ಹಾಗೆ ಲೆಕ್ಕಕೊಡಲು ನಿಮ್ಮನ್ನು ಎಳೆಯುವವರು ಇನ್ನು ಮೇಲೆ ಒಂದಕ್ಕೆ ನೂರರಷ್ಟು ಜನವಾಗುವರು. ನಿಮ್ಮನ್ನು ಪೀಡಿಸದಂತೆ ನಾನು ಎಷ್ಟೋ ಜನಗಳನ್ನು ಹಿಡಿತದಲ್ಲಿಟ್ಟಿದ್ದೆ. ನೀವು ಅದನ್ನು

ಕಾಣಿರಿ. ಅವರು ನನಗಿಂತ ವಯಸ್ಸಿನಲ್ಲಿ ಚಿಕ್ಕವರಾದ್ದರಿಂದ ನನಗಿಂತ ಕಠಿನ ಸ್ವಭಾವದವರೂ ಆಗಿರುವರು; ನನಗಿಂತಲೂ ಹೆಚ್ಚಾಗಿ ಅವರು ನಿಮ್ಮನ್ನು ರೇಗಿಸುವರು. ಜನಗಳನ್ನು ಕೊಲ್ಲಿಸುವುದರ ಮೂಲಕ ನಿಮ್ಮ ದುಷ್ಟಜೀವನಕ್ಕಾಗಿ ಯಾರೂ ನಿಮ್ಮನ್ನು ದೂರದಂತೆ ಮಾಡಿಕೊಳ್ಳಬಹುದೆಂದು ಭಾವಿಸುವುದು ತಿಳಿವಳಿಕೆಯಿಲ್ಲದವರ ಭ್ರಾಂತಿ. ಹಾಗೆ ತಪ್ಪಿಸಿಕೊಳ್ಳುವುದು ಅಸಾಧ್ಯ; ಸಾಧ್ಯವಾದರೂ ಅವಮಾನಕರ. ಅವರು ದೂರುವುದನ್ನು ತಪ್ಪಿಸಿಕೊಳ್ಳುವುದಕ್ಕೆ ಅತ್ಯುತ್ತಮವಾದ ಮತ್ತು ಧರ್ಮಾನುಗುಣವಾದ ಮಾರ್ಗ ಒಂದೇ-ಇತರರಿಗೆ ಕೆಡುಕು ಮಾಡದೆ ಸದ್ಗುಣಿಗಳಾಗಿರುವುದು. ಇಷ್ಟು ಮಾತ್ರ ಹೇಳಿ ಹೊರಡಲು ನಿಮ್ಮ ಅಪ್ಪಣೆಯನ್ನು ಪಡೆಯುತ್ತೇನೆ.

ಅಧಿಕಾರಿಗಳು ಈ ದಿನದ ಕೆಲಸಗಳನ್ನು ಮುಗಿಸುವುದರೊಳಗೆ, ನನ್ನನ್ನು ವಧ್ಯಸ್ಥಾನಕ್ಕೆ ಒಯ್ಯುವುದಕ್ಕೆ ಮುಂಚೆ, ನನ್ನನ್ನು ಬಿಡುಗಡೆ ಮಾಡಬೇಕೆಂದು ಮತವನ್ನು ಕೊಟ್ಟವರೊಡನೆ ಈಗ ನಡೆದ ವಿಷಯವಾಗಿ ಕೆಲವು ಮಾತುಗಳನ್ನಾಡಬೇಕೆಂದು ಬಯಸುತ್ತೇನೆ. ಪ್ರಿಯ ಮಿತ್ರರೇ, ಅದುವರೆಗೆ ಸ್ವಲ್ಪ ನಿಲ್ಲಬೇಕು. ಅವಕಾಶವಿರುವಾಗ ನಾವು ಸಂಭಾಷಣೆ ಮಾಡುತ್ತಿರುವುದಕ್ಕೆ ಯಾವ ಅಭ್ಯಂತರವೂ ಇಲ್ಲ. ನೀವೆಲ್ಲರೂ ನನ್ನ ಮಿತ್ರರು; ಈಗ ನನಗೆ ಸಂಭವಿಸಿರುವ ವಿದ್ಯಮಾನದ ಅರ್ಥವನ್ನು ನಿಮಗೆ ತಿಳಿಸಬೇಕೆಂದಿದ್ದೇನೆ. ನ್ಯಾಯಾಧೀಶರೇ,—ನಿಜವಾಗಿಯೂ ನಿಮ್ಮನ್ನು ನ್ಯಾಯಾಧೀಶರೆಂದು ಕರೆಯಬಹುದು—ಈಗ ನನಗೆ ಬಹು ಆಶ್ಚರ್ಯಕರವಾದ, ವಿಚಿತ್ರವಾದ ಪ್ರಸಂಗವೊದಗಿದೆ. ಭವಿಷ್ಯಜ್ಞಾನವುಳ್ಳ ಆ ದೇವವಾಣಿ ಇದುವರೆಗೂ ಯಾವಾಗಲೂ ನನ್ನ ಬಳಿಯೇ ಇದ್ದು ನಾನು ಮಾಡಬಾರದಾದ ಕೆಲಸಕ್ಕೆ ಉಜ್ಜುಗಿಸಿದೊಡನೆಯೇ—ಅದು ಎಷ್ಟು ಸಣ್ಣ ವಿಷಯವಾದರೂ ಆಗಲಿ—ನನ್ನನ್ನು ವಿರೋಧಿಸಿ ತಡೆಯುತ್ತಿತ್ತು. ಈಗಲಾದರೋ ಜನರು ಎಲ್ಲಕ್ಕಿಂತಲೂ ದೊಡ್ಡ ಆಪತ್ತೆಂದು ಭಾವಿಸುವ ಮರಣವೇ ನನಗೆ ಸಿದ್ಧವಾಗಿದೆ. ಆದರೂ ಇಂದು ನಾನು ಮನೆಯನ್ನು ಬಿಟ್ಟು ಹೊರಟಾಗಲೂ ಈ ನ್ಯಾಯಸ್ಥಾನಕ್ಕೆ ಬಂದಾಗಲೂ ನಾನು ಭಾಷಣ ಮಾಡುತ್ತಿದ್ದಾಗಲೂ—ಒಂದು ಸಲವೂ ಅದು ನನ್ನನ್ನು ವಿರೋಧಿಸಿ ತಡೆಯಲಿಲ್ಲ. ಹಿಂದೆ ಎಷ್ಟೋ ಕೇವೆ ನಾನು ಸಂಭಾಷಣೆ ಮಾಡುತ್ತಿದ್ದಾಗ ಅದು ನನ್ನನ್ನು ತಡೆದಿದೆ;

ಇಂದು ಮಾತ್ರ ನನ್ನ ಮಾತುಗಳನ್ನಾಗಲಿ ಕಾರ್ಯವನ್ನಾಗಲಿ ತಡೆಯಲಿಲ್ಲ. ಇದಕ್ಕೆ ಕಾರಣವೇನಿರಬಹುದು? ನನಗೆ ತಿಳಿದಿರುವುದನ್ನು ಹೇಳುತ್ತೇನೆ. ಮರಣ ಅನಿಷ್ಟವೆಂದು ನಾವೆಲ್ಲರೂ ಭಾವಿಸಿರುವುದು ತಪ್ಪು; ಅದು ಶ್ರೇಯಸ್ಕರವಾದದ್ದೇ ಸರಿ. ಅದು ಒಳ್ಳೆಯದಲ್ಲದೆ ಕೆಟ್ಟದ್ದಾಗಿದ್ದ ಪಕ್ಷದಲ್ಲಿ ದೇವವಾಣಿ ಇಂದು ಖಂಡಿತವಾಗಿಯೂ ನನ್ನನ್ನು ತಡೆಯುತ್ತಿತ್ತು. ಮರಣ ಶ್ರೇಯಸ್ಕರವೆಂಬುದಕ್ಕೆ ಇದು ನಿಸ್ಸಂದೇಹವಾದ ಪ್ರಮಾಣ.

ಈ ವಿಷಯವನ್ನು ಮತ್ತೊಂದು ರೀತಿಯಲ್ಲಿ ಪರ್ಯಾಲೋಚಿಸಬಹುದು. ಮರಣ ಒಳ್ಳೆಯದೆಂಬುದಕ್ಕೆ ಇತರ ಆಧಾರಗಳೂ ಕಂಡುಬರುತ್ತವೆ. ಮರಣವಾದ ಮೇಲೆ ನಮ್ಮ ಸ್ಥಿತಿ ಎರಡರಲ್ಲಿ ಒಂದಾಗಿರಬೇಕು. ಶೂನ್ಯಸ್ಥಿತಿಯಾಗಿರಬೇಕು—ಹಾಗಿದ್ದರೆ ಸತ್ತವರಿಗೆ ಯಾವ ವಿಷಯದ ಅರಿವೂ ಇರುವುದಿಲ್ಲ; ಅವರ ಇಂದ್ರಿಯಗಳೊಂದೂ ಜಾಗ್ರತವಾಗಿರುವುದಿಲ್ಲ. ಅಥವಾ ಹಾಗಿಲ್ಲದಿದ್ದರೆ ಸಾವೆನ್ನುವುದು ಈ ಲೋಕದಿಂದ ಮತ್ತೊಂದು ಲೋಕಕ್ಕೆ ಯಾತ್ರೆಯಾಗಿರಬೇಕು. ಸಾವೆನ್ನುವುದು ಕನಸಿಲ್ಲದ, ಗಾಢನಿದ್ರೆಯಂಥ ಸ್ಥಿತಿಯೆನ್ನುವುದೇ ನಿಜವಾದರೆ ಅದು ಅಪೇಕ್ಷಣೀಯವಾದದ್ದೇ ಸರಿ. ಹಾಗೆ ಕನಸಿಲ್ಲದೆ ನಿದ್ರೆ ಬಂದ ರಾತ್ರಿಗಳನ್ನು ಇತರ ದಿನಗಳೊಂದಿಗೆ ಹೋಲಿಸಿ ನೋಡಿದರೆ, ಯಾವ ಮನುಷ್ಯನೇ ಆಗಲಿ, ಪರ್ಷಿಯಾ ದೇಶದ ಚಕ್ರವರ್ತಿಯೇ ಆಗಲಿ, ಅಷ್ಟು ಸುಖಕರವಾದ ದಿನಗಳು ಬಹು ಕಡಮೆಯೆಂದು ಒಪ್ಪಿಕೊಳ್ಳುವನು. ಆದ್ದರಿಂದ ಸಾವಿನ ಸ್ಥಿತಿ ಹೀಗಿದ್ದರೆ ಅದೊಂದು ಹಿತವೇ ಆಗುವುದು; ಆಗ ಕಾಲವೆಲ್ಲಾ ಒಂದೇ ರಾತ್ರಿಯಾಗಿ ಪರಿಣಮಿಸುವುದು. ಹೀಗಲ್ಲದೆ ಇತರರು ಹೇಳುವಂತೆ ಸಾವು ಈ ಸ್ಥಳದಿಂದ ಸತ್ತವರೆಲ್ಲರೂ ಇರುವ ಸ್ಥಳಕ್ಕೆ ಯಾತ್ರೆಯಾದರೆ, ಮಿತ್ರರೇ ಮತ್ತು ನ್ಯಾಯಾಧೀಶರೇ, ಅದಕ್ಕಿಂತ ಉತ್ತಮವಾದದ್ದೂ ಆನಂದದಾಯಕವಾದದ್ದೂ ಮತ್ತೇನಿದೆ? ಇಲ್ಲಿ ಆ ಹೆಸರಿಗೆ ಅರ್ಹರಲ್ಲದಿದ್ದರೂ ನ್ಯಾಯಾಧೀಶರೆನ್ನಿಸಿಕೊಂಡು ಮೆರೆಯುವ ಜನರನ್ನು ಬಿಟ್ಟು ಆ ಲೋಕಕ್ಕೆ ಹೋದರೆ ಅಲ್ಲಿ ನಿಜವಾಗಿಯೂ ಧರ್ಮಾವತಾರರಾದವರು—ಈ ಲೋಕದಲ್ಲಿ ಬದುಕಿದ್ದಾಗ ಧರ್ಮಪರಾಯಣರಾಗಿದ್ದು ಈಗ ಅಲ್ಲಿ ದೇವತೆಗಳಾಗಿರುವ ಮೈನೋಸ್, ರ್‍ಹಾಡಮಾಂತಸ್, ಈಯೇಕಸ್, ಟ್ರಿಪ್ಟಾಲಿಮಸ್

—ಮೊದಲಾದವರು ಇರುವ ಸ್ಥಳಕ್ಕೆ ಹೋಗಲು ಹಿಂಜರಿಯುವುದೇಕೆ? ಅದಕ್ಕಿಂತ ಉತ್ತಮವಾದ ಯಾತ್ರೆ ಯಾವುದಿದೆ? ಆರ್ಫಿಯಸ್, ಮ್ಯೂಸೆಯಸ್, ಹೆಸಿಯಡ್, ಹೋಮರ್—ಮೊದಲಾದ ಪ್ರಸಿದ್ಧಪುರುಷರನ್ನು ಕಂಡು ಅವರೊಡನೆ ಸಂಭಾಷಣೆ ಮಾಡುವ ಭಾಗ್ಯವನ್ನು ಪಡೆಯುವುದಕ್ಕೆ ಏನು ಕೊಟ್ಟರೆ ತಾನೆ ಹೆಚ್ಚು? ಇದು ನಿಜವಾದರೆ ಮರಣ ಸಾವಿರ ಬಾರಿ ಬರಲಿ, ಸಂತೋಷದಿಂದ ಅನುಭವಿಸುತ್ತೇನೆ. ಅಲ್ಲಿ ಪಾಲಾಮಿಡೀಸನನ್ನೂ, ಟೆಲಾಮನ್ನಿನ ಮಗ ಏಜಾಕ್ಸನ್ನೂ ಅಧರ್ಮವಾದ ತೀರ್ಪಿನಿಂದ ಪ್ರಾಣ ಕಳೆದುಕೊಂಡ ಇತರರನ್ನೂ ನೋಡಿ, ನಮ್ಮ ನಮ್ಮ ಅನುಭವಗಳನ್ನು ಹೋಲಿಕೆ ಮಾಡಿಕೊಳ್ಳಬಹುದು. ಇಂಥ ಜೀವನ ಅತೃಪ್ತಿಕರವಾಗಿ ತೋರು ವುದಿಲ್ಲ. ಇದಲ್ಲದೆ ಈ ಲೋಕದಲ್ಲಿ ಮಾಡುತ್ತಿದ್ದಂತೆಯೇ ಅಲ್ಲಿರುವ ಜನ ರೊಡನೆ ಸಂವಾದ ಮಾಡಿ ನಿಜವಾದ ಜ್ಞಾನವನ್ನೂ ಸುಳ್ಳು ಜ್ಞಾನವನ್ನೂ ವಿಮರ್ಶಿಸಬಹುದು; ಅವರ ಅಭಿಪ್ರಾಯಗಳನ್ನು ಪರಿಶೀಲಿಸಿ, ಅವರಲ್ಲಿ ಜ್ಞಾನಿಗಳು ಯಾರು, ತಾವು ಜ್ಞಾನಿಗಳೆಂಬ ಭ್ರಾಂತಿಯಿಟ್ಟುಕೊಂಡಿರುವವರು ಯಾರು ಎಂಬುದನ್ನು ಕಂಡುಹಿಡಿಯಬಹುದು; ಇದೆಲ್ಲ ಅತ್ಯಂತ ಹಿತವಾದ ಕೆಲಸ. ಟ್ರಾಯ್ ಪಟ್ಟಣಕ್ಕೆ ಮುತ್ತಿಗೆ ಹಾಕುವುದಕ್ಕೆ ಹೊರಟ ಗ್ರೀಕರ ದಳಪತಿಯಾದ ಆಗಮೆಮ್ನನ್, ಒಡಿಸ್ಸಿಯಸ್, ಸಿಸಿಫಸ್—ಇವರಂಥ ಎಣಿಕೆಯಿಲ್ಲದಷ್ಟು ಜನ ಪುರುಷರೂ ಸ್ತ್ರೀಯರೂ ಅಲ್ಲಿದ್ದಾರೆ. ಅವರ ಸಹ ವಾಸ ಸಂಭಾಷಣೆ, ಅವರೊಡನೆ ತತ್ವವಿಚಾರ—ಇದಕ್ಕಿಂತಲೂ ಮಿಗಿಲಾದ ಭಾಗ್ಯವೇನಿದೆ? ಅದು ದೊರಕುವುದಾದರೆ ನೀವು ಏನನ್ನು ತಾನೆ ಕೊಡ ಲಾರಿರಿ? ಆ ಲೋಕದಲ್ಲಿ ಪ್ರಶ್ನೆ ಕೇಳಿದ ತಪ್ಪಿಗಾಗಿ ಜನರನ್ನು ಕೊಲ್ಲುವು ದಿಲ್ಲ. ಏಕೆಂದರೆ ಅವರು ಎಷ್ಟೋ ವಿಧಗಳಲ್ಲಿ ಹೆಚ್ಚು ಸುಖವನ್ನನುಭವಿಸು ವುದಲ್ಲದೆ ಅಮೃತತ್ವವನ್ನೂ ಪಡೆದಿರುವರೆಂದು ಜನರು ಹೇಳುತ್ತಾರೆ.

ನ್ಯಾಯಾಧೀಶರೇ, ಮರಣ ಉತ್ತಮವಾದದ್ದೆಂದೇ ಭಾವಿಸಬೇಕು. ಬದುಕಿನಲ್ಲಾಗಲಿ, ಸಾವಿನಲ್ಲಾಗಲಿ, ಸತ್ಪುರುಷರಿಗೆ ಎಂದಿಗೂ ಕೆಡುಕಾಗ ಲಾರದು; ಭಗವಂತನು ಎಂದಿಗೂ ಅವರನ್ನೂ ಅವರ ಕಡೆಯವರನ್ನೂ ಕೈ ಬಿಡನು. ಇದನ್ನು ನೀವು ನೆನಪಿನಲ್ಲಿಡಬೇಕು. ಈಗ ನನಗೆ ಸಾವು ಬಂದಿರು ವುದೂ ಆಕಸ್ಮಿಕವಾದದ್ದಲ್ಲ. ನಾನು ಜೀವವನ್ನು ತೊರೆದು ಇಲ್ಲಿಯ ಬಂಧನ

ಗಳಿಂದ ಬಿಡುಗಡೆ ಹೊಂದುವುದಕ್ಕೆ ಇದು ವಿಹಿತವಾದ ಕಾಲವೆಂದು ನನಗೆ ವ್ಯಕ್ತವಾಗಿದೆ. ಅದರಿಂದಲೇ ದೇವವಾಣಿ ನನ್ನನ್ನು ನಿರೋಧಿಸದೆ ಬಿಟ್ಟದ್ದು. ಆದ್ದರಿಂದ ನನ್ನನ್ನು ವಧಾರ್ಹನೆಂದು ನಿಶ್ಚಯಿಸಿದವರ ಮೇಲೆಯೂ ನನ್ನ ಮೇಲೆ ದೂರು ತಂದವರ ಮೇಲೆಯೂ ನನಗೆ ಕೋಪವಿಲ್ಲ. ಅವರು ನನಗೆ ಕೆಡುಕು ಮಾಡಲಿಲ್ಲ; ಆದರೆ ಒಳ್ಳೆಯದನ್ನು ಮಾಡಬೇಕೆಂಬ ಉದ್ದೇಶ ವೇನೂ ಅವರಿಗಿರಲಿಲ್ಲ. ಆದಕಾರಣ ಅವರು ಸ್ವಲ್ಪ ಮಟ್ಟಿಗೆ ದೋಷಿಗಳೆನ್ನ ಬಹುದು. ನಾನು ಅವರಲ್ಲಿ ಕೊನೆಯ ಪ್ರಾರ್ಥನೆಯೊಂದನ್ನು ಮಾಡಬೇಕಾ ದದ್ದು ಉಳಿದಿದೆ. ನನ್ನ ಮಕ್ಕಳು ಬೆಳೆದು ವಯಸ್ಕರಾದ ಮೇಲೆ, ಇದು ವರೆಗೂ ನಿಮಗೆ ನಾನು ಎಂಥ ಕಷ್ಟವನ್ನು ಕೊಟ್ಟೆನೋ ಅದೇ ಕಷ್ಟಕ್ಕೆ ಅವರನ್ನು ಗುರಿಮಾಡಿ. ಅವರು ಸದ್ಗುಣವನ್ನು ಮರೆತು ಹಣಕ್ಕೋ ಇತರ ವಿಷಯಗಳಿಗೋ ಮನಸೋಲುವಂತೆ ತೋರಿದರೆ ನಾನು ನಿಮಗೆ ತೊಂದರೆ ಪಡಿಸಿದಂತೆ ಅವರಿಗೂ ತೊಂದರೆಪಡಿಸಿ. ತಿರುಳಿಲ್ಲದಿದ್ದರೂ ತಾವೂ ದೊಡ್ಡ ಪಂಡಿತರೆಂದು ಭಾವಿಸಬಾರದೆಂದೂ ಶ್ರೇಯಸ್ಕರವಾದದ್ದನ್ನು ಬಿಟ್ಟು ತುಚ್ಛ ವಾದ ವಿಷಯಗಳಿಗೆ ಮನಸ್ಸು ಕೊಡಬಾರದೆಂದೂ ಎಚ್ಚರಿಸಿ. ಇಷ್ಟು ಮಾಡಿ ದರೆ ನೀವು ನನಗೂ ನನ್ನ ಮಕ್ಕಳಿಗೂ ನ್ಯಾಯವನ್ನು ಸಲ್ಲಿಸಿದಂತಾಗುತ್ತದೆ.

ಇನ್ನು ಹೊರಡುವ ಕಾಲ ಸನ್ನಿಹಿತವಾಯಿತು. ನಮ್ಮ ನಮ್ಮ ದಾರಿ ಯಲ್ಲಿ ನಾವು ಹೋಗುವೆವು. ನಾನು ಸಾಯುವುದಕ್ಕೆ ಹೋಗುತ್ತೇನೆ; ನೀವು ಬದುಕಿ ಬಾಳಲು ಹೋಗುತ್ತೀರಿ. ಇವೆರಡರಲ್ಲಿ ಯಾವುದು ಉತ್ತಮ ಸ್ಥಿತಿಯೋ ಭಗವಂತನೊಬ್ಬನಿಗೇ ಗೊತ್ತು.

ಕ್ರೈಟೊ

ಪಾತ್ರಗಳು : ಸಾಕ್ರೆಟೀಸ್ ಮತ್ತು ಕ್ರೈಟೊ

ಸ್ಥಾನ : ಸೆರೆಮನೆ

ಸಾಕ್ರೆಟೀಸ್—ಇದೇನು ಕ್ರೈಟೊ, ಈ ಹೊತ್ತಿನಲ್ಲಿ ಬಂದೆ! ಇನ್ನೂ ಚೆನ್ನಾಗಿ ಬೆಳಕು ಹರಿದಿಲ್ಲ, ಅಲ್ಲವೆ?

ಕ್ರೈಟೊ—ಹೌದು.

ಸಾ—ಹೊತ್ತು ಎಷ್ಟಾಗಿರಬಹುದು?

ಕ್ರೈ—ಅರುಣೋದಯದ ಸಮಯ.

ಸಾ—ಪಹರೆಯವನು ಈಗ ನಿನ್ನನ್ನು ಒಳಕ್ಕೆ ಬಿಟ್ಟದ್ದು ಹೆಚ್ಚು.

ಕ್ರೈ—ನಾನು ಅನೇಕ ವೇಳೆ ಇಲ್ಲಿಗೆ ಬರುತ್ತೇನಲ್ಲ, ಅವನು ನನ್ನನ್ನು ಚೆನ್ನಾಗಿ ಬಲ್ಲ. ಇದಲ್ಲದೆ ಅವನಿಗೆ ನನ್ನಿಂದ ಸ್ವಲ್ಪ ಉಪಕಾರವೂ ಆಗಿದೆ.

ಸಾ—ನೀನು ಈಗತಾನೆ ಬಂದೆಯಾ?

ಕ್ರೈ—ಇಲ್ಲ, ಬಂದು ಸ್ವಲ್ಪ ಹೊತ್ತಾಯಿತು.

ಸಾ—ಹಾಗಾದರೆ ನನ್ನನ್ನು ಆಗಲೇ ಎಚ್ಚರಿಸಬೇಕಾಗಿತ್ತು. ಮಾತಾಡದೆ ಸುಮ್ಮನೆ ಕುಳಿತಿದ್ದೆಯಲ್ಲ!

ಕ್ರೈ—ಸಾಕ್ರೆಟೀಸ್, ಈಗ ನಿನಗೆ ಒದಗಿರುವ ಕಷ್ಟ ನನಗೆ ಸಂಭವಿಸಿದ್ದರೆ ನಾನು ಎಷ್ಟು ಆತಂಕಪಡುತ್ತಿದ್ದೆನೋ! ನೀನು ಸ್ವಲ್ಪವೂ ಚಿಂತೆಯಿಲ್ಲದೆ ಸುಖವಾಗಿ ನಿದ್ದೆಮಾಡುತ್ತಿದ್ದದ್ದನ್ನು ನೋಡಿ ನನಗೆ ಆಶ್ಚರ್ಯವಾಯಿತು. ನಿನ್ನ ವಿಶ್ರಾಂತಿಗೆ ಅಡ್ಡಬರಬಾರದೆಂದೇ ನಾನು ನಿನ್ನನ್ನು ಎಬ್ಬಿಸಲಿಲ್ಲ. ನೀನು ಸದಾ ಸಂತೋಷಚಿತ್ತನೆನ್ನುವುದೇನೋ ನನಗೆ ಮೊದಲಿಂದಲೂ ಗೊತ್ತು. ಆದರೆ ಇಂಥ ವಿಪತ್ತಿನಲ್ಲಿಯೂ ಆತಂಕವಿಲ್ಲದೆ ಶಾಂತಿಯಿಂದಿರುವುದನ್ನು ನಾನು ಇದುವರೆಗೂ ನೋಡಿರಲಿಲ್ಲ.

ಸಾ—ಹಾಗೆಂದರೇನು, ಕ್ರೈಟೊ? ನಾನು ಇಷ್ಟು ವಯಸ್ಸಾದ ಮೇಲೂ ಸಾಯುವುದಕ್ಕೆ ಹಿಂಜರಿಯುವುದುಂಟೆ?

ಕ್ರೈ—ನಿನ್ನಂತೆಯೇ ವಯಸ್ಸಾದ ಎಷ್ಟೋ ಜನರಿಗೆ ಇಂಥ ವಿಪತ್ತುಗಳೊದಗಿವೆ. ಆದರೆ ವಯಸ್ಸಾಯಿತೆಂದುಕೊಂಡು ಅವರು ವಿಧಿಯನ್ನು ಬಯ್ಯದೆ ಇರುವುದಿಲ್ಲ.

ಸಾ—ನಿಜ. ಅದು ಹಾಗಿರಲಿ, ನೀನು ಇಷ್ಟು ಹೊತ್ತಿಗೆ ಮುಂಚೆ ಬಂದ ವಿಷಯವೇನೋ ಹೇಳಲೇ ಇಲ್ಲ.

ಕ್ರೈ—ನಾನು ಬಹಳ ಕೆಟ್ಟ ಸುದ್ದಿಯನ್ನು ತಂದಿದ್ದೇನೆ. ಅದನ್ನು ಕೇಳಿದರೆ ನಿನಗೇನೋ ದುಃಖವಿಲ್ಲದಿರಬಹುದು. ಆದರೆ ನಿನ್ನ ಸ್ನೇಹಿತರೆಲ್ಲರಿಗೂ, ಮುಖ್ಯವಾಗಿ ನನಗೂ, ಅದು ಬಹು ದುಃಖಕರವಾದ ಸುದ್ದಿ.

ಸಾ—ಅದೇನು ಅಂಥ ವರ್ತಮಾನ? ಡೀಲೋಸಿನಿಂದ ಹಡಗು ಬಂದಮೇಲೆ ನಾನು ಸಾಯಬೇಕೆಂದು ತೀರ್ಮಾನವಾಗಿತ್ತು. ಆ ಹಡಗು ಬಂದಿದೆಯೇನೋ?

ಕ್ರೈ—ಇಲ್ಲ, ಇನ್ನೂ ಬಂದಿಲ್ಲ. ಸೂನಿಯಮ್ಮಿಗೆ ಬಂದಿದೆಯಂತೆ. ಅಲ್ಲಿಂದ ಬಂದವರೊಬ್ಬರು ಅದು ಈ ದಿವಸವೇ ಇಲ್ಲಿಗೆ ಬರಬಹುದೆಂದು ಹೇಳಿದರು. ಹಾಗೆ ಅದು ಬಂದರೆ ನಾಳೆಯೇ ನಿನಗೆ ಕಡೆಯ ದಿನ.

ಸಾ—ಆಗಲಿ ಕ್ರೈಟೊ. ಭಗವಂತನ ಇಚ್ಛೆ ಹಾಗಿದ್ದರೆ ಸಂತೋಷ. ನಾನು ಸಾಯುವುದಕ್ಕೆ ಸಿದ್ಧನಾಗಿಯೇ ಇದ್ದೇನೆ. ಆದರೆ ಹಡಗು ಈವೊತ್ತು ಬರುವ ಹಾಗೆ ಕಾಣುವುದಿಲ್ಲ.

ಕ್ರೈ—ಅದು ಹೇಗೆ ಗೊತ್ತು?

ಸಾ—ಹೇಳುತ್ತೇನೆ ತಾಳು. ಹಡಗು ಬಂದ ಮೂರನೆಯ ದಿನವಲ್ಲವೇ ನಾನು ಸಾಯಬೇಕಾದದ್ದು?

ಕ್ರೈ—ಅಧಿಕಾರಿಗಳು ಹೇಳುವುದು ಹಾಗೆಯೇ.

ಸಾ—ಹಡಗು ನಾಳೆಗೆ ಮುಂಚೆ ಬರುವಂತೆ ತೋರುವುದಿಲ್ಲ. ಈಗ ಸ್ವಲ್ಪ ಹೊತ್ತಿಗೆ ಮುಂಚೆ ನನಗೆ ಒಂದು ಕನಸಾಯಿತು—ನೀನು ನನ್ನನ್ನು ಎಬ್ಬಿಸದೆ ಇದ್ದದ್ದು ಒಳ್ಳೆಯದೇ ಆಯಿತು, ಕ್ರೈಟೊ.

ಕ್ರೈ—ಏನು ಕನಸು ?

ಸಾ—ಸೌಂದರ್ಯವತಿಯಾದ ಸ್ತ್ರೀಯೊಬ್ಬಳು ಶುಭ್ರವಸ್ತ್ರಗಳನ್ನು ಧರಿಸಿ ನನ್ನೆದುರಿಗೆ ಬಂದಹಾಗೆ ತೋರಿತು. ಆಕೆ ನನ್ನನ್ನು ಕರೆದು "ಸಾಕ್ರೆಟೀಸ್, ಇಂದಿನಿಂದ ಮೂರನೆಯ ದಿನ ನೀನು ಫಲವತ್ತಾದ ಪಿಥಿಯಕ್ಕೆ ಹೋಗುವೆ" ಎಂದು ಹೇಳಿದಳು.

ಕ್ರೈ—ಏನು ವಿಚಿತ್ರವಾದ ಕನಸು !

ಸಾ—ಕನಸಿನ ಅರ್ಥವೇನೋ ಸ್ಪಷ್ಟವಾಗಿಯೇ ಇದೆ, ಕ್ರೈಟೊ.

ಕ್ರೈ—ಹೌದು. ಆ ವಿಷಯದಲ್ಲಿ ಏನೂ ಸಂದೇಹವಿಟ್ಟುಕೊಳ್ಳುವ ಹಾಗೇ ಇಲ್ಲ. ಅದಿರಲಿ ಸಾಕ್ರೆಟೀಸ್, ನನ್ನ ಮಾತನ್ನು ಮನಸ್ಸಿಗೆ ತಂದುಕೋ, ಮತ್ತೆ ಕೊನೆಯ ಸಾರಿ ನಿನ್ನನ್ನು ಬೇಡಿಕೊಳ್ಳುತ್ತೇನೆ. ನೀನು ಮನಸ್ಸು ಮಾಡಿದರೆ ಇಲ್ಲಿಂದ ತಪ್ಪಿಸಿಕೊಂಡು ಹೋಗಬಹುದು. ನನಗೆ ನಿನ್ನ ಮರಣವೆಂದರೆ ಎಲ್ಲರಿಗೂ ಸಂಭವಿಸುವ ವಿಪತ್ತಿನಂತಲ್ಲ. ನನ್ನ ಜೀವಮಾನದಲ್ಲಿ ಇನ್ನು ನಿನ್ನಂಥ ಸ್ನೇಹಿತರು ಸಿಕ್ಕಲಾರರು. ಆದರೆ ಇಂಥ ಸ್ನೇಹಿತನನ್ನು ಕಳೆದುಕೊಳ್ಳುವುದೊಂದೇ ದುಃಖವಲ್ಲ. ನನ್ನ ನಿನ್ನ ಸ್ವಭಾವವನ್ನರಿಯದ ಜನರು "ಸ್ವಲ್ಪ ಹಣ ವೆಚ್ಚ ಮಾಡಿದ್ದರೆ, ಕ್ರೈಟೋ ಆತನನ್ನು ಉಳಿಸಿಕೊಳ್ಳಬಹುದಾಗಿತ್ತು. ಅಷ್ಟಕ್ಕೆ ಕೈಬರಲಿಲ್ಲ" ಎಂದು ಮನಸ್ಸು ಬಂದಂತೆ ಮಾತಾಡಿಕೊಳ್ಳುತ್ತಾರೆ. ಸ್ನೇಹಿತನಿಗಿಂತ ನನಗೆ ಹಣ ಹೆಚ್ಚಾಯಿತೆನ್ನಿಸಿಕೊಳ್ಳುವುದಕ್ಕಿಂತಲೂ ದೊಡ್ಡ ಅವಮಾನ ಬೇಕೆ? ನಾನು ನಿನ್ನನ್ನು ಇಲ್ಲಿಂದ ತಪ್ಪಿಸಿ ಕರೆದುಕೊಂಡು ಹೋಗಲು ಪ್ರಯತ್ನಿಸಿದೆನೆಂದೂ ನೀನೇ ಅದಕ್ಕೆ ಸಮ್ಮತಿಸಲಿಲ್ಲವೆಂದೂ ಹೇಳಿದರೆ ಮಂದಿ ನಂಬುವುದೆ?

ಸಾ—ಅದು ಸರಿ, ಕ್ರೈಟೊ. ಆದರೆ ಮಂದಿ ಏನೆನ್ನುವುದು ಎಂಬ ಶಂಕೆ ನಮಗೇಕೆ? ಸತ್ಪುರುಷರೂ ಜ್ಞಾನಿಗಳೂ ಆದವರು ನಮ್ಮ ವಿಷಯದಲ್ಲಿ ನಿಜವಾದ ಅಭಿಪ್ರಾಯಗಳನ್ನಿಟ್ಟುಕೊಂಡಿದ್ದರೆ ಸರಿ.

ಕ್ರೈ—ಹಾಗಲ್ಲ, ಸಾಕ್ರೆಟೀಸ್. ಮಂದಿಯ ಅಭಿಪ್ರಾಯವನ್ನು ನಾವು ಹಾಗೆ ಮೂಲೆಗೆ ಒತ್ತರಿಸುವುದಕ್ಕಾಗುವುದಿಲ್ಲ. ಅವರಿಗೆ ಯಾರ ಮೇಲಾದರೂ ಸಿಟ್ಟಾದರೆ ಅವರು ಮಿತಿಯಿಲ್ಲದ ಕೆಡುಕುಮಾಡಬಲ್ಲರೆನ್ನುವುದಕ್ಕೆ ಈಗ ನಿನಗೆ ಮರಣ ದಂಡನೆಯನ್ನು ವಿಧಿಸಿರುವುದೊಂದೇ ನಿದರ್ಶನ ಸಾಲದೆ?

ಸಾ—ಮಂದಿಗೆ ಅಷ್ಟೊಂದು ಕೆಡುಕುಮಾಡುವ ಶಕ್ತಿಯಿದ್ದರೆ ಒಳ್ಳೆಯದೇ ಆಗಿತ್ತು. ಅಂಥ ಶಕ್ತಿಯುಳ್ಳವರು ಮಿತಿಯಿಲ್ಲದಷ್ಟು ಒಳ್ಳೆಯದನ್ನೂ ಮಾಡಬಲ್ಲರು—ಅದು ನಿಜವಾಗಿಯೂ ಉತ್ತಮವಾದ ಶಕ್ತಿ. ಈ ಜನರೇನು ಒಬ್ಬನನ್ನು ಜ್ಞಾನಿಯಾಗಿ ಮಾಡಬಲ್ಲರೆ ಅಥವಾ ಮೂಢನನ್ನಾಗಿ ಮಾಡಬಲ್ಲರೆ? ಅವರು ಏನೋ ಮನಸ್ಸಿಗೆ ತೋರಿದಂತೆ ಕೆಲಸ ಮಾಡಿಬಿಡುವರು. ಅವರಿಂದ ಒಳ್ಳೆಯದೂ ಕೆಟ್ಟದ್ದೂ ಏನೂ ಆಗುವುದಿಲ್ಲ. ಏನಾದರೂ ಆದರೆ ಆಕಸ್ಮಿಕವಾಗಿ ಆಗಬೇಕು, ಅಷ್ಟೆ.

ಕ್ರೈ—ಹೋಗಲಿ, ಅದರ ವಿಷಯವಾಗಿ ಇನ್ನು ಚರ್ಚೆ ಬೇಡ. ನೀನು ತಪ್ಪಿಸಿಕೊಂಡು ಹೋಗುವುದಿಲ್ಲವೆಂದು ಹಠಹಿಡಿದಿರುವುದನ್ನು ನೋಡಿದರೆ ನನಗೆ ಒಂದು ಸಂದೇಹಬರುತ್ತದೆ. ನಾವು ನಿನಗೆ ಸಹಾಯಮಾಡಿದೆವೆಂದು ಯಾರಾದರೂ ಚಾಡಿಕೋರರು ಅಧಿಕಾರಿಗಳಿಗೆ ತಿಳಿಸುವುದು, ಅವರು ನಮ್ಮನ್ನು ನಷ್ಟಕ್ಕೆ ಗುರಿಮಾಡುವುದು ಅಥವಾ ನಮ್ಮ ಆಸ್ತಿಯನ್ನೆಲ್ಲಾ ಕಿತ್ತುಕೊಳ್ಳುವುದು, ಇಲ್ಲವೇ ಇನ್ನೂ ಕ್ರೂರವಾದ ಶಿಕ್ಷೆಯನ್ನು ವಿಧಿಸುವುದು—ಈ ತೊಂದರೆಗೆಲ್ಲಾ ನಮ್ಮನ್ನೇಕೆ ಗುರಿಮಾಡಬೇಕು ಎಂಬ ಯೋಚನೆಯೇನೂ ನಿನಗಿಲ್ಲವಷ್ಟೆ? ಅದೇನಾದರೂ ಇದ್ದರೆ ಬಿಟ್ಟುಬಿಡು. ಈ ಕಷ್ಟ ಹಾಗಿರಲಿ, ನಿನ್ನ ಪ್ರಾಣವನ್ನುಳಿಸುವುದಕ್ಕಾಗಿ ಇದರ ಹತ್ತರಷ್ಟು ವಿಪತ್ತು ಬಂದರೂ ಅನುಭವಿಸುವುದಕ್ಕೆ ಸಿದ್ಧರಾಗಿರುವುದು ನಮ್ಮ ಕರ್ತವ್ಯ. ಆದ್ದರಿಂದ ಆ ಯೋಚನೆಯನ್ನು ಬಿಟ್ಟು ನಾನು ಹೇಳುವಂತೆ ಮಾಡು.

ಸಾ—ನಾನು ಒಪ್ಪದೆ ಇರುವುದಕ್ಕೆ ನೀನು ಹೇಳಿದ ಆತಂಕವೂ ಒಂದು ಕಾರಣ. ಆದರೆ ಅದೊಂದೇ ಅಲ್ಲ.

ಕ್ರೈ—ನೀನು ಆ ಯೋಚನೆಯನ್ನು ಮನಸ್ಸಿಗೆ ಹತ್ತಿಸಿಕೊಳ್ಳಲೇ ಬೇಡ. ನಿನ್ನನ್ನು ಇಲ್ಲಿಂದ ದಾಟಿಸಿಕೊಂಡು ಹೋಗುವುದಕ್ಕೆ ಸಿದ್ಧರಾಗಿರುವ ಜನರಿದ್ದಾರೆ. ಅದಕ್ಕೆ ಹೆಚ್ಚು ಹಣವೂ ಬೇಕಾಗಿಲ್ಲ. ಹಾಗೆ ನಮ್ಮ ಮೇಲೆ ಚಾಡಿ ಹೇಳುವವರಿದ್ದರೆ ಅವರಿಗೂ ಸ್ವಲ್ಪ ಕೈ ಬೆಚ್ಚಗೆ ಮಾಡಿದರಾಯಿತು. ಅವರೇನು ಹೆಚ್ಚು ಹಣ ಕೇಳುವುದಿಲ್ಲ. ನನ್ನ ದೊಡ್ಡ ಆಸ್ತಿಯೆಲ್ಲಾ ಇದಕ್ಕಾಗಿ ವೆಚ್ಚವಾಗುವುದಾದರೂ ಆಗಲಿ; ಅಥವಾ ನನ್ನೊಬ್ಬನ ಮೇಲೆಯೋ

ವೆಚ್ಚವೆಲ್ಲವೂ ಬೀಳುವುದೆಂಬ ಯೋಚನೆಯೂ ಬೇಡ. ಅಥೆನ್ಸಿಗೆ ಹೊರಗಿನಿಂದ ಬಂದಿರುವ ಕೆಲವರು ನಿನಗೋಸ್ಕರ ಎಷ್ಟು ವೆಚ್ಚವಾದರೂ ವಹಿಸಿಕೊಳ್ಳಲು ಸಿದ್ಧರಾಗಿದ್ದಾರೆ. ಥೀಬ್ಸಿನಿಂದ ಸಿಮಿಯಾಸ್ ಈ ಉದ್ದೇಶದಿಂದಲೇ ಹಣವನ್ನು ಕಟ್ಟಿಕೊಂಡು ಬಂದಿದ್ದಾನೆ. ಸೀಬೀಸ್, ಅವನ ಜೊತೆಯಲ್ಲಿ ಬಂದಿರುವ ಇನ್ನೂ ಕೆಲವರು—ಎಲ್ಲರೂ ನಿನಗಾಗಿ ಹಣ ವೆಚ್ಚಮಾಡಲು ಸಿದ್ಧರಾಗಿದ್ದಾರೆ. ವೆಚ್ಚ, ತೊಂದರೆ ಎನ್ನುವ ಯೋಚನೆಯನ್ನೇ ಬಿಟ್ಟುಬಿಡು; ಅದಕ್ಕೋಸ್ಕರ ಹಿಂದೆಗೆಯಬೇಡ. ಗಡಿಪಾರು ಮಾಡಿದರೆ ಎಲ್ಲಿ ಹೋಗುವುದಕ್ಕೂ ಏನು ಮಾಡುವುದಕ್ಕೂ ತೋರುವುದಿಲ್ಲವೆಂದು ನೀನು ನ್ಯಾಯಸ್ಥಾನದಲ್ಲಿ ಹೇಳಿದೆ. ಅದೂ ಏನೂ ದೊಡ್ಡ ವಿಷಯವಲ್ಲ. ನೀನು ಬೇರೆ ಊರಿಗೆ ಹೋದರೂ ಅಲ್ಲಿಯ ಜನಗಳು ನಿನ್ನನ್ನು ಪ್ರೀತಿಯಿಂದ ಕಾಣುತ್ತಾರೆ. ಥೆಸಲಿಯಲ್ಲಿ ನನ್ನ ಸ್ನೇಹಿತರಿದ್ದಾರೆ; ನೀನು ಅಲ್ಲಿಗೆ ಹೋಗುವುದಾದರೆ ನಿನಗೆ ಒಬ್ಬರಿಂದಲೂ ತೊಂದರೆಯಿಲ್ಲದಂತೆ ಗೌರವದಿಂದ ಆದರಿಸುತ್ತಾರೆ.

ಇದಲ್ಲದೆ, ಸಾಕ್ರೆಟೀಸ್, ಈಗ ನಿನ್ನ ಪ್ರಾಣವನ್ನುಳಿಸಿಕೊಳ್ಳುವುದು ಸಾಧ್ಯವಾಗಿದ್ದರೂ ಅದಕ್ಕೆ ಪ್ರಯತ್ನಪಡದಿದ್ದರೆ ಅದು ಅನ್ಯಾಯವೆಂದೇ ಎಣಿಸಬೇಕು. ನಿನ್ನ ಶತ್ರುಗಳು ನಿನ್ನ ಸಾವಿಗಾಗಿ ಬಹಳ ಪ್ರಯತ್ನ ಮಾಡುತ್ತಿದ್ದಾರೆ. ನಿನ್ನ ಹಠದಿಂದ ಅವರ ಕೋರಿಕೆ ನೆರವೇರಿದಂತಾಗುತ್ತದೆ. ಅದೂ ಹೋಗಲಿ, ನೀನು ಹೀಗೆ ಮಾಡುವುದರಿಂದ ನಿನ್ನ ಮಕ್ಕಳನ್ನು ಕಾಡುಪಾಲು ಮಾಡಿದಂತಾಗುತ್ತದೆ. ನೀನು ಸತ್ತಮೇಲೆ ಅವರಿಗೆ ವಿದ್ಯೆಬುದ್ಧಿಗಳನ್ನು ಕಲಿಸಿ ಅವರನ್ನು ಮುಂದಕ್ಕೆ ತರುವವರು ಯಾರು? ಸಾಧಾರಣವಾಗಿ ತಬ್ಬಲಿ ಮಕ್ಕಳಿಗಾಗುವ ಗತಿಯೇ ಅವರಿಗೂ ಆಗುವುದು. ಮಕ್ಕಳ ಯೋಗಕ್ಷೇಮವನ್ನು ಕೊನೆಯವರೆಗೂ ಚೆನ್ನಾಗಿ ನೋಡಿಕೊಳ್ಳಲು ಇಷ್ಟವಿಲ್ಲದಿರುವವರು ಅವರನ್ನು ಪಡೆಯುವುದೇಕೆ? ಸಾಹಸಿಯಂತೆ ನೀನು ಬದುಕಿದ್ದು ಈ ಭಾರಕ್ಕೆ ಹೆಗಲುಕೊಡುವುದು ಹೆಚ್ಚೋ? ಹೇಡಿಯಂತೆ ಜೀವನದ ಕಷ್ಟನಿಷ್ಠುರಗಳನ್ನು ತಪ್ಪಿಸಿಕೊಳ್ಳಲು ಪ್ರಾಣವನ್ನು ತ್ಯಜಿಸುವುದು ಹೆಚ್ಚೋ? ಎಲ್ಲಾ ಕೆಲಸಗಳಲ್ಲಿಯೂ ಸನ್ಮಾರ್ಗವನ್ನೇ ಅನುಸರಿಸುತ್ತೇನೆಂದು ಹೇಳುವ ನೀನೇ ಸಾವು ಸುಲಭ

ವೆಂದು ಆ ಮಾರ್ಗವನ್ನು ಹಿಡಿಯುವುದೆ? ಈಗ ನಿನ್ನ ಇಷ್ಟದಂತೆ ನಡೆಯುವುದು ನಮ್ಮೆಲ್ಲರಿಗೂ ನಾಚಿಕೆಗೇಡು. ನೀನು ವಿಚಾರಣೆಯನ್ನೇ ತಪ್ಪಿಸಿಕೊಳ್ಳಬಹುದಾಗಿತ್ತು; ಅಥವಾ ವಿಚಾರಣೆ ಬೇರೆ ರೀತಿಯಾಗಿ ನಡೆಯುವಂತೆ ಏರ್ಪಾಡುಮಾಡಬಹುದಾಗಿತ್ತು. ಅದೂ ಹೋಗಲೆಂದರೆ, ಈಗ ಸೆರೆಮನೆಯಿಂದ ತಪ್ಪಿಸಿಕೊಂಡುಹೋಗುವುದು ಸಾಧ್ಯವಾಗಿದ್ದರೂ ಹಾಗೆ ಮಾಡದಿದ್ದರೆ ಅದಕ್ಕಿಂತಲೂ ಮೂಢತನವುಂಟೆ? "ಇದೆಲ್ಲಕ್ಕೂ ಅವನ ಸ್ನೇಹಿತರ ತಾತ್ಸಾರವೂ ಹೇಡಿತನವೂ ಕಾರಣ. ಅವರಲ್ಲಿ ಏನಾದರೂ ತಿರುಳಿದ್ದರೆ ಅವರು ಸಾಕ್ರೆಟೀಸನನ್ನು ಉಳಿಸಬಹುದಾಗಿತ್ತು" ಎಂದು ಜನರು ಆಡಿಕೊಳ್ಳುವರು. ನೋಡು, ಸಾಕ್ರೆಟೀಸ್, ಇದರಿಂದ ನಾವು ವಿಪತ್ತಿನ ಜೊತೆಗೆ ಅವಮಾನವನ್ನು ಬೇರೆ ತಂದುಕೊಂಡಂತಾಗುತ್ತದೆ. ನಾನು ಹೇಳುವುದು ನ್ಯಾಯವೋ ಅಲ್ಲವೋ ಯೋಚಿಸಿನೋಡು. ಅಥವಾ ಯೋಚಿಸುವುದೇನು? ಈಗ ಯೋಚನೆಗೆ ಅವಕಾಶವಿಲ್ಲ. ಬೇಗ ಒಂದು ನಿಶ್ಚಯಮಾಡಿಬಿಡು. ನಮ್ಮ ಪ್ರಯತ್ನವನ್ನು ಈ ದಿನವೇ ಮಾಡದಿದ್ದರೆ ಕಾರ್ಯ ಕೈಮೀರಿ ಹೋಗುತ್ತದೆ. ಸಾಕ್ರೆಟೀಸ್, ನಾನು ಹೇಳುವಂತೆ ಮಾಡು.

ಸಾ—ಕ್ರೈಟೊ, ನಿನ್ನ ಉತ್ಸಾಹ ನ್ಯಾಯವಾದದ್ದಾದರೆ ಅದು ಅಮೂಲ್ಯವಾದದ್ದು. ಆ ಉತ್ಸಾಹವು ನ್ಯಾಯವಲ್ಲದ ವಿಷಯದಲ್ಲಿ ಪ್ರವರ್ತಿಸಿದರೆ ಅದು ಹೆಚ್ಚಾದಷ್ಟೂ ಅದರಿಂದ ಅಪಾಯವೂ ಹೆಚ್ಚಾಗುವುದು. ಈಗ ನಾನು ನಿನ್ನ ಮಾತಿನಂತೆ ನಡೆಯಬೇಕೇ ಬೇಡವೇ ಎಂದು ಯೋಚಿಸೋಣ. ನಾನು ಮೊದಲಿಂದಲೂ ಯಾವ ಸಂದರ್ಭ ಬಂದರೂ ಪ್ರಕೃತ ವಿಷಯವನ್ನು ಚೆನ್ನಾಗಿ ಯೋಚಿಸಿ ನನ್ನ ಬುದ್ಧಿಗೆ ಅತ್ಯುತ್ತಮವಾದದ್ದೆಂದು ತೋರಿದ ಮಾರ್ಗವನ್ನೇ ಅನುಸರಿಸುತ್ತಿದ್ದೆನು. ಈಗಲೂ ಹಾಗೆಯೇ ಮಾಡುತ್ತೇನೆ. ಈಗೇನೋ ವಿಪತ್ತು ಬಂದಿದೆಯೆಂದು ನನ್ನ ಇದುವರೆಗಿನ ಮತವನ್ನು ಮರೆತು ಬೇರೆ ದಾರಿಯನ್ನು ಹಿಡಿಯಲಾರೆ. ನನಗೆ ಮೊದಲು ಯಾವ ಧರ್ಮಸೂತ್ರಗಳಲ್ಲಿ ಗೌರವವೂ ನಂಬಿಕೆಯೂ ಇದ್ದುವೋ ಈಗಲೂ ಅವುಗಳಲ್ಲಿಯೇ ಇವೆ. ಅವುಗಳಿಗಿಂತ ಉತ್ತಮವಾದದ್ದನ್ನು ನೀನು ತೋರಿಸಿದರೆ ಸರಿ, ಇಲ್ಲದಿದ್ದರೆ ನಿನ್ನ ಮಾತಿಗೆ

ಒಪ್ಪಲಾರೆ. ಅಥೆನ್ಸಿನ ಜನರು ನನಗೆ ಇನ್ನೂ ಕಠಿನವಾದ ಶಿಕ್ಷೆಯನ್ನು ಕೊಡಲಿ, ಗುಮ್ಮ ಬರುತ್ತದೆ ಎಂದು ಮಕ್ಕಳನ್ನು ಹೆದರಿಸುವಂತೆ ನನ್ನನ್ನೂ ಹೆದರಿಸುವುದಕ್ಕೆ ನನಗೆ ದಂಡವನ್ನು ವಿಧಿಸಲಿ, ಸೆರೆಮನೆಯಲ್ಲಿಡಲಿ, ಕೊನೆಗೆ ಮರಣದಂಡನೆಯನ್ನೇ ವಿಧಿಸಲಿ; ಇದಕ್ಕೆಲ್ಲಾ ಹೆದರಿ ನಾನು ತಪ್ಪೆಂದು ತಿಳಿದಿರುವ ಕೆಲಸಕ್ಕೆ ಕೈಹಾಕುವುದಿಲ್ಲ.

ಈಗ ಈ ವಿಷಯವನ್ನು ಚೆನ್ನಾಗಿ ಪರಿಶೀಲಿಸುವುದು ಹೇಗೆ? ಸ್ವಲ್ಪ ಹೊತ್ತಿನ ಕೆಳಗೆ ನೀನೇನೋ ಜನಗಳ ಅಭಿಪ್ರಾಯವನ್ನು ನಿಕೃಷ್ಟವಾಗಿ ಕಾಣಲಾಗುವುದಿಲ್ಲವೆಂದು ಹೇಳುತ್ತಿದ್ದೆಯಲ್ಲ, ನಮ್ಮ ಚರ್ಚೆಯನ್ನು ಅಲ್ಲಿಂದ ಮುಂದುವರಿಸೋಣ. ನನ್ನನ್ನು ಸೆರೆಯಲ್ಲಿಡುವುದಕ್ಕೆ ಮುಂಚೆ ಬಹು ದಿನಗಳಿಂದಲೂ ಲೋಕದಲ್ಲಿ ಕೆಲವು ಅಭಿಪ್ರಾಯಗಳಿಗೆ ಮರ್ಯಾದೆ ಕೊಡಬೇಕೆಂದೂ ಇನ್ನು ಕೆಲವಕ್ಕೆ ಕೊಡಕೂಡದೆಂದೂ ನಾವು ಹೇಳುತ್ತಿದ್ದೆವು. ಅದು ಸರಿಯೆ? ಅಥವಾ ಮೊದಲು ಸರಿಯಾಗಿದ್ದದ್ದು ಈಗ ಸಂದರ್ಭ ಬದಲಾಯಿಸಿದ ಮಾತ್ರಕ್ಕೆ ತಪ್ಪಾಗುವುದೊ? ಮುಂಚೆ ನಾವು ಹೇಳುತ್ತಿದ್ದದ್ದೆಲ್ಲ ಸುಮ್ಮನೆ ಚರ್ಚೆಗೋಸ್ಕರ ಆಡುತ್ತಿದ್ದ ಹುಡುಗಾಟದ ಮಾತೆ? ಇದೇ ಈಗ ನಾವು ಪರ್ಯಾಲೋಚಿಸಬೇಕಾದದ್ದು. ನನ್ನ ಈಗಿನ ಸ್ಥಿತಿಯನ್ನು ಗಣನೆಗೆ ತಂದುಕೊಂಡರೆ ನಮ್ಮ ಹಿಂದಿನ ನಿರ್ಣಯಗಳನ್ನು ಬದಲಾಯಿಸಬೇಕಾಗುವುದೆ ಅಥವಾ ಈಗಲೂ ಅವುಗಳಿಗನುಸಾರವಾಗಿಯೇ ನಡೆಯಬೇಕೆ? ಇದನ್ನು ಈಗ ನಿನ್ನ ಸಹಾಯದಿಂದ ಗೊತ್ತುಮಾಡಬೇಕಾಗಿದೆ. ಈ ವಿಚಾರವಾಗಿ ಮಾತಾಡಲು ಅಧಿಕಾರವುಳ್ಳವರನೇಕರು ನಾವು ಈಗ ಹೇಳಿದಂತೆ ಲೋಕದಲ್ಲಿ ಕೆಲವರ ಅಭಿಪ್ರಾಯಗಳನ್ನು ಮಾತ್ರ ಪುರಸ್ಕರಿಸಬೇಕೆಂದೂ ಉಳಿದವರ ಅಭಿಪ್ರಾಯಗಳಿಗೆ ಗಮನಕೊಡಕೂಡದೆಂದೂ ಒಪ್ಪುವರು. ನನಗೆ ಮರಣದಂಡನೆಯಾಗಿರುವುದರಿಂದ ನಾನು ಈ ವಿಷಯದಲ್ಲಿ ನಿಷ್ಪಕ್ಷಪಾತವಾದ ತೀರ್ಮಾನಕ್ಕೆ ಬರಲಾರೆನೆನ್ನಬಹುದು. ನಿನಗೇನೂ ಹಾಗೆ ದಂಡನೆಯಿಲ್ಲದೆ ಇರುವುದರಿಂದ ಪ್ರಕೃತ ಸ್ಥಿತಿಯಿಂದ ನಿನ್ನ ಮನಸ್ಸು ಮೋಸಹೋಗುವಂತಿಲ್ಲ. ನಿನಗೆ ಹೇಗೆ ತೋರುತ್ತದೆ, ಹೇಳು. ಎಲ್ಲಾ ಜನರ ಅಭಿಪ್ರಾಯಗಳಿಗೂ ನಾವು ಮನ್ನಣೆ ಕೊಡಬಾರದು; ಕೆಲವು ಜನರ ಕೆಲವು

ಅಭಿಪ್ರಾಯಗಳಿಗೆ ಮಾತ್ರ ಮನ್ನಣೆ ಕೊಡಬೇಕು. ನಾನು ಹೇಳುವುದು ಸರಿಯೆ ?

ಕ್ರೈ—ನಿಸ್ಸಂದೇಹವಾಗಿ.

ಸಾ—ಒಳ್ಳೆಯ ಅಭಿಪ್ರಾಯಗಳಿಗೆ ಮನ್ನಣೆ ಕೊಟ್ಟು ಕೆಟ್ಟುವನ್ನು ಅಸಡ್ಡೆ ಮಾಡಬೇಕಲ್ಲವೆ?

ಕ್ರೈ—ಹೌದು.

ಸಾ—ಪ್ರಾಜ್ಞರ ಅಭಿಪ್ರಾಯಗಳು ಒಳ್ಳೆಯವು, ಮೂಢರ ಅಭಿಪ್ರಾಯಗಳು ಕೆಟ್ಟುವು, ನಿಜವೋ ?

ಕ್ರೈ—ನಿಜ.

ಸಾ—ಈಗ ಶಾಸ್ತ್ರೀಯವಾಗಿ ಒಬ್ಬನು ಅಂಗಸಾಧನೆ ಮಾಡುತ್ತಿದ್ದಾನೆಂದಿಟ್ಟುಕೊ. ಅವನು ಲೋಕವೆಲ್ಲಾ ತನ್ನ ಅಂಗಸಾಧನೆಯ ವಿಷಯದಲ್ಲಿ ಏನು ಹೇಳುವುದೆಂಬುದಕ್ಕೆ ಗಮನಕೊಡುವನೋ, ಇಲ್ಲದಿದ್ದರೆ ತನ್ನ ವೈದ್ಯನೊಬ್ಬನ ಅಥವಾ ತನಗೆ ಸಾಧನೆ ಕಲಿಸುವವನೊಬ್ಬನ ಅಭಿಪ್ರಾಯಕ್ಕೆ ಮಾತ್ರ ಗಮನಕೊಡುವನೋ ?

ಕ್ರೈ—ಅವನೊಬ್ಬನ ಅಭಿಪ್ರಾಯಕ್ಕೆ ಮಾತ್ರ.

ಸಾ—ಹಾಗಾದರೆ ಇತರರು ಏನು ಹೇಳಿದರೂ ಅವನು ಲೆಕ್ಕಿಸದೆ ತನ್ನ ಗುರು ಹೊಗಳಿದರೆ ಮಾತ್ರ ಸಂತೋಷಪಡುವನು; ಅವನ ಆಕ್ಷೇಪಣೆಗೆ ಮಾತ್ರ ಹೆದರುವನು, ಅಲ್ಲವೆ ?

ಕ್ರೈ—ಹಾಗೇ ಸರಿ.

ಸಾ—ಅವನು ತನ್ನ ನಡವಳಿಕೆಯಲ್ಲಿ, ಸಾಧನೆಯಲ್ಲಿ, ಆಹಾರಾದಿಗಳಲ್ಲಿ ಪ್ರಾಜ್ಞನಾದ ತನ್ನ ಗುರು ಒಬ್ಬನ ಮಾತಿನಂತೆ ನಡೆಯಬೇಕು. ಉಳಿದವರ ಮಾತಿಗೆ ಗಮನಕೊಡಬಾರದು, ಅಲ್ಲವೆ ?

ಕ್ರೈ—ನಿಜ.

ಸಾ—ಹಾಗೆಂದ ಮೇಲೆ ಆ ಗುರುವಿನ ಸಲಹೆಯನ್ನೂ ಹೊಗಳಿಕೆಯನ್ನೂ ಗಮನಿಸದೆ ಅವನ ಅಭಿಪ್ರಾಯಕ್ಕೆ ವಿರೋಧವಾಗಿ ನಡೆದು ತಿಳಿವಳಿಕೆ

ಯಿಲ್ಲದ ಜನರ ಅಭಿಪ್ರಾಯಕ್ಕೆ ಪ್ರಾಶಸ್ತ್ಯ ಕೊಟ್ಟರೆ ಅವನಿಗೆ ಕೆಡು ಕಾಗುವುದಲ್ಲವೆ ?

ಕ್ರೈ—ಸಂಶಯವೇ ಇಲ್ಲ.

ಸಾ—ಹಾಗೆ ಅವಿಧೇಯನಾದವನಿಗೆ ಏನು ಕೆಡುಕಾಗುತ್ತದೆ? ಕೆಡುಕು ಯಾವುದಕ್ಕೆ ಸಂಬಂಧಪಟ್ಟದ್ದು ?

ಕ್ರೈ—ಅವನ ಶರೀರಕ್ಕೆ ತಾನೆ. ಅವನ ಅವಿಧೇಯತೆಯಿಂದ ನಾಶವಾಗು ವುದು ಅವನ ಶರೀರವೇ.

ಸಾ—ಸರಿ. ಇತರ ವಿಷಯಗಳಲ್ಲಿಯೂ ಹೀಗೆಯೇ ಅಲ್ಲವೆ ಕ್ರೈಟೊ? ನ್ಯಾಯ ವಾದದ್ದು, ಅನ್ಯಾಯವಾದದ್ದು, ಘನವಾದದ್ದು, ಹೀನವಾದದ್ದು, ಒಳ್ಳೆಯ ದು, ಕೆಟ್ಟದ್ದು—ನಾವು ಚರ್ಚಿಸುತ್ತಿರುವ ಈ ವಿಷಯಗಳಲ್ಲೆಲ್ಲಾ ಮಂದಿ ಯ ಮತಕ್ಕೆ ಹೆದರಿ ಅದರಂತೆ ನಡೆಯಬೇಕೆ ಅಥವಾ ಪ್ರಾಜ್ಞನಾದವನೊ ಬ್ಬನ ಮಾತಿನಂತೆ ನಡೆಯಬೇಕೆ? ಅಂಥ ಪ್ರಾಜ್ಞನೊಬ್ಬನು ಸಿಕ್ಕುವುದಾ ದರೆ ಪ್ರಪಂಚದಲ್ಲಿ ಇತರರಿಗೆ ನಾವು ತೋರಿಸುವುದಕ್ಕಿಂತಲೂ ಅತಿಶಯ ವಾದ ಭಯಭಕ್ತಿಗಳಿಂದ ಆತನಲ್ಲಿ ನಡೆದುಕೊಳ್ಳಬೇಕು. ಅವನ ಸಲಹೆಗೆ ವಿರೋಧವಾಗಿ ನಡೆದರೆ ನಮ್ಮಲ್ಲಿ ಯಾವುದೋ ಒಂದು ಭಾಗ— ಅಂದರೆ ಅನ್ಯಾಯದಿಂದ ನಾಶವಾಗುವ ಮತ್ತು ನ್ಯಾಯದಿಂದ ವೃದ್ಧಿ ಯಾಗುವ ಭಾಗ—ಕ್ಷೀಣವಾಗಿ ನಾಶಹೊಂದುವುದು. ನಾನು ಹೇಳು ವುದು ಸರಿಯೆ ?

ಕ್ರೈ—ಸರಿ.

ಸಾ—ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ನಮ್ಮಲ್ಲಿ ಆರೋಗ್ಯ ದಿಂದ ಪುಷ್ಟಿಯಾಗುವ ಮತ್ತು ರೋಗದಿಂದ ಕ್ಷೀಣವಾಗುವ ವಸ್ತು ಒಂದಿದೆಯಷ್ಟೆ. ತಿಳಿವಳಿಕೆಯಿಲ್ಲದವರ ಮಾತು ಕೇಳಿಕೊಂಡು ಆ ವಸ್ತು ವನ್ನು ನಾಶಪಡಿಸಿಕೊಂಡ ಮೇಲೆ ನಾವು ಬದುಕಿದ್ದು ಪ್ರಯೋಜನ ವೇನು ? ಹೀಗೆ ನಾಶವಾಗುವ ವಸ್ತು ನಮ್ಮ ಶರೀರ ತಾನೆ ?

ಕ್ರೈ—ಹೌದು.

ಸಾ—ಕೊಳೆತುಹೋದ ಅಥವಾ ಊನವಾಗಿರುವ ಶರೀರವನ್ನಿಟ್ಟುಕೊಂಡು ಬದುಕಿ ಪ್ರಯೋಜನವುಂಟೆ ?

ಕ್ರೈ—ಇಲ್ಲ,

ಸಾ—ಸರಿ. ಮನುಷ್ಯರಲ್ಲಿ ಶರೀರಕ್ಕಿಂತ ಉತ್ಕೃಷ್ಟವಾದ, ಧರ್ಮದಿಂದ ಬೆಳೆಯುವ ಮತ್ತು ಅಧರ್ಮದಿಂದ ಕುಗ್ಗುವ ವಸ್ತುವೊಂದಿದೆಯಲ್ಲವೆ? ಆ ವಸ್ತು ನಾಶವಾದರೆ ನಾವು ಬದುಕಿ ಫಲವೇನು? ಹೀಗೆ ಧರ್ಮಾಧರ್ಮಗಳಿಗೆ ಸಂಬಂಧಪಟ್ಟ ವಸ್ತು ವಿಶೇಷವು ಶರೀರಕ್ಕಿಂತ ಕೀಳಾದದ್ದೆಂದು ಹೇಳಬಹುದೆ?

ಕ್ರೈ—ಎಂದಿಗೂ ಇಲ್ಲ.

ಸಾ—ಶರೀರಕ್ಕಿಂತ ಘನವಾದದ್ದು ತಾನೆ?

ಕ್ರೈ—ಸಾವಿರಪಾಲು ಘನವಾದದ್ದು.

ಸಾ—ಹಾಗಾದರೆ ಕೇಳು, ಕ್ರೈಟೊ, ನಾವು ಮಂದಿ ಹೇಳುವುದಕ್ಕೆಲ್ಲ ಕಿವಿಗೊಡಬಾರದು. ಯಾವ ಕೆಲಸವನ್ನು ಮಾಡಬೇಕಾದರೂ “ಈ ವಿಷಯದಲ್ಲಿ ಸತ್ಯ ಏನು ಹೇಳುತ್ತದೆ? ಧರ್ಮಾಧರ್ಮಗಳನ್ನು ತಿಳಿದವನು ಏನು ಹೇಳುತ್ತಾನೆ?” ಎಂದು ಆಲೋಚಿಸಬೇಕು. ಆದ್ದರಿಂದ ಧರ್ಮ, ಅಧರ್ಮ; ಒಳ್ಳೆಯದು, ಕೆಟ್ಟದ್ದು; ಉಚ್ಚವಾದದ್ದು, ನೀಚವಾದದ್ದು—ಈ ವಿಷಯಗಳಲ್ಲಿ ಲೋಕದ ಅಭಿಪ್ರಾಯಗಳನ್ನು ಒತ್ತರಿಸಲಾಗದೆಂದು ನೀನು ಮೊದಲು ಹೇಳಿದೆಯಲ್ಲ, ಅದು ತಪ್ಪು. “ನಿಜ. ಆದರೆ ಮಂದಿಗೆ ನಮ್ಮನ್ನು ಕೊಲ್ಲುವ ಶಕ್ತಿಯುಂಟು” ಎಂದು ಯಾರಾದರೂ ಹೇಳಬಹುದು.

ಕ್ರೈ—ಅಲ್ಲವೆ? ಆ ಉತ್ತರ ಬಂದೇ ಬರುತ್ತದೆ.

ಸಾ—ಅವರು ಹೇಳುವುದು ನಿಜ. ಆದರೂ ಈ ವಿಚಿತ್ರವನ್ನು ನೋಡು ಕ್ರೈಟೊ, ನಮ್ಮ ನಿರ್ಣಯವೇನೋ ಮೊದಲಿನಂತೆಯೇ ದೃಢವಾಗಿ ನಿಲ್ಲುತ್ತದೆ. ಈಗ ಇನ್ನೊಂದು ಪ್ರಶ್ನೆಯನ್ನು ಹಾಕೋಣ. ನಾವು ಹೆಚ್ಚು ಬೆಲೆ ಕಟ್ಟುವುದು ಕೇವಲ ಜೀವನ ಮಾತ್ರಕ್ಕಲ್ಲ, ಉತ್ಕೃಷ್ಟವಾದ ಜೀವನಕ್ಕೆ. ನಾವು ಹೀಗೆ ಹೇಳುತ್ತಿದ್ದದ್ದು ಸರಿಯಷ್ಟೆ?

ಕ್ರೈ—ಹೌದು.

ಸಾ—ಉತ್ಕೃಷ್ಟಜೀವನವೆಂದರೆ ಘನವಾದ, ಧರ್ಮಕ್ಕೆ ಅನುಸಾರವಾದ ಜೀವನ ತಾನೆ?

ಕ್ರೈ—ಹೌದು.

ಸಾ—ಅದನ್ನು ಒಪ್ಪಿಕೊಂಡು, ಈಗ ನಾನು ಅಥೆನ್ಸಿನವರ ಅಪ್ಪಣೆಯಿಲ್ಲದೆ ಸೆರೆಮನೆಯಿಂದ ತಪ್ಪಿಸಿಕೊಂಡು ಹೋಗುವುದು ಸರಿಯೋ ತಪ್ಪೋ ಎಂಬುದನ್ನು ಚರ್ಚಿಸೋಣ. ಸರಿಯೆಂದು ಸ್ಪಷ್ಟವಾಗಿ ಕಂಡುಬಂದರೆ ತಪ್ಪಿಸಿಕೊಳ್ಳಲು ಪ್ರಯತ್ನಮಾಡುವುದು; ಇಲ್ಲದಿದ್ದರೆ ಸುಮ್ಮನಿರುವುದು. ನೀನು ಹೇಳಿದ ಇತರ ವಿಷಯಗಳು—ಹಣ ವೆಚ್ಚವಾಗುವುದು, ಮಾನ ಹಾನಿ, ಮಕ್ಕಳ ಯೋಗಕ್ಷೇಮ—ಇವೆಲ್ಲಾ ಸಾಧಾರಣ ಜನರ ಆತಂಕಗಳು. ಅಂಥವರು ಶಕ್ತಿಯೊಂದಿದ್ದರೆ ಕಾರಣ ಕಟ್ಟು ಏನೂ ಇಲ್ಲದೆ ಜನರನ್ನು ಸಾಯಿಸುವುದಕ್ಕಾಗಲಿ ಬದುಕಿಸುವುದಕ್ಕಾಗಲಿ ಸಿದ್ಧರಾಗಿರುವರು. ಇದುವರೆಗೆ ವಾದಿಸಿಕೊಂಡು ಬಂದಿರುವ ಪ್ರಕಾರ ನಾವು ಗಮನಕೊಡಬೇಕಾದದ್ದು ಒಂದೇ ವಿಷಯಕ್ಕೆ. ನಾನು ಇಲ್ಲಿಂದ ತಪ್ಪಿಸಿಕೊಂಡು ಹೋಗುವುದೂ ನನಗೆ ಈ ಕೆಲಸದಲ್ಲಿ ಸಹಾಯಮಾಡಿದವರಿಗೆ ದ್ರವ್ಯರೂಪದಲ್ಲಿಯೋ ಇತರ ವಿಧದಲ್ಲಿಯೋ ಕೃತಜ್ಞತೆಯನ್ನು ತೋರಿಸುವುದೂ ಸರಿಯೆ ಅಥವಾ ತಪ್ಪೆ? ಅದು ತಪ್ಪೆಂದು ನಿರ್ಣಯವಾಗುವುದಾದರೆ, ಇಲ್ಲಿಯೇ ಇರುವುದರಿಂದ ಮರಣವೇ ಬರಲಿ ಅದಕ್ಕಿಂತಲೂ ದುಸ್ಸಹವಾದ ವಿಪತ್ತೇ ಬರಲಿ ಅದನ್ನು ಲಕ್ಷ್ಯಕ್ಕೇ ತರಬಾರದು.

ಕ್ರೈ—ನೀನು ಹೇಳುವುದು ನ್ಯಾಯವಾಗಿಯೇ ಇದೆ, ಸಾಕ್ರೆಟೀಸ್. ಈಗ ಅದನ್ನು ನಿರ್ಣಯಿಸುವುದು ಹೇಗೆ?

ಸಾ—ನಾವಿಬ್ಬರೂ ಕಲೆತು ಯೋಚಿಸೋಣ. ನನ್ನ ವಾದ ತಪ್ಪೆಂದು ನೀನು ಸಿದ್ಧಾಂತ ಮಾಡಿಕೊಟ್ಟರೆ ನಾನು ಒಪ್ಪುತ್ತೇನೆ. ಅದು ಆಗದಿದ್ದರೆ "ಅಥೆನ್ಸಿನವರ ಅಪ್ಪಣೆಯಿಲ್ಲದಿದ್ದರೇನು, ಇಲ್ಲಿಂದ ತಪ್ಪಿಸಿಕೊಂಡುಹೋಗು" ಎಂದು ನೀನು ಪದೇ ಪದೇ ಹೇಳುತ್ತಿರಕೂಡದು. ನಿನ್ನ ಅಭಿಪ್ರಾಯವೆಂದರೇನೋ ನನಗೆ ಬಹಳ ಗೌರವ; ಆದರೆ ಅದು ತಪ್ಪೆಂದು ಬುದ್ಧಿಗೆ ಚೆನ್ನಾಗಿ ತಿಳಿದ ಮೇಲೆಯೂ ಅದಕ್ಕನುಸಾರವಾಗಿ ನಾನು ನಡೆಯಲಾರೆ.

ನಾವು ಇದುವರೆಗೆ ಒಪ್ಪಿರುವುದನ್ನು ಮನಸ್ಸಿನಲ್ಲಿಟ್ಟುಕೊಂಡು ನನ್ನ ಪ್ರಶ್ನೆಗೆ ಉತ್ತರ ಹೇಳು.

ಕ್ರೈ—ಆಗಲಿ.

ಸಾ—ನಾವು ಯಾವಾಗಲೂ ಉದ್ದೇಶಪೂರ್ವಕವಾಗಿ ಕೆಟ್ಟದ್ದನ್ನು ಮಾಡಲೇ ಕೂಡದು ಅಲ್ಲವೆ? ಅಥವಾ ಕೆಲವು ಸಂದರ್ಭಗಳಲ್ಲಿ ಮಾಡಬಹುದು, ಇನ್ನು ಕೆಲವು ಸಂದರ್ಭಗಳಲ್ಲಿ ಮಾಡಕೂಡದು ಎನ್ನುವೆಯೊ? ನಾವು ಹಿಂದೆ ಒಪ್ಪಿಗೆಗೆ ಬಂದಂತೆ ಈಗಲೂ "ಕೆಟ್ಟದ್ದು ಯಾವಾಗಲೂ ಒಳ್ಳೆಯದಲ್ಲ, ಯಾವಾಗಲೂ ಅವಮಾನಕರ" ಎಂದು ಹೇಳೋಣವೆ ಅಥವಾ ಈ ವಿಚಾರದಲ್ಲಿ ನಾವು ಇಷ್ಟು ದಿನವೂ ಮಾಡಿಕೊಂಡಿದ್ದ ನಿರ್ಣಯಗಳನ್ನು ಈಗ ತೊರೆದುಬಿಡೋಣವೆ? ನಾವು ಇಷ್ಟು ವಯಸ್ಸಾದ ಮೇಲೆ ನಡಸಿದ ಚರ್ಚೆಗಳು ಹುಡುಗರ ಮಾತಿನಂತೆ ವಿಚಾರಶೂನ್ಯವಾದುವೆ? ಅಥವಾ ಜನಗಳು ಏನಾದರೂ ಹೇಳಿಕೊಳ್ಳಲಿ, ನಮ್ಮ ನಂಬಿಕೆಯಿಂದ ನಮಗೆ ಒಳ್ಳೆಯದೇ ಆಗಲಿ ಕೆಟ್ಟದ್ದೇ ಆಗಲಿ,—"ಅನ್ಯಾಯ ಅದನ್ನು ನಡಸುವವನಿಗೆ ಯಾವಾಗಲೂ ಕೆಟ್ಟದ್ದನ್ನೇ ಮಾಡುವುದು, ಯಾವಾಗಲೂ ಅವಮಾನವನ್ನು ತಂದೇ ತರುವುದು" ಎಂದು ನಿರ್ಧರವಾಗಿ ಹೇಳೋಣವೆ? ಏನು, ಹೇಳು.

ಕ್ರೈ—ಹಾಗೆಯೇ ಹೇಳಬೇಕು.

ಸಾ— ಹಾಗಾದರೆ ನಾವು ಕೆಟ್ಟದ್ದನ್ನು ಮಾಡಲೇ ಕೂಡದು?

ಕ್ರೈ—ಕೂಡದು.

ಸಾ—ಮಂದಿ ತಿಳಿದಿರುವಂತೆ ನಮಗೆ ಮತ್ತೊಬ್ಬರು ಅನ್ಯಾಯ ಮಾಡಿದರೂ ನಾವು ಅವರಿಗೆ ಅನ್ಯಾಯ ಮಾಡಬಾರದು. ಏಕೆಂದರೆ, ಅನ್ಯಾಯ ಮಾಡುವುದು ಯಾವ ಸಂದರ್ಭದಲ್ಲಿಯೂ ಸರಿಯಲ್ಲ.

ಕ್ರೈ—ಹೌದು.

ಸಾ—ಪುನಃ ಕೇಳುತ್ತೇನೆ. ನಾವು ಕೆಡುಕುಮಾಡಬಹುದೆ?

ಕ್ರೈ—ಖಂಡಿತ ಕೂಡದು, ಸಾಕ್ರೆಟೀಸ್.

ಸಾ—ಮಂದಿಯ ಮತದಂತೆ ಕೆಟ್ಟದ್ದಕ್ಕೆ ಪ್ರತಿಯಾಗಿ ಕೆಟ್ಟದ್ದು ಮಾಡುವುದು ಸರಿಯೇ ತಪ್ಪೇ?

ಕ್ರೈ—ತಪ್ಪು.

ಸಾ—ಕೆಡುಕು ಮಾಡುವುದು, ಅನ್ಯಾಯ ಮಾಡುವುದು ಎರಡೂ ಒಂದೇ ತಾನೆ?

ಕ್ರೈ—ಹೌದು.

ಸಾ—ಹಾಗಾದರೆ ನಮಗೆ ಇನ್ನೊಬ್ಬನು ಎಷ್ಟೇ ಅಪಕಾರ ಮಾಡಿರಲಿ ನಾವು ಅದಕ್ಕೆ ಪ್ರತೀಕಾರವನ್ನು ಮಾಡಬಾರದು? ನಿನ್ನ ಮಾತಿನ ಅರ್ಥ ಇದೇ ಹೌದೋ ಅಲ್ಲವೋ ಚೆನ್ನಾಗಿ ಯೋಚಿಸು, ಕ್ರೈಟೊ. ಈ ಅಭಿಪ್ರಾಯ ವನ್ನು ಪ್ರಪಂಚದಲ್ಲಿ ಬಹು ಸ್ವಲ್ಪ ಜನರು ಮಾತ್ರ ಒಪ್ಪುತ್ತಾರೆ. ಇದನ್ನು ಒಪ್ಪುವವರಿಗೂ ಒಪ್ಪದಿರುವವರಿಗೂ ಎಳ್ಳಷ್ಟೂ ಹೊಂದಿಕೆಯಿರುವುದಿಲ್ಲ ವಾದ್ದರಿಂದ ಒಂದು ಪಂಗಡದವರನ್ನು ಕಂಡರೆ ಮತ್ತೊಂದು ಪಂಗಡದವ ರಿಗೆ ತಿರಸ್ಕಾರಭಾವ ಹುಟ್ಟುತ್ತದೆ. ಪುನಃ ಯೋಚಿಸಿನೋಡು. ಇದೇ ನನ್ನ ವಾದದ ಮೂಲಸೂತ್ರ: ಮತ್ತೊಬ್ಬನಿಗೆ ಕೆಡುಕುಮಾಡುವುದು, ಅವನು ಮಾಡಿದ ಅಪಕಾರಕ್ಕೆ ಪ್ರತಿಯಾಗಿಯಾಗಲಿ ಅಥವಾ ಅವನಿಂ ದಾಗಬಹುದಾದ ಅಪಾಯವನ್ನು ತಪ್ಪಿಸಿಕೊಳ್ಳುವುದಕ್ಕಾಗಲಿ ನಾವು ಅವನಿಗೆ ಅಪಕಾರ ಮಾಡುವುದು, ಹಗೆಗಳ ಮೇಲೆ ಹಗೆತನ ತೀರಿಸಿ ಕೊಳ್ಳುವುದು—ಇದು ಯಾವ ಸಂದರ್ಭದಲ್ಲಿಯೂ ಧರ್ಮವಲ್ಲ. ನೀನು ಇದನ್ನು ಒಪ್ಪುವೆಯೋ ಅಥವಾ ತಪ್ಪು ತಿಳಿವಳಿಕೆಯೆನ್ನುವೆಯೋ? ನನಗೇನೋ ಇದುವರೆಗೆ ಅದೇ ನಂಬಿಕೆ ಇತ್ತು, ಈಗಲೂ ಅದೇ ನಂಬಿಕೆ ಇದೆ. ನಿನ್ನ ಮನಸ್ಸಿಗೆ ಇದು ಸರಿಬಾರದಿದ್ದರೆ ನಿನಗೆ ತೋರುವುದೇನು ಹೇಳು. ನಿನಗೂ ಇದರಲ್ಲಿ ಮುಂಚಿನಂತೆ ಈಗಲೂ ನಂಬಿಕೆ ಇರುವುದಾ ದರೆ ಮುಂದೆ ಚರ್ಚೆಮಾಡೋಣ.

ಕ್ರೈ—ನನ್ನ ಅಭಿಪ್ರಾಯ ಬದಲಾಯಿಸಿಲ್ಲ.

ಸಾ—ಹಾಗಾದರೆ ಮುಂದಿನ ಪ್ರಶ್ನೆ. ನಾವು ಯಾವುದನ್ನು ನ್ಯಾಯವೆಂದು ನಂಬುತ್ತೇವೋ ಅದರಂತೆ ನಡೆಯಬೇಕೆ ಅಥವಾ ಅದಕ್ಕೆ ವ್ಯತಿರಿಕ್ತವಾಗಿ ನಡೆಯಬೇಕೆ?

ಕ್ರೈ—ಯಾವುದು ನ್ಯಾಯವೆಂದು ತೋರುತ್ತದೋ ಅದರಂತೆಯೇ ನಡೆಯ ಬೇಕು.

ಸಾ—ಹಾಗಾದರೆ ಈಗಿನ ಸಂದರ್ಭವನ್ನು ನೋಡು. ನಾನು ಅಥೆನ್ಸಿನವರ ಒಪ್ಪಿಗೆಯಿಲ್ಲದೆ ಸೆರೆಮನೆಯಿಂದ ತಪ್ಪಿಸಿಕೊಂಡುಹೋದರೆ ಮುಖ್ಯವಾಗಿ ಯಾರಲ್ಲಿ ನ್ಯಾಯದಿಂದ ನಡೆದುಕೊಳ್ಳಬೇಕೋ ಅವರಿಗೇ ಅನ್ಯಾಯ ಮಾಡಿದಂತಾಗುತ್ತದೆ. ನಾವು ಈಗ ತಾನೆ ನ್ಯಾಯವೆಂದು ಒಪ್ಪಿಕೊಂಡ ದಾರಿಯನ್ನು ಬಿಟ್ಟು ತಪ್ಪುದಾರಿಯನ್ನು ಹಿಡಿದಂತಾಗುತ್ತದೆ, ಅಲ್ಲವೆ?

ಕ್ರೈ—ಅದು ಹೇಗೋ ಹೇಳಲಾರೆ, ಸಾಕ್ರೆಟೀಸ್. ನನಗೆ ತಿಳಿಯುವುದಿಲ್ಲ.

ಸಾ—ಹಾಗಾದರೆ ತಾಳು, ಇನ್ನೊಂದು ರೀತಿ ವಿಚಾರಮಾಡೋಣ. ಈಗ ನಾನು ಕಳ್ಳತಪ್ಪಿಸಿಕೊಂಡು—ಅದಕ್ಕೆ ನೀನು ಏನು ಹೆಸರು ಬೇಕಾದರೂ ಕೊಡಬಹುದು—ಓಡುತ್ತಿದ್ದೇನೆಂದು ಭಾವಿಸೋಣ. ಆಗ ನಮ್ಮ ರಾಷ್ಟ್ರ ಶಾಸನಗಳು ಮೂರ್ತಿಮತ್ತಾಗಿ ಬಂದು ನನ್ನನ್ನು ಹೀಗೆ ಕೇಳಬಹುದು: "ಏನು ಸಾಕ್ರೆಟೀಸ್, ಎಂಥ ಕೆಲಸಕ್ಕೆ ಕೈಹಾಕಿದ್ದೀಯೆ? ನೀನು ಹೀಗೆ ಮಾಡುವುದರಿಂದ ನಮ್ಮನ್ನು—ಅಂದರೆ ಶಾಸನಗಳನ್ನೂ ರಾಷ್ಟ್ರವೆಲ್ಲವನ್ನೂ—ನಿನ್ನ ಶಕ್ತಿಯಿರುವ ಮಟ್ಟಿಗೆ ತಲೆಕೆಳಗಾಗಿ ಮಾಡಿದಂತಾಗುವುದಿಲ್ಲವೆ? ರಾಷ್ಟ್ರದಲ್ಲಿ ಪ್ರತಿಯೊಬ್ಬನೂ ಸ್ವತಂತ್ರವಾಗಿ ಶಾಸನದ ತೀರ್ಮಾನಗಳನ್ನು ನಿರಾಕರಿಸಿ ಅವುಗಳನ್ನು ತುಳಿದುಹಾಕಬಹುದಾದರೆ ಅಂಥ ರಾಷ್ಟ್ರ ಹಾಳಾಗದೆ ಉಳಿಯುವುದುಂಟೆ?" ಹೀಗೆ ನಮ್ಮನ್ನು ಪ್ರಶ್ನೆಮಾಡಿದರೆ ನಾವು ಏನು ಉತ್ತರ ಕೊಡಬೇಕು, ಕ್ರೈಟೊ? ಶಾಸನದ ತೀರ್ಪನ್ನು ಉಲ್ಲಂಘಿಸಕೂಡದೆಂಬ ವಿಷಯದಲ್ಲಿ ಯಾರಾದರೂ ಎಷ್ಟು ದೊಡ್ಡ ಉಪನ್ಯಾಸವನ್ನಾದರೂ ಮಾಡಬಹುದು; ವಾಗ್ಮಿಗಳಾದರಂತೂ ಹೇಳಬೇಕಾಗಿಯೇ ಇಲ್ಲ. ಇದಕ್ಕೆ ನಾನು ಏನು ಉತ್ತರ ಕೊಡಲಿ? "ಹೌದು, ಆದರೆ ಸರಕಾರ ನನಗೆ ಅನ್ಯಾಯಮಾಡಿದೆ; ನನ್ನ ವಿಷಯದಲ್ಲಿ ಶಾಸನದ ತೀರ್ಮಾನ ತಪ್ಪು" ಎಂದು ಹೇಳಲೆ?

ಕ್ರೈ—ಹಾಗೆ ಹೇಳಬಹುದಲ್ಲ.

ಸಾ—ಅದಕ್ಕೆ ರಾಷ್ಟ್ರ ಶಾಸನಗಳ ಉತ್ತರವಿದ್ದೇ ಇದೆ. "ಸಾಕ್ರೆಟೀಸ್, ನಿನ್ನ ನಮ್ಮ ಒಪ್ಪಂದವೇನು? ರಾಷ್ಟ್ರದ ತೀರ್ಮಾನವೇನಿದ್ದರೂ ಅದರಂತೆ ನೀನು ನಡೆಯಬೇಕೆಂದಲ್ಲವೆ?"—ಈ ಮಾತನ್ನು ಕೇಳಿ ನಾನೇನಾದರೂ ಆಶ್ಚರ್ಯವನ್ನು ತೋರಿಸಿದರೆ ಅವು ಮತ್ತೆ ಹೇಳುತ್ತವೆ: "ಸುಮ್ಮನೆ

ಕಣ್ಣು ಅರಳಿಸಬೇಡ, ಸಾಕ್ರೆಟೀಸ್. ನಮಗೆ ಉತ್ತರಕೊಡು; ಪ್ರಶ್ನೆ ಹಾಕುವುದೂ ಉತ್ತರ ಕೊಡುವುದೂ ನಿನಗೆ ಚೆನ್ನಾಗಿ ಅಭ್ಯಾಸವಾಗಿದೆಯಲ್ಲ. ನೀನು ನಮ್ಮನ್ನೂ ರಾಷ್ಟ್ರವನ್ನೂ ನಾಶಮಾಡಲು ಪ್ರಯತ್ನಿಸುವಷ್ಟು ನಾವು ನಿನಗೆ ಮಾಡಿರುವ ಅಪರಾಧವೇನು? ರಾಷ್ಟ್ರಶಾಸನಗಳಿಗನುಸಾರವಾಗಿಯೇ ಅಲ್ಲವೆ ನಿನ್ನ ತಂದೆ ತಾಯಿಗಳು ಮದುವೆಯಾಗಿ ನಿನ್ನನ್ನು ಪಡೆದದ್ದು? ಆದ್ದರಿಂದ ನಮ್ಮಿಂದಲೇ ಅಲ್ಲವೆ ನೀನು ಜನ್ಮ ಪಡೆದದ್ದು? ಮದುವೆಗೆ ಸಂಬಂಧಪಟ್ಟ ಶಾಸನಗಳಲ್ಲಿ ಏನಾದರೂ ತಪ್ಪು ಕಂಡುಬಂದಿರುವುದೆ?"

ಇಲ್ಲವೆಂದು ಉತ್ತರಕೊಡಬೇಕು ತಾನೆ, ಕ್ರೈಟೊ?

"ಹೆತ್ತವರು ಮಕ್ಕಳನ್ನು ಸಾಕಿ ವಿದ್ಯೆ ಕಲಿಸಬೇಕೆಂದು ನಾವು ಕಟ್ಟು ಮಾಡಿರುವೆವು. ಇದಕ್ಕೆ ಸಂಬಂಧಪಟ್ಟ ಶಾಸನಗಳಲ್ಲೇನಾದರೂ ತಪ್ಪು ಇದೆಯೆ? ನಿನಗೆ ಗಾಯನ, ಅಂಗಸಾಧನೆ ಮುಂತಾದದ್ದನ್ನು ಕಲಿಸಬೇಕೆಂದು ಶಾಸನಗಳು ಕಟ್ಟುಮಾಡಿದ್ದು ಒಳ್ಳೆಯದೇ ಅಲ್ಲವೆ?"

ಒಳ್ಳೆಯದೆಂದು ನಾವು ಒಪ್ಪಬೇಕಲ್ಲವೆ, ಕ್ರೈಟೊ?

"ಹಾಗಾದರೆ ನೋಡು, ನೀನು ನಮ್ಮ ಸಹಾಯದಿಂದ ಜನ್ಮವೆತ್ತಿ, ಬಾಲ್ಯದಲ್ಲಿ ಪೋಷಿತನಾಗಿ, ವಿದ್ಯೆಯನ್ನು ಕಲಿತದ್ದರಿಂದ ನಿನ್ನ ಹಿರಿಯರಂತೆಯೇ ನೀನೂ ನಮ್ಮಲ್ಲಿ ಮಗನಂತೆಯೂ ದಾಸನಂತೆಯೂ ನಡೆದುಕೊಳ್ಳಬೇಕು. ಇದು ನಿಜವಾದರೆ ನೀನೂ ನಾವೂ ಸಮಾನರಲ್ಲ. ನಾವು ನಿನಗೆ ಏನು ಮಾಡಿದರೂ ಅದಕ್ಕೆ ಪ್ರತೀಕಾರ ಮಾಡುವ ಹಕ್ಕು ನಿನಗಿಲ್ಲ. ನಿನ್ನ ತಂದೆಯೋ ನಿನ್ನ ಯಜಮಾನನೋ ನಿನ್ನನ್ನು ಹೊಡೆದರೆ ನೀನು ಪ್ರತಿಯಾಗಿ ಆತನನ್ನು ಹೊಡೆಯಬಹುದೆ? ಬೈದರೆ ಎದುರುಬೈಗುಳವನ್ನು ಬೈಯಬಹುದೆ? ಅಥವಾ ಇನ್ನು ಯಾವ ವಿಧದಲ್ಲಾದರೂ ಕೆಡುಕುಮಾಡಿದರೆ ಕೆಡುಕನ್ನು ಹಿಂದಿರುಗಿಸಬಹುದೆ? ಈಗ ನಿನ್ನನ್ನು ಕೊಲ್ಲಿಸುವುದು ಸೂಕ್ತವೆಂದು ನಮಗೆ ತೋರಿಬಂದಿದೆ; ಅದಕ್ಕೆ ಪ್ರತಿಯಾಗಿ ನಮ್ಮನ್ನೂ ನಿನ್ನ ಮಾತೃಭೂಮಿಯನ್ನೂ ಹಾಳುಗೆಡಹಲು ನಿನ್ನ ಕೈಯಲ್ಲಾದ ಪ್ರಯತ್ನಮಾಡುವುದಕ್ಕೆ ನಿನಗೆ ಹಕ್ಕಿದೆಯೆ? ನೀನು ಯಾವಾಗಲೂ ಧರ್ಮದ ವಿಷಯವೇ ಮಾತಾಡುತ್ತಿರುವವನು; ನಿನ್ನ ನಡತೆ

ಸರಿಯೆಂದು ನೀನಾದರೂ ಹೇಳಬಲ್ಲೆಯಾ? ದೇವತೆಗಳ ಮತ್ತು ಪ್ರಾಜ್ಞರ ದೃಷ್ಟಿಯಲ್ಲಿ ಮಾತೃಭೂಮಿ ತಾಯಿತಂದೆಗಳಿಗಿಂತಲೂ ಪಿತೃಗಳಿಗಿಂತಲೂ ಹೆಚ್ಚು ಮಹಿಮೆಯುಳ್ಳದ್ದು, ಪವಿತ್ರವಾದದ್ದು, ದೇವತಾಸ್ವರೂಪವುಳ್ಳದ್ದು. ತತ್ವಜ್ಞಾನಿಯಾದ ನಿನಗೆ ಇಷ್ಟು ತಿಳಿಯದೆ ಹೋಯಿತೆ? ದೇಶಮಾತೆ ಕೋಪದಲ್ಲಿದ್ದರೆ, ತಾಯಿತಂದೆಗಳಿಗೆ ತೋರಿಸುವುದಕ್ಕಿಂತಲೂ ಹೆಚ್ಚಿನ ವಿನಯದಿಂದಲೂ ನಮ್ರತೆಯಿಂದಲೂ ಭಕ್ತಿಯಿಂದಲೂ ನಿನಗೆ ತೋರಿದ್ದನ್ನು ಆಕೆಯಲ್ಲಿ ಬಿನ್ನವಿಸಿಕೊಳ್ಳಬೇಕು. ನಿನ್ನ ಬಿನ್ನಹವನ್ನು ಆದರಿಸದಿದ್ದರೂ ಆಕೆಯ ಅಪ್ಪಣೆಯನ್ನು ಶಿರಸಾವಹಿಸಿ ಅದಕ್ಕನುಸಾರವಾಗಿ ನಡೆಯಬೇಕು. ಆಕೆ ಕೋಪದಿಂದ ನಿನ್ನನ್ನು ಚಾವಟಿಯಿಂದ ಹೊಡಸಲಿ —ಸೆರೆಮನೆಗೆ ತಳ್ಳಲಿ, ಮರುಮಾತಿಲ್ಲದೆ ಅನುಭವಿಸಬೇಕು. ಯುದ್ಧರಂಗಕ್ಕೆ ಕಳುಹಿಸಿದರೆ ಗಾಯಹೊಂದುವ ಸಂಭವವಿರಲಿ, ಸಾವೇ ನಿಶ್ಚಯವಾಗಿರಲಿ, ಹಿಂಜರಿಯದೆ ಹೊರಡಬೇಕು. ಯುದ್ಧಕಾಲದಲ್ಲಿ ಹಿಮ್ಮೆಟ್ಟಕೂಡದು; ಜೊತೆಯ ಸೈನಿಕರನ್ನು ಬಿಟ್ಟುಹೋಗಕೂಡದು; ಶತ್ರುವಿಗೆ ತಲೆಬಾಗಿ ಅಡಿಯಾಳಾಗಕೂಡದು. ಯುದ್ಧರಂಗದಲ್ಲೇ ಆಗಲಿ ನ್ಯಾಯಸ್ಥಾನದಲ್ಲೇ ಆಗಲಿ ಇತರ ಸ್ಥಳಗಳಲ್ಲೇ ಆಗಲಿ, ನೀನು ಆಕೆಯ ಆಜ್ಞಾಧಾರಕನಾಗಿರಬೇಕು; ಇಲ್ಲವೇ ಆ ಆಜ್ಞೆ ತಪ್ಪೆಂದು ಸ್ಪಷ್ಟಪಡಿಸಿಕೊಡಬೇಕು. ತಂದೆತಾಯಿಗಳಿಗೆ ಅವಿಧೇಯನಾಗಿ ಅವರಿಗೆ ವಿರೋಧವಾಗಿ ಬಲಪ್ರದರ್ಶನಮಾಡುವುದು ಧರ್ಮ ವಿರುದ್ಧ; ಮಾತೃಭೂಮಿಗೆ ಹೀಗೆ ಎದುರುಬೀಳುವುದು ಇದಕ್ಕಿಂತಲೂ ಹೆಚ್ಚು ಅಧರ್ಮ.''

ಇದಕ್ಕೆ ಉತ್ತರವೇನು, ಕ್ರೈಟೊ? ರಾಷ್ಟ್ರಶಾಸನಗಳು ಹೇಳುವುದು ನಿಜವೇ ಸುಳ್ಳೇ?

ಕ್ರೈ—ನಿಜವೆಂದೇ ಹೇಳಬೇಕು.

ಸಾ—ಅವು ಇನ್ನೂ ಹೇಳುತ್ತವೆ ಕೇಳು: "ನಮ್ಮ ಮಾತು ನಿಜವಾದರೆ, ಈಗ ನೀನು ಸೆರೆಮನೆಯಿಂದ ತಪ್ಪಿಸಿಕೊಂಡುಹೋಗಲು ಪ್ರಯತ್ನಿಸಿದರೆ ನಮಗೆ ಕೆಡುಕುಮಾಡಿದಂತಾಗುವುದು. ಹೌದೋ ಅಲ್ಲವೋ ಯೋಚಿಸಿ ನೋಡು. ನಮ್ಮ ಸಹಾಯದಿಂದ ನೀನು ಜನ್ಮವೆತ್ತಿದೆ. ನಾವು ನಿನ್ನನ್ನು ಸಾಕಿ, ಸಲಹಿ, ವಿದ್ಯಾವಂತನನ್ನಾಗಿಮಾಡಿ, ಇತರ ಪ್ರಜೆಗಳಿಗೆ ಕೊಟ್ಟರು

GANDHI SMARAKA GRANTHALAYA

ವಂತೆ ಪಟ್ಟಣದ ಅನುಕೂಲತೆಗಳಲ್ಲೆಲ್ಲಾ ನಿನಗೂ ಭಾಗ ಕೊಟ್ಟಿದ್ದೇವೆ. ಇದಲ್ಲದೆ, ವಯಸ್ಸು ಬಂದು ನಮ್ಮ ಪದ್ಧತಿಗಳನ್ನು ತಿಳಿದ ಮೇಲೆ ಯಾರಿಗಾದರೂ ನಮ್ಮ ಪ್ರವರ್ತನೆ ಸರಿಬೀಳದಿದ್ದರೆ, ಅವನು ತನಗೆ ಸೇರಿದ ಪದಾರ್ಥಗಳೇನಿದ್ದರೂ ತೆಗೆದುಕೊಂಡು ಇನ್ನೆಲ್ಲಿಗೆ ಬೇಕಾದರೂ ಹೊರಟು ಹೋಗಲು ಅವಕಾಶ ಕೊಟ್ಟಿದ್ದೇವೆ. ಅಥೆನ್ಸನ್ನು ಬಿಟ್ಟು ಇತರ ಪಟ್ಟಣಗಳಿಗೋ ಯಾವುದಾದರೂ ವಸತಿ (Colony) ಗೋ ಹೋಗಬೇಕೆಂಬ ಅಭಿಲಾಷೆ ಯಾರಿಗಾವರೂ ಇದ್ದರೆ, ನಮ್ಮಿಂದ ಅವನಿಗೆ ಏನೂ ಅಡಚಣೆಯಾಗುವುದಿಲ್ಲ. ಅವನು ತನ್ನ ಆಸ್ತಿಯನ್ನು ಸಹ ತೆಗೆದುಕೊಂಡುಹೋಗಬಹುದು. ಆದರೆ ನಮ್ಮ ನ್ಯಾಯನಿರ್ಣಯದ ಕ್ರಮವನ್ನೂ ಆಡಳಿತದ ಕ್ರಮವನ್ನೂ ತಿಳಿದ ಮೇಲೂ ನಮ್ಮ ಪಟ್ಟಣದಲ್ಲೇ ವಾಸಮಾಡಿಕೊಂಡಿದ್ದರೆ, ಅಂಥವನು ನಮ್ಮ ಆಜ್ಞೆಯನ್ನು ಪಾಲಿಸುತ್ತೇನೆಂದು ನಮ್ಮೊಡನೆ ಒಪ್ಪಂದಮಾಡಿಕೊಂಡಂತಾಯಿತು. ಪಾಲಿಸದಿದ್ದರೆ, ಅವನು ಮೂರು ವಿಧದಲ್ಲಿ ಪಾಪಮಾಡುವನು: ಮೊದಲು, ನಮಗೆ ಅವಿಧೇಯನಾದರೆ ತಂದೆತಾಯಿಗಳಿಗೆ ಅವಿಧೇಯನಾದಂತೆ; ಎರಡನೆಯದಾಗಿ, ನಾವು ಅವನಿಗೆ ವಿದ್ಯೆ ಕಲಿಸಿದವರು, ಆದ್ದರಿಂದ ನಮಗೆ ಅವಿಧೇಯನಾಗುವುದು ಪಾಪ; ಮೂರನೆಯದಾಗಿ, ನಮ್ಮ ಆಜ್ಞೆಯನ್ನು ಉಲ್ಲಂಘಿಸದೆ ನಡಸುವೆನೆಂದು ಅವನು ಮಾಡಿರುವ ಒಪ್ಪಂದವನ್ನು ಮರೆತಂತಾಗುತ್ತದೆ. ನಾವೇನೂ ಮೊಂಡರಂತೆ ಆಜ್ಞೆ ಮಾಡುವುದಿಲ್ಲ. ನಮ್ಮ ಆಜ್ಞೆಯನ್ನು ಪಾಲಿಸಲಿ, ಇಲ್ಲವೇ ಅದು ಧರ್ಮ ವಿರುದ್ಧವೆಂದು ನಮಗೆ ದೃಢಮಾಡಿ ಕೊಡಲಿ; ನೀನು ಎರಡನ್ನೂ ಮಾಡುವುದಿಲ್ಲವಲ್ಲ!

"ಸಾಕ್ರೆಟೀಸ್, ನಿನ್ನ ಪ್ರಯತ್ನಗಳೇನಾದರೂ ಸಫಲವಾದರೆ ಈ ಅಪವಾದಗಳಿಗೆಲ್ಲಾ ನೀನು ಗುರಿಯಾಗಬೇಕಾಗುವುದು. ಅಥೆನ್ಸಿನಲ್ಲಿ ಇತರರು ಏನೇ ಮಾಡಲಿ, ನೀನು ಮಾತ್ರ ಖಂಡಿತವಾಗಿಯೂ ಈ ಕೆಲಸಕ್ಕೆ ಕೈಹಾಕಬಾರದು."

ನನ್ನದೇನು ಹೆಚ್ಚು ಎಂದು ನಾನು ಕೇಳಿದರೆ ಅವು ಹೀಗೆ ಉತ್ತರ ಕೊಡುತ್ತವೆ:

"ಮೇಲೆ ಹೇಳಿದ ಒಪ್ಪಂದಕ್ಕೆ ಇತರರಿಗಿಂತ ನೀನು ಹೆಚ್ಚು ಭಾಗಿ

ಯಾಗಿದ್ದೀಯೆ. ನಮ್ಮಲ್ಲೂ ಅಥೆನ್ಸಿನಲ್ಲೂ ನಿನಗೇನೂ ಅಸಂತೋಷವಿಲ್ಲವೆಂದು ನೀನೇ ವ್ಯಕ್ತಪಡಿಸಿದ್ದೀಯೆ. ಇತರರಿಗಿಂತಲೂ ಹೆಚ್ಚಾಗಿ ನೀನು ಈ ಪಟ್ಟಣದಲ್ಲೇ ಸದಾ ವಾಸವಾಗಿದ್ದೆ. ನೀನು ಯಾವಾಗಲೂ ಈ ಪಟ್ಟಣವನ್ನು ಬಿಟ್ಟು ಹೋಗದೆ ಇರುವುದನ್ನು ನೋಡಿದರೆ ನಿನಗೆ ಇದರ ಮೇಲೆ ಬಹಳ ಪ್ರೇಮವೆಂದೇ ಊಹಿಸಬೇಕಾಗುತ್ತದೆ. ಸೈನ್ಯದೊಡನೆ ಹೋಗಬೇಕಾದಾಗ ಹೊರತು ನೀನು ಅಥೆನ್ಸಿನ ಇತರ ನಿವಾಸಿಗಳಂತೆ ಎಲ್ಲಿಗೂ ಪ್ರಯಾಣ ಹೋದವನಲ್ಲ. ಕೊನೆಗೆ ಗ್ರೀಸಿನಲ್ಲಿ ನಡೆಯುವ ಪಂದ್ಯಗಳನ್ನು ನೋಡುವುದಕ್ಕೆ ಸಹ, ಒಂದುಸಲ ಹೊರತಾಗಿ, ನೀನು ಊರುಬಿಟ್ಟು ಹೋದವನಲ್ಲ. ಇತರ ರಾಷ್ಟ್ರಗಳು, ಅಲ್ಲಿಯ ಕಾಯಿದೆ ಕಟ್ಟಲೆಗಳು ಇವುಗಳನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವೂ ನಿನಗಿಲ್ಲ. ನಿನ್ನ ಪ್ರೀತಿ ನಮ್ಮನ್ನೂ ನಮ್ಮ ರಾಷ್ಟ್ರವನ್ನೂ ಬಿಟ್ಟು ಹೊರಗೆಲ್ಲಿಯೂ ನೆಲಸಿಲ್ಲ. ನಾವು ನಿನಗೆ ಅತ್ಯಂತ ಇಷ್ಟರಾದವರು. ನಮ್ಮ ಆಳಿಕೆಗೆ ನೀನಾಗಿಯೇ ಒಳಪಟ್ಟಿರುವೆ; ನಿನ್ನ ಮಕ್ಕಳು ಈ ಪಟ್ಟಣದಲ್ಲಿಯೇ ಹುಟ್ಟಿದರು. ನಮ್ಮಲ್ಲಿ ನಿನಗೆ ಪ್ರೀತಿಯಿದೆ ಎನ್ನುವುದಕ್ಕೆ ಇನ್ನೇನು ನಿದರ್ಶನಬೇಕು? ಇದಲ್ಲದೆ ನ್ಯಾಯಸ್ಥಾನದಲ್ಲಿ ನಿನ್ನ ವಿಚಾರಣೆಯಾದಾಗ ದೇಶತ್ಯಾಗಮಾಡಿ ಹೊರಟು ಹೋಗುವೆನೆಂದು ಹೇಳಿ ನೀನು ಸಾವನ್ನು ತಪ್ಪಿಸಿಕೊಳ್ಳಬಹುದಾಗಿತ್ತು. ನಿನ್ನನ್ನು ಹಾಗೆ ಬಿಟ್ಟು ಬಿಡುವುದಕ್ಕೆ ಸರಕಾರ ಈಗ ಒಪ್ಪದಿದ್ದರೂ ಆಗ ನಿನ್ನನ್ನು ತಡೆಯುತ್ತಿರಲಿಲ್ಲ. ಆದರೆ ನೀನು ದೇಶತ್ಯಾಗಕ್ಕಿಂತ ಮರಣವೇ ಲೇಸೆಂದು ಹೇಳಿದೆ. ಈಗ ಆ ಮಾತೆಲ್ಲಾ ಮರೆತುಹೋಯಿತೆ? ನಮ್ಮನ್ನು ಭಕ್ತಿಯಿಂದ ಕಾಣುವುದಕ್ಕೆ ಬದಲು ನಾಶಮಾಡಲು ಯತ್ನಿಸಿರುವೆಯಲ್ಲ! ನೀನು ಅಥೆನ್ಸಿನ ಪ್ರಜೆಯಾಗಿ ನಮ್ಮೊಡನೆ ಮಾಡಿರುವ ಒಪ್ಪಂದಕ್ಕೆ ವಿರೋಧವಾಗಿ, ಗುಲಾಮನಂತೆ ಹೇಡಿತನದಿಂದ ಕದ್ದು ಓಡುತ್ತಿರುವೆ. ನಮ್ಮದೊಂದು ಪ್ರಶ್ನೆಗೆ ಮೊದಲು ಉತ್ತರ ಹೇಳು. ಬಾಯಿಮಾತಿನಲ್ಲಿ ಮಾತ್ರವಲ್ಲದೆ ನಡವಳಿಕೆಯಲ್ಲಿಯೂ ಸಹ ನೀನು ನಮ್ಮ ಆಳಿಕೆಗೆ ಒಳಪಡಲಿಲ್ಲವೆ?''

ಹೀಗೆ ಕೇಳಿದರೆ ನಾವು ಒಪ್ಪಬೇಕೋ ಇಲ್ಲವೋ, ಕ್ರೈಟೊ ?

ಕ್ರೈ—ಒಪ್ಪದೆ ಇರುವುದಕ್ಕಾಗುವುದಿಲ್ಲ.

ಸಾ—ಹಾಗಾದರೆ ರಾಷ್ಟ್ರಶಾಸನಗಳು ಹೇಳುತ್ತವೆ: "ಸಾಕ್ರೆಟೀಸ್, ನಮ್ಮೊಡನೆ ಈ ಕರಾರು ಮಾಡಿಕೊಳ್ಳಬೇಕೆಂದು ಯಾರಾದರೂ ನಿನ್ನನ್ನು ನಿರ್ಬಂಧಿಸಿದರೆ ? ಅಥವಾ ಯಾರಾದರೂ ಮೋಸದಿಂದ ನಿನ್ನನ್ನು ಒಡಂಬಡಿಸಿದರೆ ? ನಿನಗೆ ನಮ್ಮ ಕೈಕೆಳಗಿರುವುದು ಇಷ್ಟವಿಲ್ಲದಿದ್ದರೆ ಅಥವಾ ಈ ಒಪ್ಪಂದವು ಅನ್ಯಾಯವೆಂದು ನಿನಗೆ ತೋರಿದ್ದರೆ ಅಥೆನ್ಸಿನಿಂದ ಹೊರಟುಹೋಗಲು ನಿನಗೆ ಎಪ್ಪತ್ತು ವರ್ಷಕಾಲ ಅವಕಾಶವಿತ್ತು. ಅಷ್ಟು ವರ್ಷಗಳಿಂದ ಸಾವಧಾನವಾಗಿ ಯೋಚಿಸಿ ಕೈಕೊಂಡ ಒಪ್ಪಂದದ ನಿಯಮಗಳನ್ನು ಈಗ ಮುರಿಯುತ್ತಿರುವೆ. ಲಾಕೆಡೀಮನ್ನಿನಲ್ಲೂ ಕ್ರೀಟಿನಲ್ಲೂ ಆಡಳಿತ ಬಹಳ ಚೆನ್ನಾಗಿದೆ ಎಂದು ನೀನು ಹೊಗಳುತ್ತಿದ್ದೆಯಲ್ಲವೆ ? ಅಲ್ಲಿಗೋ ಇನ್ನು ಯಾವುದಾದರೂ ವಸತಿಗೋ ಹೊರಟು ಹೋಗಬಹುದಾಗಿತ್ತು. ಆದರೆ ಅಥೆನ್ಸನ್ನು ಬಿಟ್ಟು ಹೋಗಲು ನಿನ್ನ ಮನಸ್ಸು ಒಪ್ಪಲಿಲ್ಲ ; ನಿನಗೆ ನಮ್ಮ ಪಟ್ಟಣವನ್ನೂ ಅದರ ಶಾಸನಗಳಾದ ನಮ್ಮನ್ನೂ ಕಂಡರೆ ಅಷ್ಟು ಪ್ರೀತಿ. ಕುಂಟಕುರುಡರೂ ಅಂಗಹೀನರೂ ಒಂದು ವೇಳೆ ಊರು ಬಿಟ್ಟು ಹೋಗಬಹುದು ; ನೀನು ಮಾತ್ರ ಕದಲುತ್ತಿರಲಿಲ್ಲ. ಈಗ ನೀನು ನಮ್ಮ ಒಪ್ಪಂದವನ್ನು ನಿರಾಕರಿಸಿ ಓಡಿಹೋಗುತ್ತಿರುವೆ. ನಮ್ಮ ಮಾತನ್ನು ಕೇಳು, ಸಾಕ್ರೆಟೀಸ್, ಇಲ್ಲಿಂದ ತಪ್ಪಿಸಿಕೊಂಡುಹೋಗಲು ಪ್ರಯತ್ನಿಸಿ ನಗೆಗೀಡಾಗಬೇಡ.

"ಯೋಚಿಸಿ ನೋಡು. ನೀನು ಹೀಗೆ ಧರ್ಮವಿರುದ್ಧವಾಗಿ ನಡೆದದ್ದರಿಂದ ನಿನಗಾಗಲಿ ನಿನ್ನ ಸ್ನೇಹಿತರಿಗಾಗಲಿ ಏನು ಪ್ರಯೋಜನವಾದ ಹಾಗಾಯಿತು ? ನಿನ್ನ ಸ್ನೇಹಿತರು ಈಗ ತಾವು ಅನುಭವಿಸುತ್ತಿರುವ ಅಥೆನ್ಸಿನ ಪ್ರಜೆಗಳ ಹಕ್ಕುಗಳನ್ನು ಕಳೆದುಕೊಂಡು ದೇಶಭ್ರಷ್ಟರಾಗಿ ಹೊರಟು ಹೋಗಬೇಕಾಗುತ್ತದೆ. ಇದು ಖಂಡಿತವೆಂದೇ ಹೇಳಬಹುದು. ನಮ್ಮ ನೆರೆಯ ಪಟ್ಟಣಗಳೂ ಉತ್ತಮವಾದ ಆಡಳಿತವುಳ್ಳವೂ ಆದ ಥೀಬ್ಸ್, ಮೆಗಾರಾ ಇಲ್ಲೆಲ್ಲಿಗಾದರೂ ನೀನು ಹೋದರೆ ಅಲ್ಲಿಯ ಸರಕಾರದವರು ನಿನ್ನನ್ನು ಶತ್ರುವಿನಂತೆ ಕಾಣುವರು. ದೇಶದ ನ್ಯಾಯನಿಬಂಧನೆ

ಗಳನ್ನು ಮುರಿದವನೆಂದು ಹೆಸರುಪಡೆದಿರುವ ನಿನ್ನನ್ನು ದೇಶಭಕ್ತರಾದ ಅಲ್ಲಿಯ ಪ್ರಜೆಗಳು ಕೋಪದಿಂದಲೂ ತಿರಸ್ಕಾರದಿಂದಲೂ ಕಾಣುವರು. ಇದಲ್ಲದೆ ನಮ್ಮ ನಗರದ ನ್ಯಾಯಾಧೀಶರು 'ನಾವು ಅವನಿಗೆ ಶಿಕ್ಷೆಯನ್ನು ವಿಧಿಸಿದ್ದು ನ್ಯಾಯವೇ. ಹೀಗೆ ಸರಕಾರದ ಆಜ್ಞೆಯನ್ನು ಅತಿಕ್ರಮಿಸಿ ನಡೆಯುವವನು ಶಿಕ್ಷಾರ್ಹನೇ ಸರಿ' ಎಂದುಕೊಳ್ಳುವರು. ಏಕೆಂದರೆ, ರಾಷ್ಟ್ರಶಾಸನಗಳನ್ನೇ ನಾಶಮಾಡುವವನು ವಿಚಾರಪರರಲ್ಲದ ತರುಣರನ್ನು ಕೆಟ್ಟದಾರಿಗೆ ಎಳೆಯುವನೆಂಬುದು ನಂಬಬೇಕಾದ ಮಾತೇ. ಆದ್ದರಿಂದ ನೀನು ಆ ಪಟ್ಟಣಗಳಿಗೆ ಹೋಗಲಾಗುವುದಿಲ್ಲ. ಕ್ರೀಟಿನಂತೆ ಉತ್ತಮವಾದ ಆಡಳಿತವುಳ್ಳ, ಸತ್ಪುರುಷರು ವಾಸಮಾಡುವ, ಪಟ್ಟಣಗಳನ್ನು ಬಿಟ್ಟು ಇನ್ನೆಲ್ಲಿಗಾದರೂ ಹೋಗಿ ಜೀವಿಸುವೆನೆನ್ನಬಹುದು. ಅಂಥ ಬದುಕು ಇದ್ದರೇನು, ಇಲ್ಲದಿದ್ದರೇನು? ಅಥವಾ ಮೇಲೆ ಹೇಳಿದ ಪಟ್ಟಣಗಳಿಗೇ ಹೋಗಿ, ನಾಚಿಕೆಯನ್ನು ಬಿಟ್ಟು ಇಲ್ಲಿಯಂತೆಯೇ ಅಲ್ಲಿಯ ಜನರೊಡನೆಯೂ ಸಂವಾದಮಾಡುವೆಯಾ? ಯಾವ ವಿಷಯವಾಗಿ ಸಂವಾದಮಾಡುತ್ತೀಯೆ? ಸದ್ಗುಣ, ಧರ್ಮ, ಸಂಸ್ಥೆಗಳು, ರಾಷ್ಟ್ರಶಾಸನಗಳು—ಮನುಷ್ಯನಿಗೆ ಇವುಗಳಿಗಿಂತ ಹೆಚ್ಚಾದುವು ಯಾವುವೂ ಇಲ್ಲವೆಂದು ಅವರಿಗೂ ಉಪದೇಶಮಾಡುವೆಯಾ? ಹಾಗೆ ಮಾತಾಡುವುದಕ್ಕೆ ನಿನಗೆ ನಾಲಗೆ ಬರುವುದೆ? ಹೋಗಲಿ, ಈ ಪಟ್ಟಣಗಳನ್ನು ಬಿಟ್ಟು, ಹೆಚ್ಚುಕಡಮೆ ಅರಾಜಕಸ್ಥಿತಿಯಲ್ಲಿರುವ ರಾಜ್ಯಗಳಿಗೆ ಹೋದರೆ, ನಿನ್ನ ಕ್ರೈಟೋವಿನ ಸ್ನೇಹಿತರಿರುವ ಥೆಸಲಿಗೇ ಹೋದರೆ, ಅಲ್ಲಿ ಸ್ವೇಚ್ಛಾಪ್ರವರ್ತನೆಗೆ ಅವಕಾಶವಿದೆ; ಶಾಸನಗಳ ಕಟ್ಟಿಲ್ಲ. ನೀನು ರೈತನಂತೆಯೋ ಸೇವಕನಂತೆಯೋ ಆಡಿನ ಚರ್ಮವನ್ನು ಹೊದೆದು, ವೇಷವನ್ನು ಮರಸಿಕೊಂಡು, ಕಳ್ಳನಂತೆ ಅಥೆನ್ಸಿನಿಂದ ತಲೆತಪ್ಪಿಸಿಕೊಂಡು ಬಂದ ಕಥೆಯನ್ನು ಅಲ್ಲಿಯವರಿಗೆ ಹೇಳಿದರೆ ಅವರು ಅದನ್ನು ಕೇಳಿ ಹಿಗ್ಗುವರು. ಆದರೆ ಅಂಥ ದೇಶದಲ್ಲಿಯೂ ಕೂಡ, 'ಸಾಕ್ರೆಟೀಸ್, ನೀನು ಇಂದೋ ನಾಳೆಯೋ ಸಾಯುವವನು; ಈ ವೃದ್ಧಾಪ್ಯದಲ್ಲಿಯೂ ಪ್ರಾಣದ ಮೇಲಿನ ಆಸೆಯಿಂದ ಧರ್ಮವನ್ನತಿಕ್ರಮಿಸಿ ನಡೆಯುವುದಕ್ಕೆ ನಿನಗೆ ನಾಚಿಕೆಯಾಗುವುದಿಲ್ಲವೆ?' ಎಂದು ಮುಖಮುರಿದು ಮಾತಾಡುವವರು ಒಬ್ಬರಾದರೂ ಇರು

ವುದಿಲ್ಲವೆ? ಅವರೆಲ್ಲರೊಡನೆಯೂ ನಯವಾಗಿ ಮಾತಾಡಿಕೊಂಡಿದ್ದ ರೇನೋ ಯಾರೂ ನಿನಗೆ ಹಾಗೆ ಅವಮಾನ ಮಾಡದಿರಬಹುದು. ಆದರೂ ಅವರಿಗೆ ನಿನ್ನ ಮೇಲೆ ಸ್ವಲ್ಪ ಅಸಮಾಧಾನವುಂಟಾದರೂ ನೀನು ಅವಮಾನದಿಂದ ತಲೆ ಬಗ್ಗಿಸುವಂಥ ಮಾತಾಡುತ್ತಾರೆ. ನೀನು ಅಲ್ಲಿಗೆ ಹೋದರೆ ಬದುಕಿಯೇನೋ ಇರಬಹುದು; ಆದರೆ ಅದೆಂಥ ಬಾಳು! ಹೊಗಳುಭಟ್ಟನಂತೆ ಎಲ್ಲರಲ್ಲಿಯೂ ಒಳ್ಳೆಯ ಮಾತಾಡಿಕೊಂಡು ಅವರ ದಾಸಾನುದಾಸನಾಗಿರುವುದು! ನೀನು ಥೆಸಲಿಗೆ ಹೋಗಿ ಮಾಡುವ ಕೆಲಸವಾದರೂ ಏನು? ಇಲ್ಲಿಂದ ಅಲ್ಲಿಗೆ ತಪ್ಪಿಸಿಕೊಂಡು ಹೋಗುವುದು ಹೊಟ್ಟೆಯಪಾಡು ತೀರಿಸಿಕೊಂಡು ಕಾಲಹಾಕುವುದಕ್ಕೆ ತಾನೆ? ಧರ್ಮ, ಸದ್ಗುಣ—ಇಂಥ ಮಾತೆಲ್ಲಾ ಎಲ್ಲಿ ಹೋಗಬೇಕು?

"ಆದರೆ ನನ್ನ ಮಕ್ಕಳಿಗೋಸ್ಕರ ಬದುಕಬೇಕು, ಅವರನ್ನು ಬೆಳಸಿ ವಿದ್ಯೆ ಕಲಿಸಬೇಕು ಎನ್ನುವೆಯೇನೊ. ಅವರನ್ನು ನಿನ್ನೊಡನೆ ಥೆಸಲಿಗೆ ಕರೆದು ಕೊಂಡುಹೋಗಿ ಅಲ್ಲೇ ಪೋಷಿಸಿ ಅವರಿಗೆ ಅಥೆನ್ಸಿನ ಪ್ರಜೆಗಳ ಹಕ್ಕು ತಪ್ಪಿ ಹೋಗುವಂತೆ ಮಾಡಬೇಕಲ್ಲವೆ? ಇದೇ ನೀನು ಅವರಿಗೆ ಕಲಿಸುವ ವಿದ್ಯೆ, ಮಾಡುವ ಉಪಕಾರ! ಅಥವಾ 'ಮಕ್ಕಳನ್ನು ಅಥೆನ್ಸಿನಲ್ಲಿಯೇ ಬಿಟ್ಟು ನಾನು ಹೊರಟುಹೋಗುತ್ತೇನೆ, ನಾನು ಇಲ್ಲಿ ಇಲ್ಲದಿದ್ದರೂ ನನ್ನ ಸ್ನೇಹಿತರು ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾರೆ' ಎನ್ನಬಹುದು. ಹಾಗೆ ಯೋಗಕ್ಷೇಮವನ್ನು ನೋಡಿಕೊಳ್ಳುವವರು ನೀನು ಥೆಸಲಿಗೆ ಬದಲಾಗಿ ಪರಲೋಕಕ್ಕೆ ಪ್ರಯಾಣಮಾಡಿದರೆ ನಿನ್ನ ಮಕ್ಕಳನ್ನು ಕೈಬಿಡುವರೆ? ಅವರು ಹೆಸರು ಮಾತ್ರಕ್ಕಲ್ಲದೆ ನಿಜ ವಾಗಿಯೂ ಸ್ನೇಹಿತರಾದರೆ ಎಂದಿಗೂ ನಿನ್ನ ಮಕ್ಕಳನ್ನು ಅನಾಥರಾಗ ಗೊಡುವುದಿಲ್ಲ.

"ಇಲ್ಲಿಂದ ತಪ್ಪಿಸಿಕೊಂಡುಹೋಗುವ ಯೋಚನೆಯನ್ನು ಬಿಡು, ಸಾಕ್ರೆ ಟೀಸ್. ನಮ್ಮ ಮಾತನ್ನು ಕೇಳು, ಅಸಡ್ಡೆಮಾಡಬೇಡ. ಮುಂದೆ ಪರಲೋಕದಲ್ಲಿ ಅಲ್ಲಿಯ ದೇವತೆಗಳ ಮುಂದೆ ನಿನ್ನ ವಿಚಾರಣೆಯಾಗು ವಾಗ ಅಳುಕಿಲ್ಲದೆ ಉತ್ತರ ಕೊಡಬೇಕಾದರೆ, ನೀನು ನಿನ್ನ ಪ್ರಾಣ ಕ್ಕಿಂತಲೂ ಮಕ್ಕಳಿಗಿಂತಲೂ ಹೆಚ್ಚಾಗಿ ಧರ್ಮಕ್ಕೆ ಗಮನಕೊಡಬೇಕು.

ಕ್ರೈಟೋವಿನ ಮಾತಿನಂತೆ ನಡೆದರೆ ನೀನೂ ನಿನ್ನವರೂ ಇಹದಲ್ಲಾಗಲಿ ಪರದಲ್ಲಾಗಲಿ, ಸುಖವಾಗಿಯೂ ಧರ್ಮಿಷ್ಠರಾಗಿಯೂ ಪವಿತ್ರರಾಗಿಯೂ ಇರಲಾಗುವುದಿಲ್ಲ. ಈಗ ನೀನು ನಿರಪರಾಧಿ; ಕೆಡುಕನ್ನು ಅನುಭವಿಸುತ್ತಿರುವೆಯೇ ಹೊರತು ಮಾಡುತ್ತಿಲ್ಲ. ನೀನು ಆಹುತಿಯಾಗಿರುವುದು ಜನಗಳಿಗೆ, ರಾಷ್ಟ್ರಶಾಸನಗಳಿಗಲ್ಲ. ಆದರೆ ನೀನೇನಾದರೂ ಕೇಡಿಗೆ ಕೇಡನ್ನೂ ಅಪಕಾರಕ್ಕೆ ಅಪಕಾರವನ್ನೂ ಹಿಂದಿರುಗಿಸಿ, ನಮ್ಮೊಡನೆ ಮಾಡಿರುವ ಒಪ್ಪಂದವನ್ನು ಮುರಿಯಲು ಹೊರಟರೆ, ನೀನು ಮುಖ್ಯವಾಗಿ ಯಾರಿಗೆ ಅನ್ಯಾಯಮಾಡಬಾರದೋ ಅವರಿಗೇ—ಅಂದರೆ ನಿನಗೆ, ನಿನ್ನ ಸ್ನೇಹಿತರಿಗೆ, ನಿನ್ನ ದೇಶಕ್ಕೆ—ಅನ್ಯಾಯ ಮಾಡಿದಂತಾಗುತ್ತದೆ. ನೀನು ಬದುಕಿರುವವರೆಗೂ ನಮ್ಮ ಕೋಪಕ್ಕೆ ಪಾತ್ರನಾಗಿರುತ್ತೀಯೆ; ಪರಲೋಕದಲ್ಲಿ ನಮ್ಮ ಬಂಧುಗಳಾದ ಅಲ್ಲಿಯ ಶಾಸನಗಳು ನಮ್ಮನ್ನು ನಾಶಮಾಡಲು ಯತ್ನಿಸಿದ ನಿನ್ನನ್ನು ಶತ್ರುವಾಗಿ ಕಾಣುವರು. ನಮ್ಮ ಬುದ್ಧಿವಾದವನ್ನು ಅಸಡ್ಡೆಮಾಡಬೇಡ, ಸಾಕ್ರೆಟೀಸ್; ಕ್ರೈಟೋವಿನ ಮಾತು ಕೇಳಿಕೊಂಡು ಈ ಕೆಲಸಕ್ಕೆ ಕೈಹಾಕಬೇಡ.''

ಕ್ರೈಟೊ, ಸೈಬೀಲಿಯನ್ನು ಪೂಜಿಸುವವರು ಭಕ್ತಿಯಿಂದ ಮೈಮರೆತಿರುವಾಗ ಅವರಿಗೆ ಏನೋ ಒಂದು ದಿವ್ಯಗಾನ ಕೇಳಿಸುವುದಂತೆ. ನನಗೂ ಈ ಮಾತುಗಳು ದೇವವಾಣಿಯಂತೆ, ಆ ದಿವ್ಯಗಾನದಂತೆ, ಮತ್ತೆ ಯಾವ ಶಬ್ದಕ್ಕೂ ಅವಕಾಶಕೊಡದೆ ಕಿವಿಯಲ್ಲಿ ಮೊರೆಯುತ್ತಿವೆ. ನೀನು ನನ್ನ ಮನಸ್ಸನ್ನು ತಿರುಗಿಸಬೇಕೆಂದು ಪ್ರಯತ್ನಪಡುವುದು ವ್ಯರ್ಥ. ಆದರೂ ನೀನು ಇನ್ನೇನಾದರೂ ಹೇಳಬೇಕೆಂದಿದ್ದರೆ ಹೇಳು.

ಕ್ರೈ—ನನಗೆ ಇನ್ನೇನೂ ತೋರುವುದಿಲ್ಲ, ಸಾಕ್ರೆಟೀಸ್.

ಸಾ—ಸರಿ. ಹಾಗಾದರೆ ನಾನು ಭಗವಂತನ ಇಚ್ಛೆಯಿದ್ದಂತೆ, ಆತನ ಪ್ರೇರಣೆಯಾದಂತೆ, ನಡೆಯುತ್ತೇನೆ.

ಫೀಡೊ

ಪಾತ್ರಗಳು : ಫೀಡೊ, ಅಪಾಲೊಡೋರಸ್, ಸಿಮಿಯಾಸ್, ಸಾಕ್ರೆಟೀಸ್,
ಸೀಬೀಸ್, ಸೆರೆಮನೆಯ ಕಾವಲುಗಾರ, ಕ್ರೈಟೊ

ಸ್ಥಾನ : ಸಾಕ್ರೆಟೀಸನ ಸೆರೆಮನೆ

ವಿಷಯವನ್ನು ನಿರೂಪಿಸಿದ ಸ್ಥಳ : ಫ್ಲಿಯಸ್

ಪಾತ್ರಗಳು : ಎಕಿಕ್ರೆಟೀಸ್, ಫೀಡೊ

ಎಕಿಕ್ರೆಟೀಸ್—ಫೀಡೊ, ಸಾಕ್ರೆಟೀಸನು ವಿಷಪಾನ ಮಾಡಿದ ದಿನ ಸೆರೆಮನೆಯಲ್ಲಿ ನೀನೂ ಆತನೊಡನೆ ಇದ್ದೆಯಾ ?

ಫೀಡೊ—ಇದ್ದೆ, ಎಕಿಕ್ರೆಟೀಸ್.

ಎಕಿ—ಸಾಯುವುದಕ್ಕೆ ಮುಂಚೆ ಆತನು ಏನು ಹೇಳಿದನು ? ಆತನ ಮರಣದ ಬಗೆಯೇನು ? ಹೇಳು. ತಿಳಿಯಬೇಕೆಂದು ನನಗೆ ಬಹಳ ಕುತೂಹಲ. ಈಗ ಫ್ಲಿಯಸ್ಸಿನವರು ಯಾರೂ ಅಥೆನ್ಸಿಗೆ ಹೋಗುವುದಿಲ್ಲ. ಅಲ್ಲಿಂದ ನಮ್ಮ ಸ್ಥಳಕ್ಕೂ ಬಹಳ ದಿನಗಳಿಂದ ಯಾರೂ ಬಂದಿಲ್ಲ. ಸಾಕ್ರೆಟೀಸ್ ವಿಷಪಾನ ಮಾಡಿ ಸತ್ತನೆಂಬುದು ಹೊರತು ಮತ್ತೇನೂ ನಮಗೆ ತಿಳಿಯದು. ಆಗ ಏನೇನು ನಡೆಯಿತೆಂದು ನಮಗೆ ವಿಶದವಾಗಿ ಹೇಳುವವರೇ ಇಲ್ಲ.

ಫೀಡೊ—ಆತನ ವಿಚಾರಣೆ ನಡೆದ ಬಗೆಯನ್ನೂ ನೀವು ಕೇಳಲಿಲ್ಲವೆ ?

ಎಕಿ—ಆ ಸುದ್ದಿಯೇನೋ ಬಂತು. ವಿಚಾರಣೆಯಾದ ದಿನಕ್ಕೂ ಸಾಕ್ರೆಟೀಸನಿಗೆ ವಿಷವನ್ನು ಕೊಟ್ಟದ್ದಕ್ಕೂ ನಡುವೆ ಅಷ್ಟೊಂದು ದಿನಗಳು ಕಳೆದುವಲ್ಲ, ಅದೇಕೋ ತಿಳಿಯಲಿಲ್ಲ. ಅದಕ್ಕೇನು ಕಾರಣ ?

ಫೀಡೊ—ಆಕಸ್ಮಿಕವಾಗಿ ಹಾಗಾಗಬೇಕಾಯಿತು, ಎಕಿಕ್ರೆಟೀಸ್. ಅಥೆನ್ಸಿನವರು ಡೀಲೋಸಿಗೆ ಪ್ರತಿ ವರ್ಷವೂ ಹಡಗು ಕಳುಹಿಸುತ್ತಾರಲ್ಲ, ಆ ಹಡಗಿನ ಪೂಜೆ ಸಾಕ್ರೆಟೀಸನ ವಿಚಾರಣೆಯಾಗುವುದಕ್ಕೆ ಒಂದು ದಿನ ಹಿಂದೆ ನಡೆಯಿತು.

ಎಕಿ—ಅದೇನು ಹಡಗು ಕಳುಹಿಸುವುದು ?

ಫೀಡೊ—ಹಿಂದೆ ಥೀಸಿಯಸ್ ಹದಿನಾಲ್ಕು ಜನ ಯುವಕರೊಡನೆ ಇದೇ ಹಡಗಿನಲ್ಲಿ ಕ್ರೀಟಿಗೆ ಹೋಗಿ, ತನ್ನ ಮತ್ತು ಆ ಯುವಕರ ಪ್ರಾಣಗಳನ್ನುಳಿಸಿಕೊಂಡನೆಂದು ಅಥೆನ್ಸಿನಲ್ಲಿ ಒಂದು ಕಥೆ. ಆ ಹಡಗಿನವರೆಲ್ಲ ಬದುಕಿಕೊಂಡರೆ ಪ್ರತಿ ವರ್ಷವೂ ಡೀಲೋಸಿಗೆ ಒಂದು ರಾಯಭಾರವನ್ನು ಯಾತ್ರೆಗಾಗಿ ಕಳುಹಿಸುವುದಾಗಿ ಆಗ ಅಥೆನ್ಸಿನವರು ಅಪಾಲೋವಿಗೆ ಹರಕೆ ಮಾಡಿಕೊಂಡಿದ್ದರಂತೆ. ಆ ಪದ್ಧತಿ ಈಗಲೂ ಇದೆ. ಈ ರಾಯಭಾರ ಪ್ರಾರಂಭವಾದಂದಿನಿಂದ ಮುಗಿಯುವವರೆಗೂ ನಗರವೆಲ್ಲವೂ ಪರಿಶುದ್ಧವಾಗಿರಬೇಕೆಂದೂ ಹಡಗು ಡೀಲೋಸಿನಿಂದ ಹಿಂದಿರುಗುವವರೆಗೂ ಯಾರನ್ನೂ ಮರಣಕ್ಕೆ ಗುರಿಮಾಡಕೂಡದೆಂದೂ ಶಾಸನವಾಗಿದೆ. ಒಂದೊಂದು ವೇಳೆ ಸಮುದ್ರದಲ್ಲಿ ಪ್ರತಿಕೂಲವಾದ ಬಿರುಗಾಳಿಗಳಿದ್ದರೆ ಆ ಹಡಗು ಅಥೆನ್ಸಿಗೆ ಬರುವುದಕ್ಕೆ ಬಹಳ ಕಾಲ ಹಿಡಿಯುತ್ತದೆ. ಅಪಾಲೋವಿನ ಅರ್ಚಕನು ಹಡಗಿಗೆ ಪೂಜೆ ಮಾಡಿದಂದಿನಿಂದ ಈ ರಾಯಭಾರವು ಪ್ರಾರಂಭವಾಗುತ್ತದೆ. ಈ ಸಂದರ್ಭದಲ್ಲಿ ನಾನು ಹೇಳಿದ ಹಾಗೆ ಸಾಕ್ರಟೀಸನ ವಿಚಾರಣೆಯ ಹಿಂದಿನ ದಿನ ಈ ಉತ್ಸವ ನಡೆಯಿತು. ಆದ್ದರಿಂದಲೇ ಸಾಕ್ರಟೀಸನ ವಿಚಾರಣೆಗೂ ಮರಣಕ್ಕೂ ಅಷ್ಟು ಅಂತರ ಬಂದದ್ದು.

ಎಕಿ—ಆತನ ಮರಣದ ಬಗೆಯೇನು, ಫೀಡೊ? ಆಗ ನಡೆದ ಮಾತುಕಥೆಯೇನು ? ಆತನ ಸ್ನೇಹಿತರು ಯಾರು ಯಾರು ಜೊತೆಯಲ್ಲಿದ್ದರು ? ಅಥವಾ ಅಧಿಕಾರಿಗಳು ಆತನ ಬಳಿಯಲ್ಲಿ ಯಾರನ್ನೂ ಇರಗೊಡಿಸದೆ, ಮರಣ ಸಮಯದಲ್ಲಿ ಸ್ನೇಹಿತರೊಬ್ಬರೂ ಹತ್ತಿರ ಇಲ್ಲದೆ ಆತನು ಒಬ್ಬೊಂಟಿಗನಾಗಿರುವಂತೆ ಮಾಡಿದರೊ ?

ಫೀಡೊ—ಇಲ್ಲ. ಬಹಳ ಜನ ಸ್ನೇಹಿತರಿದ್ದರು.

ಎಕಿ—ನಿನಗೆ ಬೇರೆ ಕೆಲಸವೇನೂ ಇಲ್ಲದೆ ಇದ್ದರೆ ಅಲ್ಲಿ ನಡೆದದ್ದೆಲ್ಲವನ್ನೂ ಒಂದೂ ಬಿಡದೆ ನನಗೆ ಹೇಳಬೇಕು.

ಫೀಡೊ—ಬೇರೆ ಕೆಲಸವೇನೂ ಇಲ್ಲ. ಸಾಕ್ರಟೀಸನ ವಿಷಯವಾಗಿ ಯಾರೊಡನೆಯಾದರೂ ಮಾತಾಡುವುದು ಅಥವಾ ಇನ್ನು ಯಾರಾದರೂ

ಆತನ ವಿಷಯವನ್ನು ಹೇಳುತ್ತಿದ್ದರೆ ಕೇಳುವುದು, ಇದಕ್ಕಿಂತ ಹೆಚ್ಚಿನ ಸಂತೋಷ ನನಗಿಲ್ಲ. ಹೇಗಾದರೂ ಆತನ ಸ್ಮರಣೆಯಾಗುತ್ತಿರಬೇಕು.

ಎಕಿ—ಹಾಗಾದರೆ ಎಲ್ಲವನ್ನೂ ಹೇಳು, ಫೀಡೊ. ನಿನ್ನ ಹಾಗೆಯೇ ಆತನ ವಿಷಯದಲ್ಲಿ ಆದರವಿಟ್ಟು ಕೇಳುವವರು ಬಹಳ ಜನವಿದ್ದಾರೆ.

ಫೀಡೊ—ನನಗೆ ಅಲ್ಲಿದ್ದಾಗ ಮನಸ್ಸಿನಲ್ಲಿ ವಿಚಿತ್ರವಾದ ಭಾವಗಳು ತಲೆದೋರಿದುವು. ಪ್ರಿಯಸ್ನೇಹಿತನು ಮರಣಹೊಂದುವ ಸಮಯದಲ್ಲಿ ಸ್ವಾಭಾವಿಕವಾಗಿ ಉದ್ಭವಿಸಬೇಕಾದ ಕರುಣೆಯೂ ವ್ಯಸನವೂ ನನ್ನಲ್ಲಿ ಕಾಣಬರಲಿಲ್ಲ. ನಿರ್ಭಯವಾಗಿ ಮರಣವನ್ನೆದುರುಗೊಳ್ಳಲು ಸಿದ್ಧನಾಗಿದ್ದ ಆತನ ಮಾತುಗಳನ್ನೂ ಮುಖದ ಗಾಂಭೀರ್ಯವನ್ನೂ ನೋಡಿದರೆ ಆತನು ಮರಣಕ್ಕೆ ಹೆದರುವುದರ ಬದಲು ಅದು ಸೌಖ್ಯಕ್ಕೆ ದಾರಿಯೆಂದು ತಿಳಿದಿದ್ದಂತೆ ತೋರಿತು. "ದೇವರು ಕರೆಯಕಳುಹಿಸಿದ್ದರಿಂದಲೇ ಆತನು ಈಗ ಪರಲೋಕಕ್ಕೆ ಹೋಗುತ್ತಿರುವುದು. ಅಲ್ಲಿ ಸೌಖ್ಯವೆನ್ನುವುದು ಇರುವುದಾದರೆ ಅದು ಸಾಕ್ರೆಟೀಸನಿಗಲ್ಲದೆ ಮತ್ತೆ ಯಾರಿಗೆ ದೊರೆತೀತು!" ಎನ್ನಿಸಿತು. ಆದ್ದರಿಂದಲೇ ನನಗೆ ಆ ವಿಪತ್ಕಾಲದಲ್ಲಿಯೂ ಕೂಡ ಅವನನ್ನು ನೋಡಿದಾಗ ವ್ಯಸನವಾಗಲಿಲ್ಲ. ಆದರೂ ಆಗ ತತ್ತ್ವವಿಚಾರವಾಗಿ ನಡೆಯುತ್ತಿದ್ದ ಚರ್ಚೆಯಲ್ಲಿ ಎಂದಿನಂತೆ ನನಗೆ ಹೆಚ್ಚು ಸಂತೋಷವಿರಲಿಲ್ಲ. ಜಿಜ್ಞಾಸೆಯ ಸಂತೋಷವೇನೋ ಇತ್ತು; ಆದರೆ ಆ ಸಂತೋಷದಲ್ಲಿ ಏನೋ ಒಂದು ವಿಚಿತ್ರರೀತಿಯಲ್ಲಿ ದುಃಖವೂ ಬೆರೆದಿತ್ತು. ನಗುವಂತೆ ಒಂದು ಘಳಿಗೆ, ಅಳುವಂತೆ ಒಂದು ಘಳಿಗೆ ಆಗುತ್ತಿತ್ತು. ಅಲ್ಲಿದ್ದವರೆಲ್ಲರೂ—ಅದರಲ್ಲಿಯೂ ಅಪಾಲೊಡೋರಸ್—ಅದೇ ಸ್ಥಿತಿಯಲ್ಲಿದ್ದರು. ಅಪಾಲೊಡೋರಸ್ಸನ ಸ್ವಭಾವ ನಿನಗೆ ಗೊತ್ತಷ್ಟೆ?

ಎಕಿ—ಗೊತ್ತು.

ಫೀಡೊ—ಅವನು ಮನಸ್ಸಿನ ಉದ್ವೇಗವನ್ನು ತಡೆಯಲಾರದೆ ಹೋದನು. ನನಗೂ ಅಲ್ಲಿದ್ದ ಇತರರಿಗೂ ಅದೇನು ಅನುಭವವಾಯಿತು.

ಎಕಿ—ಇನ್ನು ಯಾರಿದ್ದರು?

ಫೀಡೊ—ಅಥೆನ್ಸಿನವರಾಗಿ ಅಪಾಲೊಡೋರಸ್, ಕ್ರೈಟೋಬ್ಯುಲಸ್, ಅವನ ತಂದೆ ಕ್ರೈಟೊ, ಹೆರ್ಮೊಜೆನೀಸ್, ಎಪಿಜೆನೀಸ್, ಈಸ್ಕೈನೀಸ್, ಆಂಟಿಸ್ಥೆನೀಸ್, ಪೀನಿಯದ ಟಿಸಿಪಸ್, ಮೆನೆಕ್ಸೆನಸ್ ಇವರಲ್ಲದೆ ಇನ್ನು ಕೆಲವರೂ ಇದ್ದರು. ಪ್ಲೇಟೋವಿಗೆ ಮೈಗೆ ಚೆನ್ನಾಗಿರಲಿಲ್ಲವೆಂದ ಹಾಗೆ ಜ್ಞಾಪಕ.

ಎಕಿ—ಹೊರಗಿನವರು ಯಾರಾದರೂ ಬಂದಿದ್ದರೋ ?

ಫೀಡೊ—ಇದ್ದರು. ಥೀಬಿಸ್ಸಿನಿಂದ ಸಿಮಿಯಾಸ್ ಬಂದಿದ್ದನು. ಸೀಬೀಸ್, ಫೀಡಾಂಡೀಸ್, ಮೆಗಾರಾದ ಯೂಕ್ಲಿಡ್ ಮತ್ತು ಟೆರ್ಪ್ಸಿಯನ್ ಇವರೆಲ್ಲರೂ ಇದ್ದರು.

ಎಕಿ—ಅರಿಸ್ಟಿಪಸ್ಸನೂ ಕ್ಲಿಯಾಂಬ್ರೋಟಸ್ಸನೂ ಇರಲಿಲ್ಲವೆ ?

ಫೀಡೊ—ಇಲ್ಲ. ಅವರು ಈಜಿನಾದಲ್ಲಿ ಇದ್ದರೆಂದು ಕೇಳಿದೆ.

ಎಕಿ—ಇನ್ನು ಯಾರಾದರೂ ಇದ್ದರೆ ?

ಫೀಡೊ—ಇಲ್ಲ. ಇಷ್ಟೇ ಜನವೆಂದು ತೋರುತ್ತದೆ.

ಎಕಿ—ಆಮೇಲೆ ? ಏನೇನು ಮಾತು ನಡೆಯಿತು ?

ಫೀಡೊ—ಮೊದಲಿನಿಂದ ಸಂಭಾಷಣೆಯೆಲ್ಲವನ್ನೂ ಹೇಳುತ್ತೇನೆ, ಕೇಳು· ಸಾಕ್ರೆಟೀಸನು ಸೆರೆಮನೆಯಲ್ಲಿದ್ದಾಗ ನಾವು ನಿತ್ಯವೂ ಹೋಗಿ ಆತನನ್ನು ಕಾಣುವುದು ಒಂದು ಪದ್ಧತಿಯಾಗಿ ಹೋಗಿತ್ತು. ಪ್ರಾತಃಕಾಲ ಸೂರ್ಯೋದಯದ ಹೊತ್ತಿಗೆ ಸಾಕ್ರೆಟೀಸನ ವಿಚಾರಣೆಯಾದ ನ್ಯಾಯ ಸ್ಥಾನದ ಬಳಿ—ಅದು ಸೆರೆಮನೆಯ ಹತ್ತಿರದಲ್ಲಿಯೇ ಇದೆ—ನಾವೆಲ್ಲರೂ ಸೇರಿ ಸೆರೆಮನೆಯ ಬಾಗಿಲು ತೆಗೆಯುವವರೆಗೂ ಮಾತಾಡುತ್ತ ಕುಳಿತಿರು ತ್ತಿದ್ದೆವು. ಬಾಗಿಲು ತೆಗೆಯುವುದು ಸ್ವಲ್ಪ ಸಾವಕಾಶವೇ ಆಗುತ್ತಿತ್ತು. ತೆರೆದ ಮೇಲೆ ನಾವು ಒಳಗೆ ಹೋಗಿ ಹೆಚ್ಚುಕಡಮೆ ದಿನವನ್ನೆಲ್ಲಾ ಸಾಕ್ರೆಟೀಸನೊಡನೆಯೇ ಕಳೆಯುತ್ತಿದ್ದೆವು. ಡೀಲೋಸಿನಿಂದ ಹಡಗು ಬಂದಿತೆಂದು ತಿಳಿದ ಮಾರನೆಯ ದಿನ ನಾವೆಲ್ಲರೂ ಸಾಧ್ಯವಾದಷ್ಟು ಜಾಗ್ರತೆ ನ್ಯಾಯಸ್ಥಾನದ ಬಳಿ ಸೇರಬೇಕೆಂದು ಗೊತ್ತುಮಾಡಿಕೊಂಡು ಎಂದಿಗಿಂತ ಬಹಳ ಮುಂಚಿತವಾಗಿಯೇ ಬಂದೆವು. ಬಾಗಿಲಿನ ಕಾವಲು ಗಾರನು ನಮ್ಮನ್ನು ತಡೆದು “ನಾನು ಕರೆಯುವವರೆಗೂ ಸ್ವಲ್ಪ ನಿಲ್ಲಿ.

ನಮ್ಮ ಹನ್ನೊಂದು ಜನ ನ್ಯಾಯಾಧೀಶರು ಸಾಕ್ರೈಟೀಸನ ಸಂಕಲೆಗಳನ್ನು ತೆಗೆದು ಆತನಿಗೆ ಮರಣ ಯಾವ ರೂಪದಲ್ಲಾಗಬೇಕೆಂಬುದನ್ನು ನಿರ್ಧರಿಸುವುದರಲ್ಲಿದ್ದಾರೆ" ಎಂದನು. ಸ್ವಲ್ಪ ಹೊತ್ತು ಕಾದದ್ದಾಯಿತು; ಕಾವಲುಗಾರನು ಮತ್ತೆ ಬಂದು ನಾವು ಒಳಕ್ಕೆ ಹೋಗಬಹುದೆಂದು ಹೇಳಿದನು. ನಾವು ಪ್ರವೇಶಿಸಿದಾಗ ಸಾಕ್ರೈಟೀಸನ ಸಂಕಲೆಗಳನ್ನು ತೆಗೆದಿದ್ದರು. ಸಾಂತಿಪಿ—ನಿನಗೆ ಆಕೆಯ ಗುರುತಿದೆಯಲ್ಲವೆ—ಸಾಕ್ರೈಟೀಸನ ಎಳೆಯ ಮಗುವನ್ನು ಎತ್ತಿಕೊಂಡು ಆತನ ಹತ್ತಿರದಲ್ಲಿಯೇ ಕುಳಿತಿದ್ದಳು. ಆಕೆ ನಮ್ಮನ್ನು ನೋಡಿ ಅತ್ತು, ಸಾಧಾರಣವಾಗಿ ಹೆಂಗಸರು ಹೇಳುವಂತೆ "ಸಾಕ್ರೈಟೀಸ್, ನೀನೂ ನಿನ್ನ ಸ್ನೇಹಿತರೂ ಸೇರಿ ಪರಸ್ಪರ ಮಾತಾಡುವುದಕ್ಕೆ ಇದೇ ಕೊನೆಯ ದಿನ" ಎಂದಳು. ಸಾಕ್ರೈಟೀಸನು ಕ್ರೈಟೋವಿನ ಕಡೆಗೆ ತಿರುಗಿ "ಕ್ರೈಟೊ, ಯಾರಾದರೂ ಈಕೆಯನ್ನು ಮನೆಗೆ ಕರೆದುಕೊಂಡು ಹೋಗಿ" ಎಂದನು. ಕ್ರೈಟೋವಿನ ಕಡೆಯವರೊಡನೆ ಆಕೆ ಅಳುತ್ತಾ ಕರೆಯುತ್ತಾ ಹೊರಟುಹೋದಳು. ಸಾಕ್ರೈಟೀಸನು ಹಾಸಿಗೆಯ ಮೇಲೆ ಎದ್ದು ಕುಳಿತು ತನ್ನ ಕಾಲನ್ನು ಬಗ್ಗಿಸಿ ಅದನ್ನು ತಿಕ್ಕುತ್ತಾ ಹಾಗೆಯೇ ಮಾತಾಡಲಾರಂಭಿಸಿದನು. "ಜನರು ಸುಖವೆಂದು ಕರೆಯುತ್ತಾರಲ್ಲ, ಅದು ಎಷ್ಟು ವಿಚಿತ್ರವಾದದ್ದು! ಅದಕ್ಕೂ ಅದಕ್ಕೆ ವಿರುದ್ಧವಾದದ್ದೆಂದು ತೋರುವ ದುಃಖಕ್ಕೂ ಏನೋ ಒಂದು ಗೂಢವಾದ ಸಂಬಂಧವಿದೆ. ಅವೆರಡೂ ಏಕಕಾಲದಲ್ಲಿ ಮನುಷ್ಯನ ಅನುಭವಕ್ಕೆ ಬರುವುದಿಲ್ಲ; ಆದರೂ ಒಂದನ್ನು ಅರಸಿಕೊಂಡು ಹೋಗಿ ಹಿಡಿಯುವವನು ಮತ್ತೊಂದನ್ನೂ ತೆಗೆದುಕೊಳ್ಳಬೇಕಾಗುವುದು. ಅವಕ್ಕೆ ದೇಹಗಳೇನೋ ಎರಡು; ಆದರೆ ಆ ಎರಡು ದೇಹಗಳನ್ನೂ ಒಂದೇ ತಲೆ ಸೇರಿಸಿದೆ. ಈಸೋಪನಿಗೇನಾದರೂ ತೋರಿದ್ದರೆ, ಸುಖದುಃಖಗಳೆರಡೂ ಯುದ್ಧಮಾಡುತ್ತಿದ್ದುವೆಂದೂ ದೇವರು ಅವೆರಡಕ್ಕೂ ಸ್ನೇಹ ಮಾಡಬೇಕೆಂದು ಬಯಸಿ, ಅದು ಸಾಧ್ಯವಾಗದೆ ಅವುಗಳ ತಲೆಗಳನ್ನು ಒಟ್ಟಿಗೆ ಕಟ್ಟಿಬಿಟ್ಟನೆಂದೂ ಆದ್ದರಿಂದ ಅವೆರಡರಲ್ಲಿ ಒಂದು ಯಾರ ಬಳಿಗಾದರೂ ಬಂದರೆ ಹಿಂದೆಯೇ ಇನ್ನೊಂದು ಬರಬೇಕಾಗುವುದೆಂದೂ ಒಂದು ಕಥೆಯನ್ನು ಕಟ್ಟಿಬಿಡು

ತ್ತಿದ್ದನು. ಈಗ ಅದು ನನಗೆ ಅನುಭವವಾಗುತ್ತಾ ಇದೆ. ಸಂಕಲೆಗಳಿಂದ ಇದುವರೆಗೂ ಕಾಲು ನೋಯುತ್ತಿತ್ತು. ಅದಾದ ಮೇಲೆ ಈಗ ಅದರ ಹಿಂದೆ ಸುಖ ಬಂದಂತೆ ಕಾಣುತ್ತದೆ.''

ಸೀಬೀಸ್ ನಡುವೆ ಮಾತು ಹಾಕಿದನು. ''ಸಾಕ್ರೆಟೀಸ್, ನೀನು ಈಸೋಪನ ಹೆಸರು ಹೇಳಿದ್ದರಿಂದ ಅನೇಕರು ನನ್ನನ್ನು ಕೇಳುತ್ತಿದ್ದ ಪ್ರಶ್ನೆಯೊಂದು ಜ್ಞಾಪಕವಾಯಿತು. ಮೊನ್ನೆ ತಾನೆ ಎವೆನಸ್ ಕವಿ ಕೂಡ 'ಇದೇನು, ಸಾಕ್ರೆಟೀಸನು ಸೆರೆಮನೆಯಲ್ಲಿರುವಾಗ ಅಪಾಲೋ ಸ್ತೋತ್ರವನ್ನು ಬರೆದದ್ದಲ್ಲದೆ ಈಸೋಪನ ಕಥೆಗಳನ್ನು ಪದ್ಯರೂಪದಲ್ಲಿ ಬರೆಯುತ್ತಿದ್ದಾನೆ! ಯಾವಾಗಲೂ ಒಂದು ಚರಣವನ್ನೂ ಬರೆಯದಿದ್ದವನು ಈಗ ಕವಿತೆಗೆ ಕೈಹಾಕಿರುವುದೇನು?' ಎಂದು ಕೇಳಿದನು. ಅವನು ನನ್ನನ್ನು ಪುನಃ ಕಂಡರೆ ಅದೇ ಪ್ರಶ್ನೆಯನ್ನು ಮತ್ತೆ ಕೇಳದಿರುವುದಿಲ್ಲ. ಅವನಿಗೇನಾದರೂ ಉತ್ತರ ಕೊಡಬೇಕೆಂದು ನಿನಗೆ ಇಷ್ಟವಿದ್ದರೆ ತಿಳಿಸು.''

ಸಾಕ್ರೆಟೀಸನು ಅದಕ್ಕೆ ಹೇಳಿದನು: ''ಉತ್ತರ ಕೊಡುವುದೇನು, ಸೀಬೀಸ್. ಇರುವ ಸಂಗತಿಯನ್ನು ಹೇಳು. ನಾನು ಈ ಪದ್ಯಗಳನ್ನು ರಚಿಸಿದ್ದು ಎವೆನಸ್ಸಿನ ಮೇಲೆ ಹುರುಡಿನಿಂದಲ್ಲ; ಅವನ ಕವನಗಳ ಸಮಕ್ಕೆ ಕವನಗಳನ್ನು ಬರೆಯುವುದು ಸುಲಭವಲ್ಲವೆಂದು ನಾನು ಬಲ್ಲೆ. ನನಗೆ ಕೆಲವು ಕನಸುಗಳು ಬಿದ್ದುವು. ಅವುಗಳ ರಹಸ್ಯವನ್ನು ಪರೀಕ್ಷಿಸಬೇಕೆಂದೂ, ನಾನು ಪದ್ಯಗಳನ್ನು ಬರೆಯಬೇಕೆಂಬುದೇ ಆ ಕನಸುಗಳ ಅರ್ಥವಾಗಿದ್ದರೆ ಆ ಆಜ್ಞೆಯನ್ನು ಪಾಲಿಸಿದಂತಾಗಲೆಂದೂ ನಾನು ಬರೆಯಲು ತೊಡಗಿದೆನು. ನನಗೆ ಒಂದು ಕನಸು ಪದೇ ಪದೇ ಬೇರೆ ಬೇರೆ ರೂಪದಲ್ಲಿ ಬೀಳುತ್ತಿತ್ತು; ಆದರೆ ಕನಸಿನಲ್ಲಿ ನನಗೆ ಬಂದ ಸಂದೇಶ ಮಾತ್ರ ಒಂದೇ. 'ಸಾಕ್ರೆಟೀಸ್, ಗೀತೆಗಳನ್ನು ಬರೆ' ಎಂದು. ನಾನು ''ತತ್ವವಿಚಾರಕ್ಕಿಂತ ಉತ್ತಮವಾದ ಗಾನವಿಲ್ಲ. ಪಂದ್ಯದಲ್ಲಿ ಓಡುತ್ತಿರುವವನಿಗೆ ಉತ್ತೇಜನ ಕೊಡಲು ನೋಟಕರು ಓಡು, ಓಡು ಎಂದು ಕೂಗುವುದಿಲ್ಲವೆ? ಹಾಗೆಯೇ ತತ್ವಾನ್ವೇಷಣೆಯಲ್ಲಿ ತೊಡಗಿರುವ ನನ್ನನ್ನು ಹುರಿದುಂಬಿಸಿ ಆ ಕೆಲಸದಲ್ಲಿ ಮತ್ತಷ್ಟು ಶ್ರದ್ಧೆಯಿಂದ ನಿರತನಾಗುವಂತೆ

ಮಾಡಲು ಕನಸಿನ ವಾಣಿ ಹೀಗೆ ನುಡಿದಿರಬಹುದು " ಎಂದುಕೊಂಡೆನು. ಆದರೆ ಸಾಧಾರಣವಾಗಿ ಜನರು ಗೀತೆಯೆನ್ನುವ ಪದ್ಯಗಳನ್ನು ಬರೆಯುಲೆಂದೇ ಆ ವಾಣಿಯ ಅಪೇಕ್ಷೆಯಿರಬಹುದು ಎಂಬ ಸಂದೇಹ ನನ್ನನ್ನು ಬಾಧಿಸುತ್ತಿತ್ತು. ಹಾಗಿದ್ದ ಪಕ್ಷದಲ್ಲಿ ಆ ವಾಣಿಗೆ ವಿರೋಧವಾಗಿ ನಡೆಯಬಾರದೆಂದುಕೊಂಡೆನು. ಸೆರೆಮನೆಗೆ ಹೋದ ಮೇಲೆ ಅಪಾಲೋವಿನ ಹಬ್ಬದ ಪ್ರಯುಕ್ತ ನನ್ನ ಸಾವಿನ ದಿನ ಮುಂದಕ್ಕೆ ಹೋಯಿತು. ಅವಕಾಶವಿದ್ದದ್ದರಿಂದ ಕೆಲವು ಪದ್ಯಗಳನ್ನು ಬರೆದೆನು. ಮೊದಲು ಹಬ್ಬದ ಅಧಿದೇವತೆಯಾದ ಅಪಾಲೋವಿನ ಸ್ತೋತ್ರವನ್ನು ಬರೆದೆನು. ಅನಂತರ 'ಕವಿ ತನ್ನ ಹೆಸರನ್ನು ಸಾರ್ಥಕಗೊಳಿಸಿಕೊಳ್ಳಬೇಕಾದರೆ ಸುಮ್ಮನೆ ಕೆಲವು ಮಾತುಗಳನ್ನು ಬರೆದರೆ ಸಾಲದು, ಕಥೆಗಳನ್ನು ಕಟ್ಟಬೇಕು' ಎಂದು ಯೋಚಿಸಿ, ನನಗೆ ಆ ಶಕ್ತಿ ಇಲ್ಲದ್ದರಿಂದ, ಸಮಯಕ್ಕೆ ಸರಿಯಾಗಿ ಸಿಕ್ಕಿದ ಈಸೋಪನ ಕಥೆಗಳನ್ನು ಪದ್ಯರೂಪದಲ್ಲಿ ಬರೆದೆನು. ಎವೆನಸ್ಸಿಗೆ ಇದನ್ನು ತಿಳಿಸಿ, ಸಂತೋಷದಿಂದಿರು ಎಂದು ಹೇಳು. ಆತನು ವಿವೇಕಿಯಾದರೆ ತಡಮಾಡದೆ ಬೇಗ ನನ್ನ ಹಿಂದೆಯೇ ಬರಬೇಕೆಂದೂ ಹೇಳು. ನನಗಂತೂ ಈ ದಿನವೇ ಪ್ರಯಾಣ. ಅಥೆನ್ಸಿನವರ ಅಪ್ಪಣೆಯಾಗಿದೆ."

ಇದನ್ನು ಕೇಳಿ ಸೀಬೀಸ್ " ಏನು ಸಾಕ್ರೆಟೀಸ್, ಎವೆನಸ್ಸಿಗೆ ಇಂಥ ಸಂದೇಶವನ್ನು ಕಳುಹಿಸುವುದೆ? ಆತನನ್ನು ಅನೇಕ ವೇಳೆ ನೋಡಿದ್ದೇನೆ; ಅವನ ಸ್ವಭಾವವನ್ನು ಬಲ್ಲೆ. ನನಗೆ ತಿಳಿದ ಮಟ್ಟಿಗೆ ಆತನು ತಾನಾಗಿಯೇ ನಿನ್ನ ಸಲಹೆಯಂತೆ ನಡೆಯುವವನಲ್ಲ" ಎಂದನು.

" ಅದೇಕೆ, ಎವೆನಸ್ ತತ್ವಾನ್ವೇಷಕನಲ್ಲವೆ?"

" ಹೌದೆಂದು ತೋರುತ್ತದೆ."

" ಹಾಗಾದರೆ ಅವನು ನನ್ನ ಸಲಹೆಯನ್ನು ಒಪ್ಪುವನು. ನಿಜವಾಗಿ ತತ್ವವಿಚಾರದಲ್ಲಿ ಶ್ರದ್ಧೆಯುಳ್ಳವರೆಲ್ಲರೂ ಸಾಯುವುದಕ್ಕೆ ಸಿದ್ಧರಾಗಿರುತ್ತಾರೆ. ಆದರೆ ಆತ್ಮಹತ್ಯ ಮಾಡಿಕೊಳ್ಳುವುದಿಲ್ಲ; ಅದು ನಿಷಿದ್ಧ."

ಹೀಗೆ ಹೇಳುತ್ತಾ ಸಾಕ್ರೆಟೀಸನು ತನ್ನ ಕಾಲುಗಳನ್ನು ಹಾಸಿಗೆಯಿಂದ

ತೆಗೆದು ನೆಲದ ಮೇಲಿಟ್ಟನು. ಸಂಭಾಷಣೆ ಮುಗಿಯುವವರೆಗೂ ಹಾಗೆಯೇ ಕುಳಿತಿದ್ದನು.

ಸೀಬೀಸ್ ಮತ್ತೆ ಪ್ರಶ್ನೆ ಮಾಡಿದನು. "ಆತ್ಮಹತ್ಯ ಮಾಡಿಕೊಳ್ಳ ಕೂಡದು; ಆದರೂ ತತ್ತ್ವಾನ್ವೇಷಕನು ಸಾಯುವವರ ಹಿಂದೆಯೇ ಹೋಗಲು ಸಿದ್ಧನಾಗಿರುತ್ತಾನೆ ಎನ್ನುವೆಯಲ್ಲ, ಅದು ಹೇಗೆ?"

"ಸೀಬೀಸ್, ಸಿಮಿಯಾಸ್, ನೀವು ಫಿಲೋಲೆಯಸ್ಸಿನ ಶಿಷ್ಯರು. ಆತನು ಆ ವಿಷಯವಾಗಿ ಮಾತಾಡುವುದನ್ನು ಕೇಳಿಲ್ಲವೆ?"

"ಕೇಳಿದ್ದೇವೆ. ಆದರೆ ಆತನ ಶೈಲಿ ಸುಲಭವಾಗಿ ಅರ್ಥವಾಗುವುದಲ್ಲ."

"ಈಗ ನಾನು ಹೇಳುವುದೂ ಮತ್ತೊಬ್ಬರಿಂದ ಕೇಳಿದ್ದೇ. ಆದರೂ ಅದನ್ನು ನಿಮಗೇಕೆ ಹೇಳಬಾರದು? ಈಗ ನಾನು ಮತ್ತೊಂದು ಲೋಕಕ್ಕೆ ಹೊರಡುವವನಾಗಿದ್ದೇನೆ. ನನ್ನ ಯಾತ್ರೆಯ ವಿಷಯವಾಗಿ ಸ್ವಲ್ಪ ಯೋಚಿಸುವುದೂ ಮಾತಾಡುವುದೂ ಉಚಿತವೇ ಆಗಿದೆ. ಈಗಿನಿಂದ ಸೂರ್ಯಾಸ್ತಮಯದವರೆಗೂ ಇದಕ್ಕಿಂತ ಒಳ್ಳೆಯ ಕೆಲಸವೇನಿದೆ?"

"ಹಾಗಾದರೆ ಹೇಳು, ಸಾಕ್ರೆಟೀಸ್. ಆತ್ಮಹತ್ಯವು ಧರ್ಮವಿರುದ್ಧ ವೆನ್ನುವುದೇತಕ್ಕೆ? ಈಗ ನೀನು ಫಿಲೋಲೆಯಸ್ಸಿನ ವಿಷಯವಾಗಿ ಮಾತಾಡುತ್ತಿದ್ದೆಯಲ್ಲ, ಆತನೂ ನಮ್ಮೊಡನೆ ಥೀಬ್ಸಿನಲ್ಲಿದ್ದಾಗ ಹಾಗೆಯೇ ಹೇಳುತ್ತಿದ್ದನು. ಇನ್ನೂ ಅನೇಕರು ಅದೇ ಅಭಿಪ್ರಾಯ ಕೊಡುತ್ತಾರೆ. ಅವರ ಮಾತುಗಳು ಮಾತ್ರ ನನಗೆ ಯಾವಾಗಲೂ ಅರ್ಥವಾಗಲಿಲ್ಲ."

"ನಿರಾಶನಾಗಬೇಡ, ಸೀಬೀಸ್. ಒಂದಲ್ಲ ಒಂದು ದಿನ ನಿನಗೆ ಆ ಮಾತುಗಳ ಅರ್ಥ ಗೊತ್ತಾಗುತ್ತದೆ. ಕೆಡುಕು ಎನ್ನಿಸಿಕೊಳ್ಳುವುದು ಒಂದೊಂದು ವೇಳೆ ಒಳ್ಳೆಯದಾಗಿ ಪರಿಣಮಿಸಬಹುದು. ಆದರೆ ಮರಣದ ವಿಷಯದಲ್ಲಿ ಮಾತ್ರ ಹೀಗೇಕೆ ಆಗಬಾರದು? ಈಗ ನಿನ್ನ ಸಂದೇಹವೇನು? 'ಮರಣ ನಮಗೆ ಲೇಸೆಂದು ತಿಳಿದೂ ಕೂಡ ನಮ್ಮ ದೇಹವನ್ನು ನೀಗಿಕೊಳ್ಳಲು ಹಕ್ಕಿಲ್ಲದೆ ಮತ್ತೊಬ್ಬರ ಕೈಯಿಂದ ಸಾವು ಬರಲೆಂದು ಕಾದಿರುವುದೇತಕ್ಕೆ?'—ಇದು ತಾನೇ ನೀನು ತಿಳಿಯ ಬೇಕಾದದ್ದು?"

ಸೀಬೀಸ್ ಸ್ವಲ್ಪ ನಗುತ್ತಾ ತನ್ನ ಮಾತೃಭಾಷೆಯಾದ ಬಿಯೋಷಿಯನ್ನಿನಲ್ಲಿ "ನಿಜ, ನಿಜ" ಎಂದನು.

"ನಾನು ಹೇಳುವ ಮಾತುಗಳು ಒಂದಕ್ಕೊಂದು ವಿರೋಧವಾಗಿದ್ದಂತೆ ಕಾಣುವುದೇನೋ ನಿಜ; ಆದರೆ ನಿಜವಾಗಿಯೂ ಅಂಥ ವಿರೋಧವೇನೂ ಇಲ್ಲದಿರಬಹುದು. ಮನುಷ್ಯನು ಈ ಪ್ರಪಂಚದಲ್ಲಿ ಬಂದಿಯಾಗಿದ್ದಾನೆಂದೂ ಬಾಗಿಲು ತೆರೆದು ತಪ್ಪಿಸಿಕೊಂಡು ಹೋಗುವ ಹಕ್ಕು ಅವನಿಗಿಲ್ಲವೆಂದೂ ಕೆಲವರು ಆಡಿಕೊಳ್ಳುವರು; ಈ ರಹಸ್ಯ ನನಗೇನೋ ಚೆನ್ನಾಗಿ ಅರ್ಥವಾಗಿಲ್ಲ. ಆದರೆ ದೇವತೆಗಳು ನಮ್ಮ ರಕ್ಷಕರೆಂದೂ ನಾವು ಅವರ ಸ್ವತ್ತೆಂದೂ ನಾನು ತಿಳಿದಿದ್ದೇನೆ. ನೀನು ಇದಕ್ಕೆ ಒಪ್ಪುವೆಯಾ?"

ಸೀಬೀಸ್ "ನಾನು ಒಪ್ಪುತ್ತೇನೆ" ಎಂದನು.

"ಈಗ ನಿನಗೆ ಸೇರಿದ ಒಂದು ಎತ್ತೋ ಕತ್ತೆಯೋ ನೀನು ಅದರ ಮರಣವನ್ನು ಅಪೇಕ್ಷಿಸದೆ ಇದ್ದರೂ ತಾನಾಗಿಯೇ ಪ್ರಾಣವನ್ನು ಕಳೆದುಕೊಂಡರೆ ನಿನಗೆ ಕೋಪ ಬರುತ್ತದೆಯೋ ಇಲ್ಲವೋ? ಸಾಧ್ಯವಾದರೆ ನೀನು ಅದಕ್ಕೆ ಶಿಕ್ಷೆ ಮಾಡುವೆಯೋ ಇಲ್ಲವೋ?"

"ಮಾಡಿಯೇ ಮಾಡುತ್ತೇನೆ"

"ಹೀಗೆ ಯೋಚಿಸಿ ನೋಡಿದರೆದೇವರು ನಮ್ಮನ್ನು ಕರಸಿಕೊಳ್ಳುವವರೆಗೂ ನಾವು ತಾಳ್ಮೆಯಿಂದಿರದೆ ಪ್ರಾಣ ಕಳೆದುಕೊಳ್ಳಕೂಡದು ಎನ್ನುವುದು ನ್ಯಾಯವಾಗಿಯೇ ತೋರುತ್ತದೆ. ದೇವರು ಈಗ ನನ್ನನ್ನು ಕರಸಿದ್ದಾನೆ."

"ನೀನು ಹೇಳುವುದೇನೋ ನ್ಯಾಯವಾಗಿಯೇ ತೋರುತ್ತದೆ. ಆದರೆ ಜಿಜ್ಞಾಸುಗಳು ಸಾವಿಗೆ ಸಿದ್ಧರಾಗಿರಬೇಕೆಂದೂ ಅದನ್ನು ಸಂತೋಷದಿಂದ ಎದುರುಗೊಳ್ಳಬೇಕೆಂದೂ ಈಗ ತಾನೆ ನೀನು ಹೇಳಿದೆಯಲ್ಲವೆ? ದೇವರು ನಮ್ಮ ರಕ್ಷಕನೆನ್ನುವುದೂ ನಾವು ಆತನ ಸ್ವತ್ತೆನ್ನುವುದೂ ಸತ್ಯವಾದ ಪಕ್ಷದಲ್ಲಿ ನಿನ್ನ ಹಿಂದಿನ ಮಾತಿಗೂ ಇದಕ್ಕೂ ವಿರೋಧವಾಗುವುದಿಲ್ಲವೆ? ನಮಗೆ ಅತ್ಯುತ್ತಮ ಪ್ರಭುಗಳಾದ ದೇವತೆಗಳ ಸೇವೆಯನ್ನು ಬಿಟ್ಟುಹೋಗಬೇಕಾದಾಗಲೂ ಪ್ರಾಜ್ಞನಾದವನು ಆತಂಕಪಡದೆ ಹಸನ್ಮುಖಿಯಾಗಿರಬೇಕೆನ್ನುವುದು ವಿಚಾರಸಮ್ಮತವಾಗಿ ತೋರುವುದಿಲ್ಲ.

ದೇವತೆಗಳ ರಕ್ಷಣೆಯಲ್ಲಿಲ್ಲದೆ ತಾನು ಸ್ವತಂತ್ರನಾಗಿದ್ದರೆ ಸುಖವಾಗಿರಬಹುದೆಂದೂ ತನ್ನ ಯೋಗಕ್ಷೇಮವನ್ನು ತಾನೇ ನೋಡಿಕೊಳ್ಳಬಹುದೆಂದೂ ಜ್ಞಾನಿಯಾದವನು ಎಂದಿಗೂ ಭಾವಿಸುವುದಿಲ್ಲ. ಮೂಢನಾದವನು ತನ್ನ ಯಜಮಾನನ ಆಜ್ಞೆಯಲ್ಲಿರದೆ ತಪ್ಪಿಸಿಕೊಂಡು ಓಡಿಹೋಗುವುದು ಉತ್ತಮವೆಂದು ಯೋಚಿಸಬಹುದು; ಒಳ್ಳೆಯವನಾದ ಯಜಮಾನನನ್ನು ಬಿಟ್ಟು ಓಡಿಹೋಗುವುದು ಹುಚ್ಚತನವೆಂದೂ ಕೊನೆಯವರೆಗೂ ಅವನ ಕೈಕೆಳಗೇ ಇರುವುದು ಕರ್ತವ್ಯವೆಂದೂ ಅವನಿಗೆ ತಿಳಿಯುವುದಿಲ್ಲ. ಆದರೆ ಪ್ರಾಜ್ಞನಾದವನು ತನಗಿಂತ ಉತ್ತಮರಾದವರ ಸಂಗವನ್ನು ಬಿಟ್ಟುಹೋಗುವುದಕ್ಕೆ ಎಂದಿಗೂ ಇಚ್ಛಿಸುವುದಿಲ್ಲ. ನೀನು ಹೇಳಿದ್ದು ಇದಕ್ಕೆ ವಿರುದ್ಧವಾದ ಮಾತಲ್ಲವೆ? ಈ ದೃಷ್ಟಿಯಿಂದ ನೋಡಿದರೆ, ಸಾವು ಬಂದರೆ ಜ್ಞಾನಿಗಳಿಗೆ ವ್ಯಸನವಾಗಬೇಕು, ಮೂಢರಿಗೆ ಸಂತೋಷವಾಗಬೇಕು.''

ಸೀಬೀಸ್ ಹೀಗೆ ಶ್ರದ್ಧೆಯಿಂದ ಚರ್ಚೆ ಮಾಡಿದ್ದನ್ನು ನೋಡಿ ಸಾಕ್ರೆಟೀಸನು ಸಂತೋಷಪಟ್ಟಂತೆ ತೋರಿತು. ಅವನು ನಮ್ಮ ಕಡೆ ತಿರುಗಿ "ನೋಡಿ, ಇವನು ಯಾವಾಗಲೂ ಕಷ್ಟಪಟ್ಟು ವಿಚಾರ ಮಾಡತಕ್ಕವನು; ಹೇಳಿದ್ದನ್ನೆಲ್ಲಾ ಸುಮ್ಮನೆ ಒಪ್ಪುವವನಲ್ಲ'' ಎಂದನು.

ಸಿಮಿಯಾಸನೂ ಸೀಬೀಸನ ಕಡೆಗೇ ಮಾತಾಡಿದನು. "ಸಾಕ್ರೆಟೀಸ್, ನನಗೂ ಈಗ ಸೀಬೀಸ್ ಹೇಳಿದ ಮಾತು ಬಹುಮಟ್ಟಿಗೆ ಒಪ್ಪತಕ್ಕದ್ದೆಂದೇ ತೋರುತ್ತದೆ. ನಿಜವಾಗಿಯೂ ಜ್ಞಾನಿಗಳಾದವರು ತಮಗಿಂತಲೂ ಶ್ರೇಷ್ಠನಾದ ಸ್ವಾಮಿಯ ಸೇವೆಯನ್ನೂ ಸಹವಾಸವನ್ನೂ ಬಿಟ್ಟು ಓಡಿಹೋಗುವುದೇಕೆ? ಈಗ ನೀನು ನಮ್ಮನ್ನೂ ಶ್ರೇಷ್ಠರಾದ ಪ್ರಭುಗಳೆಂದು ನೀನೇ ಒಪ್ಪಿಕೊಳ್ಳುವ ದೇವತೆಗಳ ಸೇವೆಯನ್ನೂ ಬಿಟ್ಟು ಹೋಗಲು ಸಿದ್ಧನಾಗಿ ನಿಂತಿರುವೆಯಲ್ಲ, ನಿನ್ನ ವಿಷಯವನ್ನೇ ಮನಸ್ಸಿನಲ್ಲಿಟ್ಟುಕೊಂಡು ಸೀಬೀಸ್ ಹಾಗೆ ಮಾತನಾಡಿದನೆಂದು ತೋರುತ್ತದೆ.''

"ನಿನ್ನ ಪ್ರಶ್ನೆ ನ್ಯಾಯವಾದದ್ದೇ. ನಾನು ನ್ಯಾಯಸ್ಥಾನದಲ್ಲಿ ವಾದಿಸುವಂತೆ ಈಗಲೂ ವಾದಿಸಿ ನನ್ನ ನಡವಳಿಕೆ ಸರಿಯೆಂದು ತೋರಿಸಬೇಕು.

ಇದೇತಾನೆ ನಿನ್ನ ಅಭಿಪ್ರಾಯ, ಸಿಮಿಯಾಸ್ ?"

"ಹೌದು."

"ಸರಿ. ಹಾಗಾದರೆ, ನಾನು ನ್ಯಾಯಾಧಿಪತಿಗಳೆದುರಿಗೆ ವಹಿಸಿದ್ದಕ್ಕಿಂತ ಸ್ವಲ್ಪ ಹೆಚ್ಚು ತೊಂದರೆಯನ್ನು ವಹಿಸಿ, ನಿಮ್ಮ ಮನಸ್ಸು ಒಪ್ಪುವಂತೆ ಈ ವಿಷಯವನ್ನು ವಿಶದಪಡಿಸಲು ಯತ್ನಿಸುತ್ತೇನೆ. ಸತ್ತಮೇಲೆ ಇಲ್ಲಿಯ ದೇವತೆಗಳಂತೆಯೇ ಜ್ಞಾನಿಗಳಾದ ಮತ್ತು ಸತ್ಸ್ವಭಾವವುಳ್ಳ ಇತರ ದೇವತೆಗಳ ಸನ್ನಿಧಿಗೂ, ಇಲ್ಲಿಯ ಜನರಿಗಿಂತಲೂ ಉತ್ತಮರಾದ ಮೃತ ಜನರ ಬಳಿಗೂ ಹೋಗುವೆನೆಂಬ ನಂಬಿಕೆ ನನಗಿಲ್ಲದಿದ್ದರೆ, ನಾನು ಸಾವೆಂದರೆ ವ್ಯಸನಪಡಲೇಬೇಕು. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮುಂದಿನ ಲೋಕದಲ್ಲಿ ಸಜ್ಜನರ ಸಂಗ ದೊರಕುವುದೆಂದು ನಾನು ಕಂಠೋಕ್ತವಾಗಿ ಹೇಳಲಾರೆನಾದರೂ ನನಗೆ ಆ ನಿರೀಕ್ಷೆಯೇನೋ ಇದೆ. ಆದರೆ ಅಲ್ಲಿ ಶ್ರೇಷ್ಠರಾದ ದೇವತೆಗಳ ಸಾನ್ನಿಧ್ಯ ದೊರಕುವುದೆಂದು ಮಾತ್ರ ಈ ವಿಷಯಗಳಲ್ಲಿ ಎಷ್ಟು ಖಂಡಿತವಾಗಿ ಹೇಳಬಹುದೋ ಅಷ್ಟು ಖಂಡಿತವಾಗಿ ಹೇಳಬಲ್ಲೆ. ಆದ್ದರಿಂದಲೇ ನನಗೆ ಮರಣವೆಂದರೆ ದುಃಖ ವಿಲ್ಲದಿರುವುದು. ಸತ್ತವರಿಗೆ ಬೇರೆ ಒಂದು ಲೋಕವಿದೆಯೆಂದೂ ಹಿಂದಿ ನವರು ಹೇಳುತ್ತಿದ್ದಂತೆ ಅಲ್ಲಿ ದುರ್ಜನರಿಗಿಂತಲೂ ಸತ್ಪುರುಷರಿಗೆ ಹೆಚ್ಚುಸುಖವುಂಟೆಂದೂ ನನಗೆ ಭರವಸೆಯಿದೆ."

ಸಿಮಿಯಾಸ್ ಮತ್ತೆ ಕೇಳಿದನು: "ಸಾಕ್ರೆಟೀಸ್, ನಿನ್ನ ಅಭಿಪ್ರಾಯ ಗಳನ್ನು ನಿನ್ನಲ್ಲಿಯೇ ಅಡಗಿಸಿಕೊಂಡು ಹೋಗಬೇಕೆಂದಿರುವೆಯೋ ಅಥವಾ ನಮಗೂ ತಿಳಿಸುವೆಯೋ ? ಈ ವಿಷಯವನ್ನು ಚೆನ್ನಾಗಿ ತಿಳಿದು ಕೊಳ್ಳುವುದರಿಂದ ನಮ್ಮೆಲ್ಲರಿಗೂ ಒಳ್ಳೆಯದಾಗುವುದಲ್ಲದೆ ನಿನ್ನ ನಡ ವಳಿಕೆ ಸರಿಯೆಂದು ಸಮರ್ಥಿಸಿದಂತೆಯೂ ಆಗುವುದು."

"ಆಗಲಿ, ತಿಳಿಯಹೇಳಲು ಪ್ರಯತ್ನಿಸುತ್ತೇನೆ. ಕ್ರೈಟೊ ಅಷ್ಟು ಹೊತ್ತಿ ನಿಂದ ಏನೋ ಹೇಳಬೇಕೆಂದು ಕಾದಿರುವಂತೆ ತೋರುತ್ತದೆ. ಏನೆಂದು ಮೊದಲು ವಿಚಾರಿಸೋಣ. ಅದೇನು ಕ್ರೈಟೊ ?"

" ಏನೂ ಇಲ್ಲ, ಸಾಕ್ರೆಟೀಸ್. ನಿನಗೆ ವಿಷವನ್ನು ಕುಡಿಸಲು ನಿಯುಕ್ತ ನಾಗಿರುವವನು ನೀನು ಹೆಚ್ಚು ಮಾತಾಡದಂತೆ ಎಚ್ಚರಿಸಬೇಕೆಂದು

ನನಗೆ ಹೇಳುತ್ತಿದ್ದಾನೆ. ಮಾತಾಡುತ್ತಿದ್ದರೆ ಶರೀರದಲ್ಲಿ ಕಾವು ಹೆಚ್ಚಿ ವಿಷ ಸರಿಯಾಗಿ ವ್ಯಾಪಿಸುವುದಿಲ್ಲವಂತೆ. ಉದ್ವೇಗ ಹೆಚ್ಚಾಗಿದ್ದ ಕೆಲವರಿಗೆ ಎರಡು ಮೂರು ಸಲ ವಿಷ ಕುಡಿಸಬೇಕಾಯಿತಂತೆ.''

'' ಬಿಡು, ಆ ಯೋಚನೆ ನಮಗೇಕೆ? ತನ್ನ ಕೆಲಸವನ್ನು ತಾನು ಮಾಡಲಿ. ಎರಡು ಬಟ್ಟಲೋ ಮೂರು ಬಟ್ಟಲೋ ಎಷ್ಟು ಬೇಕೋ ಸಿದ್ಧ ಮಾಡಿಟ್ಟುಕೊಳ್ಳಲಿ.''

'' ನೀನು ಹೀಗೆ ಹೇಳುವೆಯೆಂದು ಬಲ್ಲೆ. ಆದರೂ ಅವನಿಗೆ ಸಮಾಧಾನವಾಗಲೆಂದು ನಿನಗೆ ವಿಷಯವನ್ನು ತಿಳಿಸಿದೆ.''

ಸಾಕ್ರೆಟೀಸನು '' ಅವನ ಮಾತೇನು, ಬಿಡು,'' ಎಂದು ಮತ್ತೆ ಚರ್ಚೆ. ಗಾರಂಭಿಸಿದನು. '' ಈಗ ನೀವು ನನ್ನ ನ್ಯಾಯಾಧಿಪತಿಗಳಾಗಿದ್ದೀರಿ. ನಿಜವಾಗಿ ಜಿಜ್ಞಾಸುವಾದವನು ಸಾವು ಬಂದಾಗ ಎದೆಗುಂದದೆ ಇರುವುದಕ್ಕೂ ಮುಂದಿನ ಲೋಕದಲ್ಲಿ ತನಗೆ ಶ್ರೇಯಸ್ಸುಂಟಾಗುವುದೆಂದು ನಂಬುವುದಕ್ಕೂ ಕಾರಣವಿದೆಯೆಂದು ನಿಮಗೆ ತೋರಿಸಿಕೊಡಬೇಕು. ಆಗಲಿ ಸೀಬೀಸ್, ಸಿಮಿಯಾಸ್, ನಿಮಗೆ ಇದನ್ನು ತಿಳಿಯಹೇಳಲು ಪ್ರಯತ್ನಪಡುತ್ತೇನೆ. ಸರಿಯಾದ ರೀತಿಯಲ್ಲಿ ತತ್ವಾನ್ವೇಷಣ ಮಾಡುವವರು ಸಾವಿನ ರಹಸ್ಯವನ್ನು ಪರಾಮರ್ಶಿಸುವುದರಲ್ಲಿಯೂ, ಬೆನ್ನಟ್ಟಿ ಹೋಗಿ ಸಾವನ್ನು ಹಿಡಿಯುವುದರಲ್ಲಿಯೂ ಮರಣಸ್ಥಿತಿಯ ಪರಿಭಾವನೆಯಲ್ಲಿಯೂ ತಮ್ಮ ಜೀವಮಾನವನ್ನು ಕಳೆಯುವರು. ಇದು ಸಾಧಾರಣ ಜನರಿಗೆ ತಿಳಿಯದು. ತಮ್ಮ ಜೀವಮಾನವೆಲ್ಲಾ ಸಾವನ್ನು ಬಯಸುತ್ತಿದ್ದು ಅದು ಸಿಕ್ಕಿದಾಗ ವ್ಯಸನಪಡುವುದು ಹುಚ್ಚುತನವಲ್ಲವೆ?''

ಸಿಮಿಯಾಸ್ ಇದನ್ನು ಕೇಳಿ ನಕ್ಕನು. '' ಸಾಕ್ರೆಟೀಸ್, ನನಗೆ ಈಗ ನಗು ಬರುವ ಹಾಗಿಲ್ಲ. ಆದರೆ ನೀನು ನಗುವ ಹಾಗೆ ಮಾಡಿಬಿಟ್ಟೆ. ಮುಂದಿಯೇನಾದರೂ ನಿನ್ನ ಮಾತುಗಳನ್ನು ಕೇಳಿದರೆ ನೀನು ಜಿಜ್ಞಾಸುಗಳನ್ನು ಸರಿಯಾಗಿಯೇ ವರ್ಣಿಸಿರುವೆಯೆಂದು ಹೇಳುತ್ತಾರೆ. ನಮ್ಮ ಮನೆಯವರು 'ಜಿಜ್ಞಾಸುಗಳು ಅಪೇಕ್ಷಿಸುವ ಬದುಕು ನಿಜವಾಗಿ ನೋಡಿದರೆ ಮರಣವೇ ಸರಿ, ಸಾಯಬೇಕೆನ್ನುವ ಈ ಜನರು ಸಾವಿಗೆ ಅರ್ಹರು. ಅದು ನಮಗೆ ಗೊತ್ತಾಗಿದೆ' ಎನ್ನುವರು.

"ಅವರು ಹೇಳುವುದು ನಿಜ, ಸಿಮಿಯಾಸ್. ಆದರೆ 'ಅದು ನಮಗೆ ಗೊತ್ತಾಗಿದೆ' ಎನ್ನುವುದು ಮಾತ್ರ ಸುಳ್ಳು. ಜಿಜ್ಞಾಸು ಅಪೇಕ್ಷಿಸುವ ಮರಣದ ಸ್ವಭಾವವೇನು? ಅವನು ಅದನ್ನು ಅಪೇಕ್ಷಿಸುವುದೇಕೆ? ಅವನು ಮರಣಕ್ಕೆ ಹೇಗೆ ಅರ್ಹ? ಇದೊಂದೂ ಅವರಿಗೆ ಗೊತ್ತಿಲ್ಲ. ಅವರ ಮಾತು ಹಾಗಿರಲಿ, ಇದನ್ನು ನಾವು ನಾವೇ ಚರ್ಚೆ ಮಾಡಿಕೊಳ್ಳೋಣ. ಈಗ ಸಾವೆನ್ನುವುದು ಇದೆಯೆಂದು ನಾವು ನಂಬುತ್ತೇವಲ್ಲವೆ, ಸಿಮಿಯಾಸ್?"

"ಸಂದೇಹವಿಲ್ಲದೆ."

"ಆತ್ಮವನ್ನೂ ಶರೀರವನ್ನೂ ಬೇರ್ಪಡಿಸುವುದೇ ಸಾವೆನ್ನುವುದು. ಸತ್ತಿರುವುದೆಂದರೆ, ಇವೆರಡೂ ಸಂಪೂರ್ಣವಾಗಿ ಬೇರ್ಪಟ್ಟ ಸ್ಥಿತಿ. ಮರಣಾನಂತರದ ಸ್ಥಿತಿಯೆಂದರೆ, ಆತ್ಮ ಶರೀರವನ್ನು ಬಿಟ್ಟು ತಾನೇ ಒಂಟಿಯಾಗಿರುವುದು ಮತ್ತು ಶರೀರ ಆತ್ಮವನ್ನು ಬಿಟ್ಟು ತಾನೂ ಒಂಟಿಯಾಗಿರುವುದು. ಸಾವೆಂದರೆ ಇದಲ್ಲದೆ ಮತ್ತೇನು?"

"ಅದೇ."

"ಹಾಗಾದರೆ ಈಗ ನಾನು ಹೇಳುವುದು ನಿನಗೆ ಒಪ್ಪಿಗೆಯೋ ನೋಡು ಒಪ್ಪಿಗೆಯಾದರೆ ಈ ವಿಷಯ ನಮಗೆ ಸ್ವಲ್ಪ ಸ್ಪಷ್ಟವಾಗಬಹುದು. ಜಿಜ್ಞಾಸುವಾದವನು ಭಕ್ಷ್ಯ, ಪಾನ ಮುಂತಾದ ಸಂತೋಷಗಳಿಗೆ —ಅವುಗಳನ್ನು ಸಂತೋಷವೆನ್ನಬಹುದಾದರೆ—ಮನಸ್ಸು ಕೊಡಬಹುದೆ?"

"ಕೂಡದು, ಸಾಕ್ರೆಟೀಸ್."

"ಅವನು ಪ್ರಣಯ ಸುಖಕ್ಕೆ ಆಸೆಪಡುವನೆ?"

"ಎಂದಿಗೂ ಇಲ್ಲ."

"ಅವನಿಗೆ ಶರೀರಸಂಬಂಧವಾದ ಇತರ ಸುಖಗಳಲ್ಲಿ, ಸೊಗಸಾದ ವಸ್ತ್ರಗಳು, ಅಂದವಾದ ಜೋಡು ಮೊದಲಾದ ಅಲಂಕಾರಗಳಲ್ಲಿ, ಆಸಕ್ತಿಯಿರುವುದೆ? ಜೀವನಕ್ಕೆ ಎಷ್ಟು ಅತ್ಯಾವಶ್ಯಕವೋ ಅದಕ್ಕಿಂತ ಹೆಚ್ಚಿನ ಸೌಖ್ಯವೆಂದರೆ ಅವನಿಗೆ ತಿರಸ್ಕಾರಭಾವವಿರುತ್ತದೆಯಲ್ಲವೆ?"

"ಆತನು ನಿಜವಾಗಿಯೂ ಜಿಜ್ಞಾಸುವಾದರೆ ಅವುಗಳನ್ನೆಲ್ಲಾ ತಿರಸ್ಕರಿಸುವನು."

"ಒಟ್ಟಿನಲ್ಲಿ ಇಂಥವನು ಶರೀರಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಮನಸ್ಸಿಡದೆ, ತನ್ನ ಕೈಯಲ್ಲಾದ ಮಟ್ಟಿಗೆ ಶರೀರವನ್ನು ಮರೆತು ಆತ್ಮಕ್ಕೇ ಗಮನ ಕೊಡುತ್ತಾನೆ ಎಂದು ಹೇಳಿದಹಾಗಾಯಿತು, ಅಲ್ಲವೆ?"

"ಹೌದು."

"ಇಂಥ ವಿಷಯಗಳಲ್ಲಿ ಜಿಜ್ಞಾಸು ಇತರ ಜನರಿಗಿಂತಲೂ ಹೆಚ್ಚಾಗಿ ಆತ್ಮಕ್ಕೂ ಶರೀರಕ್ಕೂ ಇರುವ ಸಂಸರ್ಗವನ್ನು ಕಡಮೆಮಾಡಿ ಅವುಗಳನ್ನು ಎಲ್ಲಾ ವಿಧಗಳಲ್ಲಿಯೂ ಬೇರೆ ಮಾಡುತ್ತಾನೆಂದು ಹೇಳಬಹುದಲ್ಲವೆ?"

"ನಿಜ."

"ಆದರೆ ಪ್ರಾಪಂಚಿಕ ಸುಖಗಳಲ್ಲಿ ಆಸಕ್ತಿಯಿಲ್ಲದಿರುವವನು ಜೀವಿಸಿದ್ದು ಪ್ರಯೋಜನವಿಲ್ಲವೆಂದೂ ಶರೀರ ಸುಖದಲ್ಲಿ ಅಭಿಲಾಷೆಯಿಲ್ಲದವನು ಇದ್ದರೂ ಸತ್ತಂತೆಯೇ ಎಂದೂ ಉಳಿದ ಜನರೆಲ್ಲಾ ಹೇಳುತ್ತಾರಲ್ಲವೆ?"

"ಅದೂ ನಿಜ."

"ಸರಿ. ಈಗ ಉತ್ತಮರೀತಿಯ ಜ್ಞಾನಾರ್ಜನೆಯ ವಿಷಯವಾಗಿ ಯೋಚನೆ ಮಾಡೋಣ. ಜ್ಞಾನಾರ್ಜನೆಯ ಕೆಲಸದಲ್ಲಿ ಶರೀರವೂ ಭಾಗಿಯಾದರೆ, ಅದರಿಂದ ಸಹಾಯುವಾಗುವುದೋ ವಿಘ್ನವಾಗುವುದೋ? ನಮ್ಮ ನೋಟ, ಕೇಳಿಕೆ ಇವುಗಳಲ್ಲಿ ಸತ್ಯವಿದೆಯೆ? ಅಥವಾ ಕವಿಗಳು ಸಾರುವಂತೆ ಕಿವಿಕಣ್ಣುಗಳಿಂದ ನಮಗೆ ನಿಷ್ಕೃಷ್ಟವಾದ ತಿಳಿವಳಿಕೆ ಬರುವುದಿಲ್ಲವೆನ್ನೋಣವೊ? ಇವೆರಡು ಇಂದ್ರಿಯಗಳೇ ನಿಷ್ಕೃಷ್ಟವಾದ ಜ್ಞಾನವನ್ನು ಕೊಡಲಾರವೆಂದಮೇಲೆ ಇತರ ಇಂದ್ರಿಯಗಳು ಕೊಡುವಂತೆಯೇ ಇಲ್ಲ; ಏಕೆಂದರೆ, ಕಿವಿಕಣ್ಣುಗಳು ಇತರ ಇಂದ್ರಿಯಗಳಿಗಿಂತ ಉತ್ತಮವಾದುವು. ನಾನು ಹೇಳುವುದೆಲ್ಲ ಸರಿಯಾಗಿ ತೋರುತ್ತದೆಯೆ?"

"ಹೌದು. ನೀನು ಹೇಳುವುದು ನಿಜ."

"ಹಾಗಾದರೆ, ನಮ್ಮ ಆತ್ಮ ಸತ್ಯವನ್ನು ತಿಳಿಯುವುದು ಯಾವಾಗ? ಶರೀರದ ಸಹವಾಸದಲ್ಲಿ ಸತ್ಯಾನ್ವೇಷಣಮಾಡಿದರೆ ಆತ್ಮ ಮೋಸಹೋಗುತ್ತದೆ, ಅಲ್ಲವೆ?"

"ಹೌದು."

"ಹಾಗೆಂದ ಮೇಲೆ ಸತ್ಯದ ಸ್ವರೂಪ ಆತ್ಮಕ್ಕೆ ಸ್ವಲ್ಪವಾದರೂ ಗೋಚರಿಸುವುದಾದರೆ, ಅದು ಪರಾಮರ್ಶೆಯಿಂದಲೇ ಆಗಬೇಕು ?"

"ನಿಜ."

"ಆದರೆ ಆತ್ಮ ಚೆನ್ನಾಗಿ ಆಲೋಚನೆ ಮಾಡುವುದು ಯಾವಾಗ ? ನೋಟ, ಶಬ್ದ, ಸುಖದುಃಖಗಳು—ಇವುಗಳ ತೊಂದರೆಯಿಲ್ಲದೆ, ಶರೀರದ ಸಹವಾಸವನ್ನೂ ಇಂದ್ರಿಯಗಳ ಆಸೆಗಳನ್ನೂ ಮರೆತು, ಅವನ್ನು ಸಾಧ್ಯವಾದ ಮಟ್ಟಿಗೆ ದೂರ ಮಾಡಿ, ಸತ್ಯಾನ್ವೇಷಣಕಾರ್ಯದಲ್ಲಿಯೇ ಆತ್ಮವು ಉತ್ಕಂಠಿತವಾಗಿರುವಾಗ ; ಅಲ್ಲವೆ?"

"ನಿಜ."

"ಹಾಗಾದರೆ, ಜಿಜ್ಞಾಸು ಈ ವಿಷಯದಲ್ಲಿ ಶರೀರವನ್ನು ಅಗೌರವದಿಂದ ಕಾಣುತ್ತಾನೆ. ಅವನ ಆತ್ಮ ಶರೀರವನ್ನು ಬಿಟ್ಟು ಓಡಿಹೋಗಿ ಅದರ ಸಂಪರ್ಕವಿಲ್ಲದೆಯೇ ತನ್ನಲ್ಲಿ ತಾನು ಇರಲು ಪ್ರಯತ್ನಿಸುತ್ತದೆ."

"ನಿಜ."

"ಸರಿ. ಈಗ ಇನ್ನೊಂದು ವಿಷಯವನ್ನು ಯೋಚಿಸಬೇಕು. ಪರಮ ನ್ಯಾಯ (Absolute Justice) ವೆನ್ನುವುದೊಂದು ಇದೆಯೆಂದು ಒಪ್ಪಬಹುದೆ ?"

"ಇದ್ದೇ ಇದೆ."

"ಪರಮ ಸೌಂದರ್ಯ, ಪರಮ ಸದ್ಗುಣ—ಇವುಗಳೋ ?"

"ಅವೂ ಇರುವುವು."

"ಆದರೆ ಇವುಗಳಲ್ಲಿ ಯಾವುದನ್ನಾದರೂ ನೀನು ಕಣ್ಣಿಂದ ನೋಡಿರುವೆಯಾ ?"

"ಇಲ್ಲ."

"ಅಥವಾ ನಿನ್ನ ಇತರ ಇಂದ್ರಿಯಗಳ ಮೂಲಕ ನಿನಗೆ ಅದರ ಅನುಭವವಾಗಿದೆಯೆ ? ನಾನು ಮಾತಾಡುತ್ತಿರುವುದು ಮೇಲೆ ಹೇಳಿದ ಎರಡು ಮೂರು ಗುಣಗಳ ವಿಷಯ ಮಾತ್ರವಲ್ಲ, ಇಂಥ ಗುಣಗಳೆಲ್ಲದರ ವಿಷಯ. ಪರಮ ಘನತೆ (Greatness), ಆರೋಗ್ಯ, ಬಲ—ಇವೆಲ್ಲದರ

ಮುಖ್ಯಸತ್ವದ, ಮುಖ್ಯಸ್ವರೂಪದ ವಿಷಯ. ಇವುಗಳ ಸತ್ಯಸ್ವಭಾವ ಶರೀರದ ಅವಯವಗಳ ಮತ್ತು ಇಂದ್ರಿಯಗಳ ಮೂಲಕ ಯಾವಾಗ ಲಾದರೂ ನಮ್ಮ ತಿಳಿವಳಿಕೆಗೆ ಬಂದಿದೆಯೆ? ಅದನ್ನು ವಿಚಾರಮಾಡಿ ನಿಷ್ಕೃಷ್ಟವಾಗಿ ತಿಳಿಯಬೇಕಾದರೆ, ನಮ್ಮ ಮನೋದೃಷ್ಟಿಯನ್ನು ಬಲಪಡಿಸಿಕೊಳ್ಳಬೇಕು; ಹಾಗೆ ಮಾಡಿದವನು ಮಾತ್ರ ಆ ವಿಷಯದಲ್ಲಿ ಏನಾದರೂ ತಿಳಿವಳಿಕೆಯನ್ನು ಪಡೆಯಬಹುದು, ಅಲ್ಲವೆ?"

"ನಿಜ."

"ಹಾಗಾದರೆ, ಕಣ್ಣುಕಿವಿಗಳು—ಒಟ್ಟು ಶರೀರವೆಲ್ಲಾ—ಆತ್ಮದ ಜೊತೆಗೆ ಸೇರಿದರೆ ಜ್ಞಾನಾರ್ಜನೆಗೆ ಅಡಚಣೆಯುಂಟಾಗುವುದೆಂದು ತಿಳಿದು ಜ್ಞಾನಪಡೆಯಲು ಅಪೇಕ್ಷಿಸುವವನು ಸಾಧ್ಯವಾದ ಮಟ್ಟಿಗೂ ವಸ್ತುಪರಿಶೀಲನ ಕಾರ್ಯದಲ್ಲಿ ತನ್ನ ಮನಶ್ಶಕ್ತಿಯನ್ನೇ ಉಪಯೋಗಿ ಸುತ್ತಾನೆ. ತನ್ನ ಆಲೋಚನೆಯೊಡನೆ ಇಂದ್ರಿಯ ವ್ಯಾಪಾರವೊಂದೂ ಬೆರೆಯದಂತೆ ನೋಡಿಕೊಂಡು ಪರಿಶುದ್ಧವಾದ ಮನಶ್ಶಕ್ತಿಯೊಂದರಿಂದಲೇ ವಸ್ತುಗಳ ಸ್ವಭಾವವನ್ನು ತಿಳಿಯಲು ಯತ್ನಿಸುತ್ತಾನೆ. ಅತ್ಯುತ್ತಮ ಜ್ಞಾನವನ್ನು ಪಡೆಯಬೇಕಾದರೆ, ಸತ್ಯದ ಸ್ವರೂಪವನ್ನು ತಿಳಿಯ ಬೇಕಾದರೆ, ಇಂಥವನಿಗಲ್ಲದೆ ಮತ್ತೆ ಯಾರಿಗೆ ಸಾಧ್ಯ?"

"ನೀನು ಹೇಳುವುದು ಸತ್ಯವಾದ ಮಾತು, ಸಾಕ್ರೆಟೀಸ್."

"ಇದನ್ನೆಲ್ಲಾ ಯೋಚಿಸಿದರೆ ಜಿಜ್ಞಾಸುಗಳು ತಮಗೆ ತಾವೇ ಹೀಗೆಂದು ಕೊಳ್ಳಬಹುದಲ್ಲವೆ? 'ನಮ್ಮ ಚರ್ಚೆಯಿಂದ ಒಂದು ವಿಷಯ ಸ್ಪಷ್ಟ ವಾದಂತೆ ತೋರುತ್ತದೆ. ನಾವು ಶರೀರದೊಡನೆ ಇರುವ ತನಕ, ನಮ್ಮ ಆತ್ಮಕ್ಕೆ ಶರೀರ ಸಂಬಂಧವಾದ ದುಷ್ಟಪದಾರ್ಥಗಳ ಸಂಪರ್ಕವಿರುವ ತನಕ, ಸತ್ಯವನ್ನು ತಿಳಿಯಬೇಕೆಂಬ ನಮ್ಮ ಇಚ್ಛೆ ಪೂರ್ಣವಾಗುವುದಿಲ್ಲ. ಶರೀರವು ಸದಾ ಪೋಷಕ ಸಾಮಗ್ರಿಗಳನ್ನು ಅಪೇಕ್ಷಿಸುತ್ತಾ ನಮ್ಮ ಗಮನವನ್ನು ತನ್ನ ಕಡೆಗೇ ಎಳೆಯುತ್ತಿರುತ್ತದೆ; ಅದನ್ನು ರೋಗರುಜಿನ ಗಳು ಬಂದು ಬಾಧಿಸಿದರೆ, ಆಗಲೂ ನಮ್ಮ ಸತ್ಯಾನ್ವೇಷಣಕಾರ್ಯಕ್ಕೆ ಅಡ್ಡಿಯಾಗುತ್ತದೆ. ಈ ಶರೀರವಿರುವುದರಿಂದ ರಾಗದ್ವೇಷಾದಿಗಳು, ಆಸೆ, ಭಯ, ಮೌಢ್ಯ ಅಜ್ಞಾನ—ಇವೆಲ್ಲವೂ ನಮ್ಮನ್ನು ಆವರಿಸುತ್ತವೆ.

ನಾವು ಯಾವ ವಿಷಯವನ್ನು ಯೋಚಿಸುವುದೂ ಅಸಾಧ್ಯವಾಗುತ್ತದೆ. ಲೋಕದಲ್ಲಿ ಪಕ್ಷಪ್ರತಿಪಕ್ಷಗಳು, ಪರಸ್ಪರ ವೈಷಮ್ಯ, ಕಲಹ, ಯುದ್ಧಗಳು—ಇವೆಲ್ಲಕ್ಕೂ ನಮ್ಮ ಶರೀರಸಂಬಂಧವಾದ ಆಸೆಗಳೇ ಕಾರಣ. ಏಕೆಂದರೆ, ಯುದ್ಧಕ್ಕೆ ಯಾವಾಗಲೂ ಹಣದ ಆಸೆಯೇ ಕಾರಣ; ಹಣದ ಆಸೆಗೆ ಶರೀರ ಸೌಖ್ಯದ ಆಸೆಯೇ ಕಾರಣ. ಹೀಗೆ ನಾವು ಶರೀರದ ಸೇವೆಯಲ್ಲಿ ನಿರತರಾಗಿರಬೇಕಾಗಿದೆ. ನಮಗೆ ಈ ಅಡಚಣೆಗಳಿರುವುದರಿಂದ ತತ್ವಾನ್ವೇಷಣೆಗೆ ಕಾಲವೇ ದೊರಕುವುದಿಲ್ಲ. ಇದೆಲ್ಲಕ್ಕಿಂತಲೂ ದೊಡ್ಡ ಸಂಕಟವೇನೆಂದರೆ—ನಮಗೆ ಆಲೋಚನೆ ಮಾಡಲು ಸ್ವಲ್ಪ ಅವಕಾಶವೇನಾದರೂ ಸಿಕ್ಕಿದರೂ, ನಮ್ಮ ದೇಹವು ಪ್ರತಿನಿಮಿಷವೂ ವಿಧವಿಧವಾದ ಗೊಂದಲವನ್ನೂ ಕಳವಳವನ್ನೂ ಅಡ್ಡ ಲಾಗಿ ಎಳೆದು ನಮ್ಮ ಆಲೋಚನೆಗೆ ಭಂಗವನ್ನು ತಂದು, ನಾವು ಸತ್ಯವನ್ನು ತಿಳಿಯದಂತೆ ಮಾಡುತ್ತದೆ. ನಮ್ಮ ಅನುಭವದಿಂದ ತಿಳಿಯಬರುವು ದೇನೆಂದರೆ—ನಾವೇನಾದರೂ ಶುದ್ಧವಾದ ಜ್ಞಾನವನ್ನು ಪಡೆಯ ಬೇಕಾದರೆ ನಮ್ಮ ಶರೀರವನ್ನು ಬಿಟ್ಟು ಆತ್ಮದ ಶಕ್ತಿಯಿಂದಲೇ ವಸ್ತುಗಳ ನಿಜಸ್ವಭಾವವನ್ನು ಹುಡುಕಬೇಕು; ಆತ್ಮದ ಚಕ್ಷುಸ್ಸಿನಿಂದಲೇ ಅದನ್ನು ನೋಡಬೇಕು. ಆದ್ದರಿಂದ ನಾವು ಅಪೇಕ್ಷಿಸುವ ಮತ್ತು ನಮಗೆ ಅತ್ಯಂತ ಪ್ರಿಯವೆಂದು ಹೇಳುವ ಜ್ಞಾನವನ್ನು ಜೀವಿಸಿರುವ ವರೆಗೆ ಪಡೆಯಲಾರೆವು; ಅದು ಮರಣಾನಂತರವೇ ಸಾಧ್ಯ. ಏಕೆಂದರೆ, ಪರಮಜ್ಞಾನವು ನಮ್ಮ ಶರೀರವಿರುವವರೆಗೆ ಸಾಧ್ಯವಿಲ್ಲದಿದ್ದರೆ, ಎರಡರಲ್ಲಿ ಒಂದು ವಿಷಯ ಸ್ಥಿರವಾದಂತಾಯಿತು; ಅಂಥ ಜ್ಞಾನವನ್ನು ಪಡೆಯುವುದೇ ಅಸಾಧ್ಯವಾಗಿರಬೇಕು, ಇಲ್ಲದಿದ್ದರೆ ಅದು ಮರಣವಾದ ಮೇಲೆಯೇ ಸಾಧ್ಯವಿರಬೇಕು—ಆತ್ಮವು ಶರೀರದ ಬಂಧನವನ್ನು ಬಿಡಿಸಿಕೊಂಡು ಸ್ವತಂತ್ರವಾಗಿರುವುದು ಮರಣವಾದ ಮೇಲೆಯೇ ಹೊರತು ಅದಕ್ಕೆ ಮುಂಚೆ ಅಲ್ಲ. ನಮ್ಮ ಜೀವಿತ ಕಾಲದಲ್ಲಿ, ಅಂದರೆ ದೇವರು ನಮ್ಮನ್ನು ಶರೀರದ ಸೆರೆಯಿಂದ ಬಿಡಿಸುವವರೆಗೂ, ನಾವು ಎಷ್ಟುಮಟ್ಟಿಗೆ ಶರೀರಸಂಪರ್ಕವನ್ನು ಬಿಟ್ಟು, ಮನಸ್ಸೆಲ್ಲವೂ ಶರೀರದ ಸ್ವಭಾವದಿಂದಲೇ ತುಂಬಿಹೋಗಿ ಕಲುಷಿತವಾಗದಂತೆ ಎಚ್ಚರಿಕೆ

ಯಿಂದಿರುವೆವೋ ಅಷ್ಟುಮಟ್ಟಿಗೆ ನಮಗೆ ಜ್ಞಾನಸಂಪಾದನೆಯೂ ಸುಲಭವಾಗುವುದು. ಹೀಗೆ ಶರೀರದ ಮೂಢತನದಿಂದ ಬಿಡುಗಡೆಹೊಂದಿ ಶುದ್ಧಾತ್ಮರಾಗಿದ್ದರೆ, ನಮಗೆ ಪರಿಶುದ್ಧರಾದವರ ಸಂಗ ದೊರಕುವುದಲ್ಲದೆ ಪರಿಶುದ್ಧವಾದದ್ದನ್ನು ನಾವೇ ಕಂಡುಕೊಳ್ಳುವೆವು; ಅದೇ ಸತ್ಯವೂ ಆಗಿರಬಹುದು. ಅಪರಿಶುದ್ಧರಾದವರು ಪರಿಶುದ್ಧವಾದದ್ದರ ಹತ್ತಿರ ಬರಲಾರರು.' ಜ್ಞಾನಾಭಿಲಾಷಿಗಳು ಒಬ್ಬರಿಗೊಬ್ಬರು ಹೀಗೆ ಹೇಳಿಕೊಳ್ಳಬೇಕಾಗುತ್ತದೆ. ನಾನು ಇದುವರೆಗೆ ಹೇಳಿದ್ದಕ್ಕೆಲ್ಲಾ ಒಪ್ಪುತ್ತೀಯಾ, ಸಿಮಿಯಾಸ್?"

"ನಿಸ್ಸಂದೇಹವಾಗಿ."

"ಇದು ನಿಜವಾದರೆ, ಸಿಮಿಯಾಸ್, ನನ್ನ ಜೀವಮಾನವೆಲ್ಲಾ ಹುಡುಕುತ್ತಿದ್ದುದನ್ನು ನಾನು ಮರಣವಾದ ಮೇಲೆ ಎಲ್ಲಿಗೆ ಹೋಗುವೆನೋ ಅಲ್ಲಿ ಪಡೆಯುವೆನೆಂದು ನಿರೀಕ್ಷಿಸಲು ಕಾರಣವಿದೆ. ಆದ್ದರಿಂದ ನಾನು ಸಂತೋಷದಿಂದ ಪ್ರಯಾಣ ಮಾಡುವೆನು. ನಾನೊಬ್ಬನೇ ಅಲ್ಲ, ತಮ್ಮ ಮನಸ್ಸು ಶುದ್ಧಿಹೊಂದಿ ಸಿದ್ಧವಾಗಿದೆಯೆಂದು ತಿಳಿದಿರುವವರೆಲ್ಲರೂ ಹೀಗೆಯೇ ಸಂತೋಷದಿಂದ ಹೊರಡುವರು."

"ಹೌದು, ಸಾಕ್ರೆಟೀಸ್."

"ಶುದ್ಧಿ ಹೊಂದುವುದೆಂದರೆ ನಾನು ಮೊದಲು ಹೇಳಿದಂತೆ ಶರೀರವೂ ಆತ್ಮವೂ ಬೇರೆಯಾಗುವುದಲ್ಲದೆ ಮತ್ತೇನು? ಆತ್ಮವು ಶರೀರದ ಎಲ್ಲಾ ಕಡೆಗಳಿಂದಲೂ ತನ್ನ ಸತ್ವವನ್ನು ಎಳೆದು ಕೂಡಿಹಾಕಿಕೊಳ್ಳುವುದು; ಮುಂದಿನ ಜನ್ಮದಲ್ಲಿ ಹೇಗೋ ಈಗಲೂ ಹಾಗೆಯೇ ಸಾಧ್ಯವಾದ ಮಟ್ಟಿಗೂ ತನ್ನ ಸ್ಥಳದಲ್ಲಿ ತಾನೊಂದೇ ವಾಸಿಸುವುದು; ಒಟ್ಟಿನಲ್ಲಿ ಶರೀರದ ಸಂಕಲೆಗಳಿಂದ ಬಿಡುಗಡೆಹೊಂದುವುದು—ಶುದ್ಧಿಹೊಂದುವುದೆಂದರೆ ಇದೇ ಅಲ್ಲವೆ?"

"ನಿಶ್ಚಯ."

"ಹೀಗೆ ಆತ್ಮವು ಶರೀರದಿಂದ ಬೇರೆಯಾಗಿ ಬಿಡುಗಡೆಹೊಂದುವುದನ್ನೇ ನಾವು ಸಾವೆಂದು ಕರೆಯುವುದು."

" ಹೌದು. "

" ನಿಜವಾದ ಜಿಜ್ಞಾಸುಗಳು ಮಾತ್ರ ಆತ್ಮದ ಬಂಧವಿಮೋಚನೆಯನ್ನು ಸರ್ವದಾ ತಮ್ಮ ಗುರಿಯಾಗಿಟ್ಟುಕೊಂಡಿರುವರು. ಆತ್ಮವನ್ನು ಶರೀರದಿಂದ ಪ್ರತ್ಯೇಕಿಸಿ ಬಿಡುಗಡೆ ಮಾಡುವುದೇ ಅವರ ಜೀವನದ ಮುಖ್ಯಪ್ರಯತ್ನ ವಲ್ಲವೆ ? "

" ಹೌದು. "

"ಹಾಗಾದರೆ, ನಾನು ಮೊದಲು ಹೇಳಿದಂತೆ, ಒಬ್ಬನು ಜೀವಮಾನವೆಲ್ಲಾ ತನ್ನ ಕೈಯಲ್ಲಾದಮಟ್ಟಿಗೆ ಮರಣದ ಸ್ಥಿತಿಯಲ್ಲೇ ಜೀವಿಸಲು ಅಭ್ಯಾಸ ಮಾಡುತ್ತಿದ್ದು ಕೊನೆಗೆ ಮರಣಬಂದಾಗ ವ್ಯಸನಪಡುವುದು ಶುದ್ಧ ಅವಿವೇಕವಲ್ಲವೆ? "

" ನೀನು ಹೇಳುವುದು ನಿಜ. "

"ನಿಜವಾಗಿ ಜಿಜ್ಞಾಸುಗಳಾದವರು ಮರಣವೆಂಬುದನ್ನು ಯಾವಾಗಲೂ ಅಭ್ಯಾಸಮಾಡುತ್ತಿರುವರು. ಆದ್ದರಿಂದಲೇ ಅವರಿಗೆ ಇತರರಿಗಿರುವಂತೆ ಮರಣವೆಂದರೆ ಹೆದರಿಕೆಯಿಲ್ಲ. ಈ ವಿಷಯವನ್ನು ನಾನು ಹೇಳುವ ರೀತಿ ಯಲ್ಲಿ ಪರ್ಯಾಲೋಚಿಸಿ ನೋಡು, ಸಿಮಿಯಾಸ್. ಅವರು ಶರೀರಕ್ಕೆ ಎಲ್ಲಾ ವಿಧದಲ್ಲಿಯೂ ಶತ್ರುಗಳು ; ಆತ್ಮವನ್ನು ಒಂಟಿಯಾಗಿಟ್ಟುಕೊಳ್ಳ ಬೇಕೆಂಬುದೇ ಅವರ ಇಚ್ಛೆ. ಸಾವು ಬಂದರೆ ಈ ಇಚ್ಛೆ ಪೂರ್ಣವಾಗುವುದು; ತಾವು ಜೀವಮಾನವೆಲ್ಲಾ ಬಯಸುತ್ತಿದ್ದ ಜ್ಞಾನವು ದೊರಕುವ ಸ್ಥಳಕ್ಕೆ ಅವರು ಪ್ರಯಾಣಮಾಡಬಹುದು ; ಅಲ್ಲದೆ ತಮ್ಮ ಶತ್ರುವಿನ ಸಹವಾಸ ದಿಂದ ಬಿಡುಗಡೆಹೊಂದಬಹುದು. ಇಂಥ ಸಮಯ ಒದಗಿದಾಗ ಅವರು ಆನಂದಪಡದೆ ಹೆದರಿ ವ್ಯಸನಪಡುವುದು ಶುದ್ಧ ಮೂಢತನವಲ್ಲವೆ? ಎಷ್ಟೋ ಜನರು ತಮ್ಮ ಇನಿಯಳೋ ಹೆಂಡತಿಯೋ ಮಗನೋ ಸತ್ತು ಹೋದಾಗ, ಪರಲೋಕದಲ್ಲಿ ಅವರನ್ನು ಕಾಣಬಹುದು, ಅವರೊಡನೆ ಮಾತಾಡಬಹುದು ಎಂಬ ನಿರೀಕ್ಷೆಯಿಂದ ತಾವೂ ಪ್ರಾಣವನ್ನು ತ್ಯಜಿಸಿ ಆ ಲೋಕಕ್ಕೆ ಹೋಗಿರುವರು. ಜಿಜ್ಞಾಸುವಿಗಾದರೋ ಜ್ಞಾನವೇ ಇನಿಯಳು ; ಆಕೆಯನ್ನು ಪರಲೋಕದಲ್ಲಿ ಮಾತ್ರವೇ ಹೊಂದಬಹು ದೆನ್ನುವುದು ಅವನ ದೃಢವಾದ ನಂಬಿಕೆ. ಹೀಗಿರುವಾಗ ಅವನು ಸಾವು

ಬಂದರೆ ಆ ಲೋಕವನ್ನು ಬೇಗ ಸೇರಬಹುದೆಂದು ಸಂತೋಷದಿಂದ ಹೊರಡದೆ ದುಃಖಪಡುವುದುಂಟೆ? ಇಲ್ಲ. ಸಿಮಿಯಾಸ್, ಅವನು ನಿಜವಾಗಿಯೂ ಜಿಜ್ಞಾಸುವಾದರೆ ಎಂದಿಗೂ ಹಾಗೆ ಮಾಡುವುದಿಲ್ಲ; ಏಕೆಂದರೆ, ತಾನು ಅಪೇಕ್ಷಿಸುವ ಪರಮಜ್ಞಾನ ಪರಲೋಕದಲ್ಲಿ ಹೊರತು ಮತ್ತೆಲ್ಲಿಯೂ ದೊರಕುವುದಿಲ್ಲವೆಂದು ಅವನು ಚೆನ್ನಾಗಿ ಬಲ್ಲನು. ಇಂಥವರು ಮರಣಕ್ಕೆ ಅಂಜುವುದು ನಾನು ಮೊದಲೇ ಹೇಳಿದಂತೆ ಮೌಢ್ಯವಲ್ಲವೆ?"

"ಹೌದು."

"ಇದರಿಂದ ಯಾವನಾದರೂ ಮರಣಕ್ಕೆ ಅಂಜುವನೆಂದು ತಿಳಿದು ಬಂದರೆ ಅವನಿಗೆ ನಿಜವಾಗಿಯೂ ಜ್ಞಾನದಲ್ಲಿ ಪ್ರೇಮವಿಲ್ಲವೆಂದೂ ಶರೀರದಲ್ಲಿಯೇ ಪ್ರೇಮವೆಂದೂ ವ್ಯಕ್ತವಾಗುವುದಿಲ್ಲವೆ? ಅವನಿಗೆ ಧನದಲ್ಲಿಯೋ ದರ್ಪದಲ್ಲಿಯೋ ಆಸಕ್ತಿ ಹೆಚ್ಚು; ಬಹುಶಃ ಅವೆರಡರಲ್ಲಿಯೂ ಆಸಕ್ತಿ ಇರಬಹುದು."

"ನಿನ್ನ ಮಾತು ನಿಜ."

"ಧೈರ್ಯವೆನ್ನುವುದು ಇತರ ಜನರಿಗಿಂತಲೂ ಜಿಜ್ಞಾಸುವಿಗೆ ಸ್ವಾಭಾವಿಕವಾದ ಗುಣವಲ್ಲವೆ?"

"ಹೌದು."

"ಆತ್ಮಸಂಯಮವೋ? ಸಾಧಾರಣ ಜನಗಳ ದೃಷ್ಟಿಯಲ್ಲೂ ಕೂಡ ಆತ್ಮಸಂಯಮವೆಂದರೆ ರಾಗದ್ವೇಷಾದಿಗಳನ್ನು ಹದದಲ್ಲಿಟ್ಟುಕೊಂಡು ಅವುಗಳನ್ನು ಆಳುವುದಲ್ಲವೆ? ಸಾಧ್ಯವಾದಮಟ್ಟಿಗೆ ಶರೀರವನ್ನು ನಿರಾಕರಿಸಿ ತತ್ವಾನ್ವೇಷಣ ಕಾರ್ಯದಲ್ಲಿಯೇ ಜೀವನವನ್ನು ಕಳೆಯುವವರಲ್ಲಿ ಮಾತ್ರ ಈ ಗುಣ ಕಂಡು ಬರುತ್ತದೆ."

"ಹೌದು."

"ಇತರರಲ್ಲಿ ಧೈರ್ಯ, ಆತ್ಮಸಂಯಮ ಮುಂತಾದ ಗುಣಗಳು ಕಂಡು ಬಂದಂತೆ ತೋರಿದರೂ ಅವುಗಳನ್ನು ಪರಿಶೀಲಿಸಿ ನೋಡಿದರೆ, ಅವು ತಮಗೆ ತಾವೇ ವಿರುದ್ಧವಾಗಿರುವಂತೆ ಕಾಣುವುವು."

"ಅದು ಹೇಗೆ, ಸಾಕ್ರಟೀಸ್?"

"ಇತರ ಜನರು ಸಾಧಾರಣವಾಗಿ ಮರಣವನ್ನು ಮನುಷ್ಯನಿಗೆ ಸಂಭವಿಸುವ ಮಹಾವಿಪತ್ತುಗಳಲ್ಲಿ ಒಂದಾಗಿ ಎಣಿಸುತ್ತಾರಲ್ಲವೆ?"

"ನಿಜ."

"ಧೈರ್ಯಶಾಲಿಗಳು ಮರಣವನ್ನು ಎದುರಿಸುವುದು ಅದಕ್ಕಿಂತಲೂ ದೊಡ್ಡ ವಿಪತ್ತುಗಳು ಸಂಭವಿಸಬಹುದೆಂಬ ಭೀತಿಯಿಂದಲ್ಲವೆ?"

"ಹೌದು."

"ಹಾಗಾದರೆ ಜಿಜ್ಞಾಸುವಿನ ಹೊರತು ಉಳಿದವರೆಲ್ಲರೂ ಧೈರ್ಯವಾಗಿರುವುದು ಭೀತಿಯಿಂದ, ತಮಗೆ ಹೆದರಿಕೆಯಿರುವುದರಿಂದ. ಆದರೂ ಅವರು ಭಯದಿಂದಲೂ ಹೇಡಿತನದಿಂದಲೂ ಧೈರ್ಯಶಾಲಿಗಳಾಗಿದ್ದಾರೆಂದು ಹೇಳಿದರೆ ಬಹು ವಿಚಿತ್ರವಾಗಿ ಕಾಣುವುದಿಲ್ಲವೇ?"

"ಹೌದು."

"ಸಾಧಾರಣ ಜನರಲ್ಲಿ ಆತ್ಮಸಂಯಮವುಳ್ಳಂತೆ ತೋರುವವರ ಸ್ಥಿತಿಯೂ ಹೀಗೆಯೇ ಅಲ್ಲವೆ? ಅವರು ತಮ್ಮನ್ನು ತಾವು ಹಿಡಿತದಲ್ಲಿಟ್ಟುಕೊಂಡಿರುವುದು ಒಂದು ಬಗೆಯ ಲೋಲುಪತೆಯಿಂದ. ಇದು ಅಸಂಭವವೆಂದು ನಮಗೆ ತೋರಿದರೂ ಇಂಥ ಜನರ ಮೂಢಸಂಯಮವು ಪರ್ಯವಸಾನವಾಗುವುದೇನೋ ಅಷ್ಟರಲ್ಲೇ. ತಾವು ಬಹಳ ಬಯಸುವ ಕೆಲವು ಸುಖಗಳು ಎಲ್ಲಿ ದೊರಕದೆ ಹೋಗುವುವೋ ಎಂಬ ಹೆದರಿಕೆ ಅವರಿಗೆ ಹೆಚ್ಚಾಗಿರುವುದು. ಈ ಸುಖಗಳ ಬಲೆಗೆ ಬಿದ್ದಿರುವುದರಿಂದಲೇ ಅವರು ಇತರ ಸುಖಗಳ ಗೊಡವೆಗೆ ಹೋಗುವುದಿಲ್ಲ. ಲೋಲುಪತೆಯೆಂದರೆ ಸುಖಕ್ಕೆ ದಾಸನಾಗಿರುವುದೆಂದರ್ಥ. ಆದರೆ ಈ ಜನರು ಸುಖವನ್ನು ಜಯಿಸುವುದು ಸುಖ ಅವರನ್ನು ಜಯಿಸಿದಾಗಲೇ—ಅವರು ಒಂದು ಸುಖದ ಆಸೆಯಿಂದ ಮತ್ತೊಂದು ಸುಖವನ್ನು ಜಯಿಸುವರು. ಅದಕ್ಕೇ ಅವರ ಸಂಯಮ ಲೋಲುಪತೆಯಿಂದಲೇ ಬರುತ್ತದೆ ಎಂದು ನಾನು ಹೇಳಿದ್ದು."

"ಹಾಗೇ ತೋರುತ್ತದೆ."

"ನೋಡು ಸಿಮಿಯಾಸ್, ಒಂದು ಭಯಕ್ಕೆ ಬದಲಾಗಿ ಮತ್ತೊಂದು ಭಯವನ್ನು ಪಡೆಯುವುದು, ಒಂದು ದುಃಖಕ್ಕೆ ಬದಲಾಗಿ ಮತ್ತೊಂದು

ದುಃಖವನ್ನು ಪಡೆಯುವುದು, ಒಂದು ಸುಖಕ್ಕೆ ಬದಲಾಗಿ ಮತ್ತೊಂದು ಸುಖವನ್ನು ಪಡೆಯುವುದು, ನಮಗೆ ಕಡಮೆ ಬೆಲೆಯುಳ್ಳದ್ದನ್ನು ಕೊಟ್ಟು ಹೆಚ್ಚು ಬೆಲೆಯುಳ್ಳದ್ದನ್ನು ಪಡೆಯುವುದು—ಹೀಗೆ ನಾಣ್ಯಗಳನ್ನು ಕೊಟ್ಟು ಪದಾರ್ಥಗಳನ್ನು ಕೊಳ್ಳುವಂತೆ ಸದ್ಗುಣವನ್ನು ಕೊಳ್ಳಲಾಗುವುದಿಲ್ಲ. ಇವೆಲ್ಲಕ್ಕೂ ಬೆಲೆಯಾಗಿ ತೆಗೆದುಕೊಳ್ಳಬಹುದಾದ ಒಂದೇ ಒಂದು ಉತ್ತಮವಾದ ನಾಣ್ಯವಿದೆ–ಅದು ಜ್ಞಾನ. ಧರ್ಮವಾಗಲಿ ಧೈರ್ಯವಾಗಲಿ ಸಂಯಮವಾಗಲಿ, ಜ್ಞಾನಕ್ಕೋಸ್ಕರ ಮತ್ತು ಜ್ಞಾನದೊಡನೆ ಕೊಂಡು ಮಾರಿದ್ದಾದರೆ ಅದು ಸತ್ಯವಾದ ಗುಣ. ಒಟ್ಟಿನಲ್ಲಿ ಜ್ಞಾನವಿಲ್ಲದೆ ಸದ್ಗುಣ ಅಸಾಧ್ಯ ; ಸುಖ, ಭಯ ಮೊದಲಾದುವು ಇದ್ದರೂ ಒಂದೇ, ಇಲ್ಲದಿದ್ದರೂ ಒಂದೇ. ಮೊದಲು ಹೇಳಿದಂತೆ ಸುಖ, ಭಯ ಮೊದಲಾದುವುಗಳ ಬೆಲೆಯಿಂದಲುಂಟಾದ, ಜ್ಞಾನರಹಿತವಾದ 'ಸದ್ಗುಣ' ಎಂದು ಹೇಳಿಸಿಕೊಳ್ಳುವ ಗುಣವು ನಿಜವಾಗಿಯೂ ಸದ್ಗುಣದ ನೆರಳೇ ಹೊರತು ಮತ್ತೇನೂ ಅಲ್ಲ ; ಅದರಲ್ಲಿ ಸ್ವಾತಂತ್ರ್ಯವಿಲ್ಲ, ಆರೋಗ್ಯವಿಲ್ಲ, ಸತ್ಯವಿಲ್ಲ. ಭಯ, ಸುಖ ಮೊದಲಾದುವುಗಳಿಂದ ಪರಿಶುದ್ಧಿಯನ್ನು ಪಡೆಯುವುದೇ ನಿಜವಾದ ಸದ್ಗುಣ. ಸಂಯಮ, ಧರ್ಮ, ಧೈರ್ಯ, ಕೊನೆಗೆ ಜ್ಞಾನವೂ ಕೂಡ, ಆತ್ಮವನ್ನು ಪರಿಶುದ್ಧವಾಗಿ ಮಾಡುವುವು. ನಮ್ಮಲ್ಲಿ ಮತಸಂಬಂಧವಾದ ರಹಸ್ಯ ವ್ರತಗಳನ್ನೇರ್ಪಡಿಸಿದವರು ಒಂದು ಉದ್ದೇಶವಿಟ್ಟುಕೊಂಡೇ ಹಾಗೆ ಮಾಡಿದರು. ಅವರು ತಮ್ಮ ಸಾಮತಿಗಳಲ್ಲಿ 'ಯಾವನು ಉಪದೇಶವಿಲ್ಲದೆ ಪವಿತ್ರತೆಯನ್ನು ಪಡೆಯದೆ ಪರಲೋಕಕ್ಕೆ ಹೋಗುವನೋ ಅವನು ಕೆಸರಿನಲ್ಲಿ ಬಿದ್ದಿರುವನು ; ಜ್ಞಾನವನ್ನು ಪಡೆದು ಪರಿಶುದ್ಧನಾಗಿ ಹೋಗುವವನು ದೇವತೆಗಳ ಸಹವಾಸವನ್ನು ಹೊಂದುವನು' ಎಂದು ಹೇಳಿರುವರು. ಅವರು ಹೇಳಿರುವುದನ್ನು ಕೇಳು. 'ಥರ್ಸಸ್ ದಂಡವನ್ನು ಹಿಡಿದಿರುವವರು ಬಹಳ; ಆದರೆ ಆವೇಶವನ್ನು ಪಡೆದಿರುವವರು ಬಹು ವಿರಳ.' ಆವೇಶವನ್ನು ಪಡೆದಿರುವವರೆಂದರೆ, ನಿಜವಾದ ಜಿಜ್ಞಾಸುಗಳೆಂದೇ ನನಗೆ ತೋರುತ್ತದೆ. ಇಂಥವರಲ್ಲಿ ನಾನೂ ಒಬ್ಬನಾಗಬೇಕೆಂದು ಜೀವಾವಧಿ ನನ್ನ ಕೈಯಲ್ಲಾದ ಪ್ರಯತ್ನವನ್ನೆಲ್ಲಾ ಮಾಡಿದ್ದೇನೆ. ಸರಿಯಾದ ರೀತಿಯಲ್ಲಿ ಪ್ರಯತ್ನ ಮಾಡಿರುವೆನೋ ಇಲ್ಲವೋ ನನ್ನ ಪ್ರಯತ್ನಗಳು ಸಫಲವಾಗುವುವೋ

ಇಲ್ಲವೋ ನನಗೆ ಈಗ ತಿಳಿಯದು; ಆದರೆ ಭಗವಂತನ ಇಚ್ಛೆಯಿದ್ದರೆ ಸದ್ಯದಲ್ಲೇ ನಾನೂ ಪರಲೋಕಕ್ಕೆ ಹೋದಾಗ ತಿಳಿಯಬಹುದು. ನಾನು ನಿಮ್ಮನ್ನೂ ನನ್ನ ಇಲ್ಲಿಯ ಯಜಮಾನರನ್ನೂ ಬಿಟ್ಟುಹೋಗಲು ವ್ಯಸನ ಪಡದೆ ಇರುವುದಕ್ಕೆ ಇವೇ ಕಾರಣಗಳು. ಪರಲೋಕದಲ್ಲಿ ಇಲ್ಲಿಯಂತೆಯೇ ಉತ್ತಮರಾದ ಮಿತ್ರರೂ ಯಜಮಾನರೂ ಸಿಕ್ಕುವರು. ಮಂದಿ ಇದನ್ನು ನಂಬದಿದ್ದರೂ ನನಗೇನೋ ಆ ನಂಬಿಕೆಯಿದೆ. ನನ್ನ ನಡವಳಿಕೆ ಸರಿಯೆಂದು ಸಮರ್ಥಿಸಿದ್ದು ಅಥೆನ್ಸಿನ ನ್ಯಾಯಾಧಿಪತಿಗಳೆದುರಿನಲ್ಲಿ ಆದದ್ದಕ್ಕಿಂತ ಈಗ ಹೆಚ್ಚು ಫಲಕಾರಿಯಾದರೆ ಸಂತೋಷ."

ಸಾಕ್ರೆಟೀಸನು ತನ್ನ ಮಾತನ್ನು ಮುಗಿಸಿದ ಮೇಲೆ ಸೀಬೀಸ್ ಹೀಗೆ ಉತ್ತರಕೊಟ್ಟನು: "ಸಾಕ್ರೆಟೀಸ್, ನೀನು ಹೇಳುವುದೆಲ್ಲ ಬಹುಮಟ್ಟಿಗೆ ಸರಿಯೆಂದು ನಾನು ಒಪ್ಪುತ್ತೇನೆ. ಆದರೆ ನೀನು ಆತ್ಮದ ವಿಷಯವನ್ನು ಹೇಳಿದೆಯಲ್ಲ, ಅದರಲ್ಲಿ ಮಾತ್ರ ಜನರಿಗೆ ಬಹಳ ಸಂಶಯ. ಆತ್ಮವು ಶರೀರವನ್ನು ಬಿಟ್ಟಮೇಲೆ ಅದಕ್ಕೆ ಬೇರೆ ಜೀವವಿಲ್ಲವೆಂದೂ ಅದು ಮರಣವಾದಮೇಲೆ ತಾನೂ ಜೀವರಹಿತವಾಗಿ ನಾಶಹೊಂದುವುದೆಂದೂ ಅವರು ಭಯಪಡುವರು. ಆತ್ಮವು ಬಂಧನದಿಂದ ಬಿಡುಗಡೆಹೊಂದಿ ಶರೀರವನ್ನು ಬಿಟ್ಟೊಡನೆಯೇ ಗಾಳಿಯಂತೆಯೋ ಹೊಗೆಯಂತೆಯೋ ಹಾರಿಹೋಗಿ, ಅದೃಶ್ಯವಾಗಿ, ಶೂನ್ಯವಾಗಿ ಹೋಗುವುದೆಂದು ಅವರು ಭಾವಿಸುತ್ತಾರೆ. ನೀನು ಸ್ವಲ್ಪ ಹೊತ್ತಿನ ಕೆಳಗೆ ಹೇಳಿದ ಅನಿಷ್ಟಗಳಿಂದ ಬಿಡುಗಡೆಹೊಂದಿ ಆತ್ಮವು ಎಲ್ಲಿಯಾದರೂ ಒಂದು ಕಡೆ ಪೂರ್ಣರೂಪದಲ್ಲಿ ಇರುವುದಾದರೆ, ನೀನು ಹೇಳುವುದೆಲ್ಲವೂ ನಿಜವೆಂದು ನಂಬುವುದಕ್ಕೆ ಸಾಕಾದಷ್ಟು ಕಾರಣ ಸಿಕ್ಕಿದಂತಾಗುತ್ತದೆ. ಆದರೆ ಮರಣವಾದ ಮೇಲೆ ಆತ್ಮ ಇನ್ನೂ ಉಳಿದಿರುವುದೆಂದೂ ಶಕ್ತಿಯುಕ್ತವಾಗಿಯೂ ಜ್ಞಾನಯುಕ್ತವಾಗಿಯೂ ಇರುವುದೆಂದೂ ದೃಢಪಡಿಸಿಕೊಡಬೇಕಾದರೆ ಬಹಳ ಚರ್ಚೆ ಆವಶ್ಯಕವೆಂದು ತೋರುತ್ತದೆ."

"ನಿಜ, ಸೀಬೀಸ್. ಅದಕ್ಕೆ ನಾವೇನು ಮಾಡೋಣ? ಈಗ ನೀನು ನನ್ನೊಡನೆ ಈ ವಿಷಯವಾಗಿ ಮಾತಾಡಿ ನಾನು ಹೇಳುವುದು ಯುಕ್ತವಾಗಿ ತೋರುತ್ತದೆಯೇ ಎಂದು ನೋಡುವೆಯಾ?"

"ನನಗೇನೋ ನಿನ್ನ ಅಭಿಪ್ರಾಯವೇನೆಂಬುದನ್ನು ತಿಳಿಯಲು ಬಹಳ ಇಚ್ಛೆಯಿದೆ."

ಸಾಕ್ರೆಟೀಸ್ ಚರ್ಚೆಯನ್ನು ಮುಂದುವರಿಸಿದನು. "ಈಗ ನನ್ನ ಮಾತುಗಳನ್ನು ಕೇಳುವವರು ಯಾರೇ ಆಗಲಿ—ನನ್ನ ಹಳೆಯ ಶತ್ರುಗಳಾದ ಹಾಸ್ಯ ನಾಟಕಕಾರರಾದರೂ ಸರಿಯೆ—ನಾನು ನನಗೆ ಸಂಬಂಧಪಡದ ವಿಷಯಗಳನ್ನು ಕುರಿತು ಕಾಲಕಳೆಯುವುದಕ್ಕೆ ಹರಟೆಹೊಡೆಯುತ್ತಿದ್ದೇನೆಂದು ಹೇಳಲಾರರು. ನಿನಗೆ ಇಷ್ಟವಿದ್ದರೆ ಈ ಸಮಸ್ಯೆಯನ್ನು ವಿಚಾರ ಮಾಡಿ ನೋಡೋಣ. ಜನರ ಆತ್ಮಗಳು ಮರಣಾನಂತರ ಪರಲೋಕದಲ್ಲಿ ಜೀವಿಸಿರುವುವೇ ಎಂಬ ವಿಷಯವನ್ನು ಈ ರೀತಿ ಚರ್ಚಿಸಬಹುದು. ನಮಗೆ ನೆನಪಿರುವಂತೆ, ಆತ್ಮವು ಈ ಪ್ರಪಂಚವನ್ನು ಬಿಟ್ಟಮೇಲೆ ಆ ಲೋಕದಲ್ಲಿರುವುದೆಂದೂ ಅಲ್ಲಿಂದ ಪುನಃ ಇಲ್ಲಿಗೆ ಬಂದು ಜನ್ಮವೆತ್ತುವುದೆಂದೂ ಒಂದು ಹಳೆಯ ನಂಬಿಕೆಯಿದೆ. ಬದುಕಿರುವವರು ಸತ್ತವರ ಆತ್ಮಗಳಿಂದಲೇ ಹುಟ್ಟುವರೆಂಬುದು ನಿಜವಾದರೆ, ನಮ್ಮ ಆತ್ಮಗಳು ಇನ್ನೊಂದು ಲೋಕದಲ್ಲಿ ಜೀವಿಸಿರಲೇಬೇಕಷ್ಟೆ. ಹಾಗೆ ಜೀವಿಸದಿದ್ದರೆ ಅವು ಮತ್ತೆ ಹುಟ್ಟುವುದು ಹೇಗೆ? ಬದುಕಿರುವವರು ಸತ್ತವರಿಂದಲೇ ಹುಟ್ಟುವರೆಂದು ನಮಗೆ ನಿರ್ಧರವಾದರೆ, ಆತ್ಮಕ್ಕೆ ಸಾವಿಲ್ಲವೆಂದು ನಿರ್ಧರವಾದ ಹಾಗೆಯೇ. ಹಾಗಾಗದಿದ್ದರೆ ನಾವು ಬೇರೆ ವಾದವನ್ನು ಕಂಡುಹಿಡಿಯಬೇಕಾಗುತ್ತದೆ."

ಸಾಕ್ರೆಟೀಸ್ ಹೇಳಿದ್ದು ನಿಜವೆಂದು ಸೀಬೀಸ್ ಒಪ್ಪಿಕೊಂಡನು.

"ಸರಿ. ಈ ಪ್ರಶ್ನೆಗೆ ಸುಲಭವಾಗಿ ಉತ್ತರ ಕೊಡಬೇಕಾದರೆ ಇದನ್ನು ಮನುಷ್ಯರಿಗೆ ಮಾತ್ರವೇ ಅಲ್ಲದೆ ಪ್ರಾಣಿಗಳಿಗೂ, ಗಿಡಗಳಿಗೂ, ಉತ್ಪತ್ತಿಯುಳ್ಳ ಎಲ್ಲಾ ಪದಾರ್ಥಗಳಿಗೂ ಅನ್ವಯಿಸಿ ವಿಚಾರಮಾಡಬೇಕು. ತನಗೆ ವಿರುದ್ಧವಾದ ಪದಾರ್ಥವನ್ನುಳ್ಳ ಪ್ರತಿಯೊಂದು ಪದಾರ್ಥವೂ ಆ ವಿರುದ್ಧವಸ್ತುವಿನಿಂದಲೇ ಹುಟ್ಟುತ್ತದೆನ್ನುವುದು ನಿಜವೆ? ವಿರುದ್ಧವೆಂದರೆ ನನ್ನ ಅರ್ಥ ಇದು : ಒಳ್ಳೆಯದು, ಕೆಟ್ಟದ್ದು—ಇವುಗಳು ಒಂದಕ್ಕೊಂದು ವಿರುದ್ಧವಾದುವು ; ಧರ್ಮ, ಅಧರ್ಮ—ಇವೂ ಹಾಗೆಯೇ. ಇಂಥ ಉದಾಹರಣೆಗಳು ಸಾವಿರಾರು ಸಿಕ್ಕುವುವು. ಹೀಗೆ ವಿರುದ್ಧವಸ್ತುವುಳ್ಳ

ಪ್ರತಿಯೊಂದೂ ತನ್ನ ವಿರುದ್ಧವಸ್ತುವಿನಿಂದ ಹೊರತು ಉಳಿದ ಯಾವ ವಸ್ತುವಿನಿಂದಲೂ ಉತ್ಪನ್ನವಾಗಲಾರದೇ ಎಂದು ಯೋಚಿಸಬೇಕು. ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಯಾವುದಾದರೂ ಒಂದು ಪದಾರ್ಥ ಉತ್ತಮ ಸ್ಥಿತಿಗೆ ಬರಬೇಕಾದರೆ, ಅದು ಮೊದಲು ಕೀಳಾಗಿದ್ದು ಅನಂತರ ತಾನೇ ಉತ್ತಮ ಸ್ಥಿತಿಗೆ ಬರಬೇಕಾದದ್ದು ?''

" ಹೌದು."

" ಹಾಗೇ ಒಂದು ಪದಾರ್ಥ ಕಡಮೆಯಾಗಬೇಕಾದರೆ, ಅದು ಮೊದಲು ಹೆಚ್ಚಾಗಿದ್ದು ಅನಂತರ ತಾನೆ ಕಡಮೆಯಾಗಬೇಕು ?"

" ನಿಜ."

" ಬಲಹೀನವಾದದ್ದು ಬಲವುಳ್ಳ ವಸ್ತುವಿನಿಂದಲೂ, ವೇಗವಾದದ್ದು ಮಂದಗಾಮಿಯಾದ ವಸ್ತುವಿನಿಂದಲೂ ಹುಟ್ಟುತ್ತದೆ ತಾನೆ ?"

" ಹೌದು."

" ಕೆಟ್ಟದ್ದು ಉತ್ತಮವಾದ ವಸ್ತುವಿನಿಂದ ಹುಟ್ಟುತ್ತದೆ ; ಧರ್ಮವಾದದ್ದು ಅಧರ್ಮವಾದ ವಸ್ತುವಿನಿಂದ ಹುಟ್ಟುತ್ತದೆ, ಅಲ್ಲವೆ ?"

" ಹೌದು."

" ಹಾಗಾದರೆ, ಎಲ್ಲಾ ಪದಾರ್ಥಗಳೂ ಹೀಗೆಯೇ ತಮ್ಮ ವಿರುದ್ಧ ವಸ್ತುಗಳಿಂದಲೇ ಹುಟ್ಟುತ್ತವೆಂದು ದೃಢವಾದಂತಾಯಿತಲ್ಲವೆ ?"

" ಹೌದು."

" ಹೀಗೆ ವಿರುದ್ಧವಾದ ಪದಾರ್ಥಗಳ ಜೋಡಿಯೊಂದೊಂದರಲ್ಲೂ ಎರಡು ಉತ್ಪತ್ತಿಗಳಾಗುತ್ತವೆ. ಮೊದಲನೆಯದರಿಂದ ಎರಡನೆಯದು ಉತ್ಪತ್ತಿಯಾಗುತ್ತದೆ ; ಅನಂತರ ಎರಡನೆಯದರಿಂದ ಮತ್ತೆ ಮೊದಲನೆಯದು ಉತ್ಪತ್ತಿಯಾಗುತ್ತದೆ. ಈಗ ದೊಡ್ಡದು, ಚಿಕ್ಕದು ಎರಡಿದ್ದರೆ ಅವುಗಳ ನಡುವೆ ಹೆಚ್ಚುವುದೂ ಕಡಮೆಯಾಗುವುದೂ ಇರುತ್ತವೆ. ಒಂದು ಹೆಚ್ಚುತ್ತದೆ, ಇನ್ನೊಂದು ಕಡಮೆಯಾಗುತ್ತದೆ ಎಂದು ನಾವು ಹೇಳುವುದು ಆಗಲೇ ಅಲ್ಲವೆ ?"

" ಹೌದು."

“ಸರಿ. ನಿದ್ರೆ ಎಚ್ಚರಕ್ಕೆ ವಿರುದ್ಧವಾದದ್ದಲ್ಲವೆ? ಹಾಗೆಯೇ ಬಾಳಿಗೆ ವಿರುದ್ಧವಾದದ್ದು ಏನಾದರೂ ಇದೆಯೆ?”

“ಇದೆ.”

“ಅದೇನು?”

“ಸಾವು.”

“ಸರಿ. ಸಾವೂ ಬಾಳೂ ವಿರುದ್ಧವಸ್ತುಗಳಾದರೆ, ಅವು ಒಂದರಿಂದ ಒಂದು ಉತ್ಪನ್ನವಾಗುತ್ತವೆ. ಅವು ಎರಡು; ಆದ್ದರಿಂದ ಅವೆರಡರಿಂದ ಎರಡು ಉತ್ಪತ್ತಿಗಳಾಗುತ್ತವೆ, ಅಲ್ಲವೆ?”

“ಹೌದು.”

“ಈಗ ನಾನು ಎರಡು ಜೊತೆ ವಿರುದ್ಧವಸ್ತುಗಳ ಹೆಸರನ್ನು ಹೇಳಿದೆನು. ಅದರಲ್ಲಿ ಒಂದು ಜೊತೆಯ ವಿಷಯವನ್ನೂ ಅದರಲ್ಲಿ ಆಗುವ ಉತ್ಪತಿಗಳನ್ನೂ ನಾನು ನಿನಗೆ ವಿವರಿಸುತ್ತೇನೆ. ಇನ್ನೊಂದರ ವಿಷಯವನು ನೀನೇ ನನಗೆ ವಿವರಿಸಿ ಹೇಳು. ನಿದ್ರೆ ಎಚ್ಚರಕ್ಕೆ ವಿರುದ್ಧವಾದದ್ದು ಎಚ್ಚರ ನಿದ್ರೆಯಿಂದ ಉತ್ಪನ್ನವಾದದ್ದು! ಹೀಗೆಯೇ ನಿದ್ರೆ ಎಚ್ಚರದಿಂದ ಉತ್ಪನ್ನವಾದದ್ದು. ಅವುಗಳ ಉತ್ಪತ್ತಿ ಎರಡು ವಿಧ—ನಿದ್ರಿಸುವುದು ಎಚ್ಚರಗೊಳ್ಳುವುದು. ನಾನು ಹೇಳುವುದು ಅರ್ಥವಾಯಿತೆ?”

“ಆಯಿತು.”

“ಸರಿ. ಈಗ ನೀನು ಸಾವು ಬಾಳುಗಳ ವಿಷಯವನ್ನು ನನಗೆ ಹೇಳು. ಸಾವು ಬಾಳಿನ ವಿರುದ್ಧವಸ್ತು, ಅಲ್ಲವೆ?”

“ಹೌದು.”

“ಅವೆರಡೂ ಒಂದರಿಂದ ಒಂದು ಉತ್ಪನ್ನವಾಗುತ್ತವೆ?”

“ಹೌದು.”

“ಹಾಗಾದರೆ, ಜೀವಿಸಿರುವ ವಸ್ತುವಿನಿಂದ ಉತ್ಪನ್ನವಾಗುವುದು ಯಾವುದು?”

“ಸತ್ತಿರುವುದು.”

“ಸತ್ತಿರುವುದರಿಂದ ಉತ್ಪನ್ನವಾಗುವುದು ಯಾವುದು?”

"ಜೀವಿಸಿರುವುದು ಎಂದು ಒಪ್ಪಲೇ ಬೇಕಾಗುತ್ತದೆ."

"ಹಾಗಾದರೆ, ಸೀಬೀಸ್, ಜೀವಿಸಿರುವ ವಸ್ತುಗಳೂ ಜೀವಿಸಿರುವ ಮನುಷ್ಯರೂ ಹುಟ್ಟುವುದು ಸತ್ತಿರುವ ವಸ್ತುಗಳಿಂದಲೂ ಸತ್ತಿರುವ ಮನುಷ್ಯರಿಂದಲೂ ತಾನೆ?"

"ಹೌದು."

"ಹಾಗಾದರೆ, ನಮ್ಮ ಆತ್ಮಗಳು ಇನ್ನೊಂದು ಲೋಕದಲ್ಲಿ ಜೀವಿಸಿರಬೇಕು?"

"ಹೌದು, ಹಾಗೆಯೇ ತೋರುತ್ತದೆ."

"ಈ ಎರಡು ಉತ್ಪತ್ತಿಗಳಲ್ಲಿ ಒಂದೇನೋ ನಾವು ಕಾಣಬಹುದಾದ್ದರಿಂದ ನಿಶ್ಚಯವಾದದ್ದೇ. ಸಾವು ನಿಶ್ಚಯವಾದದ್ದೇ ತಾನೆ?"

"ಹೌದು."

"ಹಾಗಾದರೆ, ಈಗೇನು ಹೇಳೋಣ? ಸಾವಿಗೆ ವಿರುದ್ಧವಾದ ಉತ್ಪತ್ತಿಯೊಂದನ್ನು ನಾವು ಒಪ್ಪಬೇಕೇ ಬೇಡವೇ? ಅಥವಾ ಪ್ರಕೃತಿ ಈ ವಿಷಯದಲ್ಲಿ ಕೊರತೆಯುಳ್ಳದ್ದೆಂದು—ಒಂಟಿಕಾಲಿನಲ್ಲಿ ನಡೆಯುತ್ತಿದೆಯೆಂದು—ಹೇಳೋಣವೆ? ಸಾವಿಗೆ ವಿರುದ್ಧವಾದ ಉತ್ಪತ್ತಿಯೊಂದನ್ನು ನಾವು ಒಪ್ಪೋಣವೆ?"

"ಒಪ್ಪಬೇಕೆಂದೇ ತೋರುತ್ತದೆ."

"ಆ ಉತ್ಪತ್ತಿ ಯಾವುದು?"

"ಪುನರ್ಜೀವನ."

"ಪುನಃ ಜೀವಕ್ಕೆ ಬರುವುದು ಉಂಟಾದರೆ, ಅದು ಮರಣದಿಂದ ಜೀವಿತಕ್ಕೆ ಆಗುವ ಉತ್ಪತ್ತಿಯಲ್ಲವೆ?"

"ಹೌದು."

"ಹಾಗಾದರೆ, ಇದೊಂದು ವಿಷಯವನ್ನು ನಾವೆಲ್ಲರೂ ಒಪ್ಪುತ್ತೇವೆ. ಸತ್ತವರು ಬದುಕಿರುವವರಿಂದ ಹೇಗೆ ಉತ್ಪತ್ತಿಯಾಗುತ್ತಾರೋ ಹಾಗೇ ಬದುಕಿರುವವರು ಸತ್ತವರಿಂದ ಉತ್ಪತ್ತಿಯಾಗುತ್ತಾರೆ. ಇದು ನಿಜವಾದರೆ, ಸತ್ತವರ ಆತ್ಮಗಳು ಎಲ್ಲಿಯೋ ಒಂದು ಕಡೆ ಇದ್ದು ಅಲ್ಲಿಂದ ಪುನಃ

ಬಂದು ಜೀವವನ್ನು ಪಡೆಯುತ್ತವೆಂಬುದಕ್ಕೆ ಇದು ನಿದರ್ಶನವೆಂದು ನಾವು ಮೊದಲೇ ಒಪ್ಪಿಕೊಂಡೆವಲ್ಲವೆ?

"ಹೌದು, ಒಪ್ಪಿದ್ದೆವು. ಆ ಮಾತಿನಿಂದ ಈ ಅನುಮಾನ ಬಂದೇ ಬರಬೇಕು, ಸಾಕ್ರೆಟೀಸ್."

"ನನಗೆ ತಿಳಿದ ಮಟ್ಟಿಗೆ, ಸೀಬೀಸ್, ಈ ತೀರ್ಮಾನ ತಪ್ಪಾದದ್ದಲ್ಲ. ಅದನ್ನು ಹೀಗೆ ಸ್ಪಷ್ಟಪಡಿಸಬಹುದು. ವಿರುದ್ಧ ಸ್ವಭಾವವುಳ್ಳ ವಸ್ತುಗಳು ತಾವು ಉತ್ಪನ್ನವಾದ ಹಾಗೆಲ್ಲಾ ತಮಗೆ ವಿರುದ್ಧವಾದ ವಸ್ತುಗಳನ್ನು ಮತ್ತೆ ಪಡೆದು ಚಕ್ರಾಕಾರವಾಗಿ ಉತ್ಪತ್ತಿಯನ್ನು ನಡೆಸಬೇಕು. ಹೀಗಾಗದೆ ಎರಡು ವಿರುದ್ಧ ವಸ್ತುಗಳಲ್ಲಿ ಒಂದರಿಂದ ಮಾತ್ರ ನೆಟ್ಟಗೆ ಒಂದೇ ದಿಕ್ಕಿನಲ್ಲಿ ಉತ್ಪತ್ತಿಯಾಗುತ್ತಿದ್ದು, ಆ ಮಾರ್ಗದಲ್ಲಿ ಒಂದು ತಿರುವೂ ಇಲ್ಲದೆ, ವಿರುದ್ಧವಸ್ತು ಒಂದು ಸಲವೂ ಹಿಂದಿರುಗದೆ ಇದ್ದರೆ—ಆಗ ಎಲ್ಲಾ ವಸ್ತುಗಳೂ ಕೊನೆಗೆ ಒಂದೇ ರೂಪವನ್ನು ಹೊಂದುವುವು; ಒಂದೇ ಸ್ಥಿತಿಯಲ್ಲಿ ಇರುವುವು. ಅವುಗಳಿಗೆ ಉತ್ಪತ್ತಿ ನಿಂತೇ ಹೋಗುವುದು."

"ಅದು ಹೇಗೆ ಸಾಕ್ರೆಟೀಸ್?"

"ಅದನ್ನು ತಿಳಿದುಕೊಳ್ಳುವುದೇನೂ ಕಷ್ಟವಲ್ಲ. ನಿದ್ರೆಯ ಉದಾಹರಣೆಯನ್ನು ತೆಗೆದುಕೊಂಡು ಅದನ್ನು ನಿನಗೆ ವಿವರಿಸುತ್ತೇನೆ. ನಿದ್ರೆಯೂ ಎಚ್ಚರವೂ ಒಂದಾದ ಮೇಲೆ ಮತ್ತೊಂದು ಬಾರದಿದ್ದರೆ ಕೊನೆಯಲ್ಲಿ ಎಂಡಿಮಿಯನ್ನಿನ ಕಥೆ ಅರ್ಥವಿಲ್ಲದ್ದಾಗುತ್ತದೆ. ಆಗ ಪ್ರಪಂಚದಲ್ಲಿ ಎಲ್ಲಾ ವಸ್ತುಗಳೂ ಅವನಂತೆಯೇ ನಿದ್ರಾವಸ್ಥೆಯಲ್ಲಿರುತ್ತವಾದ್ದರಿಂದ ಅವನ ನಿದ್ರೆ ಹೆಚ್ಚಿನ ವಿಷಯವಾಗುವುದಿಲ್ಲ. ಹಾಗೆಯೇ ಒಟ್ಟಿಗೆ ಸೇರಿದ ಮೇಲೆ ಯಾವ ವಸ್ತುಗಳೂ ಮತ್ತೆ ಬೇರೆಯಾಗದೆಯೇ ಇದ್ದರೆ, ಅನಗ್ಸಾಗೊರಾಸನ 'ಪ್ರಳಯ' (Chaos) ಮತ್ತೆ ಬರುತ್ತದೆ. ಇದೇ ರೀತಿಯಲ್ಲಿ, ಸೀಬೀಸ್, ಜೀವವುಳ್ಳ ಎಲ್ಲಾ ವಸ್ತುಗಳೂ ಸತ್ತು ಹೋಗಿ ಸತ್ತ ಮೇಲೆ ಅದೇ ಸ್ಥಿತಿಯಲ್ಲಿದ್ದು ಮತ್ತೆ ಜೀವವನ್ನು ಪಡೆಯದೆ ಇದ್ದರೆ ಕೊನೆಗೆ ಪ್ರಪಂಚದಲ್ಲಿ ಎಲ್ಲವೂ ಸತ್ತು ಹೋಗಿ ಜೀವವುಳ್ಳ ವಸ್ತು ಯಾವುದೂ ಉಳಿಯುವುದಿಲ್ಲ. ಹಾಗೆ ಉಳಿಯುವುದು ಅಸಾಧ್ಯ.

ಏಕೆಂದರೆ, ಜೀವವುಳ್ಳ ವಸ್ತುಗಳು ಮರಣವಲ್ಲದ ಇತರ ವಸ್ತುಗಳಿಂದ ಹುಟ್ಟಿ ಅವೂ ಸತ್ತು ಹೋದರೆ ಕೊನೆಗೆ ಎಲ್ಲವೂ ಸಾವಿಗೆ ತುತ್ತಾಗಲೇ ಬೇಕಲ್ಲವೆ ?"

"ನೀನು ಹೇಳುವುದು ನಿಜವೆಂದು ತೋರುತ್ತದೆ, ಸಾಕ್ರೆಟೀಸ್."

"ಹೌದು, ಸೀಬೀಸ್. ಅದು ನಿಜವೆಂದೇ ನನಗೂ ತೋರುತ್ತದೆ. ನಾವು ಈ ತೀರ್ಮಾನಕ್ಕೆ ಬಂದಿರುವುದು ತಪ್ಪಲ್ಲ. ಸತ್ತವರು ಮತ್ತೆ ಜೀವವನ್ನು ಪಡೆಯುತ್ತಾರೆ; ಜೀವಿಸುವವರು ಅದರಿಂದ ಜನ್ಮವನ್ನು ಪಡೆಯುತ್ತಾರೆ; ಸತ್ತವರ ಆತ್ಮಗಳು ಎಲ್ಲೋ ಒಂದು ಕಡೆ ಇರುತ್ತವೆ. ಸಜ್ಜನರ ಆತ್ಮಗಳು ಒಳ್ಳೆಯ ಸ್ಥಿತಿಯಲ್ಲಿರುತ್ತವೆ; ದುರ್ಜನರ ಆತ್ಮಗಳು ದುಃಸ್ಥಿತಿಯಲ್ಲಿರುತ್ತವೆ."

"ಅದಲ್ಲದೆ ಸಾಕ್ರೆಟೀಸ್, ನಮ್ಮ ತಿಳಿವಳಿಕೆಯೆಲ್ಲಾ ನೆನಪೇ ಹೊರತು ಮತ್ತೇನೂ ಅಲ್ಲವೆಂದು ನೀನು ಅನೇಕ ವೇಳೆ ಹೇಳುತ್ತಿದ್ದೆಯಲ್ಲ. ಅದು ನಿಜವಾದರೆ, ನಾವು ಈಗ ನೆನೆಯುವುದನ್ನು ಹಿಂದೆ ಯಾವಾಗಲೋ ಕಲಿತುಕೊಂಡಿರಬೇಕು. ಮನುಷ್ಯರೂಪವನ್ನು ಧರಿಸುವುದಕ್ಕೆ ಮುಂಚೆ ನಮ್ಮ ಆತ್ಮಗಳು ಮತ್ತೆಲ್ಲಿಯೋ ಇರದಿದ್ದರೆ ಹಾಗೆ ಕಲಿತುಕೊಂಡಿರುವುದು ಅಸಾಧ್ಯ. ಆತ್ಮಕ್ಕೆ ಮರಣವಿಲ್ಲವೆಂದು ನಂಬುವುದಕ್ಕೆ ಅದೂ ಒಂದು ಕಾರಣ."

ಆಗ ಸಿಮಿಯಾಸ್ "ಹಾಗೆ ಹೇಳುವುದಕ್ಕೆ ಆಧಾರಗಳೇನು ಸೀಬೀಸ್? ನನಗೆ ಸ್ವಲ್ಪ ಜ್ಞಾಪಕ ಕೊಡು. ನನಗೆ ಅದು ಈಗ ಸ್ಪಷ್ಟವಾಗಿಲ್ಲ" ಎಂದನು.

ಅದಕ್ಕೆ ಸೀಬೀಸ್ ಹೇಳಿದನು: "ಮುಖ್ಯವಾದ, ಬಲವಾದ ಆಧಾರವೊಂದನ್ನು ಹೇಳುತ್ತೇನೆ. ಯಾವ ವಿಷಯವನ್ನು ಕುರಿತಾಗಲಿ, ಜನರಿಗೆ ಸರಿಯಾದ ರೀತಿಯಲ್ಲಿ ಪ್ರಶ್ನೆಹಾಕಿದರೆ ಅವರು ಮತ್ತೊಬ್ಬರ ಸಹಾಯವಿಲ್ಲದೆ ತಾವೇ ಸರಿಯಾದ ಉತ್ತರ ಕೊಡುವರು. ಜ್ಞಾನವೂ ಉತ್ತಮವಾದ ವಿಚಾರಶಕ್ತಿಯೂ ಅವರಲ್ಲಿಯೇ ಇಲ್ಲದಿದ್ದರೆ ಅವರು ಹಾಗೆ ಉತ್ತರ ಕೊಡುವುದು ಸಾಧ್ಯವಲ್ಲ. ಬೇಕಾದರೆ ಅವರಿಗೆ ರೇಖಾಗಣಿತದ ನಕ್ಷೆ

ಗಳನ್ನು ತೋರಿಸು—ಆಗ ನಮ್ಮ ವಾದ ಸರಿಯಾದದ್ದೆನ್ನುವುದಕ್ಕೆ ಆಧಾರ ಬೇಕಾದಷ್ಟು ಸಿಕ್ಕುತ್ತದೆ."

ಸಾಕ್ರೆಟೀಸನು ಸೀಬೀಸನ ಸಹಾಯಕ್ಕೆ ಬಂದನು. "ಸೀಬೀಸ್ ಹೇಳಿದ್ದರಿಂದ ಮನಸ್ಸಿಗೆ ನಂಬಿಕೆ ಹುಟ್ಟದಿದ್ದರೆ, ಸಿಮಿಯಾಸ್, ಆ ವಿಷಯವನ್ನು ಮತ್ತೊಂದು ರೀತಿಯಲ್ಲಿ ಚರ್ಚಿಸೋಣ. ಆಗ ನಿನಗೆ ಒಪ್ಪಿಗೆಯಾಗಬಹುದೋ ಏನೋ. 'ಜ್ಞಾನವೆನ್ನುವುದು ನೆನಪು ಮಾತ್ರ ಆಗುವುದು ಹೇಗೆ?' ಎಂದು ನಿನ್ನ ಮನಸ್ಸಿನಲ್ಲಿ ಸಂದೇಹವಿದೆ, ನಾನು ಬಲ್ಲೆ."

ಸಿಮಿಯಾಸನು "ಇಲ್ಲ, ಸಾಕ್ರೆಟೀಸ್, ಸಂದೇಹವಿಲ್ಲ. ಆದರೆ ನಾವು ಆ ವಿಷಯವಾಗಿ ಚರ್ಚೆ ಮಾಡಿದ್ದನ್ನು ಮತ್ತೆ ಜ್ಞಾಪಿಸಿಕೊಳ್ಳಬೇಕಾಗಿದೆ. ಈಗ ಸೀಬೀಸ್ ಹೇಳಿದ್ದು ನಿನ್ನ ವಾದವನ್ನು ನೆನಪಿಗೆ ತಂದು ಬಹು ಮಟ್ಟಿಗೆ ನನಗೆ ನಂಬಿಕೆಯುಂಟುಮಾಡಿದೆ. ಆದರೂ ನೀನು ಅದನ್ನು ಹೇಗೆ ವಿವರಿಸುತ್ತೀಯೆಂಬುದನ್ನು ಕೇಳುವುದಕ್ಕೆ ಸಿದ್ಧನಾಗಿದ್ದೇನೆ" ಎಂದನು.

"ನಾನು ವಿವರಿಸುವುದು ಹೀಗೆ—ಒಬ್ಬನು ಏನನ್ನಾದರೂ ನೆನಪು ಮಾಡಿಕೊಂಡರೆ ಅದನ್ನು ಅವನು ಹಿಂದೆ ಯಾವಾಗಲೋ ತಿಳಿದೇ ಇರಬೇಕು. ಇದನ್ನು ಒಪ್ಪಬಹುದಲ್ಲವೆ?"

"ಹೌದು."

"ಪ್ರಣಯಿಗಳು ಒಂದು ವೀಣೆಯನ್ನೋ ವಸ್ತ್ರವನ್ನೋ ಅಥವಾ ತಮಗೆ ಇಷ್ಟರಾದವರು ಉಪಯೋಗಿಸುವ ಯಾವುದಾದರೂ ಪದಾರ್ಥವನ್ನೋ ನೋಡಿದಾಗ ಅವರ ಮನಸ್ಸಿನಲ್ಲಿ ಈ ಭಾವ ಬರುತ್ತದೆ. ಅವರು ಆ ವೀಣೆಯನ್ನು ಬಲ್ಲರು; ಅವರ ಮನಸ್ಸಿನಲ್ಲಿ ಆ ವೀಣೆ ಯಾರದ್ದೋ, ಆ ಯುವಕನ ಚಿತ್ರ ಬರುತ್ತದೆ. ಈಗ ಸಿಮಿಯಾಸನ್ನು ಪದೇ ಪದೇ ನೋಡುತ್ತಿರುವವರಿಗೆ ಸೀಬೀಸಿನ ಜ್ಞಾಪಕ ಬರುತ್ತದೆ. ಇಂಥ ಉದಾಹರಣೆಗಳು ಲೆಕ್ಕವಿಲ್ಲದಷ್ಟು ಸಿಕ್ಕುತ್ತವೆ."

"ಹೌದು, ಬೇಕಾದಷ್ಟಿವೆ."

"ಅದು ಒಂದು ವಿಧವಾದ ನೆನಪಲ್ಲವೆ? ಅದರಲ್ಲೂ ಬಹಳ ದಿನ ಕಳೆದು ಹೋದದ್ದರಿಂದಲೂ ಆ ಕಡೆಗೆ ಗಮನ ಕೊಡದೆ ಇದ್ದದ್ದರಿಂದಲೂ ಮರೆತು ಹೋಗಿರುವ ವಿಷಯಗಳು ಹೀಗೆ ಮನಸ್ಸಿಗೆ ಬಂದರೆ ಅದು ನೆನಪು ತಾನೆ ?"

"ಹೌದು."

"ಸರಿ, ಈಗ ಒಂದು ಕುದುರೆಯ ಅಥವಾ ವೀಣೆಯ ಚಿತ್ರವನ್ನು ನೋಡಿ ಒಬ್ಬ ಮನುಷ್ಯನನ್ನು ಜ್ಞಾಪಿಸಿಕೊಳ್ಳಬಹುದು ; ಸೀಬೀಸಿನ ಚಿತ್ರ ವನ್ನು ನೋಡಿದಾಗ ಸಿಮಿಯಾಸನನ್ನು ಜ್ಞಾಪಿಸಿಕೊಳ್ಳಬಹುದು."

"ಹೌದು."

"ಸಿಮಿಯಾಸಿನ ಚಿತ್ರವನ್ನೇ ನೋಡಿದಾಗಲೂ ಸಿಮಿಯಾಸನ್ನು ಜ್ಞಾಪಿಸಿಕೊಳ್ಳಬಹುದು."

"ನಿಸ್ಸಂದೇಹವಾಗಿ."

"ಹಾಗಾದರೆ, ಈ ಸಂದರ್ಭಗಳಲ್ಲೆಲ್ಲಾ ಹೋಲಿಕೆಯುಳ್ಳ ಪದಾರ್ಥ ಗಳಿಂದ ಮಾತ್ರವೇ ಅಲ್ಲದೆ ಹೋಲಿಕೆಯಿಲ್ಲದ ಪದಾರ್ಥಗಳಿಂದಲೂ ನೆನಪು ಬರುತ್ತದೆ, ಅಲ್ಲವೆ ?"

"ಹೌದು."

"ಆದರೆ ಹೋಲಿಕೆಯುಳ್ಳ ಪದಾರ್ಥಗಳಿಂದ ಒಬ್ಬನಿಗೆ ನೆನಪುಂಟಾದರೆ, ಅವನ ಮನಸ್ಸಿಗೆ ಮತ್ತೊಂದು ಯೋಚನೆಯೂ ಬರುತ್ತದೆ—ತಾನು ಯಾವುದನ್ನು ನೆನಪು ಮಾಡಿಕೊಳ್ಳುತ್ತಾನೋ ಅದಕ್ಕೂ ಆ ನೆನಪನ್ನು ತಂದ ಪದಾರ್ಥಕ್ಕೂ ಇರುವ ಹೋಲಿಕೆಯಲ್ಲಿ ಏನಾದರೂ ನ್ಯೂನತೆ ಇದೆಯೆ, ಇಲ್ಲವೆ ಎಂದು ಅವನು ಯೋಚಿಸುತ್ತಾನೆ."

"ಹೌದು."

"ಈಗ ನಾನು ಹೇಳುವುದು ನಿಜವೇ ನೋಡು. ಸಮತೆಯೆಂಬುದು ಇದೆಯೆಂದು ನಾವು ನಂಬುತ್ತೇವಲ್ಲವೆ ? ನಾನು ಹೇಳುವುದು ಮರದ ತುಂಡುಗಳಿಗೆ ಅಥವಾ ಕಲ್ಲುಗಳಿಗೆ ಇರಬಹುದಾದ ಸಮತೆಯಲ್ಲ. ಸಮತೆ

ಯೆಂಬ ಕೇವಲ ಭಾವ. ಆ ಭಾವವಿದೆಯೆಂದು ಹೇಳಬಹುದೋ ಇಲ್ಲವೋ ?"

ಸಿಮಿಯಾಸನು "ಕಂಠೋಕ್ತವಾಗಿ ಹೇಳಬಹುದು" ಎಂದನು.

"ಈ ಸಮತೆಯೆಂಬ ಭಾವ ಏನೆಂದು ನಮಗೆ ಗೊತ್ತೆ ?"

"ಗೊತ್ತು."

"ನಮಗೆ ಆ ತಿಳಿವಳಿಕೆ ಎಲ್ಲಿಂದ ಬಂತು ? ನಾವು ಮೊದಲು ಹೇಳಿದ ಸಮವಾದ ಮರದ ತುಂಡುಗಳನ್ನೂ ಕಲ್ಲುಗಳನ್ನೂ ಇತರ ಪದಾರ್ಥಗಳನ್ನೂ ನೋಡಿದ್ದರಿಂದಲ್ಲವೆ? ಸಮತೆಯೆಂಬ ಗುಣವನ್ನು, ಈ ವಸ್ತುಗಳಿಂದ ಬೇರೆಯಾದ ಗುಣವನ್ನು ಮಾತ್ರ, ನಾವು ತಿಳಿದದ್ದು ಈ ವಸ್ತುಗಳಿಂದ, ಅಲ್ಲವೆ? ಅಥವಾ ಈ ಗುಣವೂ ಆ ವಸ್ತುಗಳೂ ಬೇರೆಯಲ್ಲವೆಂದು ನಿನಗೆ ತೋರುತ್ತದೊ? ಈ ವಿಷಯವನ್ನು ಹೀಗೆ ಯೋಚಿಸಿ ನೋಡು. ಒಂದೇ ಸಮನಾದ ಮರದ ತುಂಡುಗಳು ಯಾವಾಗಲೂ ಒಂದೇ ಸಮನಾಗಿಯೇ ಇದ್ದರೂ ನಮ್ಮ ಕಣ್ಣಿಗೆ ಕೆಲವು ವೇಳೆ ಸಮವಾಗಿರುವಂತೆಯೂ ಕೆಲವು ವೇಳೆ ಸಮವಾಗಿಲ್ಲದಿರುವಂತೆಯೂ ತೋರುವುದಿಲ್ಲವೆ ?"

"ಹೌದು, ಹಾಗೆ ತೋರುತ್ತವೆ."

"ಆದರೆ ಪರಮಸಮತೆಯುಳ್ಳ ವಸ್ತುಗಳು ಎಂದಾದರೂ ನಿನಗೆ ಸಮವಾಗಿಲ್ಲದಂತೆ ತೋರಿವೆಯೆ ? ಅಥವಾ ಸಮತೆಯೆಂಬ ಗುಣ ಅಸಮತೆಯಂತೆ ತೋರಿದೆಯೆ ?"

"ಇಲ್ಲ, ಎಂದೂ ಇಲ್ಲ."

"ಹಾಗಾದರೆ, ಸಮತೆಯುಳ್ಳ ವಸ್ತುಗಳೂ ಸಮತೆಯೆಂಬ ಗುಣವೂ ಒಂದೇ ಅಲ್ಲ?"

"ಅಲ್ಲ, ಖಂಡಿತವಾಗಿಯೂ ಅಲ್ಲ."

"ಆದರೂ ಸಮತೆಯೆಂಬ ಗುಣದಿಂದ ಬೇರೆಯಾದ ಈ ಸಮನಾದ ವಸ್ತುಗಳಿಂದಲೇ ಅಲ್ಲವೆ ಆ ಗುಣದ ಭಾವವನ್ನು ನೀನು ಮನಸ್ಸಿನಲ್ಲಿ ಮಾಡಿಕೊಂಡದ್ದು, ಅದರ ತಿಳಿವಳಿಕೆಯನ್ನು ಪಡೆದದ್ದು ?"

"ನೀನು ಹೇಳುವುದು ನಿಜ."

"ಆ ಗುಣವು ಸಮನಾದ ವಸ್ತುಗಳಂತೆ ಇದೆಯೋ ಇಲ್ಲವೋ ಎಂಬ ತಿಳಿವಳಿಕೆಯನ್ನು ಪಡೆದದ್ದೂ ಹಾಗೆಯೇ ?"

"ಹೌದು."

"ಆದರೆ ಇದು ಸದ್ಯದಲ್ಲಿ ನಮ್ಮ ಚರ್ಚೆಗೆ ಆವಶ್ಯಕವಲ್ಲ. ಒಂದು ಪದಾರ್ಥವನ್ನು ನೋಡಿದಾಗ ಮತ್ತೊಂದು ಪದಾರ್ಥ ಮನಸ್ಸಿಗೆ ಬರುವುದು ನಿಜವಾದರೆ, ಆ ಎರಡು ಪದಾರ್ಥಗಳಿಗೂ ಹೋಲಿಕೆಯಿರಲಿ ಇಲ್ಲದಿರಲಿ, ನೆನಪೆನ್ನುವುದು ಇರಲೇ ಬೇಕು."

"ಹೌದು."

"ಆದರೆ ಒಂದೇ ಸಮನಾದ ಮರದ ಅಥವಾ ಕಲ್ಲಿನ ತುಂಡುಗಳನ್ನೋ ಹಾಗೆಯೇ ಸಮನಾದ ಇತರ ಪದಾರ್ಥಗಳನ್ನೋ ನೋಡಿದಾಗ ನಮ್ಮ ಮನಸ್ಸಿಗೆ ಬರುವ ಭಾವವೇನು? ಸಮತೆಯೆಂಬ ಗುಣ ಎಷ್ಟು ಮಟ್ಟಿಗೆ ಸಮವಾಗಿದೆಯೆಂದು ಹೇಳಬಹುದೋ ಇವೂ ಅಷ್ಟುಮಟ್ಟಿಗೆ ಸಮವಾಗಿವೆಯೆ ? ಅಥವಾ ಆ ಗುಣಕ್ಕಿಂತ ಸ್ವಲ್ಪ ಕಡಮೆಯಾಗಿವೆಯೋ ?"

"ಬಹುಮಟ್ಟಿಗೆ ಕಡಮೆಯಾಗಿವೆ."

"ಒಬ್ಬನು ಒಂದು ವಸ್ತುವನ್ನು ನೋಡಿ 'ಇದು ಮತ್ತೊಂದು ವಸ್ತುವಿನಂತೆಯೇ ಇರಬೇಕೆಂದು ಪ್ರಯತ್ನಿಸುತ್ತದೆ, ಆದರೆ ಇದು ಆ ವಸ್ತುವಿನಂತೆ ಆಗಲಾರದು; ಅದಕ್ಕಿಂತ ಸ್ವಲ್ಪ ಹಿಂದೆ ಬೀಳುತ್ತದೆ' ಎಂದುಕೊಳ್ಳಬಹುದು. ಅವನು ನೋಡಿದ ವಸ್ತು ಯಾವುದನ್ನು ಹೋಲಿ ಅದಕ್ಕಿಂತ ಹಿಂದಾಗುತ್ತದೆಯೋ ಆ ಎರಡನೆಯ ಪದಾರ್ಥದ ತಿಳಿವು ಅವನಿಗೆ ಮೊದಲೇ ಇದ್ದಿರಬೇಕು. ಇದನ್ನು ಒಪ್ಪೋಣವೆ ?"

"ಒಪ್ಪಬೇಕು."

"ಸರಿ, ಸಮವಸ್ತುಗಳ ಮತ್ತು ಸಮತೆಯೆಂಬ ಗುಣದ ವಿಷಯದಲ್ಲಿಯೂ ನಾವು ಹೀಗೆಯೇ ಹೇಳಬಹುದಲ್ಲವೆ ?"

"ಹೌದು."

“ಹಾಗಾದರೆ, ನಾವು ಸಮವಸ್ತುಗಳನ್ನು ಮೊದಲು ನೋಡಿದ್ದಕ್ಕಿಂತ ಮುಂಚೆ ಸಮತೆಯೆಂಬ ಗುಣವನ್ನು ತಿಳಿದಿದ್ದಿರಬೇಕು; ಮತ್ತು ಸಮವಾಗಿ ಕಾಣುವ ವಸ್ತುಗಳೆಲ್ಲಾ ಪರಮಸಮತೆಯಂತೆಯೇ ಆಗಬೇಕೆಂದು ಪ್ರಯತ್ನಿಸುತ್ತವೆ, ಆದರೆ ಅದಕ್ಕಿಂತ ಹಿಂದೆ ಬೀಳುತ್ತವೆ' ಎಂದೂ ತಿಳಿದಿರಬೇಕು.”

“ನಿಜ.”

“ಪರಮಸಮತೆಯ ತಿಳಿವಳಿಕೆ ನಮಗೆ ಬಂದಿರುವುದು ನೋಟದ, ಸ್ಪರ್ಶದ ಅಥವಾ ಮತ್ತೆ ಯಾವುದಾದರೂ ಇಂದ್ರಿಯದ ಮೂಲಕವೇ. ಬೇರೆ ಯಾವ ರೀತಿಯಲ್ಲೂ ನಮಗೆ ಆ ತಿಳಿವಳಿಕೆ ಬರಲಾರದು. ಇದನ್ನು ಒಪ್ಪೋಣವೆ? ಎಲ್ಲಾ ಇಂದ್ರಿಯಗಳೂ ಈ ವಿಷಯದಲ್ಲಿ ಒಂದೇ ಎಂದು ಹೇಳಬಹುದು.”

“ಹೌದು. ಈ ಚರ್ಚೆಯ ಮಟ್ಟಿಗೆ ಯಾವ ಇಂದ್ರಿಯವಾದರೂ ಒಂದೇ.”

“ನಮ್ಮ ಇಂದ್ರಿಯಗಳ ಅನುಭವಕ್ಕೆ ಬರುವ ವಸ್ತುಗಳೆಲ್ಲವೂ ಪರಮಸಮತೆಯನ್ನು ಪಡೆಯಲು ಯತ್ನಿಸುತ್ತವೆ. ಆದರೆ ಅದನ್ನು ಪಡೆಯಲಾರದೆ ಹಿಂದೆ ಬೀಳುತ್ತವೆ. ಇದನ್ನು ನಾವು ತಿಳಿಯುವುದು ನಮ್ಮ ಇಂದ್ರಿಯಗಳ ಮೂಲಕ, ಅಲ್ಲವೆ?”

“ಹೌದು.”

“ಹಾಗಾದರೆ, ಏನನ್ನಾದರೂ ನೋಡುವುದಕ್ಕೂ, ಕೇಳುವುದಕ್ಕೂ, ಇತರ ರೀತಿಯಲ್ಲಿ ಪ್ರಪಂಚದ ಅನುಭವವನ್ನು ಪಡೆಯುವುದಕ್ಕೂ, ಮುಂಚೆಯೇ ನಮಗೆ ಪರಮಸಮತೆಯ ತಿಳಿವಳಿಕೆ ಇದ್ದಿರಬೇಕು. ಇಲ್ಲದಿದ್ದರೆ ನಾವು ಇಂದ್ರಿಯಗಳಿಂದ ತಿಳಿಯುವ ವಸ್ತುಗಳನ್ನು ಸಮತೆಗೆ ಹೋಲಿಸುವುದು ಸಾಧ್ಯವಾಗುತ್ತಿರಲಿಲ್ಲ. ಆ ಸಮತೆಯನ್ನು ಹೊಂದುವುದಕ್ಕೆ ತಾನೇ ಸಮವಸ್ತುಗಳೆಲ್ಲವೂ ಪ್ರಯತ್ನಿಸುತ್ತಿರುವುದು; ಆದರೆ ಅದಕ್ಕಿಂತ ಇವು ಹಿಂದೆಬಿದ್ದಿವೆ. ಈ ತಿಳಿವಳಿಕೆಯೂ ನಮಗೆ ಆಗಲೇ ಇದ್ದಿರಬೇಕು.”

“ನಾವು ಹಿಂದೆ ಹೇಳಿದ್ದು ನಿಜವಾದರೆ ಇದೂ ನಿಜವಾಗಲೇಬೇಕು.”

"ನಾವು ಹುಟ್ಟಿದೊಡನೆಯೇ ನೋಡುವ, ಕೇಳುವ ಮತ್ತು ಇತರ ಇಂದ್ರಿಯಗಳನ್ನು ಉಪಯೋಗಿಸುವ ಶಕ್ತಿ ನಮಗೆ ಬಂದಿತಲ್ಲವೆ?"

"ಹೌದು."

"ಹಾಗಾದರೆ, ಸಮತೆಯೆಂಬ ಗುಣದ ತಿಳಿವಳಿಕೆಯನ್ನು ನಾವು ಅದಕ್ಕಿಂತ ಮುಂಚೆಯೇ ಪಡೆದಿರಬೇಕು."

"ಹೌದು."

"ಅಂದರೆ ನಾವು ಹುಟ್ಟುವುದಕ್ಕಿಂತ ಮುಂಚೆ?"

"ನಿಜ."

"ನಾವು ಹುಟ್ಟುವುದಕ್ಕಿಂತ ಮುಂಚೆಯೇ ಈ ತಿಳಿವಳಿಕೆಯನ್ನು ಪಡೆದದ್ದೂ ಹುಟ್ಟುತ್ತಲೇ ಅದನ್ನು ಉಪಯೋಗಿಸುವ ಶಕ್ತಿಯನ್ನು ಪಡೆದದ್ದೂ ನಿಜವಾದರೆ, ಅದೇ ರೀತಿಯಲ್ಲಿ ಹುಟ್ಟುವುದಕ್ಕಿಂತ ಮುಂಚೆಯೂ ಹುಟ್ಟುವ ಕಾಲದಲ್ಲೂ ಸಮವಾದದ್ದು, ದೊಡ್ಡದು, ಚಿಕ್ಕದು ಎಂಬ ವಿಷಯಗಳು ಮಾತ್ರವಲ್ಲದೆ, ಎಲ್ಲಾ ಭಾವಗಳ (Ideas) ತಿಳಿವಳಿಕೆಯೂ ನಮಗೆ ಇದ್ದಿರಬೇಕು. ನಾವು ಈಗ ಹೇಳುತ್ತಿರುವುದು ಸಮತೆಯೊಂದಕ್ಕೇ ಅನ್ವಯಿಸುವುದಿಲ್ಲ; ಸೌಂದರ್ಯ, ಸದ್ಗುಣ, ನ್ಯಾಯ, ಪವಿತ್ರತೆ— ಇವೆಲ್ಲಕ್ಕೂ ಅನ್ವಯಿಸುತ್ತದೆ. ನಮ್ಮ ಚರ್ಚೆಯಲ್ಲಿ ಪ್ರಶ್ನೆ ಕೇಳುವಾಗಲೂ ಉತ್ತರ ಕೊಡುವಾಗಲೂ ನಾವು ಯಾವಯಾವುದನ್ನು ವಸ್ತುಗಳಲ್ಲಿ ನಿತ್ಯವಾದದ್ದು, ಸಾರಭೂತವಾದದ್ದು ಎಂದು ಕರೆಯುತ್ತೇವೋ ಅವೆಲ್ಲಕ್ಕೂ ಈ ಮಾತು ಅನ್ವಯಿಸುತ್ತದೆ. ಈ ವಿಷಯಗಳೆಲ್ಲದರ ತಿಳಿವಳಿಕೆಯನ್ನೂ ನಾವು ಹುಟ್ಟುವುದಕ್ಕಿಂತ ಮುಂಚೆ ಪಡೆದೆವೆಂದು ಧಾರಾಳವಾಗಿ ಹೇಳಬಹುದಲ್ಲವೆ?"

"ಹೇಳಬಹುದು."

"ಹೀಗೆ ಪ್ರತಿಯೊಂದು ವಿಷಯದಲ್ಲೂ ತಿಳಿವಳಿಕೆಯನ್ನು ಪಡೆದ ಮೇಲೆ ಅದನ್ನು ನಾವು ಮರೆಯದೆ ಇದ್ದರೆ—'ನಾವು ಯಾವಾಗಲೂ ಈ ಜ್ಞಾನವನ್ನು ಹೊಂದಿಯೇ ಹುಟ್ಟುತ್ತೇವೆ; ಮತ್ತು ಬದುಕಿರುವವರೆಗೂ ಇದನ್ನು ಹೊಂದಿಯೇ ಇರುತ್ತೇವೆ' ಎನ್ನಬಹುದು. ಏಕೆಂದರೆ, ಜ್ಞಾನವೆನ್ನುವುದು

ತಿಳಿವಳಿಕೆಯನ್ನು ಪಡೆದು ಇಟ್ಟುಕೊಂಡಿರುವುದೇ ಹೊರತು ಮರೆತು ಬಿಡುವುದಿಲ್ಲ. ಮರೆಯುವುದೆಂದರೆ, ಜ್ಞಾನವನ್ನು ಕಳೆದುಕೊಳ್ಳುವುದೆಂದೇ ಅಲ್ಲವೆ, ಸಿಮಿಯಾಸ್ ?''

''ನಿಜ, ಸಾಕ್ರೆಟೀಸ್.''

''ಆದರೆ ನಾವು ಹುಟ್ಟುವುದಕ್ಕಿಂತ ಮುಂಚೆ ಪಡೆದ ಜ್ಞಾನವನ್ನು ಹುಟ್ಟಿದ ಕಾಲದಲ್ಲಿ ಕಳೆದುಕೊಂಡು, ಅನಂತರ ನಮ್ಮ ಇಂದ್ರಿಯಗಳನ್ನು ಉಪಯೋಗಿಸಿ ನಾವು ಮುಂಚೆ ಹೊಂದಿದ್ದ ಜ್ಞಾನವನ್ನು ಮತ್ತೆ ಪಡೆದರೆ—ನಾವು 'ಕಲಿತುಕೊಳ್ಳುವುದು' ಎಂದು ಕರೆಯುತ್ತೇವಲ್ಲ ಅದು ನಮಗೆ ಸ್ವಭಾವಸಿದ್ಧವಾದ ಜ್ಞಾನವನ್ನು ಮತ್ತೆ ಪಡೆಯುವುದೇ ತಾನೆ?—ಇದನ್ನು ನೆನಪೆಂದು ಕರೆಯುವುದು ಸರಿಯಲ್ಲವೆ ?''

''ಸರಿ.''

''ನಾವು ಕಣ್ಣಿನ, ಕಿವಿಯ ಅಥವಾ ಇತರ ಇಂದ್ರಿಯಗಳ ಮೂಲಕ ಯಾವುದನ್ನಾದರೂ ತಿಳಿದಾಗ, ನಾವು ಮರೆತಿದ್ದ ಮತ್ತೆ ಯಾವುದೋ ಒಂದು ಪದಾರ್ಥದ ಭಾವವನ್ನು ಆ ತಿಳಿವಳಿಕೆಯಿಂದ ಮನಸ್ಸಿಗೆ ತಂದು ಕೊಳ್ಳಬಲ್ಲೆವು. ಈ ಹೊಸ ವಸ್ತುವಿಗೂ ಮೊದಲನೆಯ ವಸ್ತುವಿಗೂ ಹೋಲಿಕೆ ಇರಲಿ ಇಲ್ಲದಿರಲಿ, ಅವೆರಡಕ್ಕೂ ಯಾವುದೋ ರೀತಿಯಲ್ಲಿ ಸಂಬಂಧವಿರುತ್ತದೆ. ಇಷ್ಟು ಸ್ಪಷ್ಟವಾಗಿದೆ. ಇದು ನಿಜವಾದರೆ, ನಾನು ಮುಂದೆ ಹೇಳುವ ಎರಡು ಮಾತುಗಳಲ್ಲಿ ಒಂದು ನಿಜವಾಗಿರಬೇಕು. ನಾವು ಆ ಜ್ಞಾನವನ್ನು ಹುಟ್ಟಿದ ಕಾಲದಲ್ಲಿ ಹೊಂದಿದ್ದದ್ದಲ್ಲದೆ ಬದುಕಿನ ಉದ್ದಕ್ಕೂ ಹೊಂದಿಯೇ ಇರಬೇಕು; ಅಥವಾ ಹುಟ್ಟಿದ ಮೇಲೆ ನಾವು ಕಲಿತುಕೊಳ್ಳುವುದೆಲ್ಲವೂ ನಿಜವಾಗಿ ನೋಡಿದರೆ, ಜ್ಞಾಪಿಸಿಕೊಳ್ಳುವುದಾಗಿರಬೇಕು. ಅಂದರೆ ನಮ್ಮ ಜ್ಞಾನವೆಲ್ಲ ಬರಿಯ ನೆನಪಾಗಿರಬೇಕು."

''ನೀನು ಹೇಳುವುದು ನಿಜ, ಸಾಕ್ರೆಟೀಸ್.''

''ಇವೆರಡರಲ್ಲಿ ಯಾವುದು ನಿಜವೆಂದು ತೋರುತ್ತದೆ ಹೇಳು, ಸಿಮಿಯಾಸ್. ನಾವು ಹುಟ್ಟಿದಾಗ ಈ ಜ್ಞಾನ ನಮಗೆ ಇದ್ದಿತೆ ಅಥವಾ ಹುಟ್ಟುವುದಕ್ಕೆ ಮುಂಚೆಯೇ ಇದ್ದ ಜ್ಞಾನವನ್ನು ಅನಂತರ ನೆನಪಿಗೆ ತಂದುಕೊಳ್ಳುವೆವೆ ?''

"ನಾನು ಈಗಲೇ ನಿರ್ಣಯಿಸಿ ಹೇಳಲಾರೆ, ಸಾಕ್ರೆಟೀಸ್."

"ಅದು ಹಾಗಿರಲಿ. ಜ್ಞಾನಿಯಾದವನು ತನ್ನಲ್ಲಿ ಏನು ಜ್ಞಾನವಿದೆಯೋ ಅದನ್ನು ಇತರರಿಗೆ ತಿಳಿಯಹೇಳಬಲ್ಲನಲ್ಲವೆ ? ಇದನ್ನು ಹೇಳು ನೋಡೋಣ, ಸಿಮಿಯಾಸ್."

"ಧಾರಾಳವಾಗಿ ತಿಳಿಯಹೇಳಬಹುದು."

"ಆದರೆ ನಾವು ಮೇಲೆ ಹೇಳಿದ ವಿಷಯಗಳನ್ನು ಕುರಿತು ಎಲ್ಲಾ ಜನರೂ ವಿವರವಾಗಿ ಮಾತಾಡಬಲ್ಲರೆ ?"

"ಹಾಗೆ ಮಾತಾಡುವ ಶಕ್ತಿಯಿದ್ದರೆ ಚೆನ್ನಾಗಿತ್ತು, ಸಾಕ್ರೆಟೀಸ್. ಆದರೆ ನಾಳೆ ಇಷ್ಟು ಹೊತ್ತಿಗೆ ಆ ವಿಷಯಗಳನ್ನು ಕುರಿತು ಸರಿಯಾದ ರೀತಿಯಲ್ಲಿ ಚರ್ಚಿಸಬಲ್ಲವನು ಒಬ್ಬನೂ ಇರುವುದಿಲ್ಲವೆಂದು ತೋರುತ್ತದೆ."

"ಹಾಗಾದರೆ, ಎಲ್ಲರಿಗೂ ಆ ವಿಷಯಗಳ ಜ್ಞಾನವಿರುವುದಿಲ್ಲವೆಂದು ತಾನೆ ನಿನ್ನ ಅಭಿಪ್ರಾಯ ?"

"ಹೌದು."

"ಹಾಗಾದರೆ, ಎಲ್ಲರೂ ತಾವು ಮೊದಲೇ ತಿಳಿದಿದ್ದ ವಿಷಯವನ್ನು ನೆನಪಿಗೆ ತಂದುಕೊಳ್ಳುವ ಸ್ಥಿತಿಯಲ್ಲಿದ್ದಾರೆ?"

"ಹೌದು, ನಿಸ್ಸಂದೇಹವಾಗಿ."

"ಆದರೆ ನಮ್ಮ ಆತ್ಮಗಳು ಈ ಜ್ಞಾನವನ್ನು ಪಡೆದದ್ದು ಯಾವಾಗ? ನಾವು ಮನುಷ್ಯರಾಗಿ ಹುಟ್ಟಿದ ಮೇಲೆ ಇರಲಾರದು."

"ನಿಜ, ಇರಲಾರದು."

"ಆದ್ದರಿಂದ ಹುಟ್ಟುವುದಕ್ಕೆ ಮುಂಚಿತವಾಗಿಯೇ ಇರಬೇಕು."

"ಹೌದು."

"ಹಾಗಾದರೆ, ನಮ್ಮ ಆತ್ಮಗಳು ಮನುಷ್ಯರೂಪವನ್ನು ಪಡೆಯುವುದಕ್ಕಿಂತ ಮೊದಲು ಶರೀರವಿಲ್ಲದೆಯೇ ಇದ್ದಿರಬೇಕು; ಅಲ್ಲದೆ ಬುದ್ಧಿಶಕ್ತಿಯನ್ನು ಹೊಂದಿದ್ದಿರಬೇಕು."

"ಅಥವಾ ಸಾಕ್ರೆಟೀಸ್, ನಮಗೆ ಈ ಜ್ಞಾನ ಹುಟ್ಟಿದ ಕ್ಷಣದಲ್ಲಿಯೇ ಬಂದಿರಬೇಕು. ಆ ಕಾಲದ ಯೋಚನೆಯನ್ನು ನಾವು ಮಾಡಿಲ್ಲ."

"ಹೌದು ಸಿಮಿಯಾಸ್. ಆದರೆ ನಾವು ಆ ಜ್ಞಾನವನ್ನು ಕಳೆದು ಕೊಳ್ಳುವುದು ಯಾವಾಗ? ನಾವು ಹುಟ್ಟಿದಾಗ ನಮ್ಮಲ್ಲಿ ಆ ಜ್ಞಾನವಿರುವುದಿಲ್ಲ; ಅದನ್ನು ನಾವು ಒಪ್ಪಿದ್ದೇವೆ. ಹಾಗಾದರೆ, ನಾವು ಆ ಜ್ಞಾನವನ್ನು ಪಡೆದ ಕ್ಷಣದಲ್ಲಿಯೇ ಕಳೆದುಕೊಳ್ಳುತ್ತೇವೆಯೆ? ಇಲ್ಲದಿದ್ದರೆ ಅದು ಹೋಗುವುದು ಯಾವಾಗ ಹೇಳಬಲ್ಲೆಯಾ?"

"ಇಲ್ಲ. ಸಾಕ್ರೆಟೀಸ್, ನಾನು ಯೋಚನೆ ಮಾಡದೆ ದಡ್ಡನಂತೆ ಮಾತಾಡಿದೆ."

"ನಾನು ಈಗ ಹೇಳುವುದು ನಿಜವೋ ಅಲ್ಲವೋ ನೋಡು, ಸಿಮಿಯಾಸ್. ಸೌಂದರ್ಯ, ಸದ್ಗುಣ ಮೊದಲಾದ ಪ್ರತಿಯೊಂದಕ್ಕೂ ಸಾರಭೂತವಾದದ್ದೊಂದು—ಪ್ರತಿಯೊಂದಕ್ಕೂ ಒಂದೊಂದು ಭಾವ (Idea)—ಇದೆಯೆಂದು ನಾವು ಅನೇಕ ವೇಳೆ ಹೇಳುತ್ತೇವಲ್ಲವೆ? ನಾವು ಹುಟ್ಟುವುದಕ್ಕಿಂತ ಮೊದಲಿನ ಸ್ಥಿತಿಯಲ್ಲಿದ್ದಾಗಲೂ ಈ ಭಾವಗಳು ಇದ್ದುವೆಂದು ಈಗ ತಾನೆ ತಿಳಿಯಬಂದಿತು. ಇಂದ್ರಿಯಗಳ ಮೂಲಕ ತಿಳಿಯುವ ಎಲ್ಲಾ ಪದಾರ್ಥಗಳನ್ನೂ ನಾವು ಮೊದಲೇ ನಮ್ಮವಾಗಿದ್ದ ಮತ್ತು ಈಗಲೂ ನಮ್ಮವಾಗಿರುವ ಈ ಭಾವಗಳಿಗೆ ಹೋಲಿಸಿ ನೋಡುತ್ತೇವೆ. ಇದೆಲ್ಲವೂ ನಿಜವಾದರೆ, ಈ ಜನ್ಮವನ್ನು ಹೊಂದುವುದಕ್ಕೆ ಮುಂಚೆಯೂ ನಮ್ಮ ಆತ್ಮಗಳು ಇದ್ದಿರಬೇಕು. ಮೊದಲು ಹೇಳಿದಂತೆ ಭಾವಗಳು ಇಲ್ಲದಿದ್ದರೆ, ನಮ್ಮ ಇದುವರೆಗಿನ ಚರ್ಚೆಯೆಲ್ಲ ನಿರರ್ಥಕವಾಗುತ್ತದೆ. ಈ ಭಾವಗಳು ಇರುವುದು ನಿಜವಾದರೆ, ನಮ್ಮ ಆತ್ಮಗಳೂ ನಾವು ಹುಟ್ಟುವುದಕ್ಕೆ ಮುಂಚೆಯೇ ಇದ್ದಿರಬೇಕು; ಅವು ಇಲ್ಲದಿದ್ದರೆ ನಮ್ಮ ಆತ್ಮಗಳೂ ಇರಲಿಲ್ಲ."

"ನಿಜ. ಸಾಕ್ರೆಟೀಸ್, ನೀನು ಇದನ್ನು ಬಹು ಚೆನ್ನಾಗಿ ವಿವರಿಸಿದೆ. ಇವೆರಡರಲ್ಲಿ ಒಂದು ಇದ್ದರೆ ಮತ್ತೊಂದು ಇರಲೇ ಬೇಕೆಂದು ನನಗೆ ಮನದಟ್ಟಾಯಿತು. ಈಗ ನಮ್ಮ ಚರ್ಚೆ ಸುರಕ್ಷಿತವಾದ ಒಂದು ಘಟ್ಟವನ್ನು ಸೇರಿದ ಹಾಗಾಯಿತು. ನೀನು ಹೇಳಿದ ಸಾರವಸ್ತುವಿನ ಅಥವಾ ಭಾವದ ಇರುವಿಕೆಯನ್ನೂ ನಮ್ಮ ಆತ್ಮಗಳ ಹುಟ್ಟುವುದಕ್ಕೆ ಮುಂಚಿನ ಇರುವಿಕೆ

ಯನ್ನೂ ಬೇರೆ ಬೇರೆ ಆಲೋಚಿಸುವುದಕ್ಕಾಗುವುದಿಲ್ಲ. ಎರಡಕ್ಕೂ ಒಂದೇ ಸಮರ್ಥನೆ. ಒಂದು ನಿಜವಾದರೆ ಮತ್ತೊಂದೂ ನಿಜ. ನೀನು ಹೇಳಿದ ಸೌಂದರ್ಯ, ಸದ್ಗುಣ ಮೊದಲಾದ ಭಾವಗಳು ಇದ್ದೇ ಇವೆ ಯೆಂದು ನನಗೆ ನಿಶ್ಚಲವಾದ ನಂಬಿಕೆಯಿದೆ; ನನ್ನ ಮನಸ್ಸಿಗೆ ಅವುಗಳಿಗಿಂತ ಸತ್ಯವಾದದ್ದು ಮತ್ತೇನೂ ಇಲ್ಲವೆಂದು ತೋರುತ್ತದೆ. ನೀನು ಹೇಳಿದ್ದು ನನಗೆ ಸಮರ್ಪಕವಾಗಿದೆ."

ಅದಕ್ಕೆ ಸಾಕ್ರೆಟೀಸನು, "ಆದರೆ ಅದು ಸೀಬೀಸಿಗೂ ಸಮರ್ಪಕವಾಗಿದೆಯೆ ? ನಾನು ಅವನನ್ನೂ ಒಪ್ಪಿಸಬೇಕಲ್ಲ" ಎಂದನು.

"ಸೀಬೀಸಿಗೂ ಅದು ಸಮರ್ಪಕವಾಗಿದೆಯೆಂದೇ ತೋರುತ್ತದೆ. ಅವನದು ಬಹಳ ಸಂಶಯಪ್ರಕೃತಿ. ಆದರೆ ನಾವು ಹುಟ್ಟುವುದಕ್ಕೆ ಮುಂಚೆಯೂ ನಮ್ಮ ಆತ್ಮಗಳು ಇದ್ದುವೆಂದು ಅವನಿಗೂ ನಂಬಿಕೆಯುಂಟಾಗಿದೆ. ಆದರೆ ನನಗೇ ಇನ್ನೊಂದು ಸಂದೇಹ ಉಳಿದಿದೆ. ನಾವು ಸತ್ತ ಮೇಲೂ ನಮ್ಮ ಆತ್ಮಗಳು ಉಳಿದಿರುತ್ತವೆಯೆಂಬುದನ್ನು ಇನ್ನೂ ನಿರ್ಣಯಿಸಿದ ಹಾಗಾಗಲಿಲ್ಲವೆಂದು ತೋರುತ್ತದೆ. ಸೀಬೀಸ್ ಹೇಳಿದಂತೆ ಆತ್ಮವು ಮರಣಾನಂತರದಲ್ಲಿ ಗಾಳಿಯಂತಾಗಿ ನಾಶವಾಗುವುವೆಂದು ಸಾಧಾರಣ ಜನರು ಭಯಪಡುತ್ತಾರೆ. ಆ ಭಯವನ್ನು ನಾವು ಇನ್ನೂ ಹೋಗಲಾಡಿಸಿಲ್ಲ. ಆತ್ಮವು ಬೇರೆ ಎಲ್ಲಿಯೋ ಹುಟ್ಟಿತೆಂದೂ ಇತರ ವಸ್ತುಗಳ ಸೇರುವಿಕೆಯಿಂದ ಉತ್ಪನ್ನವಾಯಿತೆಂದೂ ಈ ಮನುಷ್ಯ ಶರೀರವನ್ನು ಪ್ರವೇಶಿಸುವುದಕ್ಕೆ ಮುಂಚೆಯೂ ಇದ್ದಿತೆಂದೂ ಒಪ್ಪಿಕೊಳ್ಳೋಣ. ಆದರೆ ಅದು ಮನುಷ್ಯಶರೀರವನ್ನು ಪ್ರವೇಶಿಸಿ ಮತ್ತೆ ಅಲ್ಲಿಂದ ಹೊರಟುಹೋದ ಮೇಲೆ ನಾಶಹೊಂದಿ ಶೂನ್ಯವಾಗುವುದಿಲ್ಲವೆಂದು ಹೇಗೆ ಗೊತ್ತು ? ಹಾಗೇಕೆ ಆಗಬಾರದು ?"

ಸೀಬೀಸನು "ಹೌದು, ಸಿಮಿಯಾಸ್. ಈಗ ನಾವು ಕೇಳಿದ್ದರಲ್ಲಿ ಅರ್ಧಭಾಗ ಮಾತ್ರ, ಅಂದರೆ ನಾವು ಹುಟ್ಟುವುದಕ್ಕೆ ಮುಂಚೆಯೇ ಆತ್ಮವು ಎಲ್ಲೋ ಇದ್ದಿತೆಂದು ಮಾತ್ರ, ನಿರ್ಧರಮಾಡಿಕೊಟ್ಟಂತಾಯಿತು. ಉಳಿದ ಅರ್ಧ ಭಾಗ, ಅಂದರೆ ನಾವು ಹುಟ್ಟುವುದಕ್ಕೆ ಮುಂಚೆ ಮಾತ್ರವೇ

ಅಲ್ಲದೆ ನಾವು ಸತ್ತ ಮೇಲೆಯೂ ಆತ್ಮವು ಇರುವುದೆನ್ನುವುದು, ಇನ್ನೂ ನಮಗೆ ಸ್ಪಷ್ಟವಾಗಿಲ್ಲ. ಅದು ಸ್ಪಷ್ಟವಾಗುವಂತೆ ಏನಾದರೂ ವಾದವನ್ನು ಒದಗಿಸಿ ಕೊಡಬೇಕು. ಹಾಗೆ ಮಾಡಿದರೆ ಈ ವಿಷಯದಲ್ಲಿ ನಮಗೆ ಸಂಪೂರ್ಣವಾದ ತಿಳಿವಳಿಕೆ ಕೊಟ್ಟ ಹಾಗಾಗುತ್ತದೆ'' ಎಂದನು.

ಅದಕ್ಕೆ ಸಾಕ್ರೆಟೀಸನು ಹೀಗೆ ಉತ್ತರ ಕೊಟ್ಟನು: ''ಸಿಮಿಯಾಸ್, ಸೀಬೀಸ್, ಆ ವಿಷಯವನ್ನು ಆಗಲೇ ನಿರ್ಧರ ಮಾಡಿಕೊಟ್ಟಿಲ್ಲವೆ? ಬದುಕಿರುವುದೆಲ್ಲವೂ ಸತ್ತದ್ದರಿಂದ ಹುಟ್ಟುತ್ತದೆಂದು ನಾವು ಹಿಂದೆ ಒಪ್ಪಿಕೊಂಡೆವಲ್ಲ, ಅದನ್ನೂ ಈಗಿನ ನಮ್ಮ ವಾದವನ್ನೂ ಒಟ್ಟಿಗೆ ಸೇರಿಸಿ ನೋಡು. ನಾವು ಹುಟ್ಟುವುದಕ್ಕಿಂತ ಮೊದಲೇ ಆತ್ಮವು ಇದ್ದಿತು; ಅದು ಜೀವವನ್ನು ಪಡೆಯುವುದೂ ಹುಟ್ಟುವುದೂ ಮರಣದಿಂದಲೇ. ಹಾಗಾದರೆ, ಆತ್ಮವು ಮತ್ತೆ ಹುಟ್ಟಲೇಬೇಕಾದ್ದರಿಂದ ನಾವು ಸತ್ತ ಮೇಲೂ ಅದು ಇದ್ದೇ ಇರಬೇಕು. ನೀವು ಕೇಳಿದ ಹಾಗೆಯೇ ಈ ವಿಷಯವು ನಿರ್ಧರವಾಯಿತಲ್ಲವೆ? ಆದರೂ ನಿನಗೂ ಸಿಮಿಯಾಸಿಗೂ ಈ ವಿಷಯವನ್ನು ಇನ್ನೂ ಸ್ವಲ್ಪ ಚರ್ಚೆ ಮಾಡಲು ಇಷ್ಟವಿದೆಯೆಂದು ತೋರುತ್ತದೆ. ಆತ್ಮವು ಶರೀರವನ್ನು ಬಿಟ್ಟುಹೋದ ಮೇಲೆ ಅದು ನಿಜವಾಗಿ ಗಾಳಿಯಲ್ಲಿ ತೂರಿಹೋಗಬಹುದೆಂದು ಭಾವಿಸಿ, ನೀವು ಮಕ್ಕಳು ಹೆದರುವಂತೆ ಹೆದರಿದ್ದೀರಿ. ಅದರಲ್ಲೂ ಹವ ಚೆನ್ನಾಗಿದ್ದಾಗ ಸಾಯದೆ ಬಿರುಗಾಳಿ ಬೀಸುತ್ತಿರುವಾಗ ಯಾರಾದರೂ ಸತ್ತರೆ ಅವರ ಆತ್ಮಕ್ಕಂತೂ ಉಳಿಗಾಲವೇ ಇಲ್ಲ, ಅಲ್ಲವೆ?''

ಸೀಬೀಸ್ ಸ್ವಲ್ಪ ನಕ್ಕನು. ''ಹಾಗೇ ಇರಬಹುದು ಸಾಕ್ರೆಟೀಸ್. ನೀನು ಈ ವಿಷಯವನ್ನು ಚರ್ಚೆಮಾಡಿ ಆ ಭಯವನ್ನು ತೊಲಗಿಸಬೇಕು. ಆದರೆ ನ್ಯಾಯವಾಗಿ ನೋಡಿದರೆ ಆ ಭಯ ನಮ್ಮದಲ್ಲ. ಸಾವು ಒಂದು ವಿಧವಾದ ಭೂತವೆಂದು ಭಾವಿಸಿ ಹೆದರುವ ಮಗುವೊಂದು ನಮ್ಮೊಳಗೆ ಇದೆ. ಆ ಮಗು ಕತ್ತಲೆಯಲ್ಲಿ ಒಂಟಿಯಾಗಿರುವಾಗ ಹೆದರದಂತೆ ಅದಕ್ಕೆ ಧೈರ್ಯ ಕೊಡಬೇಕು.''

GANDHI SMARAKA GRANTHALAYA
BANGALORE

ಅದಕ್ಕೆ ಸಾಕ್ರೆಟೀಸನು ''ಹಾಗಾದರೆ, ಮಾಂತ್ರಿಕನನ್ನು ಕರಸಿ ಆ ಭಯ ಹೋಗುವವರೆಗೂ ಮಂತ್ರ ಹಾಕಿಸಬೇಕು'' ಎಂದನು.

''ನೀನು ಹೋದ ಮೇಲೆ ನಮಗೆ ಅಂಥ ಶಕ್ತಿವಂತನಾದ ಮಾಂತ್ರಿಕ ನೆಲ್ಲಿ ಸಿಕ್ಕುತ್ತಾನೆ, ಸಾಕ್ರೆಟೀಸ್ ?''

''ಅದಕ್ಕೇನು, ಸೀಬೀಸ್, ಹೆಲಾಸ್ ದೊಡ್ಡ ದೇಶ; ಅದರಲ್ಲಿ ಉತ್ತಮ ರಾದ ಜನರು ಎಷ್ಟೋ ಇದ್ದಾರೆ. ಅಥವಾ ಗ್ರೀಕರನ್ನು ಬಿಟ್ಟರೂ ಇತರ ಜನಾಂಗಗಳೆಷ್ಟೋ ಇವೆ. ತೊಂದರೆಗೂ ವೆಚ್ಚಕ್ಕೂ ಹೆದರದೆ ನೀವು ಎಲ್ಲಾ ಕಡೆಗಳಲ್ಲೂ ಹುಡುಕಿನೋಡಬೇಕು. ನಿಮ್ಮ ಹಣವನ್ನು ವೆಚ್ಚ ಮಾಡುವುದಕ್ಕೆ ಅದಕ್ಕಿಂತ ಉತ್ತಮವಾದ ದಾರಿಯಿಲ್ಲ. ಅದಲ್ಲದೆ ಆ ಮಾಂತ್ರಿಕನನ್ನು ನೀವು ನಿಮ್ಮೊಳಗೂ ಹುಡುಕಬೇಕು. ನಿಮಗಿಂತ ಚೆನ್ನಾಗಿ ಹುಡುಕುವವರು ಇನ್ನು ಯಾರೂ ಸಿಕ್ಕುವುದಿಲ್ಲ, ಸೀಬೀಸ್.''

"ನಾವೇನೋ ಹುಡುಕಿಯೇ ಹುಡುಕುತ್ತೇವೆ. . . . .ಈಗ ನಿನಗೆ ಇಷ್ಟ ವಿದ್ದರೆ ಚರ್ಚೆಯನ್ನು ಬಿಟ್ಟ ಕಡೆಯಿಂದ ಮುಂದುವರಿಸೋಣವೆ?"

"ಆಗಲಿ, ನನಗೆ ಅದಕ್ಕಿಂತ ಇಷ್ಟವಾದದ್ದೇನಿದೆ ?"

"ಸರಿ."

ಸಾಕ್ರೆಟೀಸನು ಮತ್ತೆ ಚರ್ಚೆಗಾರಂಭಿಸಿದನು. ''ಗಾಳಿಯಲ್ಲಿ ತೂರಿ ಹೋಗಬಹುದು ಎಂದು ಭಾವಿಸಿ ನಾವು ಹೆದರುತ್ತೇವಲ್ಲ, ಹಾಗೆ ತೂರಿ ಹೋಗಬಹುದಾದದ್ದು ಏನು ಎಂದು ಮೊದಲು ಯೋಚಿಸಬೇಕು; ನಮಗೆ ಇಂಥ ಹೆದರಿಕೆ ಇಲ್ಲದಿರುವುದು ಯಾವ ವಿಷಯದಲ್ಲಿ ಎಂದೂ ಯೋಚಿಸಬೇಕು. ಇದು ತಿಳಿದ ನಂತರ ಹೀಗೆ ಗಾಳಿಯಲ್ಲಿ ಹರಡಿ ಹೋಗುವ ವಸ್ತು ಆತ್ಮದ ಸ್ವಭಾವವುಳ್ಳದ್ದೇ ಅಲ್ಲವೇ ಎಂಬ ವಿಷಯ ವನ್ನು ಚರ್ಚಿಸಬಹುದು. ನಮ್ಮ ಭಯ, ನಂಬಿಕೆ, ಆಶೆ—ಇವೆಲ್ಲಕ್ಕೂ ಈ ಪ್ರಶ್ನೆಗಳಿಗೆ ನಾವು ಕೊಡುವ ಉತ್ತರಗಳೇ ಆಧಾರಗಳಾಗುತ್ತವೆ.''

''ನಿಜ.''

''ಈಗ ಒಂದು ಸಂಯುಕ್ತ ವಸ್ತು ಹೇಗೆ ಕೂಡಬಲ್ಲುದೋ ಹಾಗೆಯೇ ಬೇರೆಬೇರೆಯಾಗಬಲ್ಲುದೆಂದು ಹೇಳಬಹುದಲ್ಲವೆ? ಪ್ರಪಂಚದಲ್ಲಿ ಬೇರೆ

ಬೇರೆಯಾಗದೆಯೇ ಇರುವ ವಸ್ತುವೇನಾದರೂ ಇದ್ದರೆ ಅದು ಸಂಯುಕ್ತವಲ್ಲದ ವಸ್ತುವೇ ಆಗಿರಬೇಕು.''

ಸೀಬೀಸನು ''ಹೌದು, ಹಾಗೇ ಇರಬೇಕು'' ಎಂದನು.

''ಸಂಯುಕ್ತವಲ್ಲದ ವಸ್ತು ಯಾವಾಗಲೂ ಒಂದೇ ಸ್ಥಿತಿಯಲ್ಲಿರುತ್ತದೆ, ಬದಲಾವಣೆಯನ್ನು ಹೊಂದುವುದಿಲ್ಲ; ಆದರೆ ಸಂಯುಕ್ತವಾದದ್ದು ಯಾವಾಗಲೂ ಬದಲಾವಣೆ ಹೊಂದುತ್ತಿರುತ್ತದೆ, ಒಂದೇ ಸ್ಥಿತಿಯಲ್ಲಿರುವುದಿಲ್ಲ.''

ಸೀಬೀಸನು. ''ನಾನು ಅದನ್ನೂ ಒಪ್ಪುತ್ತೇನೆ'' ಎಂದನು.

''ನಾವು ಹಿಂದೆ ಚರ್ಚಿಸಿದ ಭಾವದ ವಿಷಯವನ್ನು ಈಗ ಮತ್ತೆ ನೆನಪಿಗೆ ತಂದುಕೊಳ್ಳೋಣ. ಆ ಭಾವ, ಆ ಸಾರವಸ್ತು—ಅದು ಸಮತೆಯದಾಗಿರಲಿ ಸೌಂದರ್ಯದ್ದಾಗಿರಲಿ ಮತ್ತೆ ಯಾವ ಪದಾರ್ಥದ್ದಾಗಿರಲಿ—ನಾವು ಸತ್ (True Existence) ಅಥವಾ ಸಾರ (Essence) ಎಂದು ಹೇಳುವ ಪದಾರ್ಥ—ಅದು ವ್ಯತ್ಯಾಸಕ್ಕೆ ಒಳಗಾಗುವುದು ಸಾಧ್ಯವೆ? ಅಥವಾ ಅದು ಯಾವಾಗಲೂ ಒಂದೇ ಆಗಿರುತ್ತದೆ, ಯಾವ ಕಾಲದಲ್ಲಿಯೂ ಯಾವ ವಿಧವಾದ ವ್ಯತ್ಯಾಸವನ್ನೂ ಅರಿಯದೆ ಒಂದೇ ಸ್ಥಿತಿಯಲ್ಲಿರುತ್ತದೆ ಎಂದು ಹೇಳೋಣವೆ?"

" ಅದು ಯಾವಾಗಲೂ ಒಂದೇ ಸ್ಥಿತಿಯಲ್ಲಿಯೇ ಇರಬೇಕು."

" ಮನುಷ್ಯರು, ಕುದುರೆಗಳು, ವಸ್ತ್ರಗಳು ಮೊದಲಾದ ಸುಂದರವಾದ ವಸ್ತುಗಳು ಅನೇಕವಿವೆಯಲ್ಲ, ಅವುಗಳ ವಿಷಯದಲ್ಲಿ ಏನು ಹೇಳೋಣ? ಸಮವಾದದ್ದು, ಸುಂದರವಾದದ್ದು ಮುಂತಾದ ಒಂದೊಂದು ಹೆಸರಿನಿಂದ ಕರೆಸಿಕೊಳ್ಳುವ ಇತರ ಪದಾರ್ಥಗಳೋ? ಅವೂ ವ್ಯತ್ಯಾಸ ಹೊಂದದೆ ಯಾವಾಗಲೂ ಒಂದೇ ಸ್ಥಿತಿಯಲ್ಲಿರುತ್ತವೋ ಅಥವಾ ಅದಕ್ಕೆ ವ್ಯತಿರಿಕ್ತವಾದ ಬದಲಾವಣೆಯ ಸ್ಥಿತಿಯಲ್ಲಿರುತ್ತವೋ? ಅವು ಹೆಚ್ಚುಕಡಿಮೆ ಸರ್ವದಾ ಬದಲಾವಣೆ ಹೊಂದುತ್ತಲೇ ಇರುತ್ತವೆ. ತಮ್ಮೊಳಗೇ ಆಗಲಿ ಇತರ ವಸ್ತುಗಳೊಡನೆ ಇರುವಾಗಲೇ ಆಗಲಿ, ಅವು ಒಂದೇ ಸ್ಥಿತಿಯಲ್ಲಿರುವುದೇ ಇಲ್ಲ. ಹೀಗೆ ಹೇಳಬಹುದಲ್ಲವೆ?"

"ಹೌದು, ಅವು ಯಾವಾಗಲೂ ಬದಲಾವಣೆಹೊಂದುತ್ತಲೇ ಇರುತ್ತವೆ."

"ಆ ವಸ್ತುಗಳನ್ನು ನೀನು ಮುಟ್ಟಬಹುದು, ನೋಡಬಹುದು, ಇಂದ್ರಿಯಗಳ ಮೂಲಕ ಅವುಗಳನ್ನು ತಿಳಿಯಬಹುದು. ಆದರೆ ವ್ಯತ್ಯಾಸ ರಹಿತವಾದ ವಸ್ತುಗಳನ್ನು ಮನಸ್ಸಿನಿಂದ ಮಾತ್ರ ತಿಳಿಯಬಹುದು. ಅವು ಅಗೋಚರವಾದುವು, ಅವನ್ನು ಕಣ್ಣಿನಿಂದ ನೋಡಲಾಗುವುದಿಲ್ಲ."

"ನಿಜ."

"ಸರಿ. ಈಗ ಎರಡು ವಿಧವಾದ ಇರುವಿಕೆಗಳಿವೆಯೆಂದು ಭಾವಿಸೋಣ–ಗೋಚರವಾದದ್ದು, ಅಗೋಚರವಾದದ್ದು."

"ಹಾಗೆಯೇ ಭಾವಿಸೋಣ."

"ಗೋಚರವಾದದ್ದು ಸದಾ ವ್ಯತ್ಯಾಸಹೊಂದುತ್ತಿರುತ್ತದೆ; ವ್ಯತ್ಯಾಸ ಹೊಂದದಿರುವುದೇ ಅಗೋಚರವಾದದ್ದು."

"ಅದನ್ನೂ ಒಪ್ಪಿಕೊಳ್ಳಬಹುದು."

"ಮನುಷ್ಯರಲ್ಲಿ ಒಂದು ಭಾಗ ಶರೀರ, ಮತ್ತೊಂದು ಭಾಗ ಆತ್ಮ, ಅಲ್ಲವೆ?"

"ಹೌದು."

"ಶರೀರವು ಮೇಲೆ ಹೇಳಿದ ಎರಡು ವರ್ಗಗಳಲ್ಲಿ ಯಾವುದನ್ನು ಹೆಚ್ಚು ಹೋಲುತ್ತದೆ? ಯಾವುದಕ್ಕೆ ಹೆಚ್ಚು ಸಂಬಂಧಪಟ್ಟಿದೆ?"

"ಗೋಚರವಾದದ್ದಕ್ಕೆ; ಆ ವಿಚಾರದಲ್ಲಿ ಸಂದೇಹವೇ ಇಲ್ಲ."

"ಆತ್ಮ ಗೋಚರವಾದದ್ದೋ ಅಗೋಚರವಾದದ್ದೋ?"

"ಮನುಷ್ಯರಿಗೆ ಅದು ಅಗೋಚರವಾದದ್ದೇ."

"ಗೋಚರವಾದದ್ದು, ಇಲ್ಲದ್ದು ಎಂದರೆ ಮನುಷ್ಯರ ಕಣ್ಣಿಗೆ ಕಾಣುವುದು ಅಥವಾ ಇಲ್ಲದ್ದು ಎಂದು ತಾನೇ ಅರ್ಥ?"

"ಹೌದು, ಮನುಷ್ಯರ ಕಣ್ಣಿಗೆ ಕಾಣುವುದು ಅಥವಾ ಇಲ್ಲದ್ದು."

"ಹಾಗಾದರೆ, ಆತ್ಮದ ವಿಷಯದಲ್ಲಿ ಏನು ಹೇಳೋಣ? ಅದು ನಮಗೆ ಕಾಣುತ್ತದೆಯೇ ಇಲ್ಲವೇ?

"ಕಾಣುವುದಿಲ್ಲ."

"ಅದು ಅಗೋಚರವಾದದ್ದು ?"

"ಹೌದು."

"ಹಾಗಾದರೆ, ಆತ್ಮಕ್ಕೂ ಅಗೋಚರವಾದದ್ದಕ್ಕೂ ಹೆಚ್ಚು ಹೋಲಿಕೆಯಿದೆ; ಶರೀರಕ್ಕೂ ಗೋಚರವಾದದ್ದಕ್ಕೂ ಹೆಚ್ಚು ಹೋಲಿಕೆಯಿದೆ."

"ಇದ್ದೇ ಇರಬೇಕು."

"ಆತ್ಮವು ಪ್ರಪಂಚದಲ್ಲಿ ಏನನ್ನಾದರೂ ಶರೀರದ ಮೂಲಕ ತಿಳಿಯಬೇಕಾದಾಗ ಕಣ್ಣುಕಿವಿಗಳನ್ನೋ ಇತರ ಇಂದ್ರಿಯಗಳನ್ನೋ ಉಪಯೋಗಿಸುತ್ತದೆ. ಶರೀರದ ಮೂಲಕ ಏನನ್ನಾದರೂ ತಿಳಿಯುವುದೆಂದರೆ, ಇಂದ್ರಿಯಗಳ ಮೂಲಕ ತಿಳಿಯುವುದೆಂದು ತಾನೆ ಅರ್ಥ ? ಆಗ ಶರೀರವು ಆತ್ಮವನ್ನೂ ಸಹ ವ್ಯತ್ಯಾಸ ಹೊಂದುತ್ತಿರುವ ಪ್ರಪಂಚಕ್ಕೆ ಎಳೆಯುತ್ತದೆ; ಆದ್ದರಿಂದ ಆತ್ಮವು ವ್ಯತ್ಯಾಸದ ಸಂಪರ್ಕಕ್ಕೆ ಬಿದ್ದು ಕುರುಡನಂತೆ ದಾರಿತೋರದೆ ಅಲೆಯುತ್ತದೆ, ಹೆಂಡಕುಡುಕನಂತೆ ಮತಿಗೆಟ್ಟು ಭ್ರಮೆಗೆ ಒಳಗಾಗುತ್ತದೆ. ಇದನ್ನು ನಾವು ಮೊದಲೇ ಒಪ್ಪಿಕೊಂಡೆವಲ್ಲವೆ ?"

"ಹೌದು."

"ಆದರೆ ಯಾವ ವಿಷಯವನ್ನಾಗಲಿ ಆತ್ಮವು ಸ್ವತಃ ಪರಿಶೀಲಿಸಿದಾಗ, ಅದು ಪರಿಶುದ್ಧವಾದ, ನಿತ್ಯವಾದ, ಅಮರವಾದ, ವ್ಯತ್ಯಾಸರಹಿತ ಪ್ರಪಂಚಕ್ಕೆ ಹೊರಟು ಹೋಗುತ್ತದೆ. ಅದು ಆ ಪ್ರಪಂಚಕ್ಕೇ ಸಂಬಂಧಪಟ್ಟದ್ದು; ಯಾವ ಅಡಚಣೆಯೂ ಇಲ್ಲದೆ ಸ್ವತಂತ್ರವಾಗಿದ್ದರೆ ಅದು ಯಾವಾಗಲೂ ಅಲ್ಲಿಯೇ ವಾಸಿಸುತ್ತದೆ. ಆಗ ಅದು ಅಲೆಯುವುದನು ಬಿಟ್ಟು, ಶಾಂತಿಹೊಂದುತ್ತದೆ; ವ್ಯತ್ಯಾಸವಿಲ್ಲದ ಆವರಣದಲ್ಲಿರುವುದರಿಂದ ತಾನೂ ಯಾವ ವ್ಯತ್ಯಾಸವನ್ನೂ ಹೊಂದುವುದಿಲ್ಲ. ಆತ್ಮದ ಈ ಸ್ಥಿತಿಗಲ್ಲವೇ ಜ್ಞಾನವೆಂದು ಹೆಸರು ?"

"ಹೌದು, ಸಾಕ್ರೆಟೀಸ್. ನೀನು ಹೇಳುವುದು ಸತ್ಯವಾದ ಮಾತು."

"ಈ ಎರಡು ವಿಧವಾದ ಇರುವಿಕೆಗಳಲ್ಲಿ ಯಾವುದು ಆತ್ಮಕ್ಕೆ ಸಹಜವಾದದ್ದು ? ಯಾವುದು ಅದಕ್ಕೆ ಹೆಚ್ಚು ಹೊಂದುತ್ತದೆ ? ಈ ವಿಷಯವನ್ನು ಇಷ್ಟು ಚರ್ಚೆಮಾಡಿದೆವಲ್ಲ, ಈಗ ನಿನಗೆ ಹೇಗೆ ತೋರುತ್ತದೆ ಹೇಳು."

"ಸಾಕ್ರೆಟೀಸ್, ಇಷ್ಟು ಚರ್ಚೆಯಾದ ಮೇಲೆ ಎಂಥ ಮೂಢನಾದರೂ ವ್ಯತ್ಯಾಸವುಳ್ಳದ್ದಕ್ಕಿಂತ ವ್ಯತ್ಯಾಸರಹಿತವಾದದ್ದಕ್ಕೆ ಆತ್ಮ ಲಕ್ಷ ಪಾಲು ಹೆಚ್ಚು ಹೊಂದಿಕೊಳ್ಳುತ್ತದೆಂದು ಒಪ್ಪದೆ ಇರಲಾರನು."

"ಶರೀರವೋ ?"

"ಅದಕ್ಕೂ ವ್ಯತ್ಯಾಸವುಳ್ಳದ್ದಕ್ಕೂ ಹೋಲಿಕೆ ಹೆಚ್ಚು."

"ಇದನ್ನು ಮತ್ತೊಂದು ರೀತಿಯಲ್ಲಿ ಪರಿಶೀಲಿಸಿ ನೋಡೋಣ. ಆತ್ಮವೂ ದೇಹವೂ ಒಂದಾಗಿ ಸೇರಿರುವಾಗ ಆತ್ಮವು ಯಜಮಾನನಾಗಿದ್ದು ಆಳುವಂತೆಯೂ ದೇಹವು ವಿಧೇಯತೆಯಿಂದ ಸೇವೆ ಮಾಡುವಂತೆಯೂ ಪ್ರಕೃತಿ ಕಟ್ಟು ಮಾಡಿರುತ್ತದೆ. ಇವೆರಡು ಕಾರ್ಯಗಳಲ್ಲಿ ದೈವಿಕವಾದದ್ದಕ್ಕೆ ಯಾವುದು ಸಹಜ, ಮರ್ತ್ಯರಿಗೆ ಯಾವುದು ಸಹಜ, ಹೇಳು. ದೈವಿಕ ವಾದದ್ದಕ್ಕೆ ಆಳುವುದೂ ಅಧಿಕಾರ ಮಾಡುವುದೂ ಸಹಜ, ಮರ್ತ್ಯ ವಾದದ್ದಕ್ಕೆ ದಾಸ್ಯದಲ್ಲಿರುವುದೂ ಆಳಿಕೆಗೊಳಪಟ್ಟಿರುವುದೂ ಸಹಜ, ಅಲ್ಲವೆ?"

"ಹೌದು."

"ಆತ್ಮ ಇವೆರಡರಲ್ಲಿ ಯಾವುದನ್ನು ಹೋಲುತ್ತದೆ ?"

"ಆತ್ಮ ದೈವಿಕವಾದದ್ದನ್ನು ಹೋಲುತ್ತದೆ, ಶರೀರ ಮರ್ತ್ಯವಾದದ್ದನ್ನು ಹೋಲುತ್ತದೆ. ಈ ವಿಷಯದಲ್ಲಿ ಸಂದೇಹಕ್ಕೆ ಅವಕಾಶವಿಲ್ಲ."

"ಒಟ್ಟಿನಲ್ಲಿ ನಮ್ಮ ಚರ್ಚೆಯಿಂದ ತಿಳಿದುಬಂದಿರುವುದೇನು ಹೇಳು, ಸೀಬೀಸ್. ಆತ್ಮ ದೈವಿಕವಾದ, ಅಮರವಾದ, ಮನಸ್ಸಿನಿಂದ ತಿಳಿಯ ಬಹುದಾದ, ಒಂದೇ ಸ್ಥಿತಿಯಲ್ಲಿರುವ, ನಾಶರಹಿತವಾದ ಮತ್ತು ವ್ಯತ್ಯಾಸಕ್ಕೆ ಸಿಕ್ಕದೆ ಇರುವ ವಸ್ತುಗಳನ್ನು ಹೆಚ್ಚು ಹೋಲುತ್ತದೆ. ಶರೀರ ಮನುಷ್ಯ ಸಂಬಂಧವಾದ, ಮನಸ್ಸಿಗೆ ಸಂಬಂಧಪಡದಿರುವ, ಅನೇಕ ಸ್ಥಿತಿಗಳನ್ನು ಹೊಂದುವ, ನಾಶವುಳ್ಳ ಮತ್ತು ವ್ಯತ್ಯಾಸಕ್ಕೆ ಒಳಪಡುವ ವಸ್ತುಗಳನ್ನು ಹೆಚ್ಚು ಹೋಲುತ್ತದೆ. ಇದು ಸುಳ್ಳೆಂದು ಹೇಳುವುದಕ್ಕೆ ಏನಾದರೂ ಆಧಾರವಿದೆಯೆ, ಸೀಬೀಸ್ ?"

"ಇಲ್ಲ."

"ಹಾಗಾದರೆ, ಬೇಗ ನಾಶವಾಗಿ ಹೋಗುವುದೇ ಶರೀರದ ಸ್ವಭಾವ; ಸಂಪೂರ್ಣವಾಗಿ ಅಥವಾ ಸಂಪೂರ್ಣವಾಗಿ ಎಂದೇ ಹೇಳಬಹುದಾದಷ್ಟು ನಾಶರಹಿತವಾಗಿರುವುದು ಆತ್ಮದ ಸ್ವಭಾವ, ಅಲ್ಲವೆ?"

"ಹೌದು."

"ಒಬ್ಬ ಮನುಷ್ಯನು ಸತ್ತಮೇಲೆ ಅವನಲ್ಲಿ ಕಣ್ಣಿಗೆ ಕಾಣುವ ಭಾಗವಾದ ಶರೀರವು ಪ್ರತ್ಯಕ್ಷಪ್ರಪಂಚದಲ್ಲಿ ಬಿದ್ದಿದ್ದು, ಶವವೆನ್ನಿಸಿಕೊಂಡು, ಕೊಳೆತು ನಾಶವಾಗಿ ಹೋಗುವ ವಸ್ತು. ಆ ವಸ್ತು ಕೂಡ ಸತ್ತ ಕ್ಷಣವೇ ಕೊಳೆತು ನಾಶವಾಗುವುದಿಲ್ಲ; ಸ್ವಲ್ಪಕಾಲ—ಸತ್ತವನು ಪ್ರಾಯದವನಾಗಿದ್ದು, ಶರೀರವನ್ನೂ ಉತ್ತಮ ಸ್ಥಿತಿಯಲ್ಲಿಟ್ಟುಕೊಂಡಿದ್ದು, ಹವವೂ ಅನುಕೂಲವಾಗಿದ್ದರೆ, ಹೆಚ್ಚುಕಾಲ—ಕೆಡದೆಯೇ ಇರುತ್ತದೆ. ಶರೀರ ಕುಗ್ಗಿದ ಮೇಲೆ ಈಜಿಪ್ಟಿನವರು ಮಾಡುವಂತೆ ಅದನ್ನು ಸುಗಂಧ ದ್ರವ್ಯಗಳಲ್ಲಿಟ್ಟು ಒಪ್ಪ ಮಾಡಿದರೆ (Embalm) ಅದು ಸಾವಿರಾರು ವರ್ಷಗಳ ಕಾಲ ಸರಿಯಾದ ಸ್ಥಿತಿಯಲ್ಲಿಯೇ ಇರುತ್ತದೆ. ಅಥವಾ ಅದು ಕೆಟ್ಟರೂ ಅದರ ಮೂಳೆ, ಮಾಂಸಖಂಡಗಳು ಮೊದಲಾದ ಕೆಲವು ಭಾಗಗಳು ಹೆಚ್ಚುಕಡಿಮೆ ನಾಶವಾಗುವುದೇ ಇಲ್ಲವೆಂದು ಹೇಳಬಹುದು, ಅಲ್ಲವೆ?"

"ಹೌದು."

"ಆತ್ಮವಾದರೋ ಅಗೋಚರವಾದದ್ದು. ಅದು ಸಚ್ಚರಿತ್ರನೂ ಜ್ಞಾನಿಯೂ ಆದ ದೇವರ ಸನ್ನಿಧಿಯಲ್ಲಿರುವುದಕ್ಕಾಗಿ ತನ್ನಂತೆಯೇ ಘನವಾದದ್ದೂ ಪರಿಶುದ್ಧವಾದದ್ದೂ ಅಗೋಚರವಾದದ್ದೂ ಆದ ಹೇಡೀಸ್ (Hades) ಲೋಕಕ್ಕೆ ಹೋಗುತ್ತದೆ. ದೇವರ ಇಚ್ಛೆ ಹಾಗಿದ್ದರೆ, ನಾನೂ ಸದ್ಯದಲ್ಲೇ ಅಲ್ಲಿಗೆ ಹೋಗುತ್ತೇನೆ. ಇಂಥ ಗುಣಗಳುಳ್ಳ ಆತ್ಮ ಸಾಧಾರಣ ಜನರು ಹೇಳಿಕೊಳ್ಳುವಂತೆ ಶರೀರವನ್ನು ಬಿಟ್ಟೊಡನೆಯೇ ಗಾಳಿಯಲ್ಲಿ ಸೇರಿ ಹೋಗಿ ನಾಶವಾಗುತ್ತದೆಂದು ನಂಬುವುದು ಹೇಗೆ? ಇಲ್ಲ, ಸೀಬೀಸ್; ಇಲ್ಲ, ಸಿಮಿಯಾಸ್; ಎಂದಿಗೂ ಹಾಗಾಗಲಾರದು. ಹೊರಡುವಾಗ ಪರಿಶುದ್ಧವಾಗಿರುವ ಆತ್ಮ ಜೀವಿಸಿದ್ದ ಕಾಲದಲ್ಲಿ ತಾನಾಗಿಯೇ ಶರೀರದೊಡನೆ ಯಾವ ಸಂಪರ್ಕವನ್ನೂ ಇಟ್ಟುಕೊಳ್ಳದೆ ತಪ್ಪಿಸಿಕೊಂಡು, ತನ್ನಲ್ಲಿ

ತಾನು ಇದ್ದುಕೊಂಡು ಶರೀರ ಸಂಬಂಧವಾದ ಕಳಂಕವೊಂದನ್ನೂ ತನ್ನೊಡನೆ ತಾರದೆ ಇರುತ್ತದೆ. ಹೀಗೆ ತಾನು ಬೇರೆಯಾಗಿರುವುದೇ ಸರ್ವದಾ ಅದರ ಪ್ರಯತ್ನ. ಹಾಗೆಂದರೆ, ಅದು ನಿಜವಾಗಿಯೂ ಜ್ಞಾನದಲ್ಲಿ ಪ್ರೇಮವುಳ್ಳದ್ದೆಂದೂ ಸಾಯುವುದನ್ನು ಯಾವಾಗಲೂ ಅಭ್ಯಾಸಮಾಡುತ್ತಿತ್ತೆಂದೂ ಹೇಳಿದ ಹಾಗಾಯಿತು. ಸಾಯುವುದನ್ನು ಅಭ್ಯಾಸಮಾಡುವುದೆಂದರೆ ಇದೇ ಅಲ್ಲವೆ?''

''ಹೌದು.''

''ಇಂಥ ಆತ್ಮ ತನ್ನಂತೆಯೇ ಅಗೋಚರವೂ ದೈವಿಕವೂ ಅಮರವೂ ಜ್ಞಾನಪೂರಿತವೂ ಆದ ಪ್ರಪಂಚಕ್ಕೆ ಹೊರಟುಹೋಗುತ್ತದೆ. ಅಲ್ಲಿ ಅದು ಅಸತ್ಯ, ಮೌಢ್ಯ, ಭಯ, ರಾಗದ್ವೇಷಾದಿಗಳು, ಮನುಷ್ಯನ ಪಾಲಿಗೆ ಬರುವ ಇತರ ವಿಪತ್ತುಗಳು—ಇವುಗಳಿಂದ ಬಿಡುಗಡೆಹೊಂದಿ ಆನಂದದಿಂದ ದೇವತೆಗಳ ಸಹವಾಸದಲ್ಲಿಯೇ ಇರುತ್ತದೆ. ಇದನ್ನು ಒಪ್ಪಬಹುದಲ್ಲವೆ, ಸೀಬೀಸ್ ?"

''ನಿಸ್ಸಂದೇಹವಾಗಿ.''

"ಹಾಗಿಲ್ಲದೆ, ಆತ್ಮ ಯಾವಾಗಲೂ ಶರೀರದ ಸಹವಾಸದಲ್ಲಿದ್ದು, ಅದರಲ್ಲಿ ಪ್ರೀತಿಯಿಟ್ಟು, ಅದಕ್ಕೆ ಸೇವೆಮಾಡಿ, ಅದರ ಆಸೆಗಳಿಗೂ ಮೋಹಕ್ಕೂ ಕಟ್ಟುಬಿದ್ದು, ಅದರಿಂದ ಅಪರಿಶುದ್ಧವಾಗಿಯೂ ಕಳಂಕಿತವಾಗಿಯೂ ಇದ್ದರೆ; ಶರೀರ ಸಂಬಂಧವಾದದ್ದೂ ನಾವು ಮುಟ್ಟಿ ತಿಂದು ಕುಡಿದು ನಮ್ಮ ಕಾಮವನ್ನು ತೀರಿಸಿಕೊಳ್ಳಲು ಉಪಯೋಗಿಸಬಹುದಾದದ್ದೂ ಮಾತ್ರವೇ ಸತ್ಯವೆಂದು ನಂಬುವ ಸ್ಥಿತಿಗೆ ಬಂದಿದ್ದರೆ ; ನಮ್ಮ ಚರ್ಮಚಕ್ಷುಸ್ಸಿಗೆ ಕಾಣದೆ ಕತ್ತಲೆಯಲ್ಲಿರುವಂತೆ ತೋರುವ, ತತ್ವಜ್ಞಾನದ ಮೂಲಕವೇ ತಿಳಿದು ಅರ್ಥಮಾಡಿಕೊಳ್ಳಬಹುದಾದ, ವಸ್ತುಗಳನ್ನೆಲ್ಲಾ ಅದು ಸದಾ ದ್ವೇಷಿಸುತ್ತಿದ್ದರೆ—ಅಂಥ ಆತ್ಮ ಇಲ್ಲಿಂದ ಹೊರಡುವಾಗ ಕಳಂಕವಿಲ್ಲದೆ ಪರಿಶುದ್ಧವಾಗಿರುವುದು ಸಾಧ್ಯವೆ?''

"ಅಸಾಧ್ಯ.''

''ಅದು ಶಾರೀರಕವಾದದ್ದರಲ್ಲಿಯೇ ಇದ್ದು ಅದರೊಳಗೆ ಲೀನವಾಗಿ

ಹೋಗಿದೆ; ಯಾವಾಗಲೂ ಶರೀರದ ಸಹವಾಸದಲ್ಲಿಯೂ ಸಂಪರ್ಕದಲ್ಲಿಯೂ ಇದ್ದು ಅದರ ಪೋಷಣೆಗೇ ಗಮನಕೊಡುತ್ತಿದ್ದದ್ದರಿಂದ ಆ ಆತ್ಮದ ಸ್ವಭಾವದಲ್ಲಿ ಶಾರೀರಕವಾದದ್ದು ಸೇರಿಹೋಗಿರುತ್ತದೆ.''

'' ಹೌದು.''

''ಈ ಶಾರೀರಕವಸ್ತು ಭಾರವಾದದ್ದು, ಮಣ್ಣಿನಂತೆ ಇರತಕ್ಕದ್ದು, ಗೋಚರವಾದದ್ದು. ಅಪರಿಶುದ್ಧವಾದ ಆತ್ಮವು ಇದರಿಂದಲೇ ಕೆಳಕ್ಕೆ ಎಳೆಯಲ್ಪಟ್ಟು ಪ್ರತ್ಯಕ್ಷಪ್ರಪಂಚಕ್ಕೆ ಕಟ್ಟುಬೀಳುತ್ತದೆ. ಜನರು ಹೇಳುವುದು ನಿಜವಾದರೆ, ಕೆಲವು ಆತ್ಮಗಳು ಅಗೋಚರವಾದ ಹೇಡೀಸ್ ಲೋಕಕ್ಕೆ ಹೋಗಲು ಹೆದರಿ, ಗೋರಿಗಳ ಮತ್ತು ಸಮಾಧಿಗಳ ಬಳಿಯಲ್ಲಿ ನೆರಳಿನ ಆಕೃತಿಗಳಾಗಿ ಅಲೆಯುತ್ತಿರುತ್ತವೆ. ಈ ಆಕೃತಿಗಳು ಮರಣಸಮಯದಲ್ಲಿ ಅಪರಿಶುದ್ಧವಾಗಿದ್ದ ಆತ್ಮಗಳು. ಅವು ಇನ್ನೂ ಪ್ರತ್ಯಕ್ಷಪ್ರಪಂಚಕ್ಕೆ ಸಿಕ್ಕಿಕೊಂಡಿರುವುದರಿಂದ ಜನರ ಕಣ್ಣಿಗೆ ಬೀಳುತ್ತವೆ.''

''ಅದು ನಿಜವೇ ಇರಬಹುದು, ಸಾಕ್ರೆಟೀಸ್.''

''ನಿಜವಿರಬೇಕು, ಸೀಬೀಸ್. ಅವು ಸಜ್ಜನರ ಆತ್ಮಗಳಲ್ಲ, ದುರ್ಜನರ ಆತ್ಮಗಳು. ಅವು ಹಾಗೆ ಅಲೆಯುತ್ತಿರುವುದು ತಮ್ಮ ಕೆಟ್ಟ ಜೀವನಕ್ಕಾಗಿ ಅನುಭವಿಸುತ್ತಿರುವ ಶಿಕ್ಷೆ. ಅವುಗಳಲ್ಲಿರುವ ಶಾರೀರಕ ಇಚ್ಛೆ ಮತ್ತೆ ಅವುಗಳನ್ನು ಶರೀರದಲ್ಲಿ ಸೆರೆಹಾಕುವವರೆಗೂ ಅವು ಹೀಗೆಯೇ ಅಲೆಯುತ್ತಿರುತ್ತವೆ. ಬಹುಶಃ ತಾವು ಜೀವಿಸಿದ್ದಾಗ ಯಾವ ಸ್ವಭಾವವನ್ನು ಹೊಂದಿದ್ದುವೋ ಅದೇ ಸ್ವಭಾವವುಳ್ಳ ಪ್ರಾಣಿಗಳ ದೇಹದಲ್ಲಿ ಅವು ಸೆರೆಯಾಗುವುವು.''

“ಹಾಗೆಂದರೇನು ಸಾಕ್ರೆಟೀಸ್ ?”

“ಅತ್ಯಾಹಾರ, ಸ್ವೇಚ್ಛಾಪ್ರವರ್ತನೆ, ಕುಡಿತ, ಮೊದಲಾದ ದುರ್ಗುಣಗಳುಳ್ಳ ಜನರು ಕತ್ತೆಗಳ ಅಥವಾ ಅಂಥ ಇತರ ಪ್ರಾಣಿಗಳ ಶರೀರಗಳನ್ನು ಸೇರುತ್ತಾರೆ.”

“ಹಾಗೆಯೇ ಇರಬೇಕು.”

“ಅನ್ಯಾಯ, ಅಧಿಕಾರದಲ್ಲಿ ಕ್ರೌರ್ಯ, ಕಳ್ಳತನ ಮೊದಲಾದುವುಗಳಲ್ಲಿ ತೊಡಗಿರುವವರು ತೋಳಗಳ, ಗಿಡುಗಗಳ, ಡೇಗೆಗಳ ಶರೀರಗಳನ್ನು ಸೇರುತ್ತಾರೆ. ಇಂಥವರ ಆತ್ಮಗಳು ಮತ್ತೆಲ್ಲಿ ಹೋಗಬೇಕು ?”

"ಅಂಥ ಪ್ರಾಣಿಗಳ ಶರೀರವನ್ನೇ ಪ್ರವೇಶಿಸಬೇಕು, ಸಂದೇಹವಿಲ್ಲ."

"ಅಂತೂ ಪ್ರತಿಯೊಂದು ಆತ್ಮವೂ ಎಲ್ಲಿ ಹೋಗುತ್ತದೆಂಬುದು ಸ್ಪಷ್ಟವಾಗಿಯೇ ಇದೆ. ಪ್ರತಿಯೊಂದೂ ತನ್ನಂತೆಯೇ ಸ್ವಭಾವವೂ ನಡತೆಯೂ ಉಳ್ಳ ಪ್ರಾಣಿಯ ದೇಹದಲ್ಲಿ ಸೇರಿಕೊಳ್ಳುತ್ತದೆ."

"ಹೌದು, ಹಾಗೇ ಸರಿ."

"ಅವುಗಳಲ್ಲಿ ಕೆಲವು—ತತ್ವಜ್ಞಾನವೂ ವಿಚಾರಶಕ್ತಿಯೂ ಇಲ್ಲದಿದ್ದರೂ ಅಭ್ಯಾಸಬಲದಿಂದ ಪಡೆಯಬಹುದಾದ ಮಿತವ್ಯವಹಾರ, ನ್ಯಾಯ, ಮೊದಲಾದ ಸಾಮಾಜಿಕ ಸದ್ಗುಣಗಳನ್ನುಳ್ಳ ಆತ್ಮಗಳು—ಇತರ ಆತ್ಮಗಳಿಗಿಂತ ಬಹಳ ಸುಖವಾಗಿರುತ್ತವೆ."

"ಅದೇಕೆ?"

"ಏಕೆಂದರೆ, ಅವು ತಮ್ಮಂತೆಯೇ ಸಾಧುಸ್ವಭಾವವುಳ್ಳ ಜೇನುಹುಳು, ಕಣಜ, ಇರುವೆ ಮುಂತಾದ ಪ್ರಾಣಿಗಳ ದೇಹಗಳನ್ನು ಸೇರುತ್ತವೆ. ಅಥವಾ ಮತ್ತೆ ಮನುಷ್ಯರೂಪವನ್ನೇ ಹೊಂದಿದರೆ ಅವುಗಳಿಂದ ಉತ್ತಮರಾದ ಪೌರರು ಉತ್ಪನ್ನರಾಗಬಹುದು."

"ಇರಬಹುದು."

"ಆದರೆ ಈ ಲೋಕದಿಂದ ಹೊರಡುವಾಗ ಸಂಪೂರ್ಣವಾಗಿ ಶುದ್ಧನಾಗಿರುವ ಜಿಜ್ಞಾಸು ಹೊರತು ಮತ್ತೆ ಯಾರೂ ದೇವತೆಗಳ ಸಹವಾಸಕ್ಕೆ ಸೇರಲಾರರು. ಆದ್ದರಿಂದ ಸಿಮಿಯಾಸ್, ಸೀಬೀಸ್, ನಿಜವಾಗಿಯೂ ಜಿಜ್ಞಾಸುವಾದವನು ಮಿತವ್ಯವಹಾರಿಯಾಗಿದ್ದುಕೊಂಡು ಶರೀರಸುಖಗಳಿಗೆ ದಾಸನಾಗದೆ ಅವುಗಳನ್ನು ತ್ಯಜಿಸುತ್ತಾನೆ. ಆದರೆ ಮಂದಿಯೂ ಹಣದಾಸೆಯುಳ್ಳವರೂ ಹೆದರುವಂತೆ ಅವನು ತನ್ನ ಆಸ್ತಿಯನ್ನೂ ಹಣವನ್ನೂ ವೆಚ್ಚ ಮಾಡಲು ಹೆದರುವುದಿಲ್ಲ; ಅಥವಾ ಅಧಿಕಾರದಲ್ಲಿಯೂ ಗೌರವದಲ್ಲಿಯೂ ಆಸೆಯುಳ್ಳವರು ಹೆದರುವಂತೆ ಆತನು ದುಷ್ಪ್ರವರ್ತನೆಯಿಂದ ಬರುವ ಅವಮರ್ಯಾದೆಗೂ ಅವಮಾನಕ್ಕೂ ಹೆದರುವುದಿಲ್ಲ. ಆತನು ಮಿತವ್ಯವಹಾರಿಯಾಗಿರುವುದು ಈ ಕಾರಣಗಳಿಂದಲ್ಲ."

“ನಿಜ. ಈ ಕಾರಣಗಳಿಗಾಗಿ ಮಿತವ್ಯವಹಾರಿಯಾಗಿರುವುದು ಜಿಜ್ಞಾಸುವಿಗೆ ತಕ್ಕದ್ದಲ್ಲ.”

“ಆದ್ದರಿಂದ ಶರೀರವನ್ನು ಬೆಳಸಿ, ಅದಕ್ಕೆ ಉತ್ತಮ ರೂಪವನ್ನು ಕೊಡುವುದರಲ್ಲಿಯೇ ಜೀವನವನ್ನು ಕಳೆಯದೆ ಆತ್ಮಕ್ಕೆ ಹೆಚ್ಚು ಗಮನ ಕೊಡುವವರೆಲ್ಲರೂ ಇಂಥ ವಿಷಯಗಳನ್ನೂ ಜನರನ್ನೂ ದೂರ ಮಾಡುತ್ತಾರೆ; ದಾರಿ ತಿಳಿಯದೆ ನುಗ್ಗುತ್ತಿರುವ ಕುರುಡರ ಮಾರ್ಗವನ್ನು ಅನುಸರಿಸುವುದಿಲ್ಲ. ತತ್ವಜ್ಞಾನದ ಸಹಾಯದಿಂದ ಪರಿಶುದ್ಧಿಯೂ ಕೇಡಿನಿಂದ ಬಿಡುಗಡೆಯೂ ದೊರಕುವುವೆಂದು ಕಂಡುಬಂದಾಗ, ಅವರು ಆ ಜ್ಞಾನದ ಆಕರ್ಷಣವನ್ನು ತಡೆಯಬಾರದೆಂದುಕೊಂಡು ಅದು ಯಾವ ಕಡೆಗೆ ಕರೆದುಕೊಂಡುಹೋದರೆ ಆ ಕಡೆಗೆ ತಿರುಗಿ ಅದನ್ನು ಹಿಂಬಾಲಿಸುವರು.”

“ಅದು ಹೇಗೆ, ಸಾಕ್ರೆಟೀಸ್?”

“ಹೇಳುತ್ತೇನೆ ಕೇಳು. ತತ್ವಜ್ಞಾನವು ಆತ್ಮವನ್ನು ಕೈಹಿಡಿಯುವಾಗ ಅದು ಸತ್ಯರೂಪವನ್ನು ಶರೀರದ ಸೆರೆಮನೆಯ ಸಲಾಕಿಗಳ ಮೂಲಕ ನೋಡಬೇಕೇ ಹೊರತು ಸ್ವತಂತ್ರವಾಗಿ ಪರಿಭಾವಿಸಿ ತಿಳಿಯಲಾಗುವುದಿಲ್ಲ. ಅದು ಅಜ್ಞಾನದ ಕೆಸರಿನಲ್ಲಿ ಬಿದ್ದು ಹೊರಳುತ್ತಿರುತ್ತದೆ. ಇದೆಲ್ಲಕ್ಕಿಂತಲೂ ವ್ಯಸನಕರವಾದದ್ದೇನೆಂದರೆ, ಆತ್ಮವು ದುರಾಸೆ, ಕಾಮ ಇವುಗಳ ಮೂಲಕ ಸೆರೆಯಾಗಿರುವುದರಿಂದ ತನ್ನ ಬಂಧನಕ್ಕೆ ತಾನೇ ಸಹಾಯಕವಾಗಿರುತ್ತದೆ. ಜಿಜ್ಞಾಸುಗಳಿಗೆ ಇದೆಲ್ಲವೂ ಗೊತ್ತು. ಹೀಗೆ ಭಯಂಕರವಾದ ದುಃಸ್ಥಿತಿಯಲ್ಲಿರುವ ಆತ್ಮವನ್ನು ತತ್ವಜ್ಞಾನವು ಕೈಹಿಡಿದು ಸಂತೈಸಿ, ನಮಗೆ ಕಣ್ಣು, ಕಿವಿ, ಮೊದಲಾದ ಇಂದ್ರಿಯಗಳಿಂದ ತಿಳಿದುಬರುವುದೆಲ್ಲವೂ ಮೋಸವೆಂದೂ ಅವುಗಳನ್ನು ಬಿಟ್ಟು ದೂರ ಇರಬೇಕೆಂದೂ ಆವಶ್ಯಕವಾದಾಗ ಹೊರತು ಉಳಿದ ಕಾಲದಲ್ಲಿ ಅವುಗಳನ್ನು ಉಪಯೋಗಿಸಲೇಬಾರದೆಂದೂ ಬುದ್ಧಿ ಹೇಳುತ್ತದೆ. ಆತ್ಮ ತನ್ನ ಶಕ್ತಿಯನ್ನು ಸಂಪೂರ್ಣವಾಗಿ ಕೂಡಿಟ್ಟುಕೊಂಡು ಇತರ ಸಹಾಯವಿಲ್ಲದೆ ಸ್ವಪ್ರಯತ್ನದಿಂದ ಎಷ್ಟುಮಟ್ಟಿಗೆ ಸತ್ಯವನ್ನು ತಿಳಿಯಬಹುದೋ ಅಷ್ಟನ್ನು ಮಾತ್ರ ನಂಬಬೇಕು. ವ್ಯತ್ಯಾಸಕ್ಕೆ ಕಟ್ಟುಬಿದ್ದಿರುವುದೂ ಇತರ ಸಹಾಯದಿಂದ ತಿಳಿದುಬರುವುದೂ ಒಂದೂ ಸತ್ಯವಲ್ಲ

ವೆಂದು ತಿಳಿಯಬೇಕು; ಏಕೆಂದರೆ, ಇವೆಲ್ಲವೂ ಕಣ್ಣಿಗೆ ಕಾಣುವಂಥವು, ಇಂದ್ರಿಯಗಳ ಅನುಭವಕ್ಕೆ ಸಿಕ್ಕುವಂಥವು. ಆದರೆ ಆತ್ಮ ಸ್ವಪ್ರಯತ್ನದಿಂದ ಏನನ್ನು ಕಾಣುತ್ತದೆಯೋ ಅದು ಮನಸ್ಸಿನಿಂದ ಮಾತ್ರ ತಿಳಿಯಬಹು ದಾದದ್ದು, ಅಗೋಚರವಾದದ್ದು. ನಿಜವಾದ ಜಿಜ್ಞಾಸುವಿನ ಆತ್ಮ ತನ್ನ ಬಂಧವಿಮೋಚನೆಗೆ ತಾನೇ ತಡೆಹಾಕುವುದು ತಪ್ಪೆಂದು ತಿಳಿದು ಸುಖ, ಆಸೆ, ದುಃಖ, ಭಯ ಮೊದಲಾದುವುಗಳಿಂದ ಸಾಧ್ಯವಾದಷ್ಟು ದೂರವಾಗಿರುತ್ತದೆ. ಏಕೆಂದರೆ, ಮನುಷ್ಯನಿಗೆ ಅತ್ಯಂತ ಸಂತೋಷವೋ ಭಯವೋ ಆಸೆಯೋ ಇದ್ದರೆ, ಸಾಧಾರಣವಾಗಿ ಆಸೆಯನ್ನು ಪೂರ್ತಿಮಾಡಿಕೊಳ್ಳುವುದರಲ್ಲಿ ಬರ ಬಹುದಾದ ರೋಗ, ಇತರ ವಿಧವಾದ ನಷ್ಟ—ಇವುಗಳೆಲ್ಲಕ್ಕಿಂತಲೂ ಹೆಚ್ಚಾದ ಕೇಡು ಅವುಗಳಿಂದ ಉಂಟಾಗುತ್ತದೆ; ಆದರೆ ಅದು ಅವನ ಗಮನಕ್ಕೆ ಬರುವುದಿಲ್ಲ.''

''ಅದು ಯಾವ ಕೇಡು, ಸಾಕ್ರೆಟೀಸ್?'' ಎಂದು ಸೀಬೀಸ್ ಕೇಳಿದನು.

"ಅದೇನೆಂದರೆ—ಒಬ್ಬನ ಆತ್ಮ ಉತ್ಕಟವಾದ ಸುಖವನ್ನೋ ದುಃಖ ವನ್ನೋ ಅನುಭವಿಸಿದಾಗ ಆ ದುಃಖಕ್ಕೋ ಸಂತೋಷಕ್ಕೋ ಕಾರಣವಾದ ವಸ್ತು ಅತ್ಯಂತ ಸ್ಪಷ್ಟವಾದದ್ದೆಂದೂ ಸತ್ಯವಾದದ್ದೆಂದೂ ಅದು ಭಾವಿಸು ತ್ತದೆ. ಆದರೆ ಇಂಥ ವಸ್ತುಗಳು ಕಣ್ಣಿಗೆ ಕಾಣುವಂಥವು; ಆದ್ದರಿಂದ ಅವು ಸತ್ಯವಲ್ಲ.''

''ನಿಜ.''

''ಆತ್ಮ ಸಂಪೂರ್ಣವಾಗಿ ಶರೀರದ ಸೆರೆಯಲ್ಲಿರುವುದು ಅದು ಈ ಸ್ಥಿತಿ ಯಲ್ಲಿರುವಾಗಲೇ, ಅಲ್ಲವೆ ?''

''ಏಕೆ ?''

''ಏಕೆಂದರೆ, ಪ್ರತಿಯೊಂದು ಸಂತೋಷಕ್ಕೂ ದುಃಖಕ್ಕೂ ಒಂದೊಂದು ಮೊಳೆ ಇದೆ. ಅದು ಆತ್ಮವನ್ನು ಶರೀರಕ್ಕೆ ಬಡಿದು ಸೇರಿಸುತ್ತದೆ. ಅನಂತರ ಆತ್ಮ ಶರೀರದ ಸ್ವಭಾವವನ್ನೇ ಹೊಂದಿ ಶರೀರ ನಿಜವೆಂದು ಹೇಳಿದ್ದನ್ನೆಲ್ಲಾ ತಾನೂ ನಿಜವೆಂದು ನಂಬುತ್ತದೆ. ಹೀಗೆ ಶರೀರದ ಭಾವಗಳನ್ನೇ ಹೊಂದಿ,

ಅದರ ಸುಖದುಃಖಗಳನ್ನೇ ತಾನೂ ಅನುಭವಿಸುವುದರಿಂದ ಆತ್ಮವು ಶರೀರದ ಜೀವನ ಕ್ರಮವನ್ನೇ ಅನುಸರಿಸಬೇಕಾಗುತ್ತದೆ. ಆದ್ದರಿಂದ ಅದು ಪರ ಲೋಕಕ್ಕೆ ಹೊರಡುವಾಗ ಶುದ್ಧವಾಗಿರಲಾರದೆ ಶರೀರದ ಕಶ್ಮಲದಿಂದ ಕಳಂಕಿತವಾಗಿ ಪುನಃ ಮತ್ತೊಂದು ಶರೀರವನ್ನು ಸೇರಿ ಅಲ್ಲಿ ಬೇರುಬಿಟ್ಟು ಬೆಳೆಯುತ್ತದೆ. ಆದ್ದರಿಂದ ದೈವಿಕವಾದದ್ದು, ಪರಿಶುದ್ಧವಾದದ್ದು, ಏಕ ಸ್ವಭಾವವುಳ್ಳದ್ದು—ಇವುಗಳ ಸಂಗದಲ್ಲಿ ಅದಕ್ಕೆ ಭಾಗ ದೊರಕುವುದಿಲ್ಲ.''

ಸೀಬೀಸನು ''ಅದು ನಿಜ, ಸಾಕ್ರೆಟೀಸ್'' ಎಂದನು.

''ನಿಜವಾದ ಜಿಜ್ಞಾಸುಗಳು ಮಿತವ್ಯವಹಾರಿಗಳಾಗಿಯೂ ಧೈರ್ಯ ಶಾಲಿಗಳಾಗಿಯೂ ಇರುವುದಕ್ಕೆ ಇದೇ ಕಾರಣ, ಸೀಬೀಸ್; ಸಾಧಾರಣ ಜನರು ಹೇಳುವ ಕಾರಣಗಳಲ್ಲ.''

"ಎಂದಿಗೂ ಅಲ್ಲ."

"ಖಂಡಿತ ಅಲ್ಲ. ತನ್ನನ್ನು ಬಿಡುಗಡೆಮಾಡುವುದು ತತ್ವಜ್ಞಾನದ ಕೆಲಸವೆಂದು ಜಿಜ್ಞಾಸುವಿನ ಆತ್ಮ ತಿಳಿದಿದೆ. ತತ್ವಜ್ಞಾನದ ಸಹಾಯದಿಂದ ಬಿಡುಗಡೆಹೊಂದಿದ ಮೇಲೆ ಅದು ಮತ್ತೆ ಸುಖದುಃಖಗಳ ಸೆರೆಗೆ ಸಿಕ್ಕಬಾರ ದೆಂದೂ ಪೆನೆಲಪಿ (Penelope)ಯಂತೆ ಒಂದು ಕೆಲಸವನ್ನು ಮಾಡಿ ಕೂಡಲೆ ಅದನ್ನು ಕೆಡಿಸಿ, ಬಲೆಯನ್ನು ಬಿಡಿಸುವುದಕ್ಕೆ ಬದಲು ಹೆಣೆಯಕೂಡದೆಂದೂ ಅದು ಬಲ್ಲುದು. ಅದು ರಾಗದ್ವೇಷಾದಿಗಳನ್ನು ಬಿಟ್ಟು ಶಾಂತಿಹೊಂದಿ, ವಿಚಾರಶಕ್ತಿ ತೋರಿಸಿದ ದಾರಿಯಲ್ಲೇ ನಡೆದು, ಅದರಲ್ಲಿಯೇ ಮನಸ್ಸನ್ನು ನಿಲ್ಲಿಸಿ, ಸರ್ವದಾ ದೈವಿಕವಾದದ್ದನ್ನೂ ಸತ್ಯವಾದದ್ದನ್ನೂ ಪರಿಭಾವಿಸಿ ನೋಡುತ್ತಾ. ಅವುಗಳಿಂದ ಪೋಷಣೆಯನ್ನು ಪಡೆಯುತ್ತಾ ಇರುತ್ತದೆ. ಪ್ರಾಣವಿರುವವರೆಗೂ ಅದು ಈ ರೀತಿಯಲ್ಲೇ ಜೀವಿಸುತ್ತಿದ್ದು, ಅನಂತರ ತನ್ನ ಸಹಜಸ್ವಭಾವವನ್ನೇ ಹೊಂದಿ, ತನ್ನಂತೆಯೇ ಇರುವ ಲೋಕಕ್ಕೆ ಹೋಗಿ ಅಲ್ಲಿ ಮಾನವಸಹಜವಾದ ಕಷ್ಟಗಳೆಲ್ಲದರಿಂದಲೂ ಬಿಡುಗಡೆಹೊಂದ ಬಹುದೆಂಬ ನಂಬಿಕೆಯಿಟ್ಟುಕೊಂಡಿರುತ್ತದೆ. ಸಿಮಿಯಾಸ್, ಸೀಬೀಸ್, ಈ ರೀತಿ ಬೆಳೆದಿರುವ, ಈ ಶಿಕ್ಷಣವನ್ನು ಪಡೆದಿರುವ, ಆತ್ಮವು ಶರೀರವನ್ನು ಬಿಟ್ಟುಹೋಗುವಾಗ ತಾನು ಗಾಳಿಯಲ್ಲಿ ಛಿದ್ರಛಿದ್ರವಾಗಿ ತೂರಿಹೋಗಿ

ಅದೃಶ್ಯವಾಗಿ ಶೂನ್ಯಸ್ಥಿತಿಗೆ ಬರಬಹುದೆಂದು ಎಂದಿಗೂ ಹೆದರುವುದಿಲ್ಲ."

ಸಾಕ್ರೆಟೀಸನು ಮಾತು ನಿಲ್ಲಿಸಿದ ಮೇಲೆ ಬಹಳ ಹೊತ್ತು ಎಲ್ಲರೂ ಸುಮ್ಮನಿದ್ದರು. ಸಾಕ್ರೆಟೀಸನೂ ಕೂಡ ನಮ್ಮೆಲ್ಲರಂತೆಯೇ ತಾನು ಹೇಳಿದ ವಿಷಯವನ್ನೇ ಮನಸ್ಸಿನಲ್ಲಿ ಚಿಂತಿಸುತ್ತಿದ್ದಂತೆ ತೋರಿತು. ಸೀಬೀಸ್, ಸಿಮಿಯಾಸ್ ಇವರಿಬ್ಬರು ಮಾತ್ರ ಏನೋ ಸ್ವಲ್ಪ ಮಾತಾಡಿಕೊಂಡರು. ಇದನ್ನು ನೋಡಿ ಸಾಕ್ರೆಟೀಸನು "ಏನು, ನಮ್ಮ ವಾದದಲ್ಲಿ ಏನಾದರೂ ನ್ಯೂನತೆ ಕಂಡುಬಂದಿತೆ? ಈ ವಿಷಯವನ್ನು ಕೂಲಂಕಷವಾಗಿ ವಿಚಾರಿಸಿ ನೋಡಿದರೆ ಸಂದೇಹಾಸ್ಪದವಾದ ಮತ್ತು ಆಕ್ಷೇಪಣೆಗೆ ಸಿಕ್ಕುವ ಅಂಶಗಳು ಅನೇಕವಿವೆ. ಈಗ ನೀವು ಬೇರೆ ಯಾವುದಾದರೂ ವಿಷಯವಾಗಿ ಮಾತಾಡುತ್ತಿದ್ದರೆ ನಾನು ಏನೂ ಹೇಳುವುದಿಲ್ಲ. ಆದರೆ ಈ ವಿಷಯದಲ್ಲಿ ಏನಾದರೂ ಸಂದೇಹವಿದ್ದರೆ ನಿಮ್ಮ ಮನಸ್ಸಿನಲ್ಲಿರುವುದನ್ನು ಧೈರ್ಯವಾಗಿ ಹೇಳಿ. ನಾವು ಇದುವರೆಗೂ ಚರ್ಚಿಸಿದ್ದನ್ನು ಇನ್ನೂ ಉತ್ತಮವಾದ ರೀತಿಯಲ್ಲಿ ಹೇಳಬಹುದೆಂದು ತೋರಿದರೆ ನನಗೂ ಅದನ್ನು ತಿಳಿಸಿ; ನನ್ನಿಂದ ಏನಾದರೂ ಸಹಾಯವಾಗುವಂತಿದ್ದರೆ, ನನ್ನನ್ನೂ ಜೊತೆಗೆ ಕರೆದುಕೊಳ್ಳಿ" ಎಂದನು.

ಅದಕ್ಕೆ ಸಿಮಿಯಾಸನು "ನಮ್ಮ ಮನಸ್ಸಿನಲ್ಲಿ ಸಂದೇಹಗಳು ಹುಟ್ಟಿದ್ದೇನೋ ನಿಜ. ಅವುಗಳ ವಿಷಯವಾಗಿ ನಿನ್ನನ್ನು ಕೇಳಬೇಕೆಂದು ನಾವು ಒಬ್ಬರು ಮತ್ತೊಬ್ಬರಿಗೆ ಹೇಳುತ್ತಿದ್ದೆವು. ಆ ಪ್ರಶ್ನೆಗಳಿಗೆ ನೀನು ಕೊಡುವ ಉತ್ತರಗಳನ್ನು ಕೇಳಬೇಕೆಂದು ನಮಗೆ ಕುತೂಹಲ; ಆದರೆ ಇಂಥ ಸಮಯದಲ್ಲಿ ಸುಮ್ಮನೆ ಪ್ರಶ್ನೆಹಾಕುತ್ತಿದ್ದರೆ ನಿನ್ನ ಮನಸ್ಸಿಗೆ ಬೇಸರವಾಗಬಹುದೆಂದು ತೋರಿತು. ಆದ್ದರಿಂದ ನಿನಗೆ ತೊಂದರೆ ಕೊಡಲು ಇಷ್ಟ ಬರಲಿಲ್ಲ" ಎಂದು ಉತ್ತರಕೊಟ್ಟನು.

ಇದನ್ನು ಕೇಳಿ ಸಾಕ್ರೆಟೀಸನು ಸ್ವಲ್ಪ ನಕ್ಕನು. "ಚೆನ್ನಾಯಿತು, ಸಿಮಿಯಾಸ್, ಇದೇನು ನೀನು ಹೇಳುವುದು? ನಾನು ಇತರ ಕಾಲಗಳಲ್ಲಿ ಇದ್ದದ್ದಕ್ಕಿಂತ ಈಗ ಯಾವ ವಿಧದಲ್ಲಿಯೂ ಹೆಚ್ಚು ದುಃಸ್ಥಿತಿಯಲ್ಲಿಲ್ಲವೆಂದು ನಿಮಗೂ ಸಹ ನಂಬಿಕೆ ಹುಟ್ಟಲಿಲ್ಲವಲ್ಲ! ನನ್ನ ಈಗಿನ ಸ್ಥಿತಿ ವಿಪತ್ತಾಗಿ

ತೋರುವುದೇ ಇಲ್ಲವೆಂದು ನಾನು ಇನ್ನು ಇತರರಿಗೆ ನಂಬಿಕೆ ಹುಟ್ಟಿಸುವುದು ಹೇಗೆ? ನಾನು ಈ ದಿನ ಎಂದಿಗಿಂತಲೂ ಸ್ವಲ್ಪ ಹೆಚ್ಚು ಸಿಡುಕನಾಗಿದ್ದೇನೆಂದು ನೀವು ಭಾವಿಸಿದ್ದೀರಿ. ನನ್ನಲ್ಲಿ ಜಿಜ್ಞಾಸುವಿನ ಮನೋಭಾವ ಹಂಸಗಳಲ್ಲಿರುವಷ್ಟುಕೂಡ ಇಲ್ಲವೆಂದು ತಿಳಿದಿರುವಿರಾ? ಅವು ತಮ್ಮ ಜೀವಮಾನವೆಲ್ಲಾ ಹಾಡುತ್ತಿದ್ದು, ಮರಣಕಾಲ ಬಂತೆಂದು ತಿಳಿದಾಗ ತಾವು ಸೇವೆಮಾಡುವ ದೇವರ ಸನ್ನಿಧಿಗೆ ಹೋಗುವ ಸಮಯ ಒದಗಿತೆಂಬ ಸಂತೋಷದಿಂದ ಎಂದಿಗಿಂತಲೂ ಚೆನ್ನಾಗಿ ಉಚ್ಚಸ್ವರದಿಂದ ಹಾಡುತ್ತವೆ. ಆದರೆ ಜನರು ತಾವೇ ಸಾವಿಗೆ ಹೆದರುವವರಾದ್ದರಿಂದ, ಹಂಸ ಸಾಯುವ ಕಾಲದಲ್ಲಿ ದುಃಖಪಟ್ಟು ಗಟ್ಟಿಯಾಗಿ ದುಃಖಪೂರಿತವಾದ ಗಾನವನ್ನು ಹಾಡುತ್ತದೆಂದು ಸುಳ್ಳು ಹೇಳುತ್ತಾರೆ. ಆದರೆ ಯಾವ ಹಕ್ಕಿಯೂ ಹಸಿದಿರುವಾಗಲೂ ಚಳಿಯಲ್ಲಿರುವಾಗಲೂ ಇನ್ನೇನಾದರೂ ನೋವಿನಿಂದ ಕಷ್ಟಪಡುತ್ತಿರುವಾಗಲೂ ಹಾಡುವುದಿಲ್ಲ. ಇದನ್ನು ಮರೆತು ಜನರು ಬುಲ್ ಬುಲ್ ಪಕ್ಷಿ, ಸ್ವಾಲೊ, ಹೂಪೊ—ಇವೆಲ್ಲವೂ ದುಃಖದಿಂದ ಹಾಡುತ್ತವೆಯೆಂದು ಹೇಳುತ್ತಾರೆ. ಆದರೆ ಈ ಪಕ್ಷಿಗಳಾಗಲಿ ಹಂಸವಾಗಲಿ ಹಾಡುವುದು ದುಃಖದಿಂದಲ್ಲವೆಂದೇ ನನಗೆ ತೋರುತ್ತದೆ. ಇವೆಲ್ಲವೂ ಅಪಾಲೋವಿನ ಪಕ್ಷಿಗಳಾದ್ದರಿಂದ ಅವಕ್ಕೆ ಸ್ವಲ್ಪ ಭವಿಷ್ಯದರ್ಶನ ಶಕ್ತಿಯುಂಟಾಗಿ ಅವು ಪರಲೋಕದಲ್ಲಿನ ಉತ್ತಮ ವಸ್ತುಗಳನ್ನು ಮುಂಚೆಯೇ ಕಾಣಬಹುದು; ಆದ್ದರಿಂದ ಸಾಯುವ ದಿನ ಅವು ಹಿಂದೆ ಎಂದೂ ಇಲ್ಲದಷ್ಟು ಸಂತೋಷದಿಂದ ಹಾಡುತ್ತವೆ. ನಾನೂ ಕೂಡ ಆ ಹಂಸಗಳಂತೆಯೇ ಅದೇ ದೇವರ ಸೇವಕನೆಂದೂ ಅವನ ಸೇವೆಗೋಸ್ಕರ ನನ್ನ ಜೀವನ ಮುಡುಪಾಗಿದೆಯೆಂದೂ ನಂಬಿದ್ದೇನೆ. ಹಂಸಗಳಿಗೆ ಕಡಿಮೆಯಿಲ್ಲದ ಭವಿಷ್ಯದರ್ಶನ ಶಕ್ತಿಯನ್ನು ನನ್ನ ಸ್ವಾಮಿಯಾದ ಆ ದೇವರಿಂದ ಪಡೆದಿದ್ದೇನೆಂದು ನನಗೆ ತೋರುತ್ತದೆ. ಆದ್ದರಿಂದ ಸಾಯುವ ಸಮಯದಲ್ಲಿ ನನ್ನ ಸಂತೋಷ ಆ ಪಕ್ಷಿಗಳ ಸಂತೋಷಕ್ಕಿಂತ ಏನೂ ಕಡಿಮೆಯಿಲ್ಲ. ನನ್ನ ಮನಸ್ಸಿಗೆ ಬೇಸರವಾಗುತ್ತದೆಂಬುದೊಂದೇ ಯೋಚನೆಯಾದರೆ, ನೀವು ಆ ಶಂಕೆಯೆನ್ನು ಬಿಟ್ಟು ಅಥೆನ್ಸಿನ ಹನ್ನೊಂದು ಜನ ಅಧಿಕಾರಿಗಳು

ಅವಕಾಶ ಕೊಡುವವರೆಗೂ ನಿಮ್ಮ ಮನಸ್ಸಿಗೆ ತೋರಿದ್ದನ್ನೆಲ್ಲಾ ಕೇಳ ಬಹುದು.''

"ಹಾಗಾದರೆ ಸರಿ, ಸಾಕ್ರೆಟೀಸ್, ನಾನೂ ಸೀಬೀಸನೂ ನಮ್ಮ ನಮ್ಮ ಸಂದೇಹಗಳನ್ನು ತಿಳಿಸುತ್ತೇವೆ. ಈ ವಿಷಯಗಳಲ್ಲಿ ಸ್ಪಷ್ಟವಾದ ಜ್ಞಾನವನ್ನು ಈ ಜನ್ಮದಲ್ಲಿಯೇ ಪಡೆಯುವುದು ಬಹಳ ಕಷ್ಟ; ಬಹುಶಃ ಅಸಾಧ್ಯವೆಂದೇ ನನಗೆ ತೋರುತ್ತದೆ. ನಿನಗೂ ಹಾಗೆಯೇ ತೋರಬಹುದು. ಆದರೂ ಈ ವಿಷಯದಲ್ಲಿ ಜನರು ಹೇಳುವುದನ್ನು ಎಲ್ಲಾ ದೃಷ್ಟಿಗಳಿಂದಲೂ, ಮತ್ತೆ ಯಾವ ಪ್ರಯತ್ನವನ್ನು ಮಾಡುವುದೂ ಅಸಾಧ್ಯವೆಂದು ತೋರುವ ವರೆಗೂ ಎದೆಗುಂದದೆ ಪರಿಶೀಲಿಸದಿದ್ದರೆ, ಅಂಥ ಮನುಷ್ಯನು ಕೆಲಸಕ್ಕೆ ಬಾರದ ಹೇಡಿಯೆಂದೇ ನನ್ನ ಭಾವನೆ. ಈಗ ಎರಡರಲ್ಲಿ ಒಂದು ಕೆಲಸ ವನ್ನು ಮಾಡುವುದು ನಮ್ಮ ಕರ್ತವ್ಯ: ಈ ವಿಷಯದಲ್ಲಿ ಸತ್ಯವೇನೆಂಬು ದನ್ನು ನಾವೇ ಕಂಡುಹಿಡಿಯಬೇಕು, ಇಲ್ಲವೆ ಕಲಿಯಬೇಕು; ಅದು ಅಸಾಧ್ಯವಾದರೆ ಜನರ ಮತಗಳಲ್ಲಿ ಅತ್ಯುತ್ತಮವಾದದ್ದು, ತಪ್ಪು ಸಿಕ್ಕದೆ ಇರುವಂಥಾದ್ದು ಎಂದು ತೋರುವುದನ್ನು ಒಪ್ಪಿಕೊಂಡು ಆ ತೆಪ್ಪದ ಮೇಲೆ ಕುಳಿತು ಜೀವನಸಾಗರದ ಮೇಲೆ ಪ್ರಯಾಣಮಾಡ ಬೇಕು. ಅದಕ್ಕಿಂತ ಬಲವಾದ ಹಡಗು-ಯಾವುದಾದರೂ ದೇವವಾಣಿ- ಸಿಕ್ಕಿ ನಮ್ಮನ್ನು ಸುರಕ್ಷಿತವಾಗಿ ಸಾಗಿಸಿಕೊಂಡುಹೋಗದೆ ಈ ತೆಪ್ಪದ ಮೇಲೆಯೇ ಪ್ರಯಾಣಮಾಡಬೇಕಾಗಿ ಬಂದರೆ ಅದೇನೋ ಅಪಾಯಕರ ವಾದ ಯಾತ್ರೆಯೇ ಸರಿ. ಈಗ ನೀನು ಪ್ರಶ್ನೆ ಕೇಳಬಹುದೆಂದು ಹೇಳಿರು ವುದರಿಂದ ಧೈರ್ಯವಾಗಿ ಕೇಳುತ್ತೇನೆ; ಮುಂದೆ 'ನಾನು ನನ್ನ ಮನಸ್ಸಿನಲ್ಲಿ ದ್ದದ್ದನ್ನು ಹೇಳಲಿಲ್ಲವಲ್ಲಾ' ಎಂದು ನೊಂದುಕೊಳ್ಳಬೇಕಾಗುವುದಿಲ್ಲ. ಸೀಬೀಸನೂ ನಾನೂ ನಿನ್ನ ವಾದದ ವಿಷಯವೇ ಯೋಚಿಸುತ್ತಿದ್ದೆವು. ನಮ್ಮ ಮನಸ್ಸಿಗೆ ಅದು ಪೂರ್ತಿ ಸಮರ್ಪಕವಾಗಿಲ್ಲವೆಂದೇ ತೋರುತ್ತದೆ, ಸಾಕ್ರೆಟೀಸ್.''

"ನೀನು ಹೇಳುವುದು ನಿಜವಿರಬಹುದು, ಸಿಮಿಯಾಸ್. ಆದರೆ ಯಾವ ಅಂಶದಲ್ಲಿ ಕೊರತೆ ಕಂಡುಬರುತ್ತದೆ ಹೇಳು.''

"ನನಗೆ ನಿನ್ನ ವಾದದಲ್ಲಿ ಕೊರತೆಯೇನೋ ಕಂಡುಬರುತ್ತದೆ. ಏಕೆಂದರೆ, ಅದನ್ನು ಒಂದು ವೀಣೆ (lyre), ಅದರ ತಂತಿಗಳು ಮತ್ತು ಮೇಳ–ಇವಕ್ಕೂ ಅನ್ವಯಿಸಬಹುದು. ಶ್ರುತಿಮಾಡಿದ ವೀಣೆಯಿಂದ ಬರುವ ಮೇಳವು ಅಗೋಚರವಾದದ್ದು, ಅಶರೀರಿಯಾದದ್ದು, ಪೂರ್ಣ ಸೌಂದರ್ಯವುಳ್ಳದ್ದು, ದಿವ್ಯ (Divine)ವಾದದ್ದು ಎನ್ನಬಹುದು ; ಆದರೆ ವೀಣೆಯೂ ಅದರ ತಂತಿಗಳೂ ಶರೀರವುಳ್ಳುವು ಮತ್ತು ಶರೀರದ ಸ್ವಭಾವ ವುಳ್ಳುವು, ಸಂಯುಕ್ತವಾದುವು, ಮಣ್ಣಿಗೆ (Earthy) ಸಂಬಂಧಪಟ್ಟುವು, ಮರ್ತ್ಯವಾದುವು. ಈಗ ವೀಣೆ ಮುರಿದುಹೋಗಿ ಅದರ ತಂತಿಗಳು ಕಿತ್ತು ಹೋಗುತ್ತವೆಂದಿಟ್ಟುಕೊಳ್ಳೋಣ. ಆಗ ನಿನ್ನ ವಾದವನ್ನು ಅವಕ್ಕೆ ಅನ್ವಯಿಸಿ, 'ಆ ಮೇಳವು ನಾಶವಾಗಿರಲಾರದು, ಇನ್ನೂ ಅದು ಉಳಿದಿರ ಬೇಕು' ಎಂದು ಹೇಳಬಹುದು ; ಏಕೆಂದರೆ, ಮುರಿದುಹೋದ ಮೇಲೆಯೂ ಮರ್ತ್ಯಸ್ವಭಾವವನ್ನೇ ಹೊಂದಿರುವ ವೀಣೆಯೂ ತಂತಿಗಳೂ ಉಳಿದಿರು ವಾಗ ದಿವ್ಯಸ್ವಭಾವವುಳ್ಳ, ಅಮರಸ್ವಭಾವವುಳ್ಳ, ದಿವ್ಯವಾದದ್ದಕ್ಕೂ ಅಮರ ವಾದದ್ದಕ್ಕೂ ಸಂಬಂಧಪಟ್ಟ ಮೇಳವು ಮರ್ತ್ಯವಾದ ವೀಣೆಗಿಂತಲೂ ಮುಂಚೆ ನಾಶವಾಗಿರಲಾರದು. ಹೀಗೆ ಹೇಳುವವನು ಆ ಮೇಳ ಎಲ್ಲೋ ಒಂದು ಕಡೆ ಇದ್ದೇ ಇರಬೇಕೆಂದೂ ವೀಣೆಯ ಮರವೂ ತಂತಿಗಳೂ ಮೇಳಕ್ಕೆ ಅಪಾಯವಾಗುವುದಕ್ಕಿಂತ ಮುಂಚೆ ಕೆಟ್ಟುಹೋಗುತ್ತವೆಂದೂ ಹೇಳಬಹು ದಲ್ಲವೆ? ನಮ್ಮಲ್ಲಿ ಅನೇಕರು ಆತ್ಮದ ವಿಷಯದಲ್ಲಿ 'ಬಹುಶಃ ಉಷ್ಣ, ಶೈತ್ಯ, ಒಣಗಿರುವಿಕೆ, ಆರ್ದ್ರವಾಗಿರುವಿಕೆ—ಮೊದಲಾದ ವಸ್ತುಗಳು ನಮ್ಮ ಶರೀರ ವನ್ನು ತಂತಿಯಿಂದ ಬಿಗಿಯುವಂತೆ ಬಿಗಿದು ಭದ್ರವಾಗಿಟ್ಟಿರಬಹುದು ; ಸರಿ ಯಾದ ಪ್ರಮಾಣದಲ್ಲಿ ಈ ವಸ್ತುಗಳ ಬೆರಕೆಯನ್ನೇ ನಾವು ಆತ್ಮವೆನ್ನು ವುದು ; ಆತ್ಮ ಈ ವಸ್ತುಗಳ ಮೇಳ' ಎಂದು ಅಭಿಪ್ರಾಯಪಡುತ್ತಾರೆ. ಇದು ನಿನಗೆ ಗೊತ್ತೇ ಇರಬೇಕು. ಹೀಗೆ ಆತ್ಮ ಒಂದು ಮೇಳವಾದರೆ, ಶರೀರದ ವಸ್ತುಗಳ ಪ್ರಮಾಣವು ವ್ಯತ್ಯಾಸಹೊಂದಿ ಅದರ ಬಿಗಿ ತಪ್ಪಿ ಹೋದಾಗ, ಅಥವಾ ರೋಗದಿಂದಲೋ ಬೇರೆ ಕೆಡುಕುಗಳಿಂದಲೋ ಬಿಗಿ ಹೆಚ್ಚಾಗಿದ್ದಾಗ, ಆತ್ಮ ದಿವ್ಯವಾದದ್ದಾದರೂ ಶಬ್ದಮೇಳದಂತೆಯೂ ಇತರ ಕಲಾವಸ್ತುಗಳಲ್ಲಿರುವ ಮೇಳದಂತೆಯೂ ಆ ಕ್ಷಣವೇ ನಾಶವಾಗಬೇಕು ;

ಆದರೆ ಉಳಿದಿರುವ ಶಾರೀರಕ ವಸ್ತುಗಳು ಸುಟ್ಟು ಅಥವಾ ಕೊಳೆತುಹೋಗು ವವರೆಗೆ ಬಹುಕಾಲ ಉಳಿದಿರಬೇಕು. ಹೀಗೆ ಯಾರಾದರೂ ಆತ್ಮವೆನ್ನು ವುದು ವಿವಿಧವಸ್ತುಗಳ ಮೇಳವೆಂದೂ ಆದ್ದರಿಂದ ಮರಣವೆನ್ನುವುದು ಸಂಭವಿಸಿದಾಗ ಅದು ಮೊದಲು ನಾಶವಾಗುವುದೆಂದೂ ವಾದಿಸಿದರೆ, ಅವನಿಗೆ ನಾನು ಏನು ಉತ್ತರಕೊಡಬಹುದು ?"

ಸಾಕ್ರೆಟೀಸನು ತನ್ನ ಪದ್ಧತಿಯ ಪ್ರಕಾರ ನಮ್ಮನ್ನು ದಿಟ್ಟಿಸಿ ನೋಡಿ ಸ್ವಲ್ಪ ನಕ್ಕು ಹೇಳಿದನು. "ಸಿಮಿಯಾಸ್ ಹೇಳುವುದು ವಿಚಾರಸಮ್ಮತ ವಾಗಿ ಕಾಣುತ್ತದೆ. ನಿಮ್ಮಲ್ಲಿ ಯಾರಾದರೂ ನನಗಿಂತ ಮುಂಚೆ ಅವನಿಗೆ ಉತ್ತರ ಕೊಡಲು ಸಿದ್ಧವಾಗಿದ್ದರೆ ಏಕೆ ಕೊಡಬಾರದು ? ಸಿಮಿಯಾಸನ್ನು ನೋಡಿದರೆ, ಬಹು ಬಲಶಾಲಿಯಾದ ಶತ್ರುವಾಗಿ ಕಾಣುತ್ತಾನೆ. ಆದರೆ ನಾವು ಅವನಿಗೆ ಉತ್ತರಕೊಡುವುದಕ್ಕಿಂತ ಮುಂಚೆ ನನ್ನ ವಾದದಲ್ಲಿ ಸೀಬೀಸ್ ಏನು ತಪ್ಪು ಕಂಡುಹಿಡಿದಿದ್ದಾನೋ ನೋಡೋಣ. ಹಾಗೆ ಮಾಡಿದರೆ ಸಿಮಿಯಾಸಿಗೆ ಏನು ಉತ್ತರಕೊಡಬೇಕೆಂದು ಯೋಚಿಸುವುದಕ್ಕೆ ಸ್ವಲ್ಪ ಕಾಲವೂ ಸಿಕ್ಕುತ್ತದೆ. ಅವರಿಬ್ಬರೂ ಮಾತಾಡಿದ ಮೇಲೆ ಅವರು ಹೇಳುವುದು ಸತ್ಯವೆಂದು ತೋರಿದರೆ, ಅವರ ಮಾತನ್ನು ಒಪ್ಪಿಕೊಳ್ಳೋಣ; ಇಲ್ಲದಿದ್ದರೆ ನಾವು ಮೊದಲು ಹೇಳಿದ್ದನ್ನೇ ಸಾಧಿಸಿ ಚರ್ಚೆಮಾಡೋಣ. ಎಲ್ಲಿ ಸೀಬೀಸ್, ನಿನಗೆ ತೊಂದರೆಕೊಟ್ಟ ಸಂದೇಹವೇನು ಹೇಳು.''

"ಹೇಳುತ್ತೇನೆ, ಸಾಕ್ರೆಟೀಸ್. ನಿನ್ನ ವಾದ ಮೊದಲು ಯಾವ ಘಟ್ಟ ದಲ್ಲಿದ್ದಿತೋ ಈಗಲೂ ಅಲ್ಲೇ ಇರುವಂತೆ ತೋರುತ್ತದೆ. ಮೊದಲು ಅದಕ್ಕೆ ಪ್ರತಿಯಾಗಿ ಏನೇನು ಹೇಳಬಹುದಾಗಿತ್ತೋ ಈಗಲೂ ಅದೆಲ್ಲವನ್ನೂ ಹೇಳ ಬಹುದು. ಮನುಷ್ಯ ಶರೀರವನ್ನು ಪ್ರವೇಶಿಸುವುದಕ್ಕಿಂತ ಮುಂಚೆಯೂ ಆತ್ಮ ಇರುತ್ತದೆಂದು ನೀನು ಬಹು ಬುದ್ಧಿವಂತಿಕೆಯಿಂದ—ನಿನ್ನ ಬುದ್ಧಿವಂತಿ ಕೆಯನ್ನು ನಾನು ಹೊಗಳುವುದು ಹೆಚ್ಚಿನ ಕೆಲಸ—ಸಂದೇಹವೇ ಉಳಿಯ ದಂತೆ ನಿರ್ಧರಮಾಡಿಕೊಟ್ಟಿದ್ದೀಯೆ. ಆದರೆ ನಾವು ಸತ್ತಮೇಲೆಯೂ ಆತ್ಮ ಉಳಿದಿರುತ್ತದೆಯೆನ್ನುವುದು ಮಾತ್ರ ಇನ್ನೂ ನಿರ್ಣಯವಾಗಿಲ್ಲವೆಂದೇ ನನಗೆ ತೋರುತ್ತದೆ. ಆತ್ಮ ಶರೀರಕ್ಕಿಂತ ಬಹಳ ಬಲವಾದದ್ದಲ್ಲವೆಂದೂ ಅದ ರಷ್ಟು ಕಾಲ ಬಾಳುವುದಿಲ್ಲವೆಂದೂ ಸಿಮಿಯಾಸ್ ಹೇಳಿದನು ; ಅದನ್ನು

ನಾನು ಒಪ್ಪುವುದಿಲ್ಲ. ಆ ವಿಷಯದಲ್ಲಿ ಆತ್ಮ ಶರೀರಕ್ಕಿಂತ ಬಹಳ ಉತ್ತಮವಾದದ್ದೆಂದೇ ನನ್ನ ಅಭಿಪ್ರಾಯ. ಈಗ ನಿನ್ನ ವಾದವು ನನ್ನನ್ನು 'ಹಾಗಾದರೆ ಮನುಷ್ಯನಲ್ಲಿ ಬಲಹೀನವಾದ, ಕೀಳಾದ ಭಾಗವು ಮರಣಾನಂತರ ಉಳಿದಿರುವುದನ್ನು ನೋಡಿದ ಮೇಲೆಯೂ ಇನ್ನೂ ಸಂದೇಹ ಪಡುವೆಯಾ? ಬಲದಲ್ಲೂ ಬಾಳಿಕೆಯಲ್ಲೂ ಉತ್ತಮವಾದ ಭಾಗ ತನಗಿಂತ ಕೀಳಾದ ಭಾಗವಿರುವಷ್ಟು ಕಾಲವಾದರೂ ಉಳಿದಿರಬೇಕೆಂದು ಒಪ್ಪಬೇಡವೆ?' ಎಂದು ಕೇಳಬಹುದು. ಅದಕ್ಕೆ ಪ್ರತಿಯಾಗಿ ನಾನು ಈಗ ಹೇಳುವ ಮಾತಿನಲ್ಲಿ ಏನಾದರೂ ತೂಕವಿದೆಯೇ ನೋಡು. ಸಿಮಿಯಾಸಿನಂತೆಯೇ ನಾನೂ ಒಂದು ಉದಾಹರಣೆಯನ್ನು ತೆಗೆದುಕೊಂಡರೆ ಉತ್ತಮವೆಂದು ತೋರುತ್ತದೆ. ಒಬ್ಬ ನೆಯ್ಗೆಯವನು ವಯಸ್ಸಾಗಿ ಸತ್ತುಹೋದನೆನ್ನೋಣ. ಆಗ ಯಾರಾದರೂ 'ಅವನು ಸತ್ತಿಲ್ಲ, ಜೀವಿಸಿಯೇ ಇರಬೇಕು. ನೋಡು, ಅವನೇ ನೆಯ್ದು ಹಾಕಿಕೊಳ್ಳುತ್ತಿದ್ದ ಅಂಗಿ ಹರಿದು ಹೋಗದೆ ಇನ್ನೂ ಪೂರ್ಣವಾಗಿ ಉಳಿದಿದೆ!' ಎನ್ನಬಹುದು. ಇದನ್ನು ಯಾರಾದರೂ ನಂಬದೆ ಇದ್ದರೆ, 'ಮನುಷ್ಯನು ಹೆಚ್ಚು ಬಾಳಿಕೆ ಬರುತ್ತಾನೋ ನಿತ್ಯವೂ ಉಪಯೋಗಿಸುತ್ತಿರುವ ಅಂಗಿ ಹೆಚ್ಚು ಬಾಳಿಕೆ ಬರುತ್ತದೋ?' ಎಂದು ಅವರನ್ನು ಕೇಳಬಹುದು. ಮನುಷ್ಯನೇ ಹೆಚ್ಚು ಕಾಲ ಬಾಳುತ್ತಾನೆಂದು ಉತ್ತರ ಬಂದರೆ 'ಆ ಮನುಷ್ಯನು ಇನ್ನೂ ಬದುಕಿದ್ದಾನೆಂದು ಸಂದೇಹವಿಲ್ಲದಂತೆ ತೋರಿಸಿದಂತಾಯಿತು. ಅವನಿಗಿಂತ ಕಡಿಮೆ ಬಾಳಿಕೆ ಬರುವ ವಸ್ತು ಇನ್ನೂ ನಾಶವಾಗಿಲ್ಲವಾದ್ದರಿಂದ ಅವನೂ ಇನ್ನೂ ನಾಶವಾಗಿರಲಾರ' ಎಂದು ಹೇಳಬಹುದು. ಆದರೆ ಹೀಗೆಂದುಕೊಳ್ಳುವುದು ತಪ್ಪು, ಈ ವಿಷಯ ನೀನೂ ಯೋಚಿಸಬೇಕಾದದ್ದು, ಸಿಮಿಯಾಸ್. ಹೀಗೆ ವಾದಿಸುವವರು ಶುದ್ಧ ಹುಚ್ಚು ಮಾತಾಡುತ್ತಿದ್ದಾರೆನ್ನುವುದು ಯಾರಿಗಾದರೂ ಗೊತ್ತಾಗುತ್ತದೆ. ನಮ್ಮ ಉದಾಹರಣೆಯ ನೆಯ್ಗೆಯವನು ಅಂಥ ಅನೇಕ ಅಂಗಿಗಳನ್ನು ನೆಯ್ದು ಹಾಕಿಕೊಂಡು ಅವು ನಾಶವಾದ ಮೇಲೂ ಬದುಕಿದ್ದನು; ಆದರೆ ಅವನ ಕೊನೆಯ ಅಂಗಿ ಅವನು ಸತ್ತಮೇಲೂ ಉಳಿದಿತ್ತು. ಇದರಿಂದ ಆ ಮನುಷ್ಯನು ಅಂಗಿಗಿಂತಲೂ ಕೀಳಾದವನೆಂತಲೂ ಬಲಹೀನನೆಂತಲೂ ನಿರ್ಣಯಿಸಲಾಗುವುದಿಲ್ಲ. ಆತ್ಮಕ್ಕೂ

ಶರೀರಕ್ಕೂ ಇರುವಸಂಬಂಧವೂ ಇದೇರೀತಿಯದೆಂದು ಹೇಳಿಬಿಡಬಹುದಲ್ಲವೆ? ಅಂಗಿಯ ಮತ್ತು ಮನುಷ್ಯನ ವಿಷಯದಲ್ಲಿ ಹೇಳಿದಂತೆಯೇ ಆತ್ಮ ಹೆಚ್ಚು ಕಾಲ ಬಾಳುವುದೆಂದೂ ಶರೀರ ಅದಕ್ಕಿಂತ ಬಲಹೀನವಾದ್ದರಿಂದ ಕಡಿಮೆ ಕಾಲ ಬಾಳುವುದೆಂದೂ ಯಾರಾದರೂ ಹೇಳಿದರೆ ಅದು ಸತ್ಯವಾಗಬೇಕು. ಅವರು ಅಷ್ಟಕ್ಕೇ ಮಾತು ನಿಲ್ಲಿಸದೆ ಆತ್ಮ ಎಷ್ಟೋ ಶರೀರಗಳನ್ನು ಧರಿಸಿ ಜೀರ್ಣಮಾಡಿಹಾಕುವುದೆಂದೂ—ಆ ಆತ್ಮ ಬಹುಕಾಲ ಬದುಕುವುದಾದ ರಂತೂ ಆ ವಿಷಯ ಹೇಳಬೇಕಾಗಿಯೇ ಇಲ್ಲ—ಹೇಳಬಹುದು. ಏಕೆಂದರೆ, ಮನುಷ್ಯನು ಬದುಕಿರುವಾಗ ಶರೀರವು ವ್ಯತ್ಯಾಸಹೊಂದಿ ಕೆಡುತ್ತಿದ್ದರೆ, ಕೆಟ್ಟುಹೋದ ಭಾಗವನ್ನು ಸರಿಪಡಿಸಿ ಅದಕ್ಕೆ ಹೊಸ ವಸ್ತ್ರಗಳನ್ನು ಆತ್ಮ ನೇಯುತ್ತಲೇ ಇರುತ್ತದೆ. ಆದರೆ ಆತ್ಮ ಸಾಯುವಾಗ ಅದು ತನ್ನ ಕೊನೆಯ ವಸ್ತ್ರವನ್ನು ಧರಿಸಿರಬೇಕಷ್ಟೆ. ಆತ್ಮ ಸತ್ತಮೇಲೆಯೂ ಆ ಕೊನೆಯ ವಸ್ತ್ರ ಉಳಿದಿರುತ್ತದೆ. ಕೊನೆಗೆ ಆತ್ಮ ಸತ್ತಮೇಲೆ ಶರೀರವು ತನಗೆ ಸಹಜವಾದ ಬಲಹೀನತೆಯನ್ನು ವ್ಯಕ್ತಪಡಿಸಿ ಬೇಗ ಕೊಳೆತುಹೋಗಿ ನಾಶವಾಗುತ್ತದೆ. ಆದ್ದರಿಂದ ಆತ್ಮ ಹೆಚ್ಚು ಬಲವುಳ್ಳದ್ದು ಎಂಬ ನೆಚ್ಚಿಕೆಯ ಮೇಲೆ ಅದರ ಅಮರತ್ವವನ್ನು ಸಾಧಿಸಲು ಹೊರಡುವುದು ಸರಿಯಲ್ಲ. ಈಗ ಬೇಕಾದರೆ ನೀನು ಹೇಳುವಷ್ಟನ್ನು ಮಾತ್ರವಲ್ಲದೆ ಇನ್ನಷ್ಟು ಹೆಚ್ಚು ವಿಷಯವನ್ನೂ ಒಪ್ಪೋಣ. ನಾವು ಹುಟ್ಟುವುದಕ್ಕಿಂತ ಮುಂಚೆಯೇ ಆತ್ಮ ಇತ್ತೆಂದು ಒಪ್ಪುವುದಲ್ಲದೆ, ಸತ್ತಮೇಲೆಯೂ ಕೆಲವರ ಆತ್ಮಗಳು ಉಳಿದಿರುವುವೆಂದೂ ಮತ್ತೆ ಮತ್ತೆ ಹುಟ್ಟಿ ಸಾಯುತ್ತಿರುತ್ತವೆಂದೂ ಹೀಗೆ ಪದೇ ಪದೇ ಹುಟ್ಟುವ ಕಷ್ಟವನ್ನು ತಡೆದುಕೊಳ್ಳುವ ಶಕ್ತಿ ಆತ್ಮಕ್ಕೆ ಇದೆಯೆಂದೂ ಒಪ್ಪೋಣ. ಆದರೆ ಹೀಗೆ ಅನೇಕಾವೃತ್ತಿ ಜನ್ಮವೆತ್ತುವುದು ಅದಕ್ಕೂ ಆಯಾಸಕರವಾಗಿ ಯಾವುದೋ ಒಂದು ಸಲ ಸಾಯುವಾಗ ಅದು ಶಕ್ತಿಗುಂದಿ ನಾಶವಾಗಿ ಹೋಗಬಹುದು. ಆತ್ಮಕ್ಕೆ ಹೀಗೆ ನಾಶವನ್ನು ತರುವ ಸಾವೂ ಶರೀರ ನಾಶವೂ ಯಾವಾಗ ಬರುವುವೆಂಬುದು ನಮಗೆ ಯಾರಿಗೂ ಗೊತ್ತಿಲ್ಲದಿರ ಬಹುದು ; ಏಕೆಂದರೆ, ನಮಗೆ ಯಾರಿಗೂ, ಅದರ ಅನುಭವವಾಗಿರ ಲಾರದು. ಇದೆಲ್ಲ ನಿಜವಾದರೆ ಮರಣಕಾಲದಲ್ಲಿ ದೃಢಮನಸ್ಸಿನಿಂದ ಇರುವುದು ಒಂದು ವಿಧವಾದ ಮೂಢದಾರ್ಢ್ಯವೆಂದೇ ನನ್ನ ಮತ.

ಹಾಗಲ್ಲವೆನ್ನಬೇಕಾದರೆ, ಆತ್ಮವು ಸಂಪೂರ್ಣವಾದ ಅಮರತ್ವವನ್ನು ಹೊಂದಿದೆಯೆಂದೂ ಅದು ನಾಶವಾಗಲಾರದೆಂದೂ ನನಗೆ ನಿರ್ಧರ ಮಾಡಿ ಕೊಡಬೇಕು. ಹಾಗೆ ಮಾಡಲಾಗದಿದ್ದರೆ, ಶರೀರ ನಾಶವಾದಾಗ ಆತ್ಮವೂ ಕೂಡ ನಾಶವಾಗುವುದೆಂದು ಸಾಯುವವನು ಹೆದರುವುದಕ್ಕೆ ಕಾರಣವಿದೆ.''

ಇವರು ಹೀಗೆ ವಾದಿಸಿದ್ದನ್ನು ಕೇಳಿ ನಮ್ಮೆಲ್ಲರಿಗೂ ಮನಸ್ಸಿನಲ್ಲಿ ಸ್ವಲ್ಪ ಆತಂಕವುಂಟಾಯಿತು; ಇದನ್ನು ಆಮೇಲೆ ನಾವು ಒಬ್ಬರಿಗೊಬ್ಬರು ಹೇಳಿಕೊಂಡೆವು. ಅದುವರೆಗಿನ ಚರ್ಚೆಯನ್ನು ಕೇಳಿ ನಮಗೆ ಸಾಕ್ರೆಟೀಸನು ಹೇಳಿದ್ದರಲ್ಲಿ ನಂಬಿಕೆ ಹುಟ್ಟಿತ್ತು. ಈಗ ಇವರಿಬ್ಬರೂ ನಮ್ಮ ನಂಬಿಕೆಯನ್ನು ತಲೆಕೆಳಗು ಮಾಡಿ ನಮಗೆ ಹಿಂದಿನ ವಾದಗಳಲ್ಲಿ ಮಾತ್ರವೇ ಅಲ್ಲದೆ ಮುಂದೆ ಬರುವ ವಾದಗಳಲ್ಲಿಯೂ ಸಂದೇಹ ಹುಟ್ಟುವಂತೆ ಮಾಡಿಬಿಟ್ಟರು. 'ನಮಗೆ ಈ ವಿಷಯಗಳಲ್ಲಿ ತೀರ್ಮಾನಕ್ಕೆ ಬರುವ ಶಕ್ತಿಯೇ ಇಲ್ಲವೇನೊ; ನಿಷ್ಕೃಷ್ಟವಾದ ತಿಳಿವಳಿಕೆಯನ್ನು ಪಡೆಯುವುದು ಸಾಧ್ಯವೇ ಅಲ್ಲವೇನೊ' ಎಂದುಕೊಳ್ಳುವ ಹಾಗಾಯಿತು.

ಎಕಿ—ದೇವರಾಣೆ ನನಗೂ ಹಾಗೆಯೇ ತೋರಿತು, ಫೀಡೊ. ಈಗ ನಿನ್ನ ಮನೋಭಾವ ಹೇಗಿತ್ತೆಂಬುದು ನನಗೆ ಚೆನ್ನಾಗಿ ಗೊತ್ತಾಗುತ್ತದೆ. ಈಗ ನೀನು ಮಾತಾಡುತ್ತಿದ್ದಾಗ ನನಗೂ, 'ಹಾಗಾದರೆ, ಇನ್ನು ಮೇಲೆ ನಾವು ಯಾವ ವಾದದಲ್ಲಿ ತಾನೇ ನಂಬಿಕೆಯಿಡುವುದಕ್ಕಾಗುತ್ತದೆ? ಸಾಕ್ರೆಟೀಸನ ವಾದಕ್ಕಿಂತ ಮನಸ್ಸಿಗೆ ಒಪ್ಪಿಗೆಯಾಗುವುದು ಮತ್ತೆ ಯಾವುದೂ ಇಲ್ಲ; ಅದೂ ಕೂಡ ಈಗ ಅಸಮರ್ಪಕವಾಗಿ ಕಾಣುತ್ತಿದೆ!' ಎನ್ನಿಸಿತು. ಆತ್ಮ ಒಂದು ವಿಧವಾದ ಮೇಳವೆಂಬ ಮತ ಬಹುದಿನದಿಂದಲೂ ನನ್ನನ್ನು ಆಕರ್ಷಿಸಿದೆ; ನೀನು ಅದರ ವಿಷಯವಾಗಿ ಮಾತಾಡಿದಾಗ ನಾನೂ ಹಾಗೆಯೇ ಅಭಿಪ್ರಾಯಪಟ್ಟಿದ್ದದ್ದು ಜ್ಞಾಪಕಕ್ಕೆ ಬಂತು. ಈಗ ನಾನು ಮತ್ತೆ ಮೊದಲಿನಿಂದ ಪ್ರಾರಂಭಿಸಿ, ''ಮನುಷ್ಯನು ಸತ್ತಾಗ ಆತ್ಮ ನಾಶವಾಗುವುದಿಲ್ಲ'' ಎಂದು ನಂಬುವುದಕ್ಕೆ ಬೇರೆ ಕಾರಣಗಳನ್ನು ಕಂಡು ಹಿಡಿಯಬೇಕಾಯಿತು. ಸಾಕ್ರೆಟೀಸನು ಚರ್ಚೆಯನ್ನು ಹೇಗೆ ಮುಂದು ವರಿಸಿದನೋ ಹೇಳು. ನಿಮ್ಮ ಮನಸ್ಸಿನಲ್ಲಿದ್ದ ಕಳವಳದ ಚಿಹ್ನೆಯೇನಾದರೂ ಅವನಲ್ಲಿಯೂ ಕಂಡುಬಂತೋ ಅಥವಾ ಆತನು ಶಾಂತ

ಚಿತ್ತನಾಗಿ ಉತ್ತರಕೊಟ್ಟನೋ? ಅವನು ಕೊಟ್ಟ ಉತ್ತರ ಸಮರ್ಪಕ ವಾಗಿತ್ತೋ ಇಲ್ಲವೋ? ಸಾಧ್ಯವಾದ ಮಟ್ಟಿಗೆ ಏನನ್ನೂ ಬಿಡದೆ ಎಲ್ಲವನ್ನೂ ಹೇಳು.

ಫೀಡೊ—ಎಕಿಕ್ರೆಟೀಸ್, ಸಾಕ್ರೆಟೀಸನನ್ನು ನೋಡಿ ನಾನು ಎಷ್ಟೋ ವೇಳೆ ಆಶ್ಚರ್ಯಪಟ್ಟಿದ್ದೇನೆ; ಆದರೆ ಇನ್ನೆಂದೂ ಅಂದಿನಷ್ಟು ಆಶ್ಚರ್ಯ ವುಂಟಾಗಿರಲಿಲ್ಲ. ಆತನು ಸಮರ್ಪಕವಾದ ಉತ್ತರಕೊಟ್ಟದ್ದೇನೂ ಹೆಚ್ಚಿನ ವಿಷಯವಲ್ಲ. ಆದರೆ ಮೊದಲು ಆ ಯುವಕರ ಪೂರ್ವಪಕ್ಷಗಳನ್ನು ಮೃದುಸ್ವಭಾವದಿಂದಲೂ ಮರ್ಯಾದೆಯಿಂದಲೂ ತಾಳ್ಮೆಯಿಂದಲೂ ಕೇಳಿದ್ದು; ಅನಂತರ ಅವು ನಮ್ಮ ಮೇಲೆ ಉಂಟುಮಾಡಿದ ಪರಿಣಾಮ ವನ್ನು ಆ ಕ್ಷಣವೇ ತಿಳಿದುಕೊಂಡದ್ದು; ಆಮೇಲೆ ನಮ್ಮ ಮನಸ್ಸಿನ ಗಾಯಗಳನ್ನು ವಾಸಿಮಾಡಿದ ರೀತಿ—ಇವೆಲ್ಲವೂ ನನಗೆ ಬಹು ಆಶ್ಚರ್ಯ ವನ್ನೂ ಸಂತೋಷವನ್ನೂ ಉಂಟುಮಾಡಿದವು. ಸೋತು ಚೆದರಿ ಹೋಗಿರುವ ಸೈನ್ಯವನ್ನು ಮತ್ತೆ ಕೂಡಿಸಿ ತನ್ನನ್ನು ಹಿಂಬಾಲಿಸುವಂತೆ ಹುರಿದುಂಬಿಸುವ ದಳಪತಿಯ ಹಾಗೆ ಆತನು ನಮ್ಮನ್ನು ಮತ್ತೆ ವಾದ ಭೂಮಿಗೆ ಕರೆತಂದನು.

ಎಕಿ—ಅನಂತರ?

ಫೀಡೊ—ಹೇಳುತ್ತೇನೆ ಕೇಳು. ನಾನು ಅವನ ಹತ್ತಿರವೇ ಬಲಗಡೆ ಒಂದು ಮಣೆಯ ಮೇಲೆ ಕುಳಿತಿದ್ದೆ. ಅವನು ಸ್ವಲ್ಪ ಎತ್ತರವಾದ ಸ್ಥಳದಲ್ಲಿ ಹಾಸಿಗೆಯ ಮೇಲೆ ಇದ್ದನು. ಆತನು ನನ್ನ ತಲೆಗೂದಲನ್ನು ಸವರಿ ಕೂದಲನ್ನೆಲ್ಲಾ ನನ್ನ ಕತ್ತಿನ ಬಳಿ ಕೂಡಿಸಿ ಹಿಡಿದುಕೊಂಡು—ಆತನು ಆಗಾಗ ನನ್ನ ಕೂದಲನ್ನು ಸವರುವ ಪದ್ಧತಿ—"ಫೀಡೊ, ನಾಳೆ ನೀನು ನಿನ್ನ ಸುಂದರವಾದ ಕೂದಲನ್ನು ಕತ್ತರಿಸಿಹಾಕಿಸುತ್ತೀಯೆಂದು ತೋರು ತ್ತದೆ" ಎಂದನು.

ನಾನು "ಹೌದು. ಸಾಕ್ರೆಟೀಸ್, ಬಹುಶಃ ಕತ್ತರಿಸಿಹಾಕಿಸುತ್ತೇನೆ" ಎಂದೆನು.

"ನನ್ನ ಮಾತು ಕೇಳುವುದಾದರೆ, ನೀನು ಹಾಗೆ ಮಾಡುವುದಿಲ್ಲ."

"ಏಕೆ?"

“ಈಗ ನಮ್ಮ ವಾದ ಸತ್ತಂತಾಗಿ ಅದಕ್ಕೆ ನಾವು ಪುನಃ ಜೀವ ಕೊಡಲಾರದೆ ಹೋದರೆ, ನಾನೂ ನೀನೂ ಇಬ್ಬರೂ ನಮ್ಮ ತಲೆಗೂದಲನ್ನು ಈ ದಿನವೇ ತೆಗೆಸಿಹಾಕೋಣ. ನಾನೇನಾದರೂ ನಿನ್ನ ಸ್ಥಿತಿಯಲ್ಲಿದ್ದು, ಈ ವಾದ ಕೈಗೆ ಸಿಕ್ಕದೆ ತಪ್ಪಿಸಿಕೊಂಡು ಹೋಗಿ, ನಾನು ಸಿಮಿಯಾಸನನ್ನೂ ಸೀಬೀಸನನ್ನೂ ಎದುರಿಸಿ ನಿಲ್ಲಲಾರದೆ ಹೋಗಿದ್ದಿದ್ದರೆ, ಮತ್ತೆ ಅವರೊಡನೆ ಹೋರಾಡಿ ಅವರನ್ನು ಜಯಿಸುವವರೆಗೂ ಕೂದಲನ್ನು ಬೆಳೆಸುವುದಿಲ್ಲವೆಂದು ಆರ್ಗೈವ್‌ಗಳಂತೆ ನಾನೂ ಆಣೆಯಿಟ್ಟುಕೊಳ್ಳುತ್ತಿದ್ದೆ.”

“ಹೌದು. ಆದರೆ ಹೆರಾಕ್ಲೀಸನೂ ಕೂಡ ಇಬ್ಬರಿಗೆ ಸಮನಾಗಲಾರನು ಎಂದು ಕೇಳಿಲ್ಲವೆ?”

“ಹಾಗಾದರೆ, ನನ್ನನ್ನು ಕರಸು. ಸೂರ್ಯ ಮುಳುಗುವವರೆಗೂ ನಾನು ನಿನ್ನ ಐಯೊಲಿಯಸ್ಸಾಗಿರುತ್ತೇನೆ.”

ಆದಕ್ಕೆ ನಾನು “ಹಾಗಲ್ಲ ಸಾಕ್ರೆಟೀಸ್, ನಾನು ನಿನ್ನನ್ನು ಕರೆಯುವುದು ಹೆರಾಕ್ಲೀಸ್ ಐಯೊಲೆಯಸ್ಸನ್ನು ಕರೆಯುವ ಹಾಗಲ್ಲ; ಐಯೊಲೆಯಸ್ ಹೆರಾಕ್ಲೀಸನನ್ನು ಕರೆಯುವ ಹಾಗೆ” ಎಂದೆನು.

ಸಾಕ್ರೆಟೀಸನು “ಹೇಗಾದರೂ ಒಂದೇ. ಆದರೆ ಮೊದಲು ಒಂದು ತಪ್ಪು ಮಾಡದ ಹಾಗೆ ಜಾಗರೂಕರಾಗಿರಬೇಕು. ಎಂದನು.

“ಯಾವ ತಪ್ಪು?”

“ನಾವು ವಿಚಾರಪರತೆಯನ್ನೇ ದ್ವೇಷಿಸದಂತೆ ನೋಡಿಕೊಳ್ಳಬೇಕು. ಮನುಷ್ಯನಿಗೆ ಇದಕ್ಕಿಂತ ದೊಡ್ಡ ವಿಪತ್ತಿಲ್ಲ. ಲೋಕದಲ್ಲಿ ಮನುಷ್ಯದ್ವೇಷಿಗಳಿರುವಂತೆಯೇ ವಿಚಾರದ್ವೇಷಿಗಳೂ ಇದ್ದಾರೆ. ಇವೆರಡು ದ್ವೇಷಗಳಿಗೂ ಒಂದೇ ಕಾರಣ—ಪ್ರಪಂಚದ ವಿಷಯದಲ್ಲಿ ತಿಳಿವಳಿಕೆಯಿಲ್ಲದಿರುವುದು. ಅನುಭವವಿಲ್ಲದವನು ವಿಚಾರಿಸದೆ ಜನರಲ್ಲಿ ನಂಬಿಕೆಯಿಡುವುದರಿಂದ ಮನುಷ್ಯದ್ವೇಷ ಹುಟ್ಟುತ್ತದೆ. ಒಬ್ಬನು ಸತ್ಯವಂತನೆಂದೂ ವಿಶ್ವಾಸಾರ್ಹನೆಂದೂ ಆತನಲ್ಲಿ ನಂಬಿಕೆಯಿಟ್ಟಮೇಲೆ ಅವನು ಮೋಸಗಾರನೆಂದೂ ನಂಬಿಕೆಗರ್ಹನಲ್ಲವೆಂದೂ ತಿಳಿದುಬರಬಹುದು. ಅನೇಕ ಸಲ ಹೀಗೆಯೇ ಆದರೆ, ಅದರಲ್ಲಿಯೂ ತನಗೆ ಬಹಳ ದಿನಗಳಿಂದಲೂ ಗುರುತಾದವರೂ ತಾನು ಅತ್ಯಂತ ಆಪ್ತರೆಂದು ಭಾವಿಸಿದ್ದವರೂ ಹೀಗೆಯೇ ಮೋಸಗಾರರೆಂದು

ತಿಳಿದುಬಂದರೆ, ಆತನು ಅವರಲ್ಲಿ ಅನೇಕರೊಡನೆ ಜಗಳವಾಡಿ, ಕೊನೆಗೆ ಪ್ರಪಂಚದಲ್ಲಿ ಯಾರಲ್ಲಿಯೂ ಸದ್ಗುಣವಿಲ್ಲವೆಂದುಕೊಂಡು ಮನುಷ್ಯರೆಲ್ಲ ರನ್ನೂ ದ್ವೇಷಿಸುತ್ತಾನೆ. ಜನಗಳಲ್ಲಿ ಈ ಸ್ವಭಾವವಿರುವುದನ್ನು ನೀನು ನೋಡಿರಬಹುದು.''

''ನೋಡಿದ್ದೇನೆ.''

''ಇದು ಅವಮಾನಕರವಲ್ಲವೆ? ಅವನು ಇತರರೊಡನೆ ವ್ಯವಹಾರ ಮಾಡಬೇಕಾಗಿ ಬಂತು. ಆದರೆ ಅವನಿಗೆ ಮನುಷ್ಯಸ್ವಭಾವದ ಅನುಭವ ಏನೇನೂ ಇಲ್ಲವೆಂದು ಸ್ಪಷ್ಟವಾಗಿ ತಿಳಿಯುತ್ತದೆಯಲ್ಲವೆ? ಮನುಷ್ಯ ಸ್ವಭಾವ ಗೊತ್ತಿದ್ದರೆ, ಲೋಕದಲ್ಲಿ ಸಜ್ಜನರೂ ದುರ್ಜನರೂ ಬಹು ಸ್ವಲ್ಪ ಮಂದಿ ಮಾತ್ರ ಇದ್ದಾರೆಂದೂ ಮುಕ್ಕಾಲುವಾಸಿ ಜನರೆಲ್ಲಾ ಇವೆರಡರಲ್ಲಿ ಯಾವ ವರ್ಗಕ್ಕೂ ಸೇರುವುದಿಲ್ಲವೆಂದೂ ಅವನು ತಿಳಿಯುತ್ತಿದ್ದನು.''

''ಹಾಗೆಂದರೇನು?''

''ನಾವು ಅತ್ಯಂತ ದೊಡ್ಡದು, ಅತ್ಯಂತ ಚಿಕ್ಕದು ಎಂದು ಹೇಳು ತ್ತೇವಲ್ಲ, ಅದು ಹೇಗೋ ಇದೂ ಹಾಗೆಯೇ. ಅತ್ಯಂತ ದೊಡ್ಡದೋ ಚಿಕ್ಕದೋ ಆದ ಮನುಷ್ಯ, ನಾಯಿ ಅಥವಾ ಇನ್ನೇನಾದರೂ ಒಂದು— ಇಂಥ ವಸ್ತುಗಳು ವಿರಳವಲ್ಲವೆ? ಅತ್ಯಂತ ವೇಗವುಳ್ಳ ಅಥವಾ ಮಂದ ಗಾಮಿಯಾದ ಮನುಷ್ಯ; ಅತ್ಯಂತ ತುಚ್ಛನಾದವನು ಅಥವಾ ಸತ್ಸ್ವಭಾವ ದವನು; ಅತ್ಯಂತ ಕಪ್ಪಾದದ್ದು ಅಥವಾ ಬಿಳುಪಾದದ್ದು—ಇದೆಲ್ಲವೂ ವಿರಳವಲ್ಲವೆ? ಈ ಸಂದರ್ಭಗಳಲ್ಲೆಲ್ಲಾ ಮಿತಿಮೀರಿದ ಗುಣವುಳ್ಳ ವಸ್ತು ಗಳು ವಿರಳ; ಎಲ್ಲೋ ಒಂದೆರಡು ಸಿಕ್ಕಬಹುದು. ಸಾಧಾರಣವಾಗಿ ಎರಡು ಗಡಿಗಳಿಗೂ ಮಧ್ಯದಲ್ಲಿರುವ ಸ್ವಭಾವದ ವಸ್ತುಗಳೇ ಹೆಚ್ಚು. ಇದು ನಿನಗೆ ತಿಳಿದೇ ಇರಬೇಕು.''

''ಹೌದು, ತಿಳಿದಿದೆ.''

''ಹಾಗಾದರೆ, ಈಗ ಕೆಟ್ಟತನದಲ್ಲಿ ಒಂದು ಪಂದ್ಯವನ್ನಿಟ್ಟರೆ, ಅತ್ಯಂತ ಕೆಟ್ಟವರಾಗಿ ಪಂದ್ಯದಲ್ಲಿ ಮುಂದೆ ಬರುವವರು ಬಹು ಸ್ವಲ್ಪ ಮಂದಿ, ಅಲ್ಲವೆ?''

''ಹಾಗೇ ತೋರುತ್ತದೆ.''

"ನಿಜ. ಆದರೆ ಈ ವಿಷಯದಲ್ಲಿ ವಾದಗಳಿಗೂ ಮನುಷ್ಯರಿಗೂ ಹೋಲಿಕೆಯಿಲ್ಲ—ನೀನು ನನ್ನ ಬಾಯಿಂದ ನನ್ನ ಉದ್ದೇಶವಿದ್ದದ್ದಕ್ಕಿಂತ ಸ್ವಲ್ಪ ಹೆಚ್ಚು ಮಾತನ್ನು ಹೊರಡಿಸಿಬಿಟ್ಟೆ. ಈ ಉದಾಹರಣೆಯಲ್ಲಿ ಗಮನಿಸ ಬೇಕಾದ ಅಂಶ ಇದು. ತರ್ಕದಲ್ಲಿ ಹೆಚ್ಚು ಬುದ್ಧಿವಂತನಲ್ಲದವನು ಯಾವುದೋ ಒಂದು ವಾದ ಸತ್ಯವಾದದ್ದೆಂದು ನಂಬಿ ಅನಂತರ—ಅದು ನಿಜವಾಗಿ ಸತ್ಯವಾದದ್ದಾಗಲಿ, ಅಸತ್ಯವಾದದ್ದಾಗಲಿ—ಅದು ಸುಳ್ಳೆಂದು ಭಾವಿಸಬಹುದು. ಅನೇಕ ಸಲ ಹೀಗೆಯೇ ಆದರೆ, ಅವನಿಗೆ ತರ್ಕದಲ್ಲಿ ನಂಬಿಕೆಯೇ ಉಳಿಯುವುದಿಲ್ಲ. ಯಾವ ವಾದದಲ್ಲಿಯೂ ನಿಜವಿಲ್ಲವೆಂದೂ ಎಲ್ಲವೂ ಪೊಳ್ಳೆಂದೂ ತಾರ್ಕಿಕರು ತಿಳಿದಿರುವುದರಿಂದ ಎಲ್ಲರಿಗಿಂತಲೂ ತಾವೇ ಜ್ಞಾನಿಗಳೆಂದುಕೊಳ್ಳುತ್ತಾರೆ. ಇದನ್ನು ನೀನು ಬಲ್ಲೆಯಷ್ಟೆ. ಯೂರಿಪಸ್ ನದಿಯ ಪ್ರವಾಹಗಳಂತೆ ಪ್ರಪಂಚದಲ್ಲಿ ಎಲ್ಲವೂ ಸರ್ವದಾ ಉಕ್ಕಿ ತಗ್ಗಿ ವ್ಯತ್ಯಾಸಹೊಂದುತ್ತಲೇ ಇರುತ್ತವೆಂದು ಅವರ ಭಾವನೆ."

ನಾನು "ಅದು ನಿಜ" ಎಂದೆನು.

"ಹೌದು, ಫೀಡೊ. ಈಗ ನಿಜವಾಗಿಯೂ ಸತ್ಯವೆನ್ನುವುದು ಇದೆ ಯೆಂದೂ ನಿಷ್ಕೃಷ್ಟವಾದ ಜ್ಞಾನವನ್ನು ನಮ್ಮ ಬುದ್ಧಿಯಿಂದ ತಿಳಿಯುವುದು ಸಾಧ್ಯವೆಂದೂ ಇಟ್ಟುಕೊಳ್ಳೋಣ. ಹೀಗಿರುವಾಗ ಒಬ್ಬನು ಒಂದು ವೇಳೆ ನಿಜವಾಗಿಯೂ ಮತ್ತೊಂದು ವೇಳೆ ಸುಳ್ಳಾಗಿಯೂ ಕಾಣುವ ಕೆಲವು ವಾದ ಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕೋಪಗೊಂಡು. ತರ್ಕವೆಲ್ಲಾ ಹೀಗೆಯೇ ಸುಳ್ಳೆಂದು ಹೇಳಬಹುದು. ಅದು ತನಗೆ ತಿಳಿವಳಿಕೆಯಿಲ್ಲದ್ದರ ತಪ್ಪೆಂದು ಭಾವಿಸದೆ ತರ್ಕವೇ ಹೀಗೆಂದು ಅದರ ಮೇಲೆ ತಪ್ಪು ಹೊರಿಸಿ, ಅಲ್ಲಿಂದಾಚೆಗೆ ಯಾವಾಗಲೂ ಅದನ್ನು ದ್ವೇಷಿಸಿ, ಕೊನೆಗೆ ಸತ್ಯವನ್ನೂ ಜ್ಞಾನವನ್ನೂ ತಿಳಿಯದೆ ಹೋಗಬಹುದು. ಇದು ಬಹಳ ಶೋಚನೀಯವಲ್ಲವೆ ?

"ನಿಜವಾಗಿಯೂ ಬಹಳ ಶೋಚನೀಯವಾದ ವಿಷಯ."

"ಆದ್ದರಿಂದ ವಾದದಲ್ಲಿ ಸತ್ಯಾಂಶವೇ ಇಲ್ಲವೆಂಬ ಭಾವ ನಮ್ಮ ಆತ್ಮ ದಲ್ಲಿ ಸೇರದಂತೆ ನಾವು ಮೊದಲು ಜಾಗರೂಕರಾಗಿರಬೇಕು. ನಾವು ವಾದದಲ್ಲಿ ಇನ್ನೂ ಸಾಕಾದಷ್ಟು ಶಕ್ತಿಯನ್ನು ಪಡೆದಿಲ್ಲವೆಂದುಕೊಳ್ಳಬೇಕು. ನಿಮ್ಮ ಮುಂದಿನ ಜೀವನವನ್ನು ಮನಸ್ಸಿನಲ್ಲಿಟ್ಟುಕೊಂಡು ನೀವೂ, ನನ್ನ

ಸಾವು ಹತ್ತಿರವಿದೆಯಾದ್ದರಿಂದ ನಾನೂ, ಆ ಶಕ್ತಿಯನ್ನು ಪಡೆಯುವುದಕ್ಕೆ ಧೈರ್ಯವಾಗಿ ಚಿತ್ತಶುದ್ಧಿಯಿಂದ ಪ್ರಯತ್ನ ಮಾಡಬೇಕು. ಈ ಸಮಯ ದಲ್ಲಿ ನಾನು ಜಿಜ್ಞಾಸುವಿನ ಮನೋಭಾವವನ್ನು ಹೊಂದಿಲ್ಲವೆಂದು ನನಗೆ ಗೊತ್ತಿದೆ ; ವಿದ್ಯಾವಂತರಲ್ಲದ ಜನರಂತೆ ನಾನೂ ಈಗ ಒಂದು ಪಕ್ಷದವ ನಾಗಿದ್ದೇನೆ. ಹೀಗೆ ಪಕ್ಷವಹಿಸಿದವನು ಚರ್ಚೆಯಲ್ಲಿ ತೊಡಗಿರುವಾಗ ಪ್ರಕೃತ ವಿಷಯದಲ್ಲಿ ಸತ್ಯವೇನು ಎಂಬುದನ್ನು ಗಣನೆಗೇ ತಾರದೆ, ತಾನು ಹೇಳುವುದು ಸರಿಯೆಂದು ಶ್ರೋತೃಗಳನ್ನು ಒಪ್ಪಿಸುವುದಕ್ಕೆ ಹೆಚ್ಚು ಗಮನ ಕೊಡುತ್ತಾನೆ. ಈಗ ಹೀಗೆ ಪಕ್ಷವಹಿಸುವವನಿಗೂ ನನಗೂ ಇರುವ ವ್ಯತ್ಯಾಸವಿಷ್ಟೇ ; ತಾನು ಹೇಳುವುದು ಸರಿಯೆಂದು ಅವನು ಎದುರಿಗಿರು ವವರನ್ನು ಒಪ್ಪಿಸಲು ಪ್ರಯತ್ನಿಸುತ್ತಾನೆ ; ನಾನಾದರೋ ನನ್ನನ್ನೇ ಒಪ್ಪಿಸಿ ಕೊಳ್ಳುವುದಕ್ಕೆ ಬಹಳ ಪ್ರಯತ್ನಿಸುತ್ತಿದ್ದೇನೆ. ನನ್ನ ಎದುರಿಗಿರುವವರನ್ನು ಒಪ್ಪಿಸುವುದು ನನಗೆ ಅಷ್ಟು ಮುಖ್ಯವಲ್ಲ. ನನ್ನ ವಾದ ಎಷ್ಟು ಸ್ವಾರ್ಥ ವುಳ್ಳದ್ದು, ನೋಡು. ಈಗ ನಾನು ಹೇಳುವುದು ನಿಜವಾದರಂತೂ ಅದನ್ನು ನಂಬುವುದು ಒಳ್ಳೆಯದೇ ಸರಿ ; ಅಥವಾ ಸತ್ತ ಮೇಲೆ ಎಲ್ಲವೂ ಶೂನ್ಯವೇ ಆದರೂ ಈಗ ನನಗೆ ಉಳಿದಿರುವ ಅಲ್ಪಕಾಲದಲ್ಲಿ ಗೋಳಾಡಿ ನನ್ನ ಸ್ನೇಹಿತರಿ ಗೆಲ್ಲ ದುಃಖವುಂಟುಮಾಡದೆ ಇರಬಹುದು. ಅದಲ್ಲದೆ ನನ್ನ ತಪ್ಪು ತಿಳಿ ವಳಿಕೆಯೂ ಶಾಶ್ವತವಾದದ್ದಲ್ಲ ; ಅದು ಬೇಗ ನನ್ನೊಡನೆಯೇ ಅಳಿದು ಹೋಗುವುದರಿಂದ ಅದರಿಂದ ಏನೂ ಕೆಡುಕಾಗುವುದಿಲ್ಲ. ಸಿಮಿಯಾಸ್, ಸೀಬೀಸ್, ಮನಸ್ಸನ್ನು ಈ ಸ್ಥಿತಿಯಲ್ಲಿಟ್ಟುಕೊಂಡು ನಾನು ಮತ್ತೆ ಚರ್ಚೆಗೆ ಬರುತ್ತೇನೆ. ನೀವು ಸಾಕ್ರೆಟೀಸನನ್ನು ಲೆಕ್ಕಿಸದೆ ಸತ್ಯದ ವಿಷಯವನ್ನೇ ಯೋಚಿಸುತ್ತಿರಬೇಕೆಂದು ನನ್ನ ಸಲಹೆ. ನಾನು ಹೇಳುವುದು ಸತ್ಯವಾಗಿ ಕಂಡುಬಂದರೆ ಒಪ್ಪಿಕೊಳ್ಳಿ ; ಇಲ್ಲದಿದ್ದರೆ ನಿಮ್ಮ ಶಕ್ತಿಯನ್ನೆಲ್ಲಾ ಉಪ ಯೋಗಿಸಿ ನನಗೆ ವಿರೋಧವಾಗಿ ಚರ್ಚೆಮಾಡಿ. ನೀವು ಹಾಗೆ ಮಾಡದಿದ್ದರೆ ನಿಮ್ಮನ್ನು ಒಪ್ಪಿಸುವ ಉತ್ಸಾಹದಲ್ಲಿ ನಾನು ನನ್ನನ್ನೇ ಮೋಸಗೊಳಿಸಿ ಕೊಳ್ಳುವುದಲ್ಲದೆ ನಿಮ್ಮನ್ನೂ ಮೋಸಗೊಳಿಸಿ, ಜೇನುನೊಣದಂತೆ ನಾನು ಸಾಯುವುದಕ್ಕಿಂತ ಮುಂಚೆ ನನ್ನ ಮುಳ್ಳನ್ನು ನಿಮ್ಮಲ್ಲಿ ನೆಟ್ಟುಹೋಗ ಬಹುದು.''

ಇಷ್ಟು ಹೇಳಿ ಸಾಕ್ರೆಟೀಸನು ಚರ್ಚೆಯನ್ನು ಮುಂದುವರಿಸಿದನು. "ಮೊದಲು ನೀವು ಹೇಳಿದ್ದನ್ನು ನಾನು ಮರೆತಿದ್ದೇನೆಂದು ತೋರಿದರೆ, ಅದನ್ನು ಮತ್ತೊಂದು ಸಲ ಹೇಳಿ. ಆತ್ಮ ಶರೀರಕ್ಕಿಂತ ದಿವ್ಯವಾದದ್ದೂ ಘನವಾದದ್ದೂ ಆದರೂ ಒಂದು ವಿಧವಾದ ಮೇಳದಂತಿರುವುದರಿಂದ ಅದು ಶರೀರಕ್ಕಿಂತ ಮುಂಚೆಯೇ ನಾಶವಾಗಬಹುದೆಂದು ಸಿಮಿಯಾಸಿನ ಶಂಕೆ. ಈ ಕಡೆ ಸೀಬೀಸನು ಶರೀರಕ್ಕಿಂತ ಆತ್ಮ ಹೆಚ್ಚು ಕಾಲ ಬಾಳುತ್ತದೆಂದು ಒಪ್ಪಿಕೊಂಡಂತೆ ತೋರಿತು. ಆದರೆ ಆತ್ಮ ಅನೇಕ ಶರೀರಗಳನ್ನು ಜೀರ್ಣ ಮಾಡಿ ಕೊನೆಗೆ ತಾನೇ ನಾಶವಾಗಿ ತನ್ನ ಕೊನೆಯ ಶರೀರವನ್ನು ಹಿಂದೆ ಬಿಟ್ಟುಹೋಗಬಹುದು. ಹೀಗಾಗಲಾರದೆಂದು ಯಾರೂ ಹೇಳಲಾರರು. ಮರಣವೆಂದರೆ ಶರೀರದ ನಾಶಕ್ಕೆ ಬದಲಾಗಿ ಆತ್ಮದ ನಾಶವೇ ಏತಕ್ಕಾಗ ಬಾರದು ? ಶರೀರದ ನಾಶ ಸರ್ವದಾ ಆಗುತ್ತಲೇ ಇರುತ್ತದೆ. ಸಿಮಿಯಾಸ್, ಸೀಬೀಸ್, ನಾವು ಈಗ ಆಲೋಚಿಸಬೇಕಾದ ವಿಷಯಗಳು ಇವೇ ಅಲ್ಲವೆ?''

ಹೌದೆಂದು ಅವರಿಬ್ಬರೂ ಒಪ್ಪಿಕೊಂಡರು.

ಸಾಕ್ರೆಟೀಸನು ಮತ್ತೆ "ನಮ್ಮ ಇದುವರೆಗಿನ ತೀರ್ಮಾನಗಳೆಲ್ಲವನ್ನೂ ಬಿಟ್ಟುಬಿಡಬೇಕೇ ಅಥವಾ ಕೆಲವನ್ನು ಮಾತ್ರ ಬಿಡಬೇಕೇ ? ನಿಮ್ಮ ಅಭಿಪ್ರಾಯವೇನು?'' ಎಂದು ಕೇಳಿದನು.

ಅವರು "ಕೆಲವನ್ನು ಮಾತ್ರ'' ಎಂದರು.

"ಜ್ಞಾನವೆನ್ನುವುದು ನೆನಪು ಮಾತ್ರ; ಆದ್ದರಿಂದ ನಮ್ಮ ಆತ್ಮಗಳು ಶರೀರದ ಬಂಧನಕ್ಕೆ ಸಿಕ್ಕುವುದಕ್ಕಿಂತ ಮುಂಚೆ ಎಲ್ಲಿಯೋ ಇದ್ದಿರಬೇಕು, ಎಂದು ನಾವು ಹೇಳಿದೆವಲ್ಲ. ಅದು ನಿಜವೆಂದು ತೋರುತ್ತದೆಯೆ ?''

ಸೀಬೀಸನು "ಅದರಲ್ಲಿ ನನಗೆ ಹಿಂದೆಯೇ ಆಶ್ಚರ್ಯಕರವಾದ ರೀತಿಯಲ್ಲಿ ನಂಬಿಕೆಯುಂಟಾಯಿತು. ಈಗಲೂ ನನಗೆ ಆ ನಂಬಿಕೆ ದೃಢವಾಗಿಯೇ ಇದೆ'' ಎಂದನು.

"ಆದರೆ, ಥೀಬ್ಸಿನ ನನ್ನ ಮಿತ್ರ, ಮೇಳವೆನ್ನುವುದು ಸಂಯುಕ್ತ ವಸ್ತುವೆಂದೂ ಆತ್ಮವೆನ್ನುವುದು ಶರೀರದ ಮೂಲಶಕ್ತಿಗಳ ಸಂಯೋಜನೆಯಿಂದ ಉಂಟಾದ ಮೇಳವೆಂದೂ ಈಗಲೂ ನೀನು ಹೇಳುವುದಾದರೆ, ಜ್ಞಾನದ ವಿಷಯದಲ್ಲಿ ನಿನ್ನ ಮೊದಲಿನ ಅಭಿಪ್ರಾಯವನ್ನು ಬದಲಾಯಿಸಬೇಕಾಗು

ತ್ತದೆ. ತಾನು ಯಾವ ವಸ್ತುಗಳಿಂದ ಉಂಟಾಗುತ್ತದೋ ಅವುಗಳಿಗಿಂತ ಮೊದಲೇ ಮೇಳ ಇರುತ್ತದೆಯೆಂದು ನೀನು ಹೇಳುವುದಿಲ್ಲ, ಅಲ್ಲವೆ?''

''ಇಲ್ಲ.''

''ಆದರೆ ನೀನು ಈಗ ಹೇಳುವುದರಲ್ಲಿ ಅದೇ ಅರ್ಥ ಬರುವುದಿಲ್ಲವೇ ನೋಡು. ಆತ್ಮ ಮನುಷ್ಯರೂಪವನ್ನು ಪಡೆದು ಶರೀರವನ್ನು ಪ್ರವೇಶಿಸುವುದಕ್ಕೆ ಮೊದಲೇ ಇರುತ್ತದೆಯೆಂದು ಹೇಳುತ್ತೀಯೆ; ಮತ್ತೆ ಅದು ಇನ್ನೂ ಹುಟ್ಟಿಲ್ಲದೆ ಇರುವ ವಸ್ತುಗಳ—ಶರೀರದ ಮೂಲಶಕ್ತಿಗಳ—ಸಂಯೋಜನೆಯಿಂದ ಉಂಟಾಯಿತೆಂದೂ ಹೇಳುತ್ತೀಯೆ. ಮೇಳಕ್ಕೂ ಆತ್ಮಕ್ಕೂ ನೀನು ಹೋಲಿಕೆ ಕೊಟ್ಟೆ. ಆದರೆ ಅವೆರಡಕ್ಕೂ ಹಾಗೆ ಹೋಲಿಕೆಯಿಲ್ಲ. ಇನ್ನೂ ಶ್ರುತಿಹೊಂದದ ವೀಣೆಯೂ ತಂತಿಗಳೂ ಶಬ್ದಗಳೂ ಮೊದಲು ಹುಟ್ಟುತ್ತವೆ. ಇವೆಲ್ಲ ಹುಟ್ಟಿದ ಮೇಲೆ ಕೊನೆಯಲ್ಲಿ ಮೇಳ ಹುಟ್ಟುತ್ತದೆ; ಅದರೆ ಅವಕ್ಕಿಂತ ಮೊದಲು ನಾಶವಾಗುತ್ತದೆ. ನಿನ್ನ ಈ ನಂಬಿಕೆಗೂ ಹಿಂದಿನ ನಂಬಿಕೆಗೂ ಹೊಂದಿಕೆ ಇದೆಯೆ?''

''ಇಲ್ಲ.''

''ನಾವು ಮೇಳದ ವಿಷಯವಾಗಿ ಚರ್ಚೆ ಮಾಡುತ್ತಿರುವಾಗ ಆ ಚರ್ಚೆಯಲ್ಲೇ ಮೇಳವಿರಬೇಡವೆ?''

''ಇದ್ದೇ ಇರಬೇಕು.''

''ಆದರೆ 'ಜ್ಞಾನವೆನ್ನುವುದು ನೆನಪು', 'ಆತ್ಮವೆನ್ನುವುದು ಒಂದು ಮೇಳ' ಎಂಬ ಎರಡು ಮಾತುಗಳಿಗೂ ಮೇಳವಿಲ್ಲವಲ್ಲ! ಇವೆರಡರಲ್ಲಿ ಯಾವುದಾದರೂ ಒಂದನ್ನು ಮಾತ್ರ ಒಪ್ಪಬಹುದು. ಯಾವುದನ್ನು ಒಪ್ಪುತ್ತೀಯೆ, ಸಿಮಿಯಾಸ್?''

''ಮೊದಲನೆಯದರಲ್ಲಿಯೇ ನನಗೆ ನಂಬಿಕೆ ಹೆಚ್ಚು, ಸಾಕ್ರೆಟೀಸ್. ಅದು ನಿಜವೆಂದು ನನಗೆ ಚೆನ್ನಾಗಿ ಮನದಟ್ಟಾಗಿದೆ. ಎರಡನೆಯದಕ್ಕೆ ಯಾರೂ ಸರಿಯಾದ ನಿದರ್ಶನಗಳನ್ನು ಕೊಟ್ಟಿಲ್ಲ. 'ಅದು ಹಾಗಿದ್ದರೂ ಇರಬಹುದು, ಅದು ಸಹಜವಾಗಿ ಕಾಣುತ್ತದೆ' ಎಂದುಕೊಂಡು ಜನರು ಅದನ್ನು ನಂಬುತ್ತಾರೆ. ಆದರೆ ಹೀಗೆ 'ಇರಬಹುದು' ಎನ್ನುವುದನ್ನೇ ಧಾರವಾಗಿಟ್ಟುಕೊಳ್ಳುವ ವಾದಗಳನ್ನು ನಂಬಿದರೆ, ಅವು ಮೋಸ ಮಾಡುವು

ವೆಂದು ನಾನು ಚೆನ್ನಾಗಿ ಬಲ್ಲೆ. ರೇಖಾಗಣಿತದಲ್ಲಿಯೂ ಇತರ ವಿಷಯ ಗಳಲ್ಲಿಯೂ ಅಂಥ ವಾದಗಳನ್ನು ಉಪಯೋಗಿಸುವುದರಲ್ಲಿ ನಾವು ಬಹಳ ಜಾಗರೂಕರಾಗಿರದಿದ್ದರೆ ಮೋಸಹೋಗುವ ಸಂಭವವುಂಟು. ಆದರೆ ಜ್ಞಾನ ನೆನಪೆನ್ನುವ ಮತಕ್ಕೆ ಸರಿಯಾದ ಆಧಾರವಿರುವುದರಿಂದ ಅದನ್ನು ನಂಬ ಬೇಕಾಗುತ್ತದೆ. ಆತ್ಮ ಶರೀರವನ್ನು ಪ್ರವೇಶಿಸುವುದಕ್ಕೆ ಮೊದಲೇ ಇರುತ್ತ ದೆಂದೂ ಸತ್ ಎಂಬ ಹೆಸರುಳ್ಳ ಸಾರವಸ್ತು ಇರುವುದು ನಿಜವಾದರೆ ಇದೂ ನಿಜವೆಂದೂ, ಆ ಸಾರವಸ್ತುವಿದೆಯೆನ್ನುವುದಕ್ಕೆ ಸಾಕಾದಷ್ಟು ಪ್ರಮಾಣ ಸಿಕ್ಕಿರುವುದರಿಂದ ಅದನ್ನು ನಂಬುವುದು ಸರಿಯೆಂದೂ ನಾನು ಒಪ್ಪಿದ್ದೇನೆ. ಆದ್ದರಿಂದ ಆತ್ಮ ಮೇಳವೆಂದು ಇನ್ನು ಮೇಲೆ ನಾನೂ ವಾದಿಸಬಾರದು, ಇತರರನ್ನೂ ಹಾಗೆ ವಾದಿಸಗೊಡಬಾರದು ಎಂದು ತೋರುತ್ತದೆ.''

ಸಾಕ್ರೆಟೀಸನು ಮತ್ತೆ ಹೇಳಿದನು. ''ಈ ವಿಷಯವನ್ನು ಮತ್ತೊಂದು ದೃಷ್ಟಿಯಿಂದ ನೋಡೋಣ, ಸಿಮಿಯಾಸ್. ಒಂದು ಮೇಳ ಅಥವಾ ಬೇರೆ ಯಾವುದಾದರೂ ಸಂಯುಕ್ತವಸ್ತು ತಾನು ಯಾವ ವಸ್ತುಗಳಿಂದ ಏರ್ಪಟ್ಟಿದೆಯೋ ಅವುಗಳ ಸ್ಥಿತಿಯಲ್ಲಿರಬೇಕೇ ಹೊರತು ಬೇರೆ ಸ್ಥಿತಿಯಲ್ಲಿರ ಲಾರದು, ಅಲ್ಲವೆ ?''

''ನಿಜ, ಇರಲಾರದು.''

''ಅವು ಏನು ಕೆಲಸಮಾಡಬಲ್ಲುವೋ ಏನು ಅನುಭವಿಸಬಲ್ಲುವೋ ಅದಕ್ಕಿಂತ ಹೆಚ್ಚಾಗಿ ಮಾಡಲಾರದು, ಅನುಭವಿಸಲಾರದು.''

ಸಿಮಿಯಾಸ್ ಅದನ್ನು ಒಪ್ಪಿಕೊಂಡನು.

''ಆದ್ದರಿಂದ ಮೇಳ ತಾನು ಯಾವ ವಸ್ತುಗಳಿಂದ ಹುಟ್ಟಿದೆಯೋ ಅವು ಗಳನ್ನು ನಡೆಸಿಕೊಂಡುಹೋಗಲಾರದು, ಹಿಂಬಾಲಿಸಿಕೊಂಡುಹೋಗ ಬೇಕು.''

ಸಿಮಿಯಾಸ್ ಅದನ್ನೂ ಒಪ್ಪಿದನು.

''ಏಕೆಂದರೆ, ಮೇಳ ತನ್ನ ಅಂಗಗಳಿಗೆ ವಿರುದ್ಧವಾಗಿ ಚಲಿಸಲಾರದು, ಶಬ್ದಮಾಡಲಾರದು, ಇನ್ನೇನೂ ಮಾಡಲಾರದು.''

ಸಿಮಿಯಾಸ್ ''ಹೌದು, ಅದು ಅಸಾಧ್ಯ'' ಎಂದನು.

"ಸರಿ. ಪ್ರತಿಯೊಂದು ಮೇಳವೂ ತನ್ನ ಅಂಗಗಳು ಯಾವ ರೀತಿಯಲ್ಲಿ ಹೊಂದಿಕೊಳ್ಳುವುವೋ ಅಂಥ ಸ್ವಭಾವವುಳ್ಳದ್ದು."

"ನೀನು ಹೇಳಿದ್ದು ಅರ್ಥವಾಗುವುದಿಲ್ಲ."

"ಈಗ ಅದನ್ನು ಹೆಚ್ಚಾಗಿ ಶ್ರುತಿಮಾಡುವುದು ಸಾಧ್ಯವಾಗಿ ಹಾಗೆ ಮಾಡಿದರೆ, ಅದು ಮೊದಲಿಗಿಂತ ಹೆಚ್ಚಿನ, ಹೆಚ್ಚು ಪೂರ್ಣವಾದ ಮೇಳ ವಾಗುತ್ತದೆ. ಅದನ್ನು ಶ್ರುತಿಮಾಡುವುದು ಸ್ವಲ್ಪ ಕಡಮೆಯಾದರೆ, ಅದು ಮೊದಲಿಗಿಂತ ಕಡಮೆಯಾದ, ಅಷ್ಟು ಪೂರ್ಣವಲ್ಲದ ಮೇಳವಾಗುತ್ತದೆ."

"ನಿಜ."

"ಆದರೆ ಆತ್ಮದ ವಿಷಯದಲ್ಲಿ ಇದೆಲ್ಲ ನಿಜವೆ? ಆತ್ಮದ ವಿಷಯದಲ್ಲಿ ಇದು 'ಹೆಚ್ಚಾದ ಆತ್ಮ, ಇದು ಕಡಮೆಯಾದ ಆತ್ಮ; ಇದರಲ್ಲಿ ಆತ್ಮ ಹೆಚ್ಚು, ಇದರಲ್ಲಿ ಆತ್ಮ ಕಡಮೆ' ಎಂದು ಮಾತಾಡುವುದಕ್ಕಾಗುತ್ತದೆಯೆ?"

"ಎಂದಿಗೂ ಇಲ್ಲ."

"ಆದರೂ ಎರಡು ಆತ್ಮಗಳಲ್ಲಿ ಒಂದು ವಿಚಾರಶಕ್ತಿಯನ್ನೂ ಸದ್ಗುಣ ವನ್ನೂ ಉಳ್ಳದ್ದು, ಒಳ್ಳೆಯದು, ಎಂದೂ; ಮತ್ತೊಂದು ಮೂಢತನವನ್ನೂ ದುರ್ಗುಣವನ್ನೂ ಉಳ್ಳದ್ದು, ಕೆಟ್ಟದ್ದು, ಎಂದೂ ಹೇಳುತ್ತೇವೆ. ಅದು ನಿಜವಲ್ಲವೆ?"

"ಹೌದು."

"ಹಾಗಾದರೆ, ಆತ್ಮ ಒಂದು ಮೇಳ ಎನ್ನುವವರು ಅದರಲ್ಲಿರುವ ಈ ಸದ್ಗುಣ ದುರ್ಗುಣಗಳ ವಿಷಯದಲ್ಲಿ ಏನು ಹೇಳುತ್ತಾರೆ? ಅದರಲ್ಲಿ ಮತ್ತೊಂದು ಮೇಳವೂ ಮತ್ತೊಂದು ಅಪಮೇಳವೂ ಇದೆಯೆಂದೆ? ಅಥವಾ ಒಳ್ಳೆಯ ಆತ್ಮ ಸರಿಯಾಗಿ ಶ್ರುತಿಹೊಂದಿದೆಯೆಂದೂ, ತಾನೇ ಮೇಳವಾಗಿರು ವುದರಿಂದ ಮತ್ತೊಂದು ಮೇಳವನ್ನೊಳಕೊಂಡಿದೆಯೆಂದೂ ಹೇಳುತ್ತಾರೆಯೆ? ಹಾಗೆಯೇ ಕೆಟ್ಟ ಆತ್ಮ ಸರಿಯಾಗಿ ಶ್ರುತಿ ಹೊಂದಿಲ್ಲವೆಂದೂ, ಆದ್ದರಿಂದ ಅದರ ಒಳಗೂ ಮೇಳವಿಲ್ಲವೆಂದೂ ಹೇಳುತ್ತಾರೆಯೆ?"

ಸಿಮಿಯಾಸ್ "ನಾನು ಹೇಳಲಾರೆ. ಆತ್ಮ ಮೇಳ ಎನ್ನುವವರು ಅದೇ ರೀತಿಯ ಉತ್ತರಕೊಡಬೇಕಾಗುತ್ತದೆ" ಎಂದನು.

"ಆದರೆ ಆತ್ಮಗಳಲ್ಲಿ ಒಂದಕ್ಕಿಂತ ಮತ್ತೊಂದು ಹೆಚ್ಚು ಆತ್ಮ ಅಥವಾ

ಕಡಮೆ ಆತ್ಮವಾಗಿರಲಾರದೆಂದು ನಾವು ಆಗಲೇ ಒಪ್ಪಿದ್ದೇವೆ. ಹಾಗೆಂದರೆ— ಮೇಳಗಳಲ್ಲಿ ಒಂದಕ್ಕಿಂತ ಒಂದು ಹೆಚ್ಚು ಅಥವಾ ಕಡಮೆ ಮೇಳ, ಪೂರ್ಣ ಅಥವಾ ಅಪೂರ್ಣ ಮೇಳ ಆಗಿರಲಾರದೆಂದು ನಾವು ಒಪ್ಪಿದ ಹಾಗಾಯಿತು, ಅಲ್ಲವೆ ?''

''ಹೌದು.''

''ಮೇಳದಲ್ಲಿ ಹೆಚ್ಚುಕಡಮೆಯಿಲ್ಲದಿದ್ದರೆ ಅದು ಹೆಚ್ಚು ಅಥವಾ ಕಡಮೆಯಾಗಿ ಶ್ರುತಿಹೊಂದಿರಲಾರದು.''

"ನಿಜ."

"ಯಾವುದು ಹೆಚ್ಚು ಅಥವಾ ಕಡಮೆ ಶ್ರುತಿಹೊಂದದೆ ಇರುತ್ತದೆಯೋ ಅದರಲ್ಲಿರುವುದು ಹೆಚ್ಚು ಮೇಳವೇ, ಕಡಮೆ ಮೇಳವೇ ಅಥವಾ ಸಮವಾದ ಮೇಳವೇ ?"

"ಸಮವಾದ ಮೇಳ."

"ಸರಿ. ಒಂದು ಆತ್ಮ ಮತ್ತೊಂದಕ್ಕಿಂತ ಹೆಚ್ಚು ಅಥವಾ ಕಡಮೆ ಆತ್ಮವಾಗಿರಲಾರದೆಂದ ಮೇಲೆ ಅದು ಹೆಚ್ಚು ಅಥವಾ ಕಡಮೆ ಶ್ರುತಿ ಹೊಂದಿರಲಾರದು.''

''ನಿಜ.''

''ಆದ್ದರಿಂದ ಅದರಲ್ಲಿ ಮೇಳವಾಗಲಿ ಅಪಮೇಳವಾಗಲಿ ಹೆಚ್ಚು ಅಥವಾ ಕಡಮೆ ಭಾಗ ಇರಲಾರದು.''

"ಇರಲಾರದು.''

''ಆದ್ದರಿಂದ ದುರ್ಗುಣ ಅಪಮೇಳವೆಂದೂ ಸದ್ಗುಣ ಮೇಳವೆಂದೂ ಹೇಳಬಹುದಾದರೆ, ಒಂದು ಆತ್ಮ ಮತ್ತೊಂದಕ್ಕಿಂತ ಹೆಚ್ಚಾಗಿ ದುರ್ಗುಣವನ್ನೋ ಸದ್ಗುಣವನ್ನೋ ಹೊಂದಿರಲಾರದು.''

''ಎಂದಿಗೂ ಹೊಂದಿರಲಾರದು.''

''ಇನ್ನೂ ಸ್ವಲ್ಪ ನಿಷ್ಕೃಷ್ಟವಾಗಿ ಹೇಳೋಣ, ಸಿಮಿಯಾಸ್. ಆತ್ಮ ಮೇಳವಾದರೆ ಯಾವ ಆತ್ಮದಲ್ಲೂ ದುರ್ಗುಣವಿರಲಾರದು ; ಏಕೆಂದರೆ, ಮೇಳ ಪೂರ್ಣಮೇಳವಾಗಿದ್ದರೆ ಅದರಲ್ಲಿ ಅಪಮೇಳವಿರಲಾರದು.''

''ಇರಲಾರದು.''

“ಆದ್ದರಿಂದ ಆತ್ಮವು ಪೂರ್ಣವಾದ ಆತ್ಮವಾಗಿದ್ದರೆ, ಅದರಲ್ಲಿ ದುರ್ಗುಣವೇನೂ ಇರಲಾರದು.”

“ಇರಲಾರದು. ನಾವು ಹಿಂದೆ ಹೇಳಿದ್ದರಿಂದ ಈ ಅನುಮಾನ ಬಂದೇ ಬರುತ್ತದೆ.”

“ಹಾಗಾದರೆ, ಆತ್ಮಗಳೆಲ್ಲವೂ ಸ್ವಭಾವತಃ ಒಂದೇ ಸಮನಾದ ಆತ್ಮಗಳಾದರೆ, ಸಜೀವಪ್ರಾಣಿಗಳ ಆತ್ಮಗಳೆಲ್ಲವೂ ಒಂದೇ ಸಮನಾಗಿ ಸದ್ಗುಣಿಗಳಾಗಿರಬೇಕು.”

ಸಿಮಿಯಾಸ್ “ಹೌದು. ಹಾಗೆ ತೋರುತ್ತದೆ, ಸಾಕ್ರೆಟೀಸ್” ಎಂದನು.

“ನೀನು ಇದೆಲ್ಲಾ ನಿಜವೆಂದು ಹೇಳುವೆಯಾ? ಆತ್ಮ ಒಂದು ಮೇಳವೆಂದು ಮೊದಲು ಹೇಳಿದ್ದು ನಿಜವಾದರೆ, ಇದೆಲ್ಲವೂ ನಿಜವಾಗಬೇಕು.”

“ಇದೊಂದೂ ನಿಜವಾಗಿರಲಾರದು.”

“ಸರಿ. ಮನುಷ್ಯನಲ್ಲಿ ಆತ್ಮವೇ ಆಳತಕ್ಕ ಭಾಗ; ಅದರಲ್ಲಿಯೂ ಜ್ಞಾನಿಯಾದ ಆತ್ಮವಾದರೆ ಅದಲ್ಲದೆ ಇನ್ನು ಯಾವುದಾದರೂ ಆಳಿಕೆ ಮಾಡುತ್ತದೆಯೆ?”

“ಇಲ್ಲ.”

“ಆತ್ಮ ಶರೀರದ ರಾಗದ್ವೇಷಾದಿಗಳಿಗೆ ಅಡಿಯಾಳಾಗುತ್ತದೆಯೋ ಅಥವಾ ಅವುಗಳನ್ನು ಎದುರಿಸುತ್ತದೆಯೋ? ಉದಾಹರಣೆಗೆ, ಶರೀರ ಸೆಕೆಪಟ್ಟು ದಾಹದಿಂದಿರುವಾಗ ಕುಡಿಯದಂತೆ ಆತ್ಮ ಅದನ್ನು ತಡೆಯುತ್ತದೆ; ಹಸಿದಿರುವಾಗ ತಿನ್ನದಂತೆ ತಡೆಯುತ್ತದೆ. ಹೀಗೆಯೇ ಸಾವಿರ ವಿಧದಲ್ಲಿ ಆತ್ಮ ಶರೀರದ ರಾಗದ್ವೇಷಗಳಿಗೆ ವಿರೋಧವಾಗಿ ನಿಲ್ಲುವುದನ್ನು ನಾವು ಬಲ್ಲೆವು, ಅಲ್ಲವೆ?”

“ಹೌದು.”

“ಆದರೆ ಆತ್ಮ ಮೇಳವಾದರೆ, ತಾನು ಯಾವುದರಿಂದ ಉತ್ಪತ್ತಿಯಾಗುತ್ತದೆಯೋ ಆ ತಂತಿಗಳ ಲಘು, ಬಿಗಿ, ಸ್ಪಂದನ ಮೊದಲಾದ ವ್ಯತ್ಯಾಸಗಳಿಗೆ ವಿರುದ್ಧವಾಗಿ ಅದು ಯಾವ ನಾದವನ್ನೂ ಕೊಡಲಾರದೆಂದು ನಾವು ಆಗಲೇ

ಒಪ್ಪಿಕೊಂಡೆವಲ್ಲವೆ? ಆತ್ಮ ಅವುಗಳನ್ನು ಹಿಂಬಾಲಿಸಬಲ್ಲುದೇ ಹೊರತು ತನ್ನ ನೇತೃತ್ವದಲ್ಲಿಟ್ಟುಕೊಂಡಿರಲಾರದು."

"ಅದನ್ನು ನಾವು ಒಪ್ಪಿದ್ದೇವೆ, ನಿಜ."

"ಆದರೆ ನಮಗೆ ತಿಳಿದಂತೆ ಆತ್ಮವು ಈಗ ಹೇಳಿದ ರೀತಿಯಲ್ಲಿ ನಡೆಯುವೆ ಅದಕ್ಕೆ ವಿರುದ್ಧವಾದ ರೀತಿಯಲ್ಲೇ ನಡೆಯುವುದಿಲ್ಲವೆ? ಅದನ್ನು ಯಾವ ವಸ್ತುಗಳಿಂದ ಮಾಡಿರುವಂತೆ ನಮಗೆ ತೋರುತ್ತದೋ ಆ ವಸ್ತುಗಳನ್ನು ಹಿಂಬಾಲಿಸುವುದಕ್ಕೆ ಬದಲು ತಾನೇ ಅವುಗಳನ್ನು ನಡೆಸುತ್ತದೆ. ಎಲ್ಲಾ ವಿಷಯಗಳಲ್ಲಿಯೂ ಅವುಗಳಿಗೆ ವಿರೋಧವಾಗಿ ನಿಂತು ಜೀವಮಾನವೆಲ್ಲಾ ಅವುಗಳನ್ನು ಆಳುತ್ತದೆ. ಒಂದೊಂದು ವೇಳೆ ಅಂಗಸಾಧನೆಯ ಮೂಲಕವೂ ಔಷಧಿಯ ಮೂಲಕವೂ ಅವುಗಳಿಗೆ ಶಿಕ್ಷಣ ಕೊಟ್ಟು, ಕೆಲವು ವೇಳೆ ಕಠಿನವಾಗಿಯೂ ಮತ್ತೆ ಕೆಲವು ವೇಳೆ ಲಘುವಾಗಿಯೂ ಅವುಗಳನ್ನು ದಂಡಿಸುತ್ತದೆ. ಬೇರೆ ಯಾವುದೋ ವಸ್ತುಗಳನ್ನು ಹೆದರಿಸುವಂತೆ ಆಶೆಗಳನ್ನೂ ರಾಗ ದ್ವೇಷಗಳನ್ನೂ ಭಯಗಳನ್ನೂ ಒಂದು ವೇಳೆ ಹೆದರಿಸಿ, ಮತ್ತೊಂದು ವೇಳೆ ಬುದ್ಧಿ ಹೇಳುತ್ತದೆ. ಅದನ್ನು ನೋಡಿದರೆ, ಒಡಿಸ್ಸಿಯಲ್ಲಿ ಹೋಮರನು ಒಡಿಸ್ಸಿಯಸ್ಸಿನ ವಿಷಯವಾಗಿ 'ಅವನು ತನ್ನ ಎದೆಯನ್ನು ಬಡಿದುಕೊಂಡು ತನ್ನ ಹೃದಯವನ್ನು ತಾನೇ ಹೀಗೆ ನಿಂದಿಸಿದನು: ಸಹಿಸು, ಹೃದಯವೇ, ಸಹಿಸು; ಇದಕ್ಕಿಂತಲೂ ವಿಪತ್ಕರವಾದ್ದನ್ನು ನೀನು ಸಹಿಸಿದ್ದೀಯೆ' ಎಂದು ಹೇಳಿರುವುದು ನೆನಪಾಗುತ್ತದೆ. ಆತ್ಮವೂ ಹಾಗೇ ಮಾಡುತ್ತದೆ. ಹೋಮರನು ಆ ಪಂಕ್ತಿಗಳನ್ನು ಬರೆದಾಗ, ಆತ್ಮ ಒಂದು ಮೇಳವೆಂದೂ ಅದು ಶರೀರದ ರಾಗದ್ವೇಷಾದಿಗಳ ನೇತೃತ್ವದಲ್ಲಿದೆಯೆಂದೂ ಭಾವಿಸಿದ್ದನೆಂದು ಹೇಳೋಣವೆ? ಅಥವಾ ಅದು ಆ ರಾಗದ್ವೇಷಾದಿಗಳನ್ನು ಜಯಿಸಿ, ಅವುಗಳನ್ನು ತಾನು ನಡಸುತ್ತದೆಂದೂ ಅದು ದೈವಸಮಾನವಾದ್ದರಿಂದ ಅದು ಎಂದಿಗೂ ಯಾವ ಮೇಳದಂತೆಯೂ ಇರಲಾರದೆಂದೂ ತಿಳಿದಿದ್ದನೋ?"

"ಹಾಗೆಯೇ ತಿಳಿದಿದ್ದಿರಬೇಕು."

"ಹಾಗಾದರೆ, ಸಿಮಿಯಾಸ್, ಆತ್ಮ ಒಂದು ಮೇಳವೆಂದು ನಾವು ಹೇಳಿದರೆ ತಪ್ಪಾಗುತ್ತದೆ; ಹಾಗೆ ಹೇಳಿದರೆ ನಾವು ಮಹಾಕವಿಯಾದ

ಹೋಮರನಿಗೆ ಮಾತ್ರವಲ್ಲದೆ ನಮಗೆ ನಾವೇ ವಿರುದ್ಧವಾಗಿ ಮಾತಾಡಿದಂತಾಗುತ್ತದೆ."

ಸಿಮಿಯಾಸನು "ನಿಜ" ಎಂದನು.

ಆ ಮೇಲೆ ಸಾಕ್ರೆಟೀಸನು "ಸರಿ. ಈಗ ನಿಮ್ಮ ಥೀಬ್ಸಿನ ದೇವತೆಯಾದ ಹಾರ್ಮೋನಿಯಳನ್ನು ಜಯಿಸಿದ್ದಾಯಿತು; ಆಕೆ ನಮ್ಮ ಮೇಲೆ ಅನುಗ್ರಹ ವಿಟ್ಟು ನಮ್ಮ ಕೈವಶಳಾದಳು. ಆದರೆ ಆಕೆಯ ಪತಿಯಾದ ಕೇಡ್ಮಸ್ಸಿಗೆ ಏನು ಹೇಳೋಣ, ಸೀಬೀಸ್? ಆತ್ಮವನ್ನು ಸಮಾಧಾನಪಡಿಸುವುದು ಹೇಗೆ?" ಎಂದನು.

ಅದಕ್ಕೆ ಸೀಬೀಸನು "ಆತನನ್ನು ಸಮಾಧಾನಪಡಿಸುವುದಕ್ಕೂ ನೀನು ಏನಾದರೂ ಒಂದು ದಾರಿಯನ್ನು ಕಂಡುಹಿಡಿಯುತ್ತೀಯೆ, ಸಾಕ್ರೆಟೀಸ್. ಹಾರ್ಮೋನಿಯಾ ದೇವಿಯೊಡನೆ ನೀನು ಚರ್ಚಿಸಿದ್ದನ್ನು—ಆತ್ಮ ಮೇಳವಲ್ಲವೆಂದು ನೀನು ವಾದಿಸಿದ ರೀತಿಯನ್ನು—ನೋಡಿ, ನಮ್ಮೆಲ್ಲರಿಗೂ ಅತ್ಯಾಶ್ಚರ್ಯವಾಯಿತು. ಸಿಮಿಯಾಸನು ತನ್ನ ಆಕ್ಷೇಪಣೆಯನ್ನು ಹೇಳುತ್ತಿದ್ದಾಗ ಅದಕ್ಕೆ ಉತ್ತರ ಕೊಡುವುದು ಅಸಾಧ್ಯವೆಂದೇ ನನಗೆ ತೋರಿತು. ನೀನು ಅದನ್ನು ಎದುರಿಸಿ ವಾದಕ್ಕೆ ನಿಂತೊಡನೆಯೇ ಆ ಆಕ್ಷೇಪಣೆ ಬಿದ್ದುಹೋದದ್ದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಈಗ ನೀನು ಕೇಡ್ಮಸ್ ಎಂದು ಕರೆದೆಯಲ್ಲ ಅವನ ವಾದಕ್ಕೂ ಅದೇ ಗತಿಯಾಗಬಹುದು" ಎಂದು ಉತ್ತರ ಕೊಟ್ಟನು.

"ಅಷ್ಟೊಂದು ಧೈರ್ಯವಾಗಿರಬೇಡ, ಸೀಬೀಸ್" ಎಂದು ಸಾಕ್ರೆಟೀಸನು ಅವನನ್ನು ಎಚ್ಚರಿಸಿದನು. "ಅಷ್ಟೊಂದು ಧೈರ್ಯವಾಗಿರಬೇಡ, ಯಾರಾದರೂ ಕಣ್ಣುಹಾಕಿ ಮುಂದೆ ಬರುವ ವಾದ ತಲೆಕೆಳಗಾದೀತು. ಆದರೆ ದೇವರ ಮೇಲೆ ಭಾರಹಾಕಿ ನಾವು ಹೋಮರಿನ ವೀರರಂತೆ ಧೈರ್ಯವಾಗಿ ಮುಂದುವರಿದು, ನೀನು ಹೇಳಿದ್ದರಲ್ಲಿ ಏನಾದರೂ ತಿರುಳಿದೆಯೇ ನೋಡೋಣ. ಮೊತ್ತದಲ್ಲಿ ಈಗ ನೀನು ತಿಳಿಯಬೇಕೆಂದಿರುವುದು ಇಷ್ಟು: ಆತ್ಮ ನಾಶರಹಿತವಾದದ್ದು, ಅಮರವಾದದ್ದು ಎಂದು ನಿನಗೆ ನಿದರ್ಶನ ಕೊಡಬೇಕು. ಏಕೆಂದರೆ, ಆತ್ಮ ಅಂಥಾದ್ದಲ್ಲದಿದ್ದರೆ ಮರಣಸಮಯದಲ್ಲಿ ಆತಂಕವಿಲ್ಲದೆ ಶಾಂತಿಯಿಂದಿರುವ ಮತ್ತು ತಾನು ಸತ್ತಮೇಲೆ ಈ ಪ್ರಪಂಚದ

ಜೀವನಕ್ಕಿಂತಲೂ ಉತ್ತಮವಾದ ಜೀವನವನ್ನು ಹೊಂದುತ್ತೇನೆಂದು ಕೊಂಡಿರುವ ಜಿಜ್ಞಾಸುವಿನ ನಂಬಿಕೆಯೂ ಆಧಾರವಿಲ್ಲದ ಮೂಢನಂಬಿಕೆ ಯೆನ್ನಬೇಕು. ಆತ್ಮ ಶಕ್ತಿಯುತವಾದದ್ದು, ದೈವಸಮಾನವಾದದ್ದು ಎಂದೂ, ನಾವು ಮನುಷ್ಯರೂಪದಲ್ಲಿ ಹುಟ್ಟುವುದಕ್ಕೆ ಮುಂಚೆಯೂ ಅದು ಇದ್ದಿ ತೆಂದೂ ಹೇಳಿದರೆ ಸಾಲದು. ಅಷ್ಟು ಮಾತ್ರ ಹೇಳಿದರೆ ಆತ್ಮದ ಅಮರತ್ವ ವನ್ನು ಸಮರ್ಥಿಸಿದಂತಾಗುವುದಿಲ್ಲ: ಅದು ಬಹುಕಾಲ ಬದುಕುತ್ತದೆಂದೂ ಬಹಳ ಹಿಂದಿನ ಕಾಲದಿಂದಲೂ ಇದ್ದಿತೆಂದೂ ಹಿಂದೆ ಮತ್ತೊಂದು ಸ್ಥಿತಿ ಯಲ್ಲಿದ್ದಾಗ ಅದು ಅನೇಕ ವಿಷಯಗಳನ್ನು ತಿಳಿದಿತ್ತೆಂದೂ ಅನೇಕ ಕೆಲಸ ಗಳನ್ನು ಮಾಡಿತ್ತೆಂದೂ ಹೇಳಿದ ಹಾಗಾಯಿತು; ಆತ್ಮಕ್ಕೆ ಸಾವಿಲ್ಲವೆಂದು ಹೇಳಿದ ಹಾಗಾಗಲಿಲ್ಲ. ಅದು ಮನುಷ್ಯ ಶರೀರವನ್ನು ಪ್ರವೇಶಿಸಿದಾಗಲೇ ಅದಕ್ಕೆ ರೋಗಬಂದಂತಾಯಿತು ; ಆ ಪ್ರವೇಶವೇ ಆದರ ನಾಶಕ್ಕೆ ಪ್ರಾರಂಭ. ಇದಲ್ಲದೆ ಆತ್ಮ ಈ ಜೀವನವನ್ನು ದುಃಖದಲ್ಲಿ ಕಳೆಯುತ್ತದೆ ; ಕೊನೆಗೆ ನಾವು ಯಾವುದನ್ನು ಸಾವು ಎಂದು ಕರೆಯುತ್ತೇವೋ ಅದರ ಮೂಲಕ ನಾಶ ಹೊಂದುತ್ತದೆ. ಅದು ಶರೀರವನ್ನು ಒಂದು ಬಾರಿ ಪ್ರವೇಶಿಸಿದರೇನು, ಸಾವಿರ ಬಾರಿ ಪ್ರವೇಶಿಸಿದರೇನು ? ಅದು ಅನೇಕ ಸಲ ಶರೀರವನ್ನು ಪ್ರವೇಶಿಸುವುದೆಂದ ಮಾತ್ರಕ್ಕೆ ನಮಗೆ ಸಾವಿನ ಭಯ ಕಡಮೆಯಾಗು ವುದಿಲ್ಲ ; ಏಕೆಂದರೆ ಆತ್ಮಕ್ಕೆ ಸಾವಿಲ್ಲವೆಂದು ತಿಳಿಯದೆ ಅದನ್ನು ಸಮರ್ಥಿಸ ಲಾಗದೆ ಇದ್ದರೆ, ಮೂಢರು ಹೊರತು ಉಳಿದವರೆಲ್ಲರೂ ಸಾವಿಗೆ ಅಂಜಲೇ ಬೇಕು. ಇದೇ ಅಲ್ಲವೇ ಸೀಬೀಸ್, ನಿನ್ನ ಆಕ್ಷೇಪಣೆಯ ಸಾರಾಂಶ ? ಇದನ್ನು ನಾನು ಉದ್ದೇಶಪೂರ್ವಕವಾಗಿಯೇ ಪುನಃ ಪುನಃ ಹೇಳುತ್ತಿದ್ದೇನೆ. ಅದರಲ್ಲಿರುವ ಮುಖ್ಯಾಂಶವೊಂದನ್ನೂ ಬಿಡಬಾರದು ; ಅದಕ್ಕೆ ಸೇರಿಸ ಬೇಕಾದದ್ದು ಅಥವಾ ಅದರಿಂದ ತೆಗೆಯಬೇಕಾದದ್ದು ಏನಾದರೂ ಇದ್ದರೆ ಈಗಲೇ ನೋಡುವುದು ಒಳ್ಳೆಯದು."

ಸೀಬೀಸನು "ಇಲ್ಲ. ಅದೇ ನನ್ನ ಮಾತಿನ ಸಾರಾಂಶ. ಸೇರಿಸಬೇ ಕಾದದ್ದೂ ತೆಗೆಯಬೇಕಾದದ್ದೂ ಏನೂ ಇಲ್ಲ" ಎಂದನು.

ಸಾಕ್ರೆಟೀಸನು ಸ್ವಲ್ಪ ಹೊತ್ತು ಯೋಚಿಸುತ್ತಾ ಸುಮ್ಮನಿದ್ದು ಅನಂತರ "ನೀನು ಕೇಳುವ ಪ್ರಶ್ನೆ ಸುಲಭವಾದದ್ದಲ್ಲ, ಸೀಬೀಸ್. ಈಗ ನಾವು

ಉತ್ಪತ್ತಿ, ನಾಶ, ಇವುಗಳ ಕಾರಣಗಳೇನೆಂದು ಕೂಲಂಕಷವಾಗಿ ವಿಚಾರ ಮಾಡಬೇಕು. ನಿನಗೆ ಕೇಳಲಿಚ್ಛೆಯಿದ್ದರೆ ನನ್ನ ಅನುಭವವನ್ನು ಹೇಳುತ್ತೇನೆ. ನಾನು ಹೇಳುವುದರಿಂದ ನಿನಗೆ ಏನಾದರೂ ಪ್ರಯೋಜನವಾದರೆ, ಆ ಮಾತುಗಳನ್ನು ನಿನ್ನ ಸಂದೇಹಪರಿಹಾರಕ್ಕೆ ಉಪಯೋಗಿಸಿಕೊಳ್ಳಬಹುದು" ಎಂದನು.

ಸೀಬೀಸನು "ನಿನ್ನ ಅನುಭವವನ್ನು ತಿಳಿಯಬೇಕೆಂದು ಬಹಳ ಇಚ್ಛೆಯಿದೆ, ಸಾಕ್ರೆಟೀಸ್" ಎಂದನು.

"ಹಾಗಾದರೆ ಹೇಳುತ್ತೇನೆ ಕೇಳು" ಎಂದು ಸಾಕ್ರೆಟೀಸನು ಮುಂದೆ ಹೇಳಿದನು. ನಾನು ಇನ್ನೂ ಯೌವನಸ್ಥನಾಗಿದ್ದಾಗ 'ಭೌತಶಾಸ್ತ್ರ'ವೆನ್ನುವುದರಲ್ಲಿ ಜ್ಞಾನವನ್ನು ಪಡೆಯಬೇಕೆಂದು ಉತ್ಕಟವಾದ ಇಚ್ಛೆಯಿತ್ತು. ಎಲ್ಲಾ ವಿಷಯಗಳಿಗೂ ಕಾರಣವೇನು, ವಸ್ತುಗಳು ಹುಟ್ಟುವುದೇಕೆ, ಬಾಳುವುದೇಕೆ, ಸಾಯುವುದೇಕೆ—ಇದನ್ನೆಲ್ಲಾ ತಿಳಿದುಕೊಂಡರೆ ಬಹಳ ಸೊಗಸಾಗಿರುತ್ತದೆಂದು ತೋರಿತು. ಯಾವಾಗಲೂ ಕೆಲವು ಪ್ರಶ್ನೆಗಳು ನನಗೆ ಬಹು ತೊಂದರೆ ಕೊಡುತ್ತಿದ್ದುವು. ಸಜೀವಪ್ರಾಣಿಗಳು ಶೀತೋಷ್ಣಗಳಿಂದ ಉಂಟಾಗುವ ನಾಶಕ್ರಮದಿಂದ ಒಂದು ಗೊತ್ತಾದ ರೂಪವನ್ನು ಪಡೆಯುತ್ತವೆಂದು ಕೆಲವರು ಹೇಳುತ್ತಾರೆ ; ಅದು ನಿಜವೆ ? ನಮಗೆ ಆಲೋಚನಾಶಕ್ತಿ ಬರುವುದು ಏತರಿಂದ? ರಕ್ತದಿಂದಲೇ, ಗಾಳಿಯಿಂದಲೇ, ಬೆಂಕಿಯಿಂದಲೇ? ಅಥವಾ ಇದೊಂದರಿಂದಲೂ ಅಲ್ಲದೆ, ಕಿವಿ, ಕಣ್ಣು, ಮೂಗು, ಮೊದಲಾದ ಇಂದ್ರಿಯಗಳ ಮೂಲಕ ಪ್ರಪಂಚವನ್ನು ತಿಳಿಯುವ ಶಕ್ತಿ ಮೆದುಳಿನಿಂದ ಬರುತ್ತದೆಯೆ ? ಇವೆಲ್ಲದರ ನಾಶವನ್ನೂ ಭೂವ್ಯೋಮಾಕಾಶಗಳಲ್ಲಿ ಉಂಟಾಗುವ ವ್ಯತ್ಯಾಸಗಳನ್ನೂ ಪುನಃ ಪುನಃ ಪರೀಕ್ಷಿಸಿ, ಕೊನೆಗೆ ಈ ವಿಧವಾದ ಶಾಸ್ತ್ರಾಭ್ಯಾಸಕ್ಕೆ ನಾನೇನೂ ಅರ್ಹನಲ್ಲವೆಂಬ ತೀರ್ಮಾನಕ್ಕೆ ಬಂದೆನು. ಅದು ಹೇಗೆಂಬುದನ್ನು ಈಗ ನಿನಗೆ ಸ್ಪಷ್ಟಪಡಿಸಿಕೊಡುತ್ತೇನೆ. ಈ ಶಾಸ್ತ್ರಾಭ್ಯಾಸದಿಂದ ನನಗೆ ಮೊದಲು ಇದ್ದ ತಿಳಿವಳಿಕೆಯೂ ಇಲ್ಲದಂತಾಗಿ ನಾನು ಕುರುಡನ ಹಾಗಾದೆನು. ಯಾವ ವಿಷಯಗಳಲ್ಲಿ ಚೆನ್ನಾಗಿ ತಿಳಿವಳಿಕೆಯಿದೆಯೆಂದು ನಾನೂ ಇತರರೂ ಭಾವಿಸಿದ್ದೆವೋ ಅವೆಲ್ಲವೂ ಈಗ ತಿಳಿಯದಂತಾದುವು. ನಾನು ಚೆನ್ನಾಗಿ ತಿಳಿದಿದ್ದೆನೆಂದು ಭಾವಿಸಿದ್ದದ್ದನ್ನೆಲ್ಲಾ ಈಗ

ಮರೆಯಬೇಕಾಯಿತು. ಬೆಳವಳಿಗೆಗೆ ಅನ್ನಪಾನಾದಿಗಳೇ ಕಾರಣವೆಂದು ನಾನು ಮೊದಲು ದೃಢವಾಗಿ ನಂಬಿದ್ದೆನು. ಆಹಾರಪಚನದಿಂದ ನಮ್ಮ ದೇಹದ ಮಾಂಸಕ್ಕೆ ಮಾಂಸವೂ ಮೂಳೆಗೆ ಮೂಳೆಯೂ ಕೂಡುವುದರಿಂದ, ಮತ್ತು ಹೀಗೆಯೇ ದೇಹದ ಇತರ ಭಾಗಗಳಿಗೆ ಅದಕ್ಕದಕ್ಕೆ ಯೋಗ್ಯವಾದ ವಸ್ತುಗಳು ಕೂಡುವುದರಿಂದ, ಗಾತ್ರದಲ್ಲಿ ಚಿಕ್ಕದಾಗಿದ್ದ ಶರೀರ ಕ್ರಮೇಣ ದೊಡ್ಡದಾಗಿ ಬೆಳೆದು ಹುಡುಗನಾಗಿದ್ದವನು ವಯಸ್ಕನಾದ ಮನುಷ್ಯನಾಗುತ್ತಾನೆ ಎಂದುಕೊಂಡಿದ್ದೆನು. ಯಾರಾದರೂ ಸರಿಯೆ ಇದನ್ನು ಸಂದೇಹವಿಲ್ಲದೆ ಒಪ್ಪುತ್ತಾರೆಂದೇ ನಾನು ಭಾವಿಸಿದ್ದೆನು. ನನ್ನ ಈ ನಂಬಿಕೆ ಸಾಧುವಾದದ್ದೆಂದು ತೋರುವುದಿಲ್ಲವೆ ?"

ಸೀಬೀಸ್ "ಹೌದು" ಎಂದನು.

"ಮತ್ತೊಂದು ಅನುಭವವನ್ನು ಹೇಳುತ್ತೇನೆ ಕೇಳು. ಎತ್ತರವಾದ ಆಳು ಕುಳ್ಳಾಗಿದ್ದವನ ಬಳಿಯಲ್ಲಿ ನಿಂತಿದ್ದದ್ದನ್ನು ನೋಡಿದಾಗ ಎತ್ತರವಾದವನು ಕುಳ್ಳಾಗಿದ್ದವನಿಗಿಂತ ಒಂದು ತಲೆಯ ಪ್ರಮಾಣದಿಂದಲೋ ಏನೋ ಎತ್ತರವಾಗಿದ್ದನೆನ್ನುವುದರಲ್ಲಿ ನನಗೆ ಏನೂ ಸಂಶಯವಿರುತ್ತಿರಲಿಲ್ಲ. ಹೀಗೆಯೇ ಒಂದು ಕುದುರೆ ಇನ್ನೊಂದು ಕುದುರೆಗಿಂತ ದೊಡ್ಡದೆಂದು ನಿಸ್ಸಂದೇಹವಾಗಿ ಹೇಳಿಬಿಡುತ್ತಿದ್ದೆನು. ಎಂಟಕ್ಕಿಂತ ಹತ್ತು ಎರಡರ ಸೇರುವಿಕೆಯಿಂದ ಹೆಚ್ಚೆನ್ನುವುದೂ ಎರಡು ಮೊಳ ಉದ್ದವಿರುವ ಪದಾರ್ಥ ಒಂದು ಮೊಳವಿರುವ ಪದಾರ್ಥಕ್ಕಿಂತ ತನ್ನ ಉದ್ದದಲ್ಲಿ ಅರ್ಧ ಪ್ರಮಾಣ ಹೆಚ್ಚು ಎನ್ನುವುದೂ ಮೊದಲು ಹೇಳಿದ ವಿಷಯಕ್ಕಿಂತಲೂ ಸ್ಪಷ್ಟವೆಂದು ಭಾವಿಸಿದ್ದೆನು.''

ಸೀಬೀಸನು "ಈಗ ನಿನ್ನ ಅಭಿಪ್ರಾಯವೇನು ?" ಎಂದು ಕೇಳಿದನು.

''ಇವುಗಳ ಕಾರಣಗಳನ್ನು ನಾನು ಬಲ್ಲೆನೆಂಬ ನಂಬಿಕೆ ನನಗೆ ಈಗ ಸ್ವಲ್ಪವೂ ಇಲ್ಲ. ಅಷ್ಟೇಕೆ, ಈಗ ಒಂದಕ್ಕೆ ಒಂದನ್ನು ಸೇರಿಸಿದರೆ, ಯಾವುದಕ್ಕೆ ನಾವು ಒಂದನ್ನು ಸೇರಿಸುವೆವೋ ಅದು ಎರಡಾಗುತ್ತದೆಯೋ ಅಥವಾ ಯಾವುದಕ್ಕೆ ಸೇರಿಸುವೆವೋ ಅದೂ ಯಾವುದನ್ನು ಸೇರಿಸುವೆವೋ ಅದೂ ಕೂಡಿ ಎರಡಾಗುತ್ತವೆಯೋ ಎಂದು ಕೇಳಿದರೆ, ನಾನು ದೃಢವಾಗಿ ಹೇಳಲಾರೆ.

ಅವು ಬೇರೆಬೇರೆಯಾಗಿದ್ದಾಗ ಒಂದೊಂದೂ ಎರಡಾಗಿರದೆ ಒಂದೇಆಗಿದ್ದುವು; ಅವೆರಡನ್ನೂ ಒಟ್ಟಿಗೆ ತಂದಾಗ ಆ ಸೇರುವಿಕೆಯೋ ಒಂದರ ಬಳಿಯಲ್ಲಿ ಮತ್ತೊಂದನ್ನು ಇರಿಸುವಿಕೆಯೋ ಅವು ಎರಡಾಗುವುದಕ್ಕೆ ಕಾರಣವಾಯಿತು. ಇದು ಹೇಗಾಯಿತೋ ನನಗೆ ತಿಳಿಯುವುದಿಲ್ಲ. ಒಂದನ್ನು ಎರಡಾಗಿ ಭಾಗಿಸಿದರೆ ಈ ಭಾಗಹಾರವೇ ಒಂದು ಎರಡಾಗುವುದಕ್ಕೆ ಕಾರಣವೆಂದು ನನಗೆ ನಂಬಿಕೆಯಾಗುವುದಿಲ್ಲ ; ಏಕೆಂದರೆ, ಮೊದಲಿನ ಸಂದರ್ಭದಲ್ಲಿ ಎರಡು ಪದಾರ್ಥಗಳನ್ನು ಒಟ್ಟಿಗೆ ತಂದದ್ದರಿಂದ, ಒಂದಕ್ಕೆ ಒಂದನ್ನು ಸೇರಿಸಿದ್ದರಿಂದ, ಒಂದಾಗಿದ್ದದ್ದು ಎರಡಾಯಿತು ; ಈಗಲಾದರೋ ಅವುಗಳನ್ನು ಬೇರೆ ಮಾಡಿದ್ದರಿಂದ, ಒಂದನ್ನು ಮತ್ತೊಂದರಿಂದ ಪ್ರತ್ಯೇಕಿಸಿದ್ದರಿಂದ, ಒಂದಾಗಿದ್ದದ್ದು ಎರಡಾಯಿತು. ಮೊದಲನೆಯ ಸಂದರ್ಭದಲ್ಲಿ ಒಂದು ಪದಾರ್ಥ ಎರಡಾಗುವುದಕ್ಕೆ ಯಾವುದು ಕಾರಣವಾಯಿತೋ ಅದಕ್ಕೆ ಸಂಪೂರ್ಣವಾಗಿ ವಿರುದ್ಧವಾದದ್ದೇ ಎರಡನೆಯ ಸಂದರ್ಭದಲ್ಲಿ ಕಾರಣವಾಯಿತು. ಹೀಗೆಯೇ ಯಾವ ಪದಾರ್ಥದ ವಿಷಯವಾಗಲಿ 'ಅದು ಹುಟ್ಟುವುದು ಹೇಗೆನ್ನುವುದನ್ನು ನಾನು ಬಲ್ಲೆ' ಎಂದುಕೊಳ್ಳಲಾಗುವುದಿಲ್ಲ. ಒಟ್ಟಿನಲ್ಲಿ ಈ ವಿಚಾರಕ್ರಮವು ಪದಾರ್ಥಗಳ ಹುಟ್ಟುವಿಕೆಯ, ಇರುವಿಕೆಯ ಮತ್ತು ನಾಶದ ಕಾರಣಗಳನ್ನು ನನಗೆ ತಿಳಿಸುವುದಿಲ್ಲ. ನನ್ನ ಮನಸ್ಸಿನಲ್ಲಿ ಮತ್ತೊಂದು ಕ್ರಮವಿದೆ ; ಅದು ಇನ್ನೂ ಅಸ್ಪಷ್ಟರೂಪದಲ್ಲಿಯೇ ಇದೆ. ಆದರೆ ಮೊದಲು ಹೇಳಿದ ಕ್ರಮವನ್ನೇನೋ ನಾನು ಒಂದು ಕ್ಷಣವೂ ಒಪ್ಪಲಾಗಲಿಲ್ಲ.

"ಹೀಗಿರಲು ಒಂದು ದಿನ ಯಾರೋ ಒಬ್ಬನು ಅನಗ್ಸಾಗೊರಾಸಿನ ಪುಸ್ತಕವೊಂದನ್ನು ತಾನು ಓದುತ್ತಿದ್ದಂತೆಯೂ, ಅದರಲ್ಲಿ ಮನಸ್ಸೇ ಪ್ರಪಂಚವೆಲ್ಲವನ್ನೂ ಕ್ರಮಪಡಿಸುವುದು ಮತ್ತು ಎಲ್ಲಾ ವಿಷಯಗಳಿಗೂ ಕಾರಣಭೂತವಾದದ್ದು ಎಂದು ದೃಢವಾಗಿ ಹೇಳಿದ್ದಿತೆಂದೂ ಹೇಳಿದನು. ಈ ತತ್ವವನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. 'ಎಲ್ಲಾ ವಿಷಯಗಳಿಗೂ ಮನಸ್ಸೇ ಕಾರಣಭೂತವಾಗಿರುವುದು ನ್ಯಾಯವೇ ; ಹಾಗಿದ್ದರೆ ಮನಸ್ಸು ಪ್ರಪಂಚದಲ್ಲಿ ಪ್ರತಿಯೊಂದೂ ಅತ್ಯುತ್ತಮವಾದ ರೀತಿಯಲ್ಲಿರುವಂತೆ ಅದನ್ನು ಕ್ರಮಪಡಿಸುತ್ತದೆ' ಎಂದುಕೊಂಡೆನು. ಆದ್ದರಿಂದ ನಾವು ಒಂದು

ಪದಾರ್ಥದ ಉತ್ಪತ್ತಿಗೋ ನಾಶಕ್ಕೋ ಕಾರಣವನ್ನು ಕಂಡುಹಿಡಿಯ ಬೇಕಾದರೆ, ಆ ಪದಾರ್ಥದ ಇರುವಿಕೆಗೆ ಮತ್ತು ಅದು ಕೆಲಸಮಾಡುವುದಕ್ಕೆ ಅಥವಾ ಕಾರ್ಯಕ್ಷೇತ್ರವಾಗುವುದಕ್ಕೆ ಅತ್ಯುತ್ತಮವಾದ ರೀತಿ ಯಾವುದೆಂಬು ದನ್ನು ಕಂಡುಹಿಡಿಯಬೇಕು. ಹಾಗೆಂದರೆ, ಮನುಷ್ಯನು ತನಗೆ ಅಥವಾ ಇತರ ಪದಾರ್ಥಗಳಿಗೆ ಯಾವುದು ಯೋಗ್ಯವಾದದ್ದು ಮತ್ತು ಅತ್ಯುತ್ತಮ ವಾದದ್ದು ಎಂಬುದನ್ನು ಕಂಡುಹಿಡಿದರಾಯಿತು ; ಯಾವುದು ಕೆಟ್ಟದ್ದು ಎನ್ನುವುದೂ ಆಗಲೆ ತಿಳಿಯಲೇ ಬೇಕು. ಅವೆರಡೂ ಒಂದೇ ಶಾಸ್ತ್ರದಲ್ಲಿ ಸೇರಿದುವು. ಸತ್ತಿನ ಕಾರಣವನ್ನು ತಿಳಿಸುವುದಕ್ಕೆ ಅನಗ್ಸಾಗೊರಾಸಿನಂಥ ಮನಸ್ಸಿಗೆ ಒಪ್ಪುವ ಗುರು ಸಿಕ್ಕಿದನೆಂದು ನನಗೆ ಸಂತೋಷವಾಯಿತು. 'ಭೂಮಿ ಚಪ್ಪಟೆಯಾಗಿದೆಯೇ ಅಥವಾ ಗುಂಡಾಗಿದೆಯೇ ಎನ್ನುವುದನ್ನು ಅವನು ಮೊದಲು ತಿಳಿಸುತ್ತಾನೆ ; ಅನಂತರ ಅದು ಏಕೆ ಆ ಆಕಾರವನ್ನು ಹೊಂದಿದೆ, ಹಾಗಿರುವುದರ ಆವಶ್ಯಕತೆಯೇನು, ಎಂಬುದನ್ನೂ ಭೂಮಿಗೆ ಅತ್ಯುತ್ತಮಸ್ಥಿತಿ ಯಾವುದೆಂಬುದನ್ನೂ ತಿಳಿಸಿ, ಅದಕ್ಕೆ ಗೋಳಾಕಾರವೇ ಸರ್ವೋತ್ತಮವಾದದ್ದೆಂದು ಮನದಟ್ಟು ಮಾಡಿಕೊಡುತ್ತಾನೆ' ಎಂಬ ನಂಬಿಕೆ ಯಿಂದ ನನ್ನ ಮನಸ್ಸು ಹಿಗ್ಗಿತು. ಭೂಮಿ ವಿಶ್ವದ ನಡುವೆ ಇರುವುದಾದರೇ ಅದಕ್ಕೆ ಅಲ್ಲಿರುವುದೇ ಸರ್ವೋತ್ತಮವೆಂದು ಅವನು ತೋರಿಸುತ್ತಾನೆ ಎಂದು ಕೊಂಡಿದ್ದೆನು ; ಇದೊಂದನ್ನು ಮಾತ್ರ ಅವನು ಸ್ಪಷ್ಟಪಡಿಸಿದ್ದರೆ ಸಾಕಾ ಗಿತ್ತು ; ಮತ್ತೆ ಯಾವ ಕಾರಣವೂ ನನಗೆ ಬೇಕಿರಲಿಲ್ಲ ; ಇದೇ ರೀತಿಯಲ್ಲಿ ಸೂರ್ಯ, ಚಂದ್ರ, ನಕ್ಷತ್ರಗಳು, ಅವುಗಳ ವೇಗಗಳಿರುವ ತಾರತಮ್ಯ, ಅವುಗಳ ಪರಿಭ್ರಮಣ, ಅವು ಹೊಂದುವ ವ್ಯತ್ಯಾಸಗಳು—ಇವೆಲ್ಲದರ ವಿಷಯವಾಗಿಯೂ ಪ್ರಶ್ನೆಗಳನ್ನು ಕೇಳಲು ಸಿದ್ಧವಾಗಿದ್ದೆನು. ಅವು ಹಾಗೆ ನಡೆದುಕೊಳ್ಳುವುದೇಕೆ ? ಅವುಗಳ ಮೇಲೆ ಆ ಪರಿಣಾಮವಾಗುವುದೇಕೆ ? ಎಂಬುದನ್ನು ತಿಳಿಯಲು ಉತ್ಸುಕನಾಗಿದ್ದೆನು. ಎಲ್ಲಾ ವಸ್ತುಗಳೂ ಮನಸ್ಸಿನಿಂದ ಕ್ರಮಪಡಿಸಲ್ಪಟ್ಟಿವೆಯೆಂದು ಆತನು ಹೇಳುತ್ತಾನೆ ; ಅವು ಹಾಗಿರಲು ಕಾರಣವೇನೆಂದು ಕೇಳಿದರೆ ಅದೇ ಅವುಗಳಿಗೆ ಸರ್ವೋತ್ತಮ ಸ್ಥಿತಿಯೆಂದು ಸ್ಪಷ್ಟಪಡಿಸಿಕೊಡುತ್ತಾನೆ, ಬೇರೆ ಕಾರಣವನ್ನು ಎಂದಿಗೂ ಹೇಳಲಾರ, ಎಂದುಕೊಂಡಿದ್ದೆನು. ಆತನು ಪ್ರತಿಯೊಂದಕ್ಕೂ ಒಂದೊಂದು

ಕಾರಣವನ್ನು ಹೇಳುವನೆಂದೂ, ಮೊದಲು ವಿಶ್ವದ ಇರುವಿಕೆಗೆ ಒಂದು ಕಾರಣವನ್ನು ಹೇಳಿ ಅನಂತರ ಪ್ರತಿ ವಸ್ತುವಿಗೂ ಉತ್ತಮವಾದದ್ದೇನು, ಎಲ್ಲಾ ವಸ್ತುಗಳಿಗೂ ಒಟ್ಟನಲ್ಲಿ ಒಳ್ಳೆಯದು ಯಾವುದು ಎಂಬುದನ್ನು ವಿವರಿಸುತ್ತಾನೆಂದೂ ಭಾವಿಸಿದ್ದೆನು. ಈ ನನ್ನ ಆಶೆಯನ್ನು ನಾನು ಎಷ್ಟು ಹಣ ಕೊಟ್ಟರೂ ಬಿಡುವವನಾಗಿರಲಿಲ್ಲ. ಆತನ ಪುಸ್ತಕಗಳನ್ನು ಆತುರದಿಂದ ಎತ್ತಿಕೊಂಡು ಬಂದು, ಎಲ್ಲಾ ವಸ್ತುಗಳಿಗೂ ಉತ್ತಮವಾದದ್ದು ಯಾವುದು, ಕೆಟ್ಟದು ಯಾವುದು ಎಂಬುದನ್ನು ತಿಳಿಯುವ ಆಶೆಯಿಂದ ಅವುಗಳನ್ನು ಸಾಧ್ಯವಾದಷ್ಟು ಬೇಗ ಓದಿದೆನು."

"ಆದರೆ ಸೀಬೀಸ್, ನನ್ನ ಆಶೆಯೆಲ್ಲವೂ ಭೂಗತವಾಯಿತು. ನಾನು ಮುಂದೆ ಓದುತ್ತ ನೋಡಿದ್ದರಲ್ಲಿ ಬರಹಗಾರನು 'ಮನಸ್ಸ'ನ್ನು ಯಾವುದಕ್ಕೂ ಉಪಯೋಗಿಸಲೇ ಇಲ್ಲ; ಪ್ರಪಂಚಕ್ರಮಕ್ಕೆ ಕಾರಣ ವೇನೆಂದು ಹೇಳಲೂ ಇಲ್ಲ. ಆತನು ಹೇಳಿದ ಕಾರಣಗಳೇನೆಂದರೆ—ಗಾಳಿ, ಆಕಾಶ, ನೀರು, ಜೊತೆಗೆ ಇನ್ನೂ ಅನೇಕ ವಿಚಿತ್ರ ಪದಾರ್ಥಗಳು. ಅವನ ವಾದ ಹೀಗಿರುವಂತೆ ತೋರಿತು: 'ಈಗ ಸಾಕ್ರೆಟೀಸನು ಏನು ಕೆಲಸ ಮಾಡಿದರೂ ಅದನ್ನು ಮನಸ್ಸಿನಿಂದ ಮಾಡುತ್ತಾನೆ' ಎಂದು ಮೊದಲು ಹೇಳುವುದು; ಅನಂತರ ನನ್ನ ಕಾರ್ಯಗಳಿಗೆ ಒಂದೊಂದಕ್ಕಾಗಿ ಕಾರಣ ವನ್ನು ಹೇಳುವಾಗ, 'ನಾನು ಇಲ್ಲಿ ಕುಳಿತಿರುವುದೇಕೆ?' ಎಂದು ಕೇಳಿದರೆ, 'ನಿನ್ನ ಶರೀರವನ್ನು ಮೂಳೆ ಮತ್ತು ಮಾಂಸಖಂಡಗಳಿಂದ ಮಾಡಿದೆ; ಮೂಳೆಗಳು ಕಠಿನವಾಗಿವೆ ಮತ್ತು ಅವುಗಳನ್ನು ಸೇರುವೆಗಳಿಂದ ವಿಂಗಡಿಸಿದೆ; ಆದರೆ ಮಾಂಸಖಂಡಗಳನ್ನು ಬಿಗಿ ಅಥವಾ ಸಡಿಲ ಮಾಡಬಹುದು; ಈ ಮಾಂಸಖಂಡಗಳೂ ಮಾಂಸವೂ ಇವೆಲ್ಲವನ್ನೂ ಒಟ್ಟಿಗೆ ಹಿಡಿದಿರುವ ಚರ್ಮವೂ ಮೂಳೆಗಳನ್ನು ಮುಚ್ಚಿವೆ. ಮೂಳೆಗಳನ್ನು ಅವುಗಳ ಗುಳಿಗಳಲ್ಲಿ ಎತ್ತಿದಾಗ ಮಾಂಸಖಂಡಗಳು ಚಿಕ್ಕವೂ ದೊಡ್ಡವೂ ಆಗುವುದರಿಂದ ನಿನಗೆ ನಿನ್ನ ಕೈಕಾಲುಗಳನ್ನು ಬಗ್ಗಿಸುವುದು ಸಾಧ್ಯವಾಗುತ್ತದೆ; ನೀನು ಈಗ ಕಾಲುಗಳನ್ನು ಮಡಿಸಿಕೊಂಡು ಕುಳಿತಿರುವುದಕ್ಕೆ ಅದೇ ಕಾರಣ' ಎಂದು ಹೇಳುವುದು. ಅನಗ್ಸಾಗೊರಾಸನ ವಾದ ಹೀಗೆಯೇ ಇದ್ದಿತು. ಇದೇ ರೀತಿಯಲ್ಲಿ ನಾನು ಈಗ ನಿಮ್ಮೊಡನೆ ಮಾತಾಡುತ್ತಿರುವುದಕ್ಕೆ ಕಾರಣ

ವೇನೆಂದು ಕೇಳಿದರೆ—ಧ್ವನಿ, ಗಾಳಿ, ಶ್ರವಣಶಕ್ತಿ—ಇಂಥ ಸಾವಿರ ಕಾರಣಗಳನ್ನು ಹೇಳಬಹುದು. ಆದರೆ ಇಷ್ಟೆಲ್ಲಾ ಹೇಳಿದರೂ ಆತನು ನಿಜವಾದ ಕಾರಣವನ್ನೇ ಮರೆತಂತಾಗುವುದು. ಈಗ ನನಗೆ ದಂಡನೆಯನ್ನು ವಿಧಿಸುವುದು ನ್ಯಾಯವೆಂದು ಅಥೆನ್ಸಿನವರಿಗೆ ತೋರಿದೆ. ಆದ್ದರಿಂದ ಇಲ್ಲಿಯೇ ಕುಳಿತು, ಅವರು ಯಾವ ಶಿಕ್ಷೆಯನ್ನು ವಿಧಿಸಿದರೂ ತಲೆಬಾಗುವುದು ಧರ್ಮವೆಂದು ನಾನು ತಿಳಿದಿರುವೆನು. ಇದೇ ನಾನು ಇಲ್ಲಿ ಕುಳಿತಿರುವುದಕ್ಕೆ ನಿಜವಾದ ಕಾರಣ. ಏಕೆಂದರೆ, ಈಜಿಪ್ಟಿನ ನಾಯಿಯಾಣೆ, ಓಡಿಹೋಗಿ ದೇಶದವರು ವಿಧಿಸಿದ ಶಿಕ್ಷೆಯನ್ನು ತಪ್ಪಿಸಿಕೊಳ್ಳುವುದಕ್ಕಿಂತ ಇಲ್ಲಿಯೇ ಇದ್ದು ಅದನ್ನು ಅನುಭವಿಸುವುದು ಧರ್ಮವೆಂದು ನಾನು ಭಾವಿಸದೆ ಇದ್ದರೆ ಮತ್ತು ಮಾಂಸಖಂಡಗಳೂ ಮೂಳೆಗಳೂ ತಮಗೆ ಉತ್ತಮವೆಂದು ತೋರಿದ ಮಾರ್ಗವನ್ನೇ ಹಿಡಿದಿದ್ದರೆ, ಅವು ಮೆಗಾರಾಕ್ಕೋ ಬಿಯೋಷಿಯಾಕ್ಕೋ ಎಷ್ಟೋ ದಿನಗಳ ಹಿಂದೆಯೇ ಹೊರಟುಹೋಗಿರುತ್ತಿದ್ದುವು. ಆದ್ದರಿಂದ ಇವುಗಳನ್ನೆಲ್ಲಾ ಕಾರಣಗಳೆಂದರೆ ಹಾಸ್ಯಾಸ್ಪದವಾಗುತ್ತದೆ. ಮೂಳೆಗಳೂ ಮಾಂಸಖಂಡಗಳೂ ದೇಹದ ಇತರ ಭಾಗಗಳೂ ಇಲ್ಲದಿದ್ದರೆ ನನ್ನ ಮನಸ್ಸಿನಲ್ಲಿದ್ದ ತೀರ್ಮಾನವನ್ನು ಕಾರ್ಯತಃ ನಡಸಲಾಗುತ್ತಿರಲಿಲ್ಲ ; ಅದೇನೋ ನಿಜ. ಆದರೆ ನಾನು ಮಾಡಿದ ಕೆಲಸಕ್ಕೆ ಅವೇ ಕಾರಣಗಳೆಂದೂ ನನಗೆ ಉತ್ತಮವೆಂದು ತೋರಿದ ಮಾರ್ಗವನ್ನು ಆರಿಸಿಕೊಂಡದ್ದು ಕಾರಣವಲ್ಲವೆಂದೂ ನಾನು ಈ ರೀತಿಯಲ್ಲಿ 'ಮನಸ್ಸಿ'ನಿಂದ ಕೆಲಸಗಳನ್ನು ಮಾಡುತ್ತಿರುವೆನೆಂದೂ ಹೇಳಿದರೆ, ಅದು ಬಿಗಿಯಿಲ್ಲದ ಮತ್ತು ಅಸಂಬದ್ಧವಾದ ಮಾತು. ಹೀಗೆ ಮಾತಾಡುವವರಿಗೆ ಯಾವುದಿಲ್ಲದಿದ್ದರೆ ಕಾರಣ ಕಾರಣವಾಗಿ ಪರಿಣಮಿಸಲಾರದೋ ಅದಕ್ಕೂ ನಿಜವಾದ ಕಾರಣಕ್ಕೂ ಇರುವ ಭೇದವನ್ನು ಗ್ರಹಿಸುವ ಶಕ್ತಿಯಿಲ್ಲವೆಂದು ಹೇಳಬೇಕು. ಆದ್ದರಿಂದಲೇ ಸಾಧಾರಣ ಜನರು ನಾವು ಮೊದಲು ಹೇಳಿದ್ದೆಲ್ಲವನ್ನೂ ಕಾರಣವೆಂದು ಕರೆದು ಅದಕ್ಕೆ ಸಲ್ಲದಿರುವ ಹೆಸರನ್ನಿಟ್ಟಿರುವರು. ಆದ್ದರಿಂದಲೇ ಒಬ್ಬನು ಭೂಮಿಯ ಸುತ್ತಲೂ ಒಂದು ಮಹಾ ಸುಳಿಯಿದೆಯೆಂದೂ ಅಂತರಿಕ್ಷ ಭೂಮಿಯನ್ನು ಅದರ ಸ್ಥಾನದಲ್ಲಿ ನಿಲ್ಲಿಸುತ್ತದೆಂದೂ ಹೇಳುವನು ; ಭೂಮಿ ಚಪ್ಪಟೆಯಾದ ಒತ್ತುವ ಮಣೆಯಂತಿದೆಯೆಂದೂ ಅದು ಗಾಳಿಯ ಆಧಾರದ ಮೇಲೆ ನಿಂತಿದೆಯೆಂದೂ

GANDHI SMARAKA GRANTHALAYA
BANGALORE-1.

ಮತ್ತೊಬ್ಬನು ಹೇಳುವನು. ಆದರೆ ಈ ವಸ್ತುಗಳೆಲ್ಲವೂ ತಮಗೆ ಅತ್ಯುತ್ತಮ ವಾದ ಸ್ಥಾನದಲ್ಲಿ ನಿಂತಿರುವಂತೆ ಮಾಡಿರುವ ಯಾವುದೋ ಒಂದು ಶಕ್ತಿ ಯಿರಬೇಕೆಂದೂ ಅದು ದೈವಿಕವಾದ ಬಲವುಳ್ಳದ್ದೆಂದೂ ಅವರಿಗೆ ಹೊಳೆಯು ವುದೇ ಇಲ್ಲ. ಅವರು ಅದಕ್ಕಿಂತಲೂ ಹೆಚ್ಚು ಶಕ್ತಿಯುಳ್ಳ, ಸಾವಿಲ್ಲದ, ಪ್ರಪಂಚವನ್ನೆಲ್ಲಾ ಎತ್ತಿಹಿಡಿಯುವಷ್ಟು ಬಲಶಾಲಿಯಾದ ಒಬ್ಬ ಹೊಸ ಅಟ್ಲಾಸು ಸಿಕ್ಕುವನೆಂದು ತಿಳಿದಿದ್ದಾರೆ. ಸಕಲ ವಿಶ್ವವನ್ನೂ ಒಟ್ಟಿಗೆ ಹಿಡಿದಿರು ವುದು ಒಳ್ಳಿನ (Good) ಬಂಧನ ಶಕ್ತಿಯೆಂದು ಅವರ ಬುದ್ಧಿಗೆ ತೋರಿಲ್ಲ. ಈ ವಿಧವಾದ ಕಾರಣವನ್ನೂ ಅದರ ಸ್ವರೂಪವನ್ನೂ ತಿಳಿಯಬೇಕೆಂಬುದು ನನ್ನ ಇಚ್ಛೆ. ಆದರೆ ಅದನ್ನು ಕಂಡುಹಿಡಿಯುವುದು ನನಗೆ ಸಾಧ್ಯವಾಗ ಲಿಲ್ಲ ; ಮತ್ತೊಬ್ಬರಿಂದ ಕಲಿಯುವುದಕ್ಕೂ ಆಗಲಿಲ್ಲ. ಆದರೆ ನನ್ನ ಬಳಿಗೆ ಮತ್ತೊಂದು ಹೆದೆಯನ್ನಿಟ್ಟದ್ದೇನು. ವಿಶ್ವಕಾರಣವನ್ನು ಕಂಡುಹಿಡಿಯಲು ನಾನು ಏನು ಪ್ರಯತ್ನ ಮಾಡಿದೆನೋ ಕೇಳಲಿಚ್ಛೆಯಿದೆಯೆ, ಸೀಬೀಸ್ ?"

ಸೀಬೀಸನು "ಕೇಳಲು ಬಹಳ ಇಚ್ಛೆಯಿದೆ" ಎಂದನು.

ಸಾಕ್ರೆಟೀಸನು ಮುಂದೆ ಹೇಳಿದನು, "ಸತ್ಸ್ಥಿತಿಯ ಪರೀಕ್ಷೆಯನ್ನು ಬಿಟ್ಟಮೇಲೆ ನಾನು 'ಗ್ರಹಣಸಮಯದಲ್ಲಿ ಸೂರ್ಯನನ್ನು ನೋಡುವವರಂತೆ ನಾನೂ ಕಷ್ಟಕ್ಕೆ ಸಿಕ್ಕಿಕೊಳ್ಳಬಾರದು ; ಸ್ವಲ್ಪ ಜಾಗರೂಕನಾಗಿರಬೇಕು' ಎಂದುಕೊಂಡೆನು. ಹಾಗೆ ಸೂರ್ಯನನ್ನು ನೋಡುವವರು ನೀರಿನಲ್ಲಿಯೋ ಅಥವಾ ಅಂಥ ಮತ್ತಾವುದಾದರೂ ಪದಾರ್ಥದಲ್ಲಿಯೋ ಸೂರ್ಯನ ಪ್ರತಿ ಬಿಂಬವನ್ನು ನೋಡದೆ ಸೂರ್ಯನನ್ನೇ ನೋಡಿದರೆ, ತಮ್ಮ ಕಣ್ಣನ್ನು ಕಳೆದುಕೊಳ್ಳುವ ಸಂಭವವುಂಟು. ಈ ಅಪಾಯ ನನಗೆ ಜ್ಞಾಪಕಕ್ಕೆ ಬಂದಿತು. ಜಗತ್ತಿನ ವಸ್ತುಗಳನ್ನು ನನ್ನ ಕಣ್ಣುಗಳಿಂದಲೇ ನೋಡಿದರೆ, ಅವುಗಳನ್ನು ಇಂದ್ರಿಯಗಳ ಮೂಲಕವೇ ಗ್ರಹಿಸಲು ಯತ್ನಿಸಿದರೆ, ನನ್ನ ಆತ್ಮದೃಷ್ಟಿ ಶೂನ್ಯವಾಗಬಹುದೆಂದು ಹೆದರಿದೆನು. ಆದ್ದರಿಂದ 'ನಾನು ಮನಸ್ಸಿನ ಪ್ರಪಂಚದಲ್ಲಿಯೇ ಇದ್ದುಕೊಂಡು ಸತ್ಸ್ಥಿತಿಯ ಸತ್ಯಸ್ವಭಾವವನ್ನು ಅಲ್ಲಿಯೇ ಪರೀಕ್ಷಿಸಬೇಕೆಂದುಕೊಂಡೆನು. ನಾನು ಈಗ ಕೊಟ್ಟ ಉಪಮಾನ ದಲ್ಲಿ ಸಂಪೂರ್ಣವಾದ ಔಚಿತ್ಯವಿಲ್ಲದೆ ಇರಬಹುದು. ಇಂದ್ರಿಯಗಳ ಮೂಲಕ

ತಿಳಿಯಬರುವ ವಸ್ತುಗಳಲ್ಲಿ 'ಸತ್' ಎನ್ನುವುದು ಎಷ್ಟು ತೋರಿಬರುವುದೋ ಅಷ್ಟನ್ನು ಮಾತ್ರ ಪರೀಕ್ಷಿಸುವವನು ಬರಿಯ ಪ್ರತಿಬಿಂಬಗಳನ್ನು ಕಾಣುತ್ತಾನೆಂದು ಹೇಳಲಾಗುವುದಿಲ್ಲ ; ಹಾಗೆಯೇ ಸತ್ತನ್ನು ಆಲೋಚನೆಯ ಮೂಲಕ ಪರಿಭಾವಿಸುವವನು ಅದನ್ನು ಮಂಜುಮಂಜಾಗಿ ಕನ್ನಡಿಯಲ್ಲಿ ಕಂಡಂತೆ ಕಾಣುತ್ತಾನೆಂದು ನಾನು ಹೇಳಲಾರೆ. ಅದಿರಲಿ. ನಾನು ಅನುಸರಿಸಿದ ಮಾರ್ಗವೇನೆಂದು ಹೇಳುತ್ತೇನೆ. ಅತ್ಯಂತ ಬಲವಾದದ್ದೆಂದು ನನಗೆ ತೋರಿದ ತತ್ವವೊಂದನ್ನು ಮೊದಲು ಒಪ್ಪಿಕೊಂಡೆನು. ಅನಂತರ ಕಾರಣ ಸಂಬಂಧದಲ್ಲಿಯೋ ಇತರ ರೀತಿಯಲ್ಲಿಯೋ ಆ ತತ್ವಕ್ಕೆ ಹೊಂದಿಕೊಳ್ಳುವುದೆಲ್ಲಾ ಸತ್ಯವೆಂದೂ ಹೊಂದದಿರುವುದೆಲ್ಲಾ ಅಸತ್ಯವೆಂದೂ ಒಪ್ಪಿದೆನು. ನಾನು ನನ್ನ ಅರ್ಥವನ್ನು ಇನ್ನಷ್ಟು ಸ್ಪಷ್ಟವಾಗಿ ಹೇಳಬೇಕು ; ಅದನ್ನು ನೀನು ಚೆನ್ನಾಗಿ ಗ್ರಹಿಸಿದಂತೆ ತೋರುವುದಿಲ್ಲ."

ಸೀಬೀಸನು "ಇಲ್ಲ, ಚೆನ್ನಾಗಿ ಗ್ರಹಿಸಲಿಲ್ಲ" ಎಂದನು.

"ನಾನು ಈಗ ಹೇಳುತ್ತಿರುವುದು ಹೊಸ ವಿಷಯವೇನೂ ಅಲ್ಲ. ನಮ್ಮ ಈ ದಿನದ ಚರ್ಚೆಯಲ್ಲೂ ಹಿಂದೆ ಅನೇಕ ವೇಳೆಗಳಲ್ಲೂ ನಾನು ಇದನ್ನೇ ಹೇಳಿದ್ದೇನೆ. ನನ್ನ -ಮನಸ್ಸಿನಲ್ಲಿರುವ ಆ 'ಕಾರಣ'ದ ಸ್ವರೂಪವೇನೆಂದು ನಿನಗೆ ತಿಳಿಸುವುದೇ ನನ್ನ ಉದ್ದೇಶ. ನಾವು ಹಿಂದೆ ಅನೇಕ ಸಾರಿ ಮಾತಾಡಿರುವ ವಿಷಯ ದಿಂದ ಪ್ರಾರಂಭಿಸುತ್ತೇನೆ. ಮೊದಲು ಪರಮ ಸೌಂದರ್ಯ, ಪರಮ ಸದ್ಗುಣ, ಪರಮ ಘನತೆ ಮೊದಲಾದುವು ಇವೆಯೆಂದು ಒಪ್ಪಿಕೊಳ್ಳೋಣ. ಇದನ್ನು ನೀನು ಒಪ್ಪಿಕೊಂಡರೆ, ನನ್ನ 'ಕಾರಣ'ವೇನೆಂಬುದನ್ನು ನಿನಗೆ ತಿಳಿಸುವುದಲ್ಲದೆ ಆತ್ಮ ಅಮರವಾದದ್ದೆನ್ನುವುದಕ್ಕೂ ನಿದರ್ಶನ ಕೊಡಬಹುದೆಂದು ನನ್ನ ನಂಬಿಕೆ."

ಸೀಬೀಸನು "ನಾನು ಅದನ್ನು ಒಪ್ಪುತ್ತೇನೆಂದು ಭಾವಿಸು. ನಿನ ಸಮರ್ಥನೆ ಮುಂದುವರಿಯಲಿ" ಎಂದನು.

"ಸರಿ. ನಾನು ಮುಂದೆ ಹೇಳುವುದನ್ನು ಒಪ್ಪುವೆಯಾ ? ನನಗೆ ತೋರುವುದೇನೆಂದರೆ—ಪರಮ ಸೌಂದರ್ಯವೊಂದಲ್ಲದೆ ಮತ್ತೆ ಯಾವುದಾದರೂ ಸುಂದರವಾಗಿದ್ದರೆ, ಅದು ಪರಮ ಸೌಂದರ್ಯದಲ್ಲಿ ಭಾಗಿಯಾಗಿರು

ವುದರಿಂದಲೇ ಹಾಗೆ ಸುಂದರವಾಗಿದೆ. ಇತರ ವಿಷಯಗಳೆಲ್ಲದರಲ್ಲಿಯೂ ಹೀಗೇ ಹೇಳಬಹುದು. ಈ ತರದ 'ಕಾರಣ'ವನ್ನು ಒಪ್ಪುತ್ತೀಯಾ ?"

ಸೀಬೀಸನು "ಒಪ್ಪುತ್ತೇನೆ" ಎಂದು ಉತ್ತರ ಕೊಟ್ಟನು.

"ಇತರ ದೊಡ್ಡ ದೊಡ್ಡ ಕಾರಣಗಳನ್ನು ನಾನು ಒಪ್ಪುವುದಿಲ್ಲ; ಅವು ನನಗೆ ಅರ್ಥವಾಗುವುದೂ ಇಲ್ಲ. ಯಾವುದಾದರೂ ಒಂದು ವಸ್ತು ಬಣ್ಣದ ಮಹಿಮೆಯಿಂದಲೋ ರೂಪಾಧಿಕ್ಯದಿಂದಲೋ ಬೇರೆ ಯಾವುದಾದರೂ ಕಾರಣ ದಿಂದಲೋ ಸುಂದರವಾಗಿದೆಯೆಂದು ಯಾರಾದರೂ ಹೇಳಿದರೆ, ನಾನು ಆ ಮಾತಿಗೆ ಕಿವಿಗೊಡುವುದಿಲ್ಲ ; ಏಕೆಂದರೆ, ಅದು ನನ್ನ ಮನಸ್ಸಿನಲ್ಲಿ ಭ್ರಮೆ ಯನ್ನುಂಟುಮಾಡುತ್ತದೆ. ಸರಳವಾದ, ಸಾಧಾರಣವಾದ, ಬಹುಶಃ ಬುದ್ಧಿ ಯಿಲ್ಲದ ರೀತಿಯಲ್ಲಿ, ಪರಮ ಸೌಂದರ್ಯ ಅದರಲ್ಲಿರುವುದರಿಂದಲೇ ಅಥವಾ ಆ ಸೌಂದರ್ಯದ ಭಾಗ ಅದಕ್ಕೆ ಹೇಗೋ ಲಭಿಸಿರುವುದರಿಂದಲೇ ಆ ಪದಾರ್ಥಕ್ಕೆ ಸೌಂದರ್ಯ ಬರುತ್ತದೆಂಬ ತತ್ವವನ್ನು ನಾನೇನೋ ಬಲವಾಗಿ ಹಿಡಿದಿದ್ದೇನೆ. ಯಾವ ರೀತಿಯಲ್ಲಿ ಆ ಸೌಂದರ್ಯ ಬರುತ್ತದೆ ಎನ್ನುವ ವಿಷಯವಾಗಿ ನಾನು ಹೆಚ್ಚು ಹೇಳುವುದಿಲ್ಲವಾದರೂ ಸುಂದರವಾದ ವಸ್ತು ಗಳಿಗೆಲ್ಲಾ ಸೌಂದರ್ಯವನ್ನು ಕೊಡುವುದು ಪರಮ ಸೌಂದರ್ಯವೇ ಎನ್ನು ವುದರಲ್ಲಿ ನನಗೇನೂ ಸಂಶಯವಿಲ್ಲ. ನನಗೇ ಆಗಲಿ ಇತರರಿಗೇ ಆಗಲಿ, ಈ ಉತ್ತರವನ್ನು ಧೈರ್ಯವಾಗಿ ಕೊಡಬಹುದೆಂದು ತೋರುತ್ತದೆ. ಈ ತತ್ವ ವನ್ನು ದೃಢವಾಗಿ ನಂಬಿದರೆ, ನಾನು ವಾದದಲ್ಲಿ ಎಡವಲಾರೆ. ನನಗೇ ಆಗಲಿ ನನ್ನನ್ನು ಪ್ರಶ್ನೆ ಕೇಳುವ ಇತರರಿಗಾಗಲಿ, ನಾನು 'ಪರಮ ಸೌಂದರ್ಯ ದಿಂದಲೇ ಸುಂದರವಾದ ವಸ್ತುಗಳು ಸುಂದರವಾಗಿರುವುದು' ಎಂದು ಧೈರ್ಯ ವಾಗಿ ಉತ್ತರ ಕೊಡಬಹುದಲ್ಲವೆ ? ನಿನಗೆ ಹೇಗೆ ತೋರುತ್ತದೆ ? "

"ಹಾಗೇ ಉತ್ತರ ಕೊಡಬಹುದು."

"ಹಾಗಾದರೆ, ದೊಡ್ಡ ಪದಾರ್ಥಗಳನ್ನು ದೊಡ್ಡದಾಗಿ ಮಾಡುವುದೂ ಅವಕ್ಕಿಂತ ದೊಡ್ಡ ಪದಾರ್ಥಗಳನ್ನು ಹಾಗೆ ಹೆಚ್ಚು ದೊಡ್ಡವನ್ನಾಗಿ ಮಾಡುವುವೂ ಯಾವುದೆಂದರೆ, ಅವುಗಳ ಗಾತ್ರ ; ಸಣ್ಣ ಪದಾರ್ಥಗಳನ್ನು ಸಣ್ಣವಾಗಿ ಮಾಡುವುದು ಯಾವುದೆಂದರೆ, ಅವುಗಳ ಲಘುತ್ವ, ಅಲ್ಲವೆ ?"

" ಹೌದು."

" ಹಾಗಾದರೆ, ಒಬ್ಬನು ಮತ್ತೊಬ್ಬನಿಗಿಂತ ಒಂದು ತಲೆಯಷ್ಟು ಎತ್ತರವಾಗಿದ್ದಾನೆಂದೂ ಎರಡನೆಯವನು ಮೊದಲನೆಯವನಿಗಿಂತ ಒಂದು ತಲೆಯಷ್ಟು ಕುಳ್ಳಾಗಿದ್ದಾನೆಂದೂ ಹೇಳಿದರೆ, ನೀನು ಅದನ್ನು ಒಪ್ಪುವುದಿಲ್ಲ. 'ದೊಡ್ಡದು ದೊಡ್ಡದಾಗಿರುವುದು ಅದರ ಗಾತ್ರದಿಂದ ; ಆ ಗಾತ್ರವೇ ಅದು ದೊಡ್ಡದಾಗಿರುವುದಕ್ಕೆ ಕಾರಣ. ಚಿಕ್ಕದು ಚಿಕ್ಕದಾಗಿರುವುದಕ್ಕೆ ಚಿಕ್ಕದಾಗಿರುವಿಕೆಯೇ ಕಾರಣ' ಎಂದು ನಿಸ್ಸಂದೇಹವಾಗಿ ಹೇಳಿಬಿಡುತ್ತೀಯೆ. ಒಬ್ಬನು ತನ್ನ ತಲೆಯ ಪ್ರಮಾಣ ಎತ್ತರವಾಗಿದ್ದಾನೆ ಅಥವಾ ಕುಳ್ಳಾಗಿದ್ದಾನೆ ಎಂದು ಹೇಳುವುದಕ್ಕೆ ನೀನು ಹಿಂಜರಿಯುತ್ತೀಯೆ. ಹಾಗೆ ಹೇಳಿದರೆ ನಿನ್ನನ್ನು ಯಾರಾದರೂ 'ಮೊದಲು, ನೀನು ದೊಡ್ಡದು ದೊಡ್ಡದಾಗಿರುವುದೂ ಚಿಕ್ಕದು ಚಿಕ್ಕದಾಗಿರುವುದೂ ಒಂದೇ ಒಂದು ಕಾರಣದಿಂದ ಎಂದು ಹೇಳುತ್ತಿದ್ದೀಯೆ ; ಎರಡನೆಯದಾಗಿ, ನೀನು ಹೇಳುವ ಪ್ರಕಾರ ದೊಡ್ಡದು ದೊಡ್ಡದಾಗಿರುವುದು ತಲೆಯಿಂದ ; ಆ ತಲೆಯಾದರೋ ಚಿಕ್ಕದು ; ಚಿಕ್ಕ ವಸ್ತು ಮತ್ತೊಂದನ್ನು ದೊಡ್ಡದಾಗಿ ಮಾಡುವುದೆಂದರೆ ಆಶ್ಚರ್ಯಕರವಾದ ಸಂಗತಿಯಲ್ಲವೆ ?' ಎಂದು ಆಕ್ಷೇಪಿಸಬಹುದು. ಈ ವಿಧವಾದ ಅನುಮಾನವನ್ನು ತರುವುದಕ್ಕೆ ನೀನು ಹಿಂಜರಿಯುತ್ತೀಯಲ್ಲವೆ ?"

ಸೀಬೀಸನು ನಕ್ಕು " ನಿಜ, ನಿಜ " ಎಂದನು.

" ಹಾಗೆಯೇ 'ಹತ್ತು ಎಂಟಕ್ಕಿಂತ ಎರಡರಿಂದ ಹೆಚ್ಚಾಗಿದೆ, ಹಾಗೆ ಹೆಚ್ಚಾಗಿರುವುದಕ್ಕೆ ಎರಡೇ ಕಾರಣ' ಎಂದು ಹೇಳುವುದಕ್ಕೆ ನೀನು ಹೆದರುತ್ತೀಯೆ. ಅದಕ್ಕೆ ಬದಲು 'ಹತ್ತು ಎಂಟಕ್ಕಿಂತ ಸಂಖ್ಯೆಯಿಂದ ಹೆಚ್ಚಾಗಿದೆ, ಅದು ಹೆಚ್ಚಾಗಿರುವುದಕ್ಕೆ ಸಂಖ್ಯೆಯೇ ಕಾರಣ' ಎಂದು ಹೇಳುತ್ತೀಯೆ. ಇದೇ ರೀತಿಯಲ್ಲಿ ಎರಡು ಮೊಳ ಉದ್ದವಿರುವ ವಸ್ತು ಒಂದು ಮೊಳದ ವಸ್ತುವಿಗಿಂತ ತನ್ನ ಅಳತೆಯ ಅರ್ಧಪ್ರಮಾಣ ಹೆಚ್ಚಾಗಿದೆ ಎಂದು ಹೇಳುವುದಕ್ಕೆ ಹೆದರುತ್ತೀಯೆ ; ಅದು ಉದ್ದದಿಂದ ಹೆಚ್ಚಾಗಿದೆ ಎಂದು ಹೇಳುತ್ತೀಯೆ. ಇದೆಲ್ಲದರಲ್ಲಿಯೂ ಒಂದೇ ರೀತಿಯ ತಪ್ಪುಮಾಡುವ ಸಂಭವವುಂಟು."

"ಹೌದು."

"ಹಾಗೆಯೇ ಒಂದಕ್ಕೆ ಒಂದನ್ನು ಸೇರಿಸಿದಾಗ ಅಥವಾ ಒಂದನ್ನು ಭಾಗಮಾಡಿದಾಗ ಎರಡಾಗುವುದಕ್ಕೆ ಆ ಸೇರಿಸುವಿಕೆ ಅಥವಾ ಭಾಗಿಸುವಿಕೆಯೇ ಕಾರಣವೆಂದು ನೀನು ಹೇಳುವುದಿಲ್ಲ. 'ಒಂದು ಪದಾರ್ಥ ಉತ್ಪತ್ತಿಯಾಗಬೇಕಾದರೆ, ಅದು ತನಗೆ ಸಹಜವಾದ ಸಾರವಸ್ತುವಿನಲ್ಲಿ ಭಾಗಹೊಂದಬೇಕು; ಇದು ಹೊರತು ಬೇರೆ ಯಾವ ದಾರಿಯನ್ನೂ ನಾನು ಕಾಣೆ. ಎರಡು ಉತ್ಪತ್ತಿಯಾಗಬೇಕಾದರೆ, ದ್ವಿಗುಣದಲ್ಲಿ ಭಾಗಿಯಾಗುವುದು ಹೊರತು ಬೇರೆ ಯಾವ ಕಾರಣವನ್ನೂ ಕೊಡಲಾಗುವುದಿಲ್ಲ. ಎರಡಾಗಬೇಕಾದದ್ದೆಲ್ಲವೂ ದ್ವಿಗುಣದಲ್ಲಿ ಭಾಗಹೊಂದಬೇಕು; ಒಂದಾಗಬೇಕಾದದ್ದೆಲ್ಲವೂ ಏಕತ್ವದಲ್ಲಿ ಭಾಗಿಯಾಗಬೇಕು. ಭಾಗಹಾರ, ಸಂಕಲನ ಮೊದಲಾದ ಒಗಟೆಗಳಿಗೆಲ್ಲಾ ನನಗಿಂತ ಬುದ್ಧಿವಂತರಾದವರು ಅರ್ಥ ಹೇಳಿಕೊಳ್ಳಲಿ, ಅದನ್ನು ಅವರಿಗೇ ಬಿಡುತ್ತೇನೆ. ನಾನು ಅನುಭವಶಾಲಿಯಲ್ಲ; ಗಾದೆಯಲ್ಲಿ ಹೇಳುವಂತೆ ನನ್ನ ನೆರಳನ್ನೇ ನೋಡಿ ಹೆದರುವಂಥವನು. ಆದ್ದರಿಂದ ಈ ತತ್ವದ ದೃಢವಾದ ಆಧಾರವನ್ನು ಬಿಟ್ಟುಹೋಗಲಾರೆ' ಎಂದು ಕಂಠೋಕ್ತವಾಗಿ ಹೇಳಿಬಿಡುತ್ತೀಯೆ. ಆ ತತ್ವವನ್ನೇ ಯಾರಾದರೂ ವಿರೋಧಿಸಿದರೆ, ಅದರ ಫಲಿತಾಂಶಗಳು ಒಂದಕ್ಕೊಂದು ಹೊಂದುತ್ತವೋ ಇಲ್ಲವೋ ಎಂದು ಆಲೋಚಿಸಿ ನೋಡುವವರೆಗೂ ನೀನು ಅವರ ಆಕ್ಷೇಪಣೆಗೆ ಗಮನವನ್ನೂ ಕೊಡುವುದಿಲ್ಲ, ಉತ್ತರವನ್ನೂ ಕೊಡುವುದಿಲ್ಲ. ಆ ತತ್ವವನ್ನು ವಿವರಿಸಬೇಕಾಗಿ ಬಂದರೆ, ನೀನು ಮೊದಲು ಅದಕ್ಕಿಂತ ಘನವಾದ ತತ್ವ, ಅನಂತರ ಮತ್ತೂ ಘನವಾದ ತತ್ವ—ಈ ರೀತಿ ಸಮರ್ಪಕವಾದ ಒಂದು ನಿಲುಗಡೆಗೆ ಬರುವತನಕ ಘನವಾದ ತತ್ವಗಳನ್ನು ಒಪ್ಪಿಕೊಂಡು, ಆ ಮೂಲಕ ತತ್ವವನ್ನು ವಿವರಿಸುತ್ತೀಯೆ. ನೀನು ನಿಜವಾಗಿಯೂ ಸತ್‌ಸ್ವರೂಪವನ್ನು ತಿಳಿಯಬೇಕಾದರೆ, ಬರಿಯ ಚರ್ಚೆಗೆ ಕುಳಿತವರು ಮಾಡುವಂತೆ ತತ್ವವನ್ನೂ ಅದರಿಂದ ಹೊರಪಡುವ ಅಂಶಗಳನ್ನೂ ಒಂದು ಮತ್ತೊಂದೆಂದು ಭಾವಿಸಿ ಭ್ರಮೆಗೊಳ್ಳುವುದಿಲ್ಲ. ಆ ಜನರು ತಾವು ಚರ್ಚಿಸುವ ವಿಷಯಕ್ಕೆ ಸ್ವಲ್ಪವೂ ಗಮನ ಕೊಡುವುದಿಲ್ಲ, ಅದರ ವಿಷಯ ಒಂದು ಮಾತೂ ಆಡುವುದಿಲ್ಲ. ಅವರು ಚತುರರಾದದ್ದರಿಂದ ತಮ್ಮ ವಾದವೆಲ್ಲಾ ತೀರ ಅಸಂಬದ್ಧವಾಗಿ

ದ್ದರೂ ತಾವು ಚೆನ್ನಾಗಿಯೇ ವಾದಿಸಿದೆವೆಂದುಕೊಂಡು ಸಂತೋಷಪಡುತ್ತಾರೆ. ಆದರೆ ನೀನು ಮಾತ್ರ ನಿಜವಾದ ಜಿಜ್ಞಾಸುವಾದರೆ, ನಾನು ಹೇಳಿದ ದಾರಿಯನ್ನು ಅನುಸರಿಸುತ್ತೀಯೆ."

ಸೀಬೀಸ್, ಸಿಮಿಯಾಸ್ ಇಬ್ಬರೂ "ನಿಜ, ನಿಜ" ಎಂದರು.

ಎಕಿ—ಅವರು ಹೇಳಿದ್ದು ಸರಿ, ಫೀಡೊ. ಎಂಥ ಮೂಢನಿಗಾಗಲಿ ಅವನು ಅಷ್ಟು ಸ್ಪಷ್ಟವಾಗಿ ವಾದಿಸಿದ್ದನ್ನು ನೋಡಿದರೆ ಆಶ್ಚರ್ಯವಾಗದಿರದು.

ಫೀಡೊ—ಅಲ್ಲಿದ್ದವರೆಲ್ಲರೂ ಹಾಗೇ ಅಂದುಕೊಂಡರು, ಎಕಿಕ್ರೆಟೀಸ್.

ಎಕಿ—ಅಲ್ಲಿ ಇರದೆ ಇದ್ದರೂ ನಿನ್ನ ಕಥೆಯನ್ನು ಕೇಳುವ ನಾವೂ ಕೂಡ ಹಾಗೇ ಹೇಳುತ್ತೇವೆ. ಆ ಮೇಲೆ ಚರ್ಚೆ ಹೇಗೆ ಮುಂದುವರಿಯಿತು ?

ಫೀಡೊ—ಭಾವಗಳಿವೆಯೆಂದೂ ವ್ಯಾವಹಾರಿಕ ಪ್ರಪಂಚದ ವಸ್ತುಗಳೆಲ್ಲವೂ ಭಾವಗಳಲ್ಲಿ ಭಾಗಿಗಳಾಗುವುದರಿಂದ ಅವುಗಳ ಹೆಸರುಗಳನ್ನು ಪಡೆಯುವುವೆಂದೂ ಅವರು ಒಪ್ಪಿದ್ದರು. ಅನಂತರ ಸಾಕ್ರೆಟೀಸನು ಅವರನ್ನು ಹೀಗೆ ಕೇಳಿದನೆಂದು ಜ್ಞಾಪಕ. "ನೀವು ಹೀಗೆ ಹೇಳುತ್ತೀರಲ್ಲ, ಹಾಗಾದರೆ ಈಗ ಸಿಮಿಯಾಸನು ಸಾಕ್ರೆಟೀಸನಿಗಿಂತ ಎತ್ತರವಾಗಿದ್ದಾನೆಂದೂ ಫೀಡೋವಿಗಿಂತ ಕುಳ್ಳಾಗಿದ್ದಾನೆಂದೂ ಹೇಳಿದರೆ, ಎತ್ತರವಾಗಿರುವಿಕೆ, ಕುಳ್ಳಾಗಿರುವಿಕೆ ಎಂಬ ಎರಡು ಗುಣಗಳನ್ನು ಸಿಮಿಯಾಸನು ಹೊಂದಿದ್ದಾನೆಂದು ಹೇಳಿದ ಹಾಗಾಯಿತಲ್ಲವೆ ?"

"ಹೌದು."

"ಆದರೆ ಸಿಮಿಯಾಸನು ಸಾಕ್ರೆಟೀಸನಿಗಿಂತ ಎತ್ತರವಾಗಿರುವುದು ತಾನು ಸಿಮಿಯಾಸನಾಗಿರುವುದರಿಂದಲ್ಲ—ನಮ್ಮ ಮಾತು ಆ ಅರ್ಥವನ್ನು ಕೊಟ್ಟರೂ ಅದು ನಿಜವಲ್ಲ – ತನಗಿರುವ ಎತ್ತರದಿಂದ. ಅವನು ಸಾಕ್ರೆಟೀಸನಿಗಿಂತ ಎತ್ತರವಾಗಿರುವುದು ಸಾಕ್ರೆಟೀಸನು ಸಾಕ್ರೆಟೀಸನಾಗಿರುವುದರಿಂದಲೂ ಅಲ್ಲ; ಸಿಮಿಯಾಸನ ಎತ್ತರದೊಡನೆ ಹೋಲಿಸಿ ನೋಡಿದರೆ ಸಾಕ್ರೆಟೀಸನು ಕಡಮೆ ಎತ್ತರವುಳ್ಳವನಾದ್ದರಿಂದ. ಇದನ್ನು ಒಪ್ಪುತ್ತೀಯಲ್ಲವೆ ?"

"ಒಪ್ಪುತ್ತೇನೆ."

"ಸಿಮಿಯಾಸನು ಫೀಡೋವಿಗಿಂತ ಕುಳ್ಳಾಗಿರುವುದು ಫೀಡೊ ಫೀಡೊ ಆಗಿರುವುದರಿಂದಲ್ಲ, ಸಿಮಿಯಾಸಿನ ಕಡಮೆ ಎತ್ತರದೊಡನೆ ಹೋಲಿಸಿ ನೋಡಿದರೆ ಫೀಡೊ ಹೆಚ್ಚು ಎತ್ತರವುಳ್ಳವನಾದ್ದರಿಂದ."

"ನಿಜ."

"ಹೀಗೆ ಸಿಮಿಯಾಸನು ಇವರಿಬ್ಬರ ನಡುವೆ ಇರುವಾಗ ಅವನು ಎತ್ತರವಾಗಿದ್ದಾನೆಂದೂ ಹೇಳುತ್ತೇವೆ, ಕುಳ್ಳಾಗಿದ್ದಾನೆಂದೂ ಹೇಳುತ್ತೇವೆ. ಅವನು ಒಬ್ಬನ ಕುಳ್ಳತನಕ್ಕಿಂತ ಎಷ್ಟು ಎತ್ತರವಾಗಿದ್ದಾನೆಯೋ ಅಷ್ಟು ಮಟ್ಟಿಗೆ ಎತ್ತರವೆನಿಸಿಕೊಳ್ಳುತ್ತಾನೆ; ಮತ್ತು ತನ್ನ ಕುಳ್ಳತನಕ್ಕಿಂತ ಹೆಚ್ಚಾದ ಎತ್ತರವನ್ನು ಮತ್ತೊಬ್ಬನಿಗೆ ಕೊಡುತ್ತಾನೆ."

ಇದನ್ನು ಹೇಳಿದಾಗ ಸಾಕ್ರೆಟೀಸನು ಸ್ವಲ್ಪ ನಕ್ಕು "ನಾನು ಮಾತಾಡುವ ಶೈಲಿ ಬಹಳ ನಿಷ್ಕೃಷ್ಟವಾಗಿಯೂ ನ್ಯಾಯಸ್ಥಾನಕ್ಕೆ ಸಂಬಂಧಪಟ್ಟ ಕಾಗದಪತ್ರಗಳಂತೆ ನಿಯಮಬದ್ಧವಾಗಿಯೂ ಇದೆ. ಆದರೆ ನಾನು ಹೇಳುವುದು ನಿಜವೆಂದು ತೋರುತ್ತದೆ'' ಎಂದನು.

ಸಿಮಿಯಾಸನು ಅದನ್ನು ಒಪ್ಪಿಕೊಂಡನು.

"ನನ್ನಂತೆ ನೀವೂ ಆಲೋಚಿಸಲೆಂದು ನಾನು ಹಾಗೆ ಮಾತಾಡುತ್ತಿದ್ದೇನೆ. ಪರಮ ಘನತೆ ಒಂದೇ ಕಾಲದಲ್ಲಿ ಹೆಚ್ಚಾಗಿಯೂ ಕಡಮೆಯಾಗಿಯೂ ಇರುವುದು ಅಸಾಧ್ಯ. ಅದಲ್ಲದೆ ನಮ್ಮಲ್ಲಿರುವ ಹೆಚ್ಚಿಗೆಯು ಕಡಮೆಯಾದದ್ದನ್ನು ಸೇರಿಸಿಕೊಳ್ಳುವುದಿಲ್ಲ; ಮತ್ತೊಂದನ್ನು ತನಗಿಂತ ಹೆಚ್ಚಾಗಗೊಡಿಸುವುದೂ ಇಲ್ಲ. ಇದಕ್ಕೆ ಬದಲಾಗಿ ಎರಡರಲ್ಲಿ ಒಂದಾಗಬಹುದು: ದೊಡ್ಡದು ತನಗೆ ವಿರುದ್ಧವಾದ ಚಿಕ್ಕದು ಹತ್ತಿರ ಬಂದೊಡನೆಯೇ ಹಿಂದಿರುಗಿ ಓಡಿಹೋಗುತ್ತದೆ; ಇಲ್ಲದಿದ್ದರೆ ಅದು ನಾಶವಾಗಿ ಹೋಗುತ್ತದೆ. ಈಗ ನನ್ನನ್ನು ಸಿಮಿಯಾಸನೊಡನೆ ಹೋಲಿಸಿ ನೋಡಿದಾಗ, ನಾನು ಸಣ್ಣತನವೆಂಬ ಗುಣವನ್ನು ಸೇರಿಸಿಕೊಂಡರೂ ಮೊದಲಿದ್ದ ಹಾಗೆಯೇ ಸಣ್ಣವನಾಗಿಲ್ಲವೆ? ಹಾಗೆಯೇ ದೊಡ್ಡತನವು ನಿಂತಲ್ಲಿ ನಿಂತು ಚಿಕ್ಕತನವನ್ನು ಜೊತೆಗೆ ಸೇರಿಸಿಕೊಂಡು ತಾನು ಮೊದಲಿದ್ದದ್ದಕ್ಕೆ ಬೇರೆ ವಸ್ತುವಾಗಿ ಪರಿಣಮಿಸುವುದಿಲ್ಲ. ದೊಡ್ಡತನ ತಾನು ದೊಡ್ಡತನವಾಗಿರು

ವಾಗಲೇ ಸಣ್ಣದಾಗಿರಲಾರದು. ಹಾಗೆಯೇ ನಮ್ಮಲ್ಲಿರುವ ಸಣ್ಣತನ ದೊಡ್ಡದಾಗಿರಲಾರದು, ಮುಂದೆಯೂ ದೊಡ್ಡತನವಾಗಲಾರದು. ಯಾವ ವಸ್ತುವೇ ಆಗಲಿ ತನಗೆ ಸಹಜವಾದ ಸ್ಥಿತಿಯಲ್ಲಿರುವವರೆಗೂ ತನಗೆ ವಿರುದ್ಧ ವಾದ ವಸ್ತುವಾಗಿ ಪರಿಣಮಿಸಲಾರದು. ಅದು ಹೊರಟುಹೋಗಬೇಕು ಅಥವಾ ಅಲ್ಲಿಯೇ ಇದ್ದು ಮಾರ್ಪಾಡಾಗುವುದರಲ್ಲಿ ನಾಶಹೊಂದಬೇಕು."

ಸೀಬೀಸನು "ನನ್ನ ಅಭಿಪ್ರಾಯವೂ ಅದೇ" ಎಂದನು. ಆಗ ಇನ್ನೊಬ್ಬನು—ಯಾರೋ ನನಗೆ ಚೆನ್ನಾಗಿ ನೆನಪಿಲ್ಲ—"ಆದರೆ ನಾವು ಮೊದಲು ಒಪ್ಪಿಕೊಂಡದ್ದಕ್ಕೆ ಇದು ವಿರುದ್ಧವಾಗುವುದಿಲ್ಲವೆ? ದೊಡ್ಡದರಿಂದ ಚಿಕ್ಕದೂ ಚಿಕ್ಕದರಿಂದ ದೊಡ್ಡದೂ ಉತ್ಪತ್ತಿಯಾಗುವುವೆಂದೂ ವಿರುದ್ಧ ವಸ್ತುಗಳೆಲ್ಲವೂ ತಮಗೆ ವಿರುದ್ಧವಾದ ವಸ್ತುಗಳಿಂದ ಉತ್ಪತ್ತಿಯಾಗುವು ವೆಂದೂ ನಾವು ಒಪ್ಪಿದ್ದೆವಲ್ಲವೆ? ಆದರೆ ಈಗ ಆ ತತ್ವ ಸುಳ್ಳೆಂದು ಹೇಳು ತ್ತಿರುವ ಹಾಗಿದೆ" ಎಂದನು.

ಸಾಕ್ರೆಟೀಸನು ಅವನ ಕಡೆಗೆ ತಲೆಯನ್ನು ಸ್ವಲ್ಪ ಬಾಗಿಸಿ ಅವನು ಹೇಳಿದ್ದನ್ನು ಕೇಳಿ, ಅವನಿಗೆ ಉತ್ತರಕೊಟ್ಟನು. "ನೀನು ಧೈರ್ಯವಾಗಿ ಈ ವಿಷಯವನ್ನು ನಮ್ಮ ನೆನಪಿಗೆ ತಂದದ್ದನ್ನು ನೋಡಿ ನನಗೆ ಸಂತೋಷ ವಾಯಿತು. ಆದರೆ ಈ ಎರಡು ತತ್ವಗಳಿಗೂ ಇರುವ ಭೇದವನ್ನು ನೀನು ಗಮನಿಸಲಿಲ್ಲ. ನಾವು ಮೊದಲು ಹೇಳಿದ್ದು ಕಣ್ಣಿಗೆ ಕಾಣುವ ಪದಾರ್ಥ ಗಳು ತಮ್ಮ ವಿರುದ್ಧ ವಸ್ತುಗಳಿಂದ ಹುಟ್ಟುತ್ತವೆಯೆಂದು; ಈಗ ಹೇಳುತ್ತಿರು ವುದು ಪರಮ ವಿರುದ್ಧ ವಸ್ತುಗಳ ವಿಷಯ. ಅವು ನಮ್ಮಲ್ಲಿರಲಿ ಅಥವಾ ಪ್ರಕೃತಿಯಲ್ಲಿರಲಿ ತಮಗೆ ತಾವೇ ಎಂದಿಗೂ ವಿರುದ್ಧವಾಗಿರಲಾರವು. ಆಗ ವಿರುದ್ಧ ವಸ್ತುಗಳು ಸೇರಿಕೊಂಡಿರುವ ಮತ್ತು ಅವುಗಳ ಹೆಸರಿನಿಂದ ಕರೆಯಿಸಿಕೊಳ್ಳುವ ವಸ್ತುಗಳ ವಿಷಯವಾಗಿ ನಾವು ಮಾತಾಡುತ್ತಿದ್ದೆವು; ಈಗ ಆ ವಸ್ತುಗಳಲ್ಲಿ ಸೇರಿಕೊಂಡಿರುವ ಮತ್ತು ಅವಕ್ಕೆ ಹೆಸರುಕೊಡುವ ವಿರುದ್ಧ ವಸ್ತುಗಳ ವಿಷಯವನ್ನೇ ಮಾತಾಡುತ್ತಿದ್ದೇವೆ. ಈ ಆದರ್ಶ ವಿರುದ್ಧ ವಸ್ತುಗಳು ಎಂದಿಗೂ ಒಂದರಿಂದ ಒಂದು ಉತ್ಪತ್ತಿಯಾಗುವುದಿಲ್ಲ ವೆಂದು ನಾವು ಹೇಳುತ್ತೇವೆ." ಹೀಗೆ ಹೇಳುತ್ತಾ ಆತನು ಸೀಬೀಸನ ಕಡೆ

ತಿರುಗಿ "ಅವನ ಆಕ್ಷೇಪಣೆ ನಿನಗೂ ಏನಾದರೂ ತೊಂದರೆ ಕೊಟ್ಟಿತೆ?" ಎಂದು ಕೇಳಿದನು. ಸೀಬೀಸನು "ನನಗೆ ಆ ಸಂದೇಹ ಬರಲಿಲ್ಲ, ಆದರೆ ಇತರ ಸಂದೇಹಗಳು ಎಷ್ಟೋ ತೊಂದರೆ ಕೊಡುತ್ತಿವೆ" ಎಂದು ಒಪ್ಪಿಕೊಂಡನು.

ಸಾಕ್ರೆಟೀಸನು "ಹಾಗಾದರೆ, ವಿರುದ್ಧವಸ್ತು ತನಗೆ ತಾನೇ ಎಂದಿಗೂ ವಿರುದ್ಧವಾಗಿರಲಾರದೆಂದು ನಾವು ಒಪ್ಪಿದ್ದೇವೆ."

"ಹೌದು, ಅದನ್ನು ಒಪ್ಪಿದ್ದೇವೆ."

"ಈಗ ಮುಂದೆ ಹೇಳುವುದನ್ನು ಒಪ್ಪುತ್ತೀಯಾ ಹೇಳು. ಉಷ್ಣ ಶೈತ್ಯಗಳೆಂಬ ವಸ್ತುಗಳಿವೆಯೋ ಇಲ್ಲವೋ ?"

"ಇವೆ."

"ಅವೂ ಮಂಜುಬೆಂಕಿಗಳೂ ಎರಡೂ ಒಂದೇ ಎಂದು ಹೇಳಬಹುದೆ?"

"ಇಲ್ಲ, ಎಂದಿಗೂ ಇಲ್ಲ."

"ಉಷ್ಣವೂ ಬೆಂಕಿಯೂ ಬೇರೆ ಬೇರೆ ವಸ್ತುಗಳು; ಶೈತ್ಯವೂ ಮಂಜೂ ಬೇರೆ ಬೇರೆ ವಸ್ತುಗಳು."

"ಹೌದು."

"ಆದರೆ ನಾವು ಮೊದಲೇ ಹೇಳಿದಂತೆ ಮಂಜು ಉಷ್ಣದ ಶಕ್ತಿಗೆ ಸಿಕ್ಕಿದಾಗ ಅದು ಮೊದಲಿದ್ದ ಹಾಗೆಯೇ ಮಂಜಾಗಿ, ಉಷ್ಣದ ಜೊತೆಯಲ್ಲಿಯೇ ಉಷ್ಣದ ಮಂಜಾಗಿ, ಇರಲಾಗುವುದಿಲ್ಲ. ಉಷ್ಣ ಸಮೀಪಕ್ಕೆ ಬಂದರೆ ಮಂಜು ಓಡಿಹೋಗಬೇಕು ಅಥವಾ ನಾಶವಾಗಬೇಕು. ಇದನ್ನು ಒಪ್ಪುತ್ತೀಯಲ್ಲವೆ?"

"ಒಪ್ಪುತ್ತೇನೆ."

"ಬೆಂಕಿಯೂ ಕೂಡ ಶೈತ್ಯ ಸಮೀಪಕ್ಕೆ ಬಂದರೆ ಓಡಿಹೋಗಬೇಕು ಅಥವಾ ನಾಶವಾಗಬೇಕು. ಬೆಂಕಿ ಶೈತ್ಯದ ಶಕ್ತಿಗೆ ಸಿಕ್ಕಿದ ಮೇಲೆ ಅವೆರಡೂ ಮೊದಲಿನಂತೆಯೇ ಬೆಂಕಿಶೈತ್ಯಗಳಾಗಿ ಉಳಿಯಲಾರವು."

ಸೀಬೀಸನು "ನಿಜ" ಎಂದನು.

"ಹಾಗಾದರೆ, ಕೆಲವು ಸಂದರ್ಭಗಳಲ್ಲಿ ತನ್ನ ಹೆಸರಿಟ್ಟುಕೊಳ್ಳುವ ಹಕ್ಕು ಎಂದೆಂದಿಗೂ ಇರುವುದು ಭಾವಕ್ಕೆ ಮಾತ್ರವಲ್ಲದೆ, ಭಾವವಲ್ಲದಿರುವ

—ಆದರೆ ಎಲ್ಲೆಲ್ಲಿದ್ದರೂ ಅದರ ರೂಪವನ್ನೇ ಹೊಂದಿರುವ—ವಸ್ತುವೊಂದಕ್ಕೂ ಅದೇ ಹೆಸರಿರುತ್ತದೆ. ಒಂದು ಉದಾಹರಣೆಯನ್ನು ತೆಗೆದುಕೊಂಡರೆ ನನ್ನ ಅರ್ಥ ಸ್ಪಷ್ಟವಾಗಬಹುದು. ವಿಷಮಸಂಖ್ಯೆಗೆ ಯಾವಾಗಲೂ ವಿಷಮವೆಂಬ ಹೆಸರಿರಬೇಕು, ಅಲ್ಲವೆ?"

"ಹೌದು."

"ಸರಿ. ಈಗ ನಾನು ಕೇಳುವ ಪ್ರಶ್ನೆ ಇದು. ಈ ಹೆಸರನ್ನುಳ್ಳದ್ದು ವಿಷಮತ್ವವೊಂದೆಯೇ? ಕೆಲವು ವಸ್ತುಗಳು ತಾವೂ ವಿಷಮತ್ವವೂ ಒಂದೇ ಅಲ್ಲದಿದ್ದರೂ ವಿಷಮತ್ವದಿಂದ ತಮ್ಮ ಸ್ವಭಾವ ಎಂದಿಗೂ ಬೇರೆಯಾಗಲಾರದ್ದರಿಂದ ತಮ್ಮ ಹೆಸರಿನ ಜೊತೆಗೆ ವಿಷಮತ್ವದ ಹೆಸರನ್ನೂ ಹೊತ್ತಿರಬೇಕಾಗುತ್ತದೆ. ನಾನು ಹೇಳುವುದಕ್ಕೆ ಬೇಕಾದಷ್ಟು ಉದಾಹರಣೆಗಳಿವೆ. ಈಗ ಒಂದು ಉದಾಹರಣೆ ಬೇಕಾದರೆ, ಮೂರು ಎಂಬ ಸಂಖ್ಯೆಯನ್ನು ತೆಗೆದುಕೊಳ್ಳೋಣ. ಅದನ್ನು ಅದರ ಸ್ವಂತ ಹೆಸರಿನಿಂದ ಬೇಕಾದರೂ ಕರೆಯಬಹುದು, ಜೊತೆಗೆ ವಿಷಮ ಸಂಖ್ಯೆಯೆಂದು ಬೇಕಾದರೂ ಕರೆಯಬಹುದು. ಆದರೆ ವಿಷಮಸಂಖ್ಯೆ, ಮೂರು ಇವೆರಡೂ ಒಂದೇ ಅಲ್ಲ. ಈ ಮಾತನ್ನು ಮೂರಕ್ಕೆ ಮಾತ್ರವಲ್ಲದೆ ಐದಕ್ಕೂ, ನಡುವೆ ಒಂದು ಬಿಟ್ಟು ಬರುವ ಸಂಖ್ಯೆಗಳೆಲ್ಲಕ್ಕೂ ಅನ್ವಯಿಸಬಹುದು. ಅವುಗಳಲ್ಲಿ ಪ್ರತಿಯೊಂದೂ ತಾನು ವಿಷಮತ್ವ ಅಥವಾ ವಿಷಮಸಂಖ್ಯೆಯಲ್ಲದಿದ್ದರೂ ವಿಷಮವಾಗಿಯೇನೋ ಇದೆ. ಹಾಗೆಯೇ ಎರಡೂ, ನಾಲ್ಕು ಮತ್ತು ಆ ವರ್ಗಕ್ಕೆ ಸೇರಿದ ಇತರ ಸಂಖ್ಯೆಗಳೂ ತಾವು ಸಮತ್ವ ಅಥವಾ ಸಮಸಂಖ್ಯೆಯಲ್ಲದಿದ್ದರೂ ಸಮವಾಗಿಯೇನೋ ಇವೆ. ಇದನ್ನು ಒಪ್ಪುತ್ತೀಯಾ?"

"ಒಪ್ಪಲೇಬೇಕು."

"ಈಗ ನಾನು ತೋರಿಸಬೇಕೆಂದಿರುವ ಅಂಶವನ್ನು ಗಮನಿಸು. ಆದರ್ಶ ವಿರುದ್ಧವಸ್ತುಗಳು ಒಂದನ್ನೊಂದು ಸೇರಿಸದೆ ಇರುವುದಲ್ಲದೆ, ವಿರುದ್ಧವಲ್ಲದ ವಸ್ತುಗಳೂ ಕೂಡ ತಾವು ಒಂದಕ್ಕೊಂದು ವಿರುದ್ಧವಾಗಿರದಿದ್ದರೂ ವಿರುದ್ಧ ವಸ್ತುಗಳನ್ನೊಳಕೊಂಡಿದ್ದರೆ ಒಂದನ್ನೊಂದು ಸೇರಿಸುವುದಿಲ್ಲ. ಇವು ತಮ್ಮಲ್ಲಿರುವ ಭಾವಕ್ಕೆ ವಿರುದ್ಧವಾದ ಭಾವವನ್ನು

ದೂರಮಾಡುತ್ತವೆ, ಅಲ್ಲದೆ ಅದು ತಮ್ಮ ಬಳಿಗೆ ಬಂದಾಗ ಹೊರಟು ಹೋಗುತ್ತವೆ ಅಥವಾ ನಾಶವಾಗುತ್ತವೆ. ಉದಾಹರಣೆಗೆ, ಮೂರು ಎಂಬ ಸಂಖ್ಯೆ ತಾನು ಮೂರಾಗಿದ್ದುಕೊಂಡು ಎಂದಿಗೂ ಸಮಸಂಖ್ಯೆಯಾಗುವುದಿಲ್ಲ. ಹಾಗಾಗುವುದಕ್ಕೆ ಬದಲು ಅದು ನಾಶವಾದರೂ ಆದೀತು, ಇನ್ನು ಏನನ್ನಾದರೂ ಅನುಭವಿಸೀತು, ಅಲ್ಲವೆ?''

ಸೀಬೀಸನು ''ನಿಜ'' ಎಂದನು.

"ಆದರೆ ಎರಡು ಮೂರಕ್ಕೆ ವಿರುದ್ಧವಾದದ್ದಲ್ಲ.''

"ಅಲ್ಲ.''

"ಹಾಗಾದರೆ, ನಾವು ಹೀಗೆ ಹೇಳಬಹುದು: ವಿರುದ್ಧಭಾವಗಳು ಒಂದನ್ನೊಂದು ಮುಂದೆ ಬಾರದಂತೆ ತಡೆಯುತ್ತವೆ ಆದರೆ ವಿರುದ್ಧ ವಸ್ತುಗಳನ್ನು ಮುಂದೆ ಬಾರದಂತೆ ತಡೆಯುವ ಸ್ವಭಾವವುಳ್ಳ ಇತರ ವಸ್ತುಗಳೂ ಇವೆ.''

ಸೀಬೀಸನು ''ಹೌದು'' ಎಂದನು.

"ಸಾಧ್ಯವಾದರೆ ಆ ವಸ್ತುಗಳ ಸ್ವಭಾವವೇನೆಂದು ನೋಡೋಣವೆ?''

''ನೋಡೋಣ.''

''ಅವುಗಳ ಸ್ವಭಾವ ಇದು: ತಾವು ಹೊಂದಿಕೊಂಡಿರುವ ವಸ್ತು ತನ್ನ ಸ್ವಂತ ರೂಪವನ್ನು ಮಾತ್ರವಲ್ಲದೆ ಒಂದು ವಿರುದ್ಧ ವಸ್ತುವಿನ ರೂಪವನ್ನೂ ಹೊಂದುವಂತೆ ಅವು ಒತ್ತಾಯಮಾಡುತ್ತವೆ, ಅಲ್ಲವೆ?''

"ಹಾಗೆಂದರೆ?''

''ಈಗ ನಾವು ಹೇಳುತ್ತಿದ್ದದ್ದೇ. ಮೂರು ಎನ್ನುವುದು ಯಾವುದರಲ್ಲಿದ್ದರೂ ಅದು ಸಂಖ್ಯೆಯಲ್ಲಿ ಮೂರಾಗಿರುವುದಲ್ಲದೆ ವಿಷಮವೂ ಆಗಿರಬೇಕು. ಇದು ನಿನಗೆ ತಿಳಿದೇ ಇದೆ.''

''ಹೌದು.''

''ವಿಷಮತ್ವದ ಪ್ರಭಾವ ಮೂರರಲ್ಲಿ ಸೇರಿದೆ. ವಿಷಮತ್ವವಿದ್ದಲ್ಲಿಗೆ ಅದಕ್ಕೆ ವಿರುದ್ಧವಾದ ಭಾವ ಬರುವುದಿಲ್ಲ.''

''ನಿಜ, ಬರುವುದಿಲ್ಲ.''

''ಆ ಪ್ರಭಾವವನ್ನು ಕೊಟ್ಟಿರುವುದು ವಿಷಮತ್ವ.''

"ಹೌದು."

"ಸಮಸಂಖ್ಯೆಯ ಭಾವ ವಿಷಮಸಂಖ್ಯೆಯ ಭಾವಕ್ಕೆ ವಿರುದ್ಧವಾದದ್ದು. ಅಲ್ಲವೆ?"

"ಹೌದು."

"ಹಾಗಾದರೆ ಸಮಸಂಖ್ಯೆಯ ಭಾವದಿಂದ ನಾವು ಮೂರನ್ನು ಹೊಂದುವುದು ಅಸಾಧ್ಯ."

"ಅಸಾಧ್ಯ."

"ಆದ್ದರಿಂದ ಮೂರಕ್ಕೆ ಸಮಸಂಖ್ಯೆಯಲ್ಲಿ ಭಾಗವಿಲ್ಲ."

"ಇಲ್ಲ."

"ಅಂದರೆ ಮೂರು ಅಸಮವಾದದ್ದೆ ?"

"ಹೌದು."

"ಸರಿ. ವಿರುದ್ಧಸ್ವಭಾವವಿಲ್ಲದಿದ್ದರೂ ವಿರುದ್ಧವಸ್ತುಗಳನ್ನು ಸೇರಿಸದ ವಸ್ತುಗಳ ಲಕ್ಷಣವನ್ನು ಹೇಳಲು ಹೊರಟಿದ್ದೆ. ಆ ವಿಷಯ ಇಷ್ಟು ಸಾಕು. ಈಗ ಮೂರು ಎಂಬ ಸಂಖ್ಯೆ ಸಮಸಂಖ್ಯೆಗೆ ವಿರುದ್ಧವಾದದ್ದಲ್ಲವಾದರೂ ಅದು ಸಮಸಂಖ್ಯೆಯನ್ನು ಸೇರಿಸುವುದಿಲ್ಲ; ಏಕೆಂದರೆ, ಅದು ಯಾವಾಗಲೂ ಜೊತೆಯಲ್ಲಿ ಸಮಸಂಖ್ಯೆಗೆ ವಿರುದ್ಧವಾದದ್ದನ್ನು ತರುತ್ತದೆ. ಎರಡು ಎಂಬ ಸಂಖ್ಯೆ ಹೀಗೆಯೇ ವಿಷಮವನ್ನು ಸೇರಿಸುವುದಿಲ್ಲ. ಬೆಂಕಿ ಶೈತ್ಯವನ್ನು ಸೇರಿಸುವುದಿಲ್ಲ. ಇಂಥ ಉದಾಹರಣೆಗಳು ಬೇಕಾದಷ್ಟಿವೆ. ವಿರುದ್ಧವಸ್ತುಗಳು ತಮ್ಮ ವಿರುದ್ಧವಸ್ತುಗಳನ್ನು ಸೇರಿಸದಿರುವುದು ಮಾತ್ರವಲ್ಲದೆ, ಯಾವ ವಸ್ತು ತಾನು ಸೇರುವ ವಸ್ತುವಿಗೆ ವಿರುದ್ಧವಾದದ್ದನ್ನು ತನ್ನೊಡನೆ ತರುತ್ತದೋ ಅದು, ಹಾಗೆ ತಾನು ತರುವ ವಸ್ತುವಿಗೆ ವಿರುದ್ಧವಾದದ್ದನ್ನು ಸೇರಿಸುವುದಿಲ್ಲ. ಇದನ್ನು ನೀನು ಒಪ್ಪುತ್ತೀಯಾ? ಮತ್ತೆ ಇದನ್ನು ನಿನಗೆ ನೆನಪುಮಾಡಿ ಕೊಡುತ್ತೇನೆ; ಹೇಳಿದ್ದನ್ನೇ ಪುನಃ ಹೇಳಿದರೂ ಬಾಧಕವಿಲ್ಲ. ಐದು ಎಂಬ ಸಂಖ್ಯೆ ಸಮಸಂಖ್ಯೆಯ ಭಾವವನ್ನು ಸೇರಿಸುವುದಿಲ್ಲ. ಅದು ತಾನೇ ವಿರುದ್ಧವಸ್ತುವಲ್ಲದಿದ್ದರೂ ವಿಷಮದ ಭಾವವನ್ನು ಸೇರಿಸುವುದಿಲ್ಲ. ಹಾಗೆಯೇ ಒಂದುವರೆ, ಅರ್ಧ ಮೊದಲಾದ ಸಂಖ್ಯೆಗಳು ಪೂರ್ಣಸಂಖ್ಯೆಯ ಭಾವವನ್ನು ಸೇರಿಸುವುದಿಲ್ಲ; ಮೂರನೆಯ ಒಂದು ಭಾಗ ಮೊದಲಾದ

ಸಂಖ್ಯೆಗಳ ವಿಷಯದಲ್ಲಿಯೂ ಹೀಗೆಯೇ ಹೇಳಬಹುದು. ನಾನು ಹೇಳುವುದು ಸ್ಪಷ್ಟವಾಯಿತೆ ? ಅದನ್ನು ಒಪ್ಪುತ್ತೀಯಾ ? ”

“ಸ್ಪಷ್ಟವಾಯಿತು. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ.”

“ಈಗ ಮತ್ತೆ ಪ್ರಾರಂಭಿಸೋಣ. ನಾನು ಕೇಳಿದ್ದಕ್ಕೆ ಉತ್ತರಕೊಡು. ಪ್ರಶ್ನೆ ಕೇಳುವಾಗ ನಾನು ಉಪಯೋಗಿಸುವ ಪದಗಳನ್ನೇ ಉಪಯೋಗಿಸಿ ಉತ್ತರಕೊಡಬೇಡ. ನಾನು ನಿನಗೆ ಮೊದಲೇ ಹೇಳಿದ್ದೆನಲ್ಲ. ಅಂಥ ತೊಂದರೆಗೆ ಸಿಕ್ಕಿಸದಿರುವ ಉತ್ತರವನ್ನು ಕೊಡಬೇಡ. ಈಗ ನಾನು ಚರ್ಚಿಸಿದ್ದರ ಫಲಿತಾಂಶವಾಗಿ ಮತ್ತೊಂದು ಸುರಕ್ಷಿತವಾದ ದಾರಿ ತೋರುತ್ತಿದೆ. ಈಗ ನೀನು ನನ್ನನ್ನು ‘ ಶರೀರವು ಬಿಸಿಯಾಗಬೇಕಾದರೆ ಅದರಲ್ಲಿ ಏನಿರಬೇಕು ? ’ ಎಂದು ಕೇಳಿದರೆ, ನಾನು ಮೊದಲಿನಂತೆ ತೊಂದರೆಯಿಲ್ಲದ ಮೂಢ ಉತ್ತರವನ್ನು—ಉಷ್ಣವಿರಬೇಕು ಎಂಬ ಉತ್ತರವನ್ನು–ಕೊಡುವುದಿಲ್ಲ; ಅದಕ್ಕಿಂತ ಉತ್ತಮವಾದ, ಈಗ ನಮ್ಮ ಚರ್ಚೆಯಿಂದ ತಿಳಿದುಬಂದ ಉತ್ತರವನ್ನು ಕೊಡುತ್ತೇನೆ: ಬೆಂಕಿ ಎಂದು. ‘ಶರೀರವನ್ನು ರೋಗಿಯಾಗಿ ಮಾಡಬೇಕಾದರೆ ಅದರಲ್ಲಿ ಏನಿರಬೇಕು?’ ಎಂದು ಕೇಳಿದರೆ, ನಾನು ‘ ರೋಗ ’ ಎಂದು ಉತ್ತರಕೊಡುವುದಿಲ್ಲ; ‘ ಜ್ವರ ’ ಎಂದು ಉತ್ತರ ಕೊಡುತ್ತೇನೆ. ‘ ಸಂಖ್ಯೆ ವಿಷಮವಾಗಬೇಕಾದರೆ ಅದರಲ್ಲಿ ಏನಿರಬೇಕು ? ’ ಎಂದು ಕೇಳಿದರೆ, ನಾನು ‘ ವಿಷಮತ್ವ ’ ಎನ್ನುವುದಿಲ್ಲ; ಏಕತ್ವವಿರಬೇಕು ಎನ್ನುತ್ತೇನೆ. ಇತರ ವಿಷಯಗಳಲ್ಲಿಯೂ ಹೀಗೆಯೇ. ನನ್ನ ಅರ್ಥ ಸ್ಪಷ್ಟವಾಯಿತೆ ? ”

“ ಆಯಿತು. ”

“ ಹಾಗಾದರೆ, ಹೇಳು. ಶರೀರವನ್ನು ಸಜೀವವಾಗಿ ಮಾಡಬೇಕಾದರೆ ಅದರಲ್ಲಿ ಏನಿರಬೇಕು ? ”

ಸೀಬೀಸನು “ ಆತ್ಮ ” ಎಂದನು.

“ ಇದು ಯಾವಾಗಲೂ ಹಾಗೆಯೇ ತಾನೆ ? ”

“ ಹೌದು. ”

“ ಹಾಗಾದರೆ, ಯಾವಾಗಲೂ ಆತ್ಮ ತಾನು ಯಾವುದರಲ್ಲಿರುವುದೋ ಅದನ್ನು ಸಜೀವವಾಗಿ ಮಾಡುತ್ತದೆ ? ”

" ಸಂಶಯವಿಲ್ಲದೆ. "

" ಜೀವನಕ್ಕೆ ವಿರುದ್ಧವಾದದ್ದೊಂದು ಇದೆಯೋ ಇಲ್ಲವೋ ? "

" ಇದೆ. "

" ಅದು ಯಾವುದು ? "

" ಸಾವು. "

" ಆತ್ಮ ತಾನು ಜೊತೆಯಲ್ಲಿ ತರುವ ವಸ್ತುವಿಗೆ ವಿರುದ್ಧವಾದದ್ದನ್ನು ಎಂದಿಗೂ ಸೇರಿಸುವುದಿಲ್ಲವೆಂದು ನಾವು ಆಗಲೇ ಒಪ್ಪಿಕೊಂಡಿದ್ದೇವಲ್ಲವೆ? "

" ಹೌದು, ಒಪ್ಪಿದ್ದೇವೆ. "

" ಸರಿ. ನಾವು ಸಮಭಾವವನ್ನು ಸೇರಿಸದೆ ಇರುವ ವಸ್ತುವಿಗೆ ಏನು ಹೆಸರು ಕೊಟ್ಟೆವು ? "

" ಅಸಮವಾದದ್ದು ಎಂದು. "

" ನ್ಯಾಯಕ್ಕೆ ಅಥವಾ ಸುಸ್ವರಕ್ಕೆ ವಿರುದ್ಧವಾದದ್ದು ? "

" ಅನ್ಯಾಯ, ಅಪಸ್ವರ. "

" ಸರಿ. ಸಾವನ್ನು ಸೇರಿಸದೆ ಇರುವುದು ಯಾವುದು ? "

" ಅಮರವಾದದ್ದು. "

" ಆತ್ಮ ಸಾವನ್ನು ಸೇರಿಸುವುದಿಲ್ಲವಲ್ಲವೆ ? "

" ಇಲ್ಲ "

" ಹಾಗಾದರೆ, ಆತ್ಮ ಅಮರವಾದದ್ದು ? "

" ಹೌದು. "

" ಸರಿ. ಇದು ನಿರ್ಧರವಾಯಿತೆಂದು ಹೇಳಬಹುದಷ್ಟೆ ? "

" ಹೇಳಬಹುದು ಸಾಕ್ರೇಟೀಸ್, ಮನಸ್ಸಿಗೆ ಒಪ್ಪಿಗೆಯಾಯಿತು. "

" ಸರಿ, ಸೀಬೀಸ್. ವಿಷಮವು ನಾಶರಹಿತವಾಗಿದ್ದೇ ತೀರಬೇಕಾದರೆ ಮೂರು ಕೂಡ ನಾಶರಹಿತವಾಗಿರಬೇಕಲ್ಲವೆ ? "

" ಹೌದು "

" ಹಾಗೆಯೇ ಶೈತ್ಯವು ನಾಶರಹಿತವಾಗಿದ್ದಿದ್ದರೆ ಮಂಜಿಗೆ ನಾವು ಉಷ್ಣದ ಸಂಬಂಧವುಂಟುಮಾಡಿದರೂ ಅದು ಕರಗದೆಯೇ ಸುರಕ್ಷಿತವಾಗಿ

ಹೊರಟು ಹೋಗುತ್ತಿತ್ತು, ನಾಶವಾಗುತ್ತಿರಲಿಲ್ಲ ; ಅಲ್ಲಿಯೇ ಇದ್ದು ಉಷ್ಣ ವನ್ನು ಸೇರಿಸುತ್ತಲೂ ಇರಲಿಲ್ಲ. ”

“ ನಿಜ. ”

“ ಹಾಗೆಯೇ ಉಷ್ಣವು ನಾಶರಹಿತವಾಗಿದ್ದಿದ್ದರೆ, ಅದಕ್ಕೆ ಶೈತ್ಯದ ಸಂಬಂಧವಾದಾಗಲೆಲ್ಲಾ ಬೆಂಕಿ ಆರಿಹೋಗುತ್ತಿರಲಿಲ್ಲ, ನಾಶವಾಗುತ್ತಲೂ ಇರಲಿಲ್ಲ; ಅದು ಸುರಕ್ಷಿತವಾಗಿ ಹೊರಟುಹೋಗುತ್ತಿತ್ತು. ”

ಸೀಬೀಸನು “ ಆವಶ್ಯಕವಾಗಿ ” ಎಂದನು.

“ ಅಮರವಾದದ್ದರ ವಿಷಯವೂ ಹೀಗೆಯೇ ಎಂದು ಹೇಳಬೇಕಲ್ಲವೆ ? ಅಮರವಾದದ್ದೆಲ್ಲ ನಾಶರಹಿತವಾದದ್ದೂ ಆದರೆ, ಆತ್ಮದ ಬಳಿಗೆ ಮರಣ ಬಂದಾಗ ಅದು ನಾಶವಾಗಲಾರದು. ಮೂರು ಅಥವಾ ವಿಷಮ ಹೇಗೆ ಸಮವಾಗುವುದಿಲ್ಲವೋ ಬೆಂಕಿ ಅಥವಾ ಅದರಲ್ಲಿರುವ ಉಷ್ಣ ಹೇಗೆ ಶೈತ್ಯ ವಾಗುವುದಿಲ್ಲವೋ ಹಾಗೆಯೇ ಆತ್ಮ ಮರಣವನ್ನು ಸೇರಿಸುವುದಿಲ್ಲವೆಂದೂ ಮರಣಸ್ಥಿತಿಯಲ್ಲಿರುವುದಿಲ್ಲವೆಂದೂ ನಮ್ಮ ಇದುವರೆಗಿನ ಚರ್ಚೆಯಿಂದ ಸ್ಪಷ್ಟವಾಗುತ್ತದೆ. ಆದರೆ ಯಾರಾದರೂ ‘ಸಮ ವಿಷಮದ ಬಳಿಗೆ ಬಂದಾಗ ವಿಷಮ ಸಮವಾಗುವುದಿಲ್ಲವೆಂದು ಬೇಕಾದರೆ ಒಪ್ಪೋಣ ; ಆದರೆ ವಿಷಮ ನಾಶವಾದ ಮೇಲೆ ಸಮ ಅದರ ಸ್ಥಾನಕ್ಕೆ ಏಕೆ ಬರಬಾರದು ? ’ ಎಂದು ಕೇಳಬಹುದು. ಅವರಿಗೆ ಉತ್ತರವಾಗಿ ನಾವು ‘ಅದು ನಾಶವಾಗುವುದಿಲ್ಲ. ಏಕೆಂದರೆ ಅಸಮವಾದದ್ದೆಲ್ಲ ನಾಶರಹಿತವಾಗಿಯೂ ಇದೆ’ ಎಂದು ಹೇಳು ವುದಕ್ಕಾಗುವುದಿಲ್ಲ. ಅಸಮವಾದದ್ದೆಲ್ಲ ನಾಶರಹಿತವಾದದ್ದೆಂದು ನಾವು ಒಪ್ಪಿಕೊಂಡಿದ್ದರೆ, ವಿಷಮವೂ ಮೂರೂ ತಮ್ಮ ಬಳಿಗೆ ಸಮ ಬಂದಾಗ ಹೊರಟು ಹೋಗುವುವೆಂದು ಸುಲಭವಾಗಿ ವಾದಿಸಬಹುದಾಗಿತ್ತು. ಬೆಂಕಿ ಉಷ್ಣಗಳ ವಿಷಯದಲ್ಲೂ ಇತರ ವಸ್ತುಗಳ ವಿಷಯದಲ್ಲೂ ಹೀಗೆ ವಾದಿಸ ಬಹುದಾಗಿತ್ತು, ಅಲ್ಲವೆ ? ”

“ ಹೌದು. ”

“ಈಗ ಅಮರವಾದದ್ದೆಲ್ಲ ನಾಶರಹಿತವೆಂದು ನಾವು ಒಪ್ಪಿದರೆ, ಆತ್ಮ ಅಮರವಾದದ್ದಲ್ಲದೆ ನಾಶರಹಿತವೂ ಆಗುತ್ತದೆ. ಒಪ್ಪದಿದ್ದರೆ ನಾವು ಬೇರೆ ಯಾವುದಾದರೂ ವಾದವನ್ನು ಕಂಡುಹಿಡಿಯಬೇಕಾಗುತ್ತದೆ. ”

ಸೀಬೀಸನು "ಇಲ್ಲ. ಈ ಅಂಶದಲ್ಲಿ ಅಂಥ ಆವಶ್ಯಕತೆಯೇನೂ ಇಲ್ಲ. ಅಮರವಾದದ್ದು, ನಿತ್ಯವಾದದ್ದು ಎನ್ನಿಸಿಕೊಳ್ಳುವ ವಸ್ತುವೇ ನಾಶಕ್ಕೆ ಒಳಗಾದರೆ, ಹಾಗೆ ಒಳಗಾಗದೆ ಇರುವುದು ಮತ್ತೇನಿದೆ?" ಎಂದನು.

"ದೇವರೂ ಜೀವನದ ಸಾರರೂಪವೂ ಅಮರವಾದ ಇತರ ವಸ್ತುಗಳೂ ಎಂದಿಗೂ ನಾಶವಾಗುವುದಿಲ್ಲವೆಂದು ಎಲ್ಲರೂ ಒಪ್ಪುತ್ತಾರೆ."

ಸೀಬೀಸನು "ಎಲ್ಲಾ ಜನರೂ ಅದನ್ನು ಒಪ್ಪುವುದು ಹಾಗಿರಲಿ, ಎಲ್ಲಾ ದೇವತೆಗಳೂ ಸಹ ಅದನ್ನು ಒಪ್ಪುತ್ತಾರೆಂದು ತೋರುತ್ತದೆ" ಎಂದನು.

"ಅಮರವಾದದ್ದು ನಾಶರಹಿತವೂ ಆದರೆ, ಮತ್ತು ಆತ್ಮ ಅಮರವಾದದ್ದೆನ್ನುವುದು ನಿಜವಾದರೆ, ಆತ್ಮ ನಾಶರಹಿತವಾಗಿರಬೇಕು."

"ಇದ್ದೇ ಇರಬೇಕು."

"ಹಾಗಾದರೆ, ಮನುಷ್ಯನಿಗೆ ಸಾವು ಬಂದಾಗ ಅವನಲ್ಲಿ ಅಮರವಲ್ಲದ ಭಾಗ ಸತ್ತು ಹೋಗುತ್ತದೆ; ಆದರೆ ಅಮರವಾದ ಭಾಗ ಸಾವಿಗಿಂತ ಮುಂದೆ ಹೊರಟುಹೋಗಿ ಸುರಕ್ಷಿತವಾಗಿಯೂ ನಾಶರಹಿತವಾಗಿಯೂ ಇರುವುದೆಂದು ತೋರುತ್ತದೆ."

"ಹಾಗೇ ತೋರುತ್ತದೆ."

"ಹಾಗಾದರೆ ಸೀಬೀಸ್, ಆತ್ಮ ಅಮರವಾದದ್ದು, ನಾಶರಹಿತವಾದದ್ದು ಎನ್ನುವುದರಲ್ಲಿ ಸಂದೇಹವೇ ಇಲ್ಲ. ನಮ್ಮ ಆತ್ಮಗಳು ಪರಲೋಕದಲ್ಲಿ ಇದ್ದೇ ಇರುತ್ತವೆ."

ಸೀಬೀಸನು "ಸಾಕ್ರೆಟೀಸ್, ನಾನು ಇನ್ನೇನೂ ಆಕ್ಷೇಪಣೆಗಳನ್ನು ತರುವಹಾಗಿಲ್ಲ; ನಿನ್ನ ವಾದ ನನಗೆ ಪೂರ್ತಿ ಸಮರ್ಪಕವಾಗಿದೆ. ಸಿಮಿಯಾಸ್ ಅಥವಾ ಇತರರು ಯಾರಾದರೂ ಕೇಳಬೇಕಾದದ್ದು ಏನಾದರೂ ಇದ್ದರೆ, ಅದನ್ನು ಈಗಲೇ ಕೇಳುವುದು ಒಳ್ಳೆಯದು. ಈ ವಿಷಯದಲ್ಲಿ ಏನಾದರೂ ಹೇಳಿ ಕೇಳಿ ಮಾಡಬೇಕಾದರೆ, ಅದಕ್ಕೆ ಬೇರೆ ಯಾವ ಸಮಯವೂ ಸಿಕ್ಕುವ ಹಾಗೆ ಕಾಣುವುದಿಲ್ಲ" ಎಂದನು.

ಸಿಮಿಯಾಸನು "ಇಲ್ಲ, ನಿನ್ನ ಚರ್ಚೆಯನ್ನೆಲ್ಲಾ ಕೇಳಿದ ಮೇಲೆ ಸಂದೇಹಪಡುವುದಕ್ಕೆ ನನಗೆ ಅವಕಾಶವೇ ಇಲ್ಲ. ಆದರೂ ನಾವು

ಚರ್ಚಿಸಿದ ವಿಷಯ ಎಷ್ಟು ವಿಸ್ತಾರವಾದದ್ದು, ನಾವು ಎಷ್ಟು ಶಕ್ತಿಹೀನರು ಎಂಬುದನ್ನು ಜ್ಞಾಪಿಸಿಕೊಂಡರೆ, ನನ್ನ ಮನಸ್ಸಿನಲ್ಲಿ ಇನ್ನೂ ಸಂದೇಹಗಳು ಉಳಿದೇ ಉಳಿಯುತ್ತವೆ" ಎಂದನು.

ಅದಕ್ಕೆ ಸಾಕ್ರೆಟೀಸನು "ನೀನು ಹೇಳುವುದು ನಿಜ, ಸಿಮಿಯಾಸ್. ಅಷ್ಟೇ ಅಲ್ಲ. ನಾವು ಮೊದಲು ಒಪ್ಪಿಕೊಂಡ ತತ್ವಗಳು ಎಷ್ಟೇ ಸತ್ಯವೆಂದು ತೋರಿದರೂ ಅವುಗಳನ್ನು ನೀನು ಮತ್ತೆ ಪರೀಕ್ಷಿಸಬೇಕು. ಹೀಗೆ ಅವುಗಳನ್ನು ಮನಸ್ಸು ಒಪ್ಪುವವರೆಗೂ ಪರಿಶೀಲಿಸಿದ ಮೇಲೆ, ಮನುಷ್ಯನಿಗೆ ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೆ ವಾದದ ಸರಣಿಯನ್ನು ಅನುಸರಿಸಬಹುದು. ವಿಷಯ ಅಷ್ಟು ಸ್ಪಷ್ಟವಾದರೆ, ನೀನು ಮತ್ತೇನನ್ನೂ ಹುಡುಕಬೇಕಾಗಿಲ್ಲ" ಎಂದನು.

ಸಿಮಿಯಾಸನು ಅದು ನಿಜವೆಂದು ಒಪ್ಪಿಕೊಂಡನು.

"ಅದು ಹಾಗಿರಲಿ, ಮಿತ್ರರೇ, ನಾವು ಇನ್ನೊಂದು ವಿಷಯವನ್ನೂ ಯೋಚಿಸಬೇಕು. ಆತ್ಮ ಅಮರವಾದದ್ದೆನ್ನುವುದು ನಿಜವಾದರೆ ನಾವು 'ಬದುಕು' ಎಂದು ಕರೆಯುವ ಕಾಲ ಮಾತ್ರವೇ ಅಲ್ಲದೆ, ಆತ್ಮ ಕಾಲಾತೀತವೂ ನಿತ್ಯವೂ ಆದದ್ದರಿಂದ ನಾವು ಅದರ ವಿಷಯದಲ್ಲಿ ಸರ್ವದಾ ಬಹಳ ಜಾಗರೂಕರಾಗಿರಬೇಕು. ನಾವು ಅಸಡ್ಡೆಯಿಂದಿರುವುದು ಎಷ್ಟು ಅನರ್ಥಕರವೆಂದು ಈಗ ಗೊತ್ತಾಗುತ್ತದೆ. ಮರಣ ಎಲ್ಲವನ್ನೂ ಕೊನೆಗಾಣಿಸುವುದಾದರೆ, ಅದು ದುಷ್ಟರಿಗೆ ಅತ್ಯಂತ ಲಾಭಕರವಾಗಿರುತ್ತಿತ್ತು; ಏಕೆಂದರೆ, ಅವರು ಮರಣವಾದಾಗ ಆತ್ಮದೊಡನೆ ಶರೀರದಿಂದ ಮಾತ್ರವಲ್ಲದೆ ತಮ್ಮ ದುಷ್ಕೃತ್ಯಗಳಿಂದಲೂ ಬಿಡುಗಡೆ ಹೊಂದುತ್ತಿದ್ದರು. ಆದರೆ ಆತ್ಮ ಅಮರವಾದದ್ದೆಂದು ಈಗ ಗೊತ್ತಾಗಿರುವುದರಿಂದ ಪಾಪದಿಂದ ಬಿಡುಗಡೆ ಹೊಂದುವುದಕ್ಕೆ ಅತ್ಯುತ್ತಮವಾದ ಜ್ಞಾನವನ್ನೂ ಸದ್ಗುಣವನ್ನೂ ಪಡೆಯುವುದೊಂದು ಹೊರತು ಬೇರೆ ಯಾವ ದಾರಿಯೂ ಇಲ್ಲ. ಏಕೆಂದರೆ, ಆತ್ಮ ಇಲ್ಲಿಂದ ಪರಲೋಕಕ್ಕೆ ಹೋಗುವಾಗ ತನ್ನ ಶಿಕ್ಷಣವನ್ನೂ ಸಂಸ್ಕೃತಿಯನ್ನೂ ಬಿಟ್ಟು ಮತ್ತೇನನ್ನೂ ಜೊತೆಯಲ್ಲಿ ತೆಗೆದುಕೊಂಡು ಹೋಗುವುದಿಲ್ಲ; ಇವು ಸತ್ತವರಿಗೆ ತಮ್ಮ ಪ್ರಯಾಣದ ಆರಂಭದಲ್ಲಿಯೇ ಪ್ರಯೋಜನಕರವಾಗಿಯೋ ಹಾನಿಕರವಾಗಿಯೋ ಪರಿಣಮಿಸುತ್ತವೆಂದು ಎಲ್ಲರೂ

ಹೇಳುತ್ತಾರೆ. ಪ್ರತಿಯೊಬ್ಬ ಮನುಷ್ಯನೂ ಬದುಕಿರುವಾಗ ಒಬ್ಬೊಬ್ಬ ಅಧಿದೇವತೆಯ (Genius) ವಶದಲ್ಲಿರುತ್ತಾನೆಂದು ಹೇಳುತ್ತಾರೆ. ಮನುಷ್ಯನು ಸತ್ತಮೇಲೆ ಈ ಅಧಿದೇವತೆ ಅವನನ್ನು ಸತ್ತವರೆಲ್ಲರೂ ಸೇರುವ ಒಂದು ಕಡೆಗೆ ಕರೆದುಕೊಂಡು ಹೋಗುತ್ತಾನೆ. ಸತ್ತವರ ವಿಷಯದಲ್ಲಿ ಅಲ್ಲಿಯ ನ್ಯಾಯಾಧೀಶರು ತೀರ್ಪುಕೊಟ್ಟ ಮೇಲೆ ಅವರು ತಮ್ಮನ್ನು ಈ ಲೋಕದಿಂದ ಅಲ್ಲಿಗೆ ಕರೆದುಕೊಂಡು ಹೋಗಲು ನಿಯುಕ್ತನಾಗಿರುವ ಮಾರ್ಗದರ್ಶಿಯೊಡನೆ ಹೇಡೀಸ್ ಲೋಕಕ್ಕೆ ಹೋಗುವರು. ಅಲ್ಲಿ ತಮಗೆ ಸಲ್ಲಬೇಕಾದದ್ದನ್ನೆಲ್ಲಾ ಪಡೆದು ನಿಯತವಾದಷ್ಟು ಕಾಲ ಅಲ್ಲಿದ್ದಮೇಲೆ, ಎಷ್ಟೋ ಯುಗಗಳು ಮರಳಿ ಹೋದನಂತರ, ಮತ್ತೊಬ್ಬ ಮಾರ್ಗದರ್ಶಿ ಅವನನ್ನು ಮತ್ತೆ ಇಲ್ಲಿಗೆ ಕರೆತರುತ್ತಾನೆ. 'ಟಿಲೆಫಸ್ಸಿ'ನಲ್ಲಿ ಈಸ್ಕಿಲಸ್ಸನು 'ಹೇಡೀಸಿಗೆ ಬಹು ಸುಲಭವಾದ ಮಾರ್ಗವಿದೆ' ಎಂದು ಹೇಳುವುದು ನಿಜವಲ್ಲ. ಆ ಯಾತ್ರೆಯೂ ಆ ಮಾರ್ಗವೂ ಸುಲಭವಲ್ಲ ; ಅಲ್ಲಿರುವುದು ಒಂದೇ ಮಾರ್ಗವೂ ಅಲ್ಲ. ಹಾಗೆ ಒಂದೇ ಮಾರ್ಗವಿದ್ದಿದ್ದರೆ, ಯಾರೂ ದಾರಿ ತಪ್ಪುತ್ತಲೇ ಇರಲಿಲ್ಲ ; ಅಲ್ಲದೆ ಮಾರ್ಗದರ್ಶಿಯ ಆವಶ್ಯಕತೆಯೇ ಇರುತ್ತಿರಲಿಲ್ಲ. ನಮ್ಮವರು ಸತ್ತವರನ್ನು ಸಮಾಧಿಮಾಡುವಾಗ ನಡಸುವ ಕರ್ಮಗಳನ್ನೂ ಮೂರು ದಾರಿಗಳು ಸೇರುವ ಕಡೆಯಲ್ಲಿ ಪರಲೋಕದ ದೇವತೆಗಳಿಗೆ ಬಲಿದಾನಮಾಡುವುದನ್ನೂ ನೋಡಿದರೆ, ಆ ಮಾರ್ಗದಲ್ಲಿ ಅನೇಕ ಕವಲು ದಾರಿಗಳೂ ತಿರುವುಗಳೂ ಇರಬೇಕೆಂದು ತೋರುತ್ತದೆ. ಸುಶಿಕ್ಷಿತವಾದ ಮತ್ತು ಜ್ಞಾನಿಯಾದ ಆತ್ಮ ಆ ಲೋಕದಲ್ಲಿರುವ ವಸ್ತುಗಳನ್ನು ಗಮನದಲ್ಲಿಟ್ಟುಕೊಂಡು ತನ್ನ ಮಾರ್ಗದರ್ಶಿಯ ಹಿಂದೆ ಹೋಗುತ್ತದೆ. ಆದರೆ ಶರೀರದ ಮೇಲಿನ ಆಶೆ ಹೆಚ್ಚಾಗಿರುವ ಆತ್ಮ ನಾನು ಮೊದಲೇ ಹೇಳಿದಂತೆ ತನ್ನ ಶರೀರದ ಮತ್ತು ಪ್ರತ್ಯಕ್ಷ ಪ್ರಪಂಚದ ಬಳಿಯಲ್ಲೇ ಸುಳಿದಾಡುತ್ತಿದ್ದು, ಬಹಳ ಹೆಣಗಾಡಿ ಕಷ್ಟವನ್ನನುಭವಿಸಿದ ಮೇಲೆ ತನ್ನ ಅಧಿದೇವತೆಯ್ಮ ಹಿಂದೆ ಬಲಾತ್ಕಾರಕ್ಕೆ ಸಿಕ್ಕಿ, ಇಷ್ಟವಿಲ್ಲದೆ ಎಳೆದಾಡಿಕೊಂಡು, ಇತರ ಆತ್ಮಗಳು ಇರುವ ಬಳಿಗೆ ಹೋಗುತ್ತದೆ. ಅದು ಪಾಪದಿಂದ ಕಳಂಕಿತವಾಗಿ, ಭಯಂಕರವಾದ ಕೊಲೆಯನ್ನೋ ಅದೇ ತರದ ದುಷ್ಕೃತ್ಯಗಳನ್ನೋ ತನ್ನಂಥ ಇತರ ಆತ್ಮಗಳು ಮಾಡುವ ಪಾಪಗಳನ್ನೋ ಮಾಡಿದ್ದರೆ, ಎಲ್ಲರೂ

ಆ ಆತ್ಮವನ್ನು ದೂರಮಾಡಿ ಅದರ ಸಹವಾಸವನ್ನು ತಪ್ಪಿಸಿಕೊಳ್ಳುತ್ತಾರೆ; ಅದರ ಸಹವಾಸವನ್ನೇ ಒಲ್ಲದಿರುವುದು ಮಾತ್ರವಲ್ಲ; ಅದಕ್ಕೆ ದಾರಿಯನ್ನು ಸಹ ತೋರಿಸುವುದಿಲ್ಲ. ಅದು ಬಹು ದುಃಖವನ್ನು ಅನುಭವಿಸುತ್ತಾ ನಿಯಮಿತಕಾಲ ಕಳೆಯುವವರೆಗೂ ಒಂಟಿಯಾಗಿ ಅಲೆಯುತ್ತಿರುತ್ತದೆ. ಅನಂತರ ಅದಕ್ಕೆ ಅನುಗುಣವಾದ ವಾಸಸ್ಥಾನಕ್ಕೆ ಅದನ್ನು ಬಲಾತ್ಕಾರವಾಗಿ ಎಳೆದೊಯ್ಯುವರು. ಆದರೆ ಪರಿಶುದ್ಧವಾದ, ಮಿತವ್ಯವಹಾರಿಯಾದ ಆತ್ಮಕ್ಕೆ ದೇವತೆಗಳೇ ದಾರಿ ತೋರಿಸಿ, ಅದಕ್ಕೆ ತಮ್ಮ ಸಹವಾಸವನ್ನು ಕೊಡುತ್ತಾರೆ. ಆ ಆತ್ಮವೂ ತನಗೆ ಅನುಗುಣವಾದ ವಾಸಸ್ಥಾನವನ್ನು ಸೇರುತ್ತದೆ.

"ಭೂಮಿಯಲ್ಲಿ ಅತ್ಯಾಶ್ಚರ್ಯಕರವಾದ ಸ್ಥಳಗಳಿವೆಯೆಂದೂ ಅದರ ಸ್ವರೂಪ, ಗಾತ್ರ ಇವೆಲ್ಲವೂ ಭೂಮಿಯನ್ನು ವರ್ಣಿಸುವವರು ಹೇಳುವ ಹಾಗೆ ಇಲ್ಲವೇ ಇಲ್ಲವೆಂದೂ ನನ್ನ ಸ್ನೇಹಿತನೊಬ್ಬನು ನನಗೆ ತಿಳಿಸಿದ್ದಾನೆ."

ಸಿಮಿಯಾಸನು ಇದನ್ನು ಕೇಳಿ "ಹಾಗೆಂದರೇನು ಸಾಕ್ರೆಟೀಸ್? ಭೂಮಿಯ ವಿಚಾರವಾಗಿ ನಾನು ಎಷ್ಟೋ ಕೇಳಿದ್ದೇನೆ. ಆದರೆ ಈ ವಿಷಯದಲ್ಲಿ ನಿನ್ನ ನಂಬಿಕೆಯೇನೆಂದು ತಿಳಿಯಲು ಬಹಳ ಕುತೂಹಲವಿದೆ" ಎಂದನು.

"ಸಿಮಿಯಾಸ್, ಅದನ್ನು ವರ್ಣಿಸುವುದಕ್ಕೆ ಗ್ಲಾಕಸ್ಸಿನ ಚಾತುರ್ಯವೇನೂ ಬೇಕಾಗಿಲ್ಲ; ಸಮರ್ಥಿಸುವುದಕ್ಕೆ ಮಾತ್ರ ಗ್ಲಾಕಸ್ಸಿನ ಚಾತುರ್ಯವೂ ಸಾಲದು. ನನಗೇನೋ ಅದನ್ನು ಸಮರ್ಥಿಸುವುದಕ್ಕಾಗುವುದಿಲ್ಲ, ಅದಲ್ಲದೆ ಸಿಮಿಯಾಸ್, ಸಮರ್ಥಿಸುವುದು ಹೇಗೆಂದು ನನಗೆ ತಿಳಿದಿದ್ದರೂ ನಮ್ಮ ವಾದ ಮುಗಿಯುವುದಕ್ಕೆ ಮುಂಚೆ ನನ್ನ ಜೀವನವೇ ಕೊನೆಗಾಣುತ್ತದೆ. ಆದರೆ ಪ್ರಪಂಚದ ಸ್ವರೂಪ, ಅದರಲ್ಲಿರುವ ದೇಶಗಳು– ಇವುಗಳ ವಿಷಯದಲ್ಲಿ ನನ್ನ ನಂಬಿಕೆಯೇನೆಂದು ಬೇಕಾದರೆ ಹೇಳಬಹುದು; ಅದಕ್ಕೇನೂ ಅಭ್ಯಂತರವಿಲ್ಲ."

ಸಿಮಿಯಾಸನು "ಅಷ್ಟು ಹೇಳಿದರೆ ಸಾಕು" ಎಂದನು.

"ಹಾಗಾದರೆ, ನನ್ನ ನಂಬಿಕೆಯನ್ನು ಹೇಳುತ್ತೇನೆ, ಕೇಳು. ಭೂಮಿ ಅಂತರಿಕ್ಷದ ಮಧ್ಯದಲ್ಲಿರುವ ಒಂದು ಗೋಳಾಕಾರದ ವಸ್ತು. ಆದ್ದರಿಂದ ಅದು

ನಿಲ್ಲುವುದಕ್ಕೆ ಗಾಳಿಯ ಅಥವಾ ಇತರ ಶಕ್ತಿಯ ಆಧಾರ ಆವಶ್ಯಕವಿಲ್ಲ. ಅಂತರಿಕ್ಷದ ಎಲ್ಲಾ ಭಾಗಗಳೂ ಸಮಾನಸ್ಥಿತಿಯಲ್ಲಿರುವುದರಿಂದಲೂ ಭೂಮಿ ಸಮತೂಕದ ನಿಲುವಿನಲ್ಲಿರುವುದರಿಂದಲೂ ಅದು ಬೀಳದಂತೆಯೂ ಯಾವ ಕಡೆಗೂ ಓರೆಯಾಗದಂತೆಯೂ ನಿಂತಿದೆ. ಸಮತೂಕದ ನಿಲುವಿನಲ್ಲಿರುವ ವಸ್ತು ಸಮಾನಸ್ಥಿತಿಯಲ್ಲಿರುವ ವಸ್ತುಗಳ ನಡುವೆ ಇದ್ದರೆ, ಅದು ಯಾವ ಕಡೆಗೂ ಹೆಚ್ಚು ಕಡಮೆಯಾಗಿ ಓರೆಯಾಗುವುದಿಲ್ಲ. ಆದ್ದರಿಂದ ಭೂಮಿ ಸ್ವಲ್ಪವೂ ಓರೆಯಾಗದೆ ಸಮತೂಕದಲ್ಲಿ ನಿಂತಿದೆ. ಇದು ನನ್ನ ಮೊದಲನೆಯ ನಂಬಿಕೆ. ”

ಸಿಮಿಯಾಸನು “ಅದು ಒಪ್ಪಬಹುದಾದದ್ದೇ, ಸಂದೇಹವಿಲ್ಲ” ಎಂದನು.

“ಭೂಮಿ ಅತ್ಯಂತ ವಿಸ್ತಾರವಾದದ್ದು. ಫೇಸಿಸ್ ನದಿಯಿಂದ ಹೆರಾಕ್ಲೀಸನ ಸ್ತಂಭಗಳವರೆಗೂ ಇರುವ ಭಾಗದಲ್ಲಿ ವಾಸಿಸುವ ನಾವು ಜೌಗು ಪ್ರದೇಶದ ಸುತ್ತಲೂ ಕಪ್ಪೆಗಳೂ ಇರುವೆಗಳೂ ಇರುವಂತೆ ಸಮುದ್ರತೀರದ ಬಳಿ ಇರುವ ಬಹು ಸ್ವಲ್ಪಭಾಗದಲ್ಲಿ ಮಾತ್ರ ವಾಸಿಸುತ್ತೇವೆ. ಇಂಥ ಇತರ ಪ್ರದೇಶಗಳಲ್ಲಿ ನಮ್ಮಂತೆಯೇ ಇರುವ ಇತರ ಜನರು ವಾಸಿಸುತ್ತಾರೆಂದು ತೋರುತ್ತದೆ. ಏಕೆಂದರೆ ಭೂಮಿಯ ಮೇಲೆ ಎಲ್ಲೆಲ್ಲಿಯೂ ವಿವಿಧಾಕಾರದ ಮತ್ತು ವಿವಿಧ ಪ್ರಮಾಣದ ಹಳ್ಳಗಳಿವೆ; ಅಲ್ಲೆಲ್ಲಾ ನೀರೂ ಹಿಮವೂ ಗಾಳಿಯೂ ಬಂದು ಸೇರಿಕೊಳ್ಳುತ್ತವೆ. ಆದರೆ ಭೂಮಿ ಮಾತ್ರ ತಾನು ಪರಿಶುದ್ಧವಾಗಿರುವುದಲ್ಲದೆ ಪರಿಶುದ್ಧವಾದ ಅಂತರಿಕ್ಷದಲ್ಲಿದೆ. ನಕ್ಷತ್ರಗಳೂ ಕೂಡ ನಾವು ಈಥರ್ ಎಂದು ಕರೆಯುವ ಅಂತರಿಕ್ಷದಲ್ಲಿಯೇ ಇವೆ. ಭೂಮಿಯ ಹಳ್ಳಗಳಲ್ಲಿ ಸೇರಿಕೊಳ್ಳುವ ನೀರು, ಹಿಮ, ಗಾಳಿ ಇವೆಲ್ಲವೂ ಈಥರಿನ ಗಸಿಯೆನ್ನಬಹುದು. ನಾವು ಭೂಮಿಯ ಮೇಲುಭಾಗದಲ್ಲಿದ್ದೇವೆಂದು ತಿಳಿದಿದ್ದೇವೆ; ಆದರೆ ನಿಜವಾಗಿಯೂ ನಾವು ವಾಸಿಸುತ್ತಿರುವುದು ಈ ಹಳ್ಳಗಳಲ್ಲಿ. ಒಬ್ಬನು ಸಮುದ್ರದ ತಳದಲ್ಲಿ ವಾಸಮಾಡುತ್ತಿದ್ದಾನೆಂದಿಟ್ಟುಕೊಳ್ಳೋಣ. ತಾನು ವಾಸಮಾಡುತ್ತಿರುವುದು ಸಮುದ್ರದ ಮೇಲುಭಾಗದಲ್ಲೇ ಎಂದೂ ತನಗೆ ನಕ್ಷತ್ರಗಳು ನೀರಿನ ಮೂಲಕ ಕಾಣುವುದರಿಂದ

ಆ ಸಮುದ್ರವೇ ಅಂತರಿಕ್ಷವೆಂದೂ ಅವನು ಭಾವಿಸಬಹುದು. ಅವನು ಬಹಳ ಜಡನಾದ್ದರಿಂದಲೂ ಶಕ್ತಿಹೀನನಾದ್ದರಿಂದಲೂ ಸಮುದ್ರದ ಮೇಲಕ್ಕೆ ಬಂದು ತನ್ನ ತಲೆಯನ್ನು ನೀರಿನಿಂದ ಹೊರಕ್ಕೆ ಎತ್ತಲಾರನು. ಆದ್ದರಿಂದ ನಮ್ಮ ಪ್ರಪಂಚ ತನ್ನ ಪ್ರಪಂಚಕ್ಕಿಂತ ಎಷ್ಟು ಪರಿಶುದ್ಧವಾದದ್ದು, ಸುಂದರ ವಾದದ್ದು ಎಂಬುದನ್ನು ಅವನು ಕಂಡೂ ಅರಿಯನು, ನೋಡಿದವರಿಂದ ಕೇಳಿಯೂ ಅರಿಯನು. ಈಗ ನಾವೂ ಅದೇ ಸ್ಥಿತಿಯಲ್ಲಿದ್ದೇವೆ. ನಾವು ಯಾವುದೋ ಹಳ್ಳದಲ್ಲಿದ್ದುಕೊಂಡು ಭೂಮಿಯ ಮೇಲುಭಾಗದಲ್ಲಿಯೇ ಇರುವೆವೆಂದು ಭ್ರಾಂತಿಗೊಂಡಿದ್ದೇವೆ; ಗಾಳಿಯನ್ನೇ ಅಂತರಿಕ್ಷವೆಂದು ಕರೆದು ನಕ್ಷತ್ರಗಳು ಅದರಲ್ಲಿಯೇ ತಿರುಗುತ್ತವೆಂದು ಭಾವಿಸುತ್ತೇವೆ. ಆದರೆ ನಿಜಸ್ಥಿತಿಯೇನೆಂದರೆ—ಶಕ್ತಿಹೀನರಾಗಿಯೂ ಜಡರಾಗಿಯೂ ಇರುವುದರಿಂದ ನಾವು ಗಾಳಿಯ ಮೇಲುಭಾಗಕ್ಕೆ ಹೋಗಲಾರೆವು. ಅಲ್ಲಿಗೆ ತಲಪುವುದು ಸಾಧ್ಯವಾದರೆ ಅಥವಾ ಪಕ್ಷಿಗಳಂತೆ ರೆಕ್ಕೆಗಳನ್ನು ಪಡೆದು ಮೇಲಕ್ಕೆ ಹಾರ ಬಹುದಾದರೆ, ಮೀನು ನೀರಿನಿಂದ ಮೇಲಕ್ಕೆ ತಲೆಯನ್ನೆತ್ತಿ ನಮ್ಮ ಪ್ರಪಂಚ ವನ್ನು ನೋಡುವಂತೆ ನಾವು ಮುಂದಿನ ಪ್ರಪಂಚವನ್ನು ನೋಡಿ ತಡೆದು ಕೊಳ್ಳುವ ಶಕ್ತಿ ಮನುಷ್ಯನಿಗಿದ್ದರೆ, ಅವನು ಅದೇ ನಿಜವಾದ ತೇಜಸ್ಸು, ನಿಜವಾದ ಭೂಲೋಕ ಎಂದು ಒಪ್ಪಿಕೊಳ್ಳುತ್ತಾನೆ. ನಮ್ಮ ಭೂಮಿ, ಅದರಲ್ಲಿರುವ ಕಲ್ಲುಗಳು ನಮ್ಮ ಸುತ್ತಲೂ ಇರುವ ದೇಶ ಇವೆಲ್ಲವೂ ಸಮುದ್ರ ದಲ್ಲಿ ಎಲ್ಲಾ ಪದಾರ್ಥಗಳೂ ಉಪ್ಪುತಿಂದು ಕೆಟ್ಟುಹೋಗುವಂತೆ ಕೆಟ್ಟು ಹೋಗುತ್ತವೆ. ಘನವಾದದ್ದೂ ಉತ್ತಮವಾದದ್ದೂ ಏನೂ ಸಮುದ್ರದಲ್ಲಿ ಬೆಳೆಯುವುದಿಲ್ಲ; ಯಾವ ಪದಾರ್ಥವೂ ಕುಂದುಕೊರತೆಗಳಿಲ್ಲದೆ ಇರುವು ದಿಲ್ಲ. ಭೂಮಿ ಇರುವ ಕಡೆಗಳಲ್ಲಿಯೂ ಗುಹೆಗಳು, ಮರಳು, ಎಲ್ಲೆಯಿಲ್ಲದ ಮಣ್ಣು, ಕೆಸರುಗಳುಳ್ಳ ಜೌಗು ಪ್ರದೇಶಗಳು—ಇಷ್ಟು ಮಾತ್ರ ಇವೆ. ಈ ಪ್ರದೇಶಗಳು ನಮ್ಮ ಪ್ರಪಂಚದ ಸುಂದರದೃಶ್ಯಗಳೊಡನೆ ಹೋಲಿಕೆಗೂ ಅರ್ಹವಲ್ಲ. ಹಾಗೆಯೇ ನಮ್ಮ ಪ್ರಪಂಚ ಆ ಮುಂದಿನ ಪ್ರಪಂಚದೊಡನೆ ಹೋಲಿಕೆಗೆ ಸ್ವಲ್ಪವೂ ಅರ್ಹವಲ್ಲ. ಸ್ವರ್ಗದ ಹತ್ತಿರವೂ ಅಂತರಿಕ್ಷದ ಕೆಳಗೂ ಇರುವ ಆ ಬೇರೊಂದು ಭೂಮಿಯ ವಿಷಯವಾಗಿ ನೀನು ಕೇಳತಕ್ಕದ್ದಾದ ಸೊಗಸಾದ ಕಥೆಯನ್ನು ಹೇಳಬಲ್ಲೆ, ಸಿಮಿಯಾಸ್."

ಸಿಮಿಯಾಸನು "ಆ ಕಥೆಯನ್ನು ಕೇಳಲು ನಾವು ಆತುರರಾಗಿದ್ದೇವೆ, ಸಾಕ್ರೆಟೀಸ್" ಎಂದನು.

"ಹಾಗಾದರೆ ಕೇಳು ಸಿಮಿಯಾಸ್, ಇದೇ ನಾನು ಹೇಳುವ ಕಥೆ: ಆ ಭೂಮಿ ಮೇಲಿನಿಂದ ನೋಡುವವನಿಗೆ ಹನ್ನೆರಡು ಸೀಳು ಚರ್ಮದಿಂದ ಚೆಂಡುಮಾಡುತ್ತಾರಲ್ಲ, ಅಂಥ ಚೆಂಡಿನಂತೆ ಕಾಣುತ್ತದೆ. ಅದು ವಿಧ ವಿಧವಾದ ಬಣ್ಣಗಳಿಂದ ಕೂಡಿದೆ; ನಮ್ಮ ಚಿತ್ರಗಾರರು ಉಪಯೋಗಿಸುವುದು ಆ ಬಣ್ಣಗಳ ಮಾದರಿಗಳು ಮಾತ್ರ. ಅಲ್ಲಿ ಭೂಮಿಯೆಲ್ಲಾ ಈ ಬಣ್ಣಗಳಿಂದಲೂ ನಮ್ಮ ಬಣ್ಣಗಳಿಗಿಂತ ಬಹು ಪ್ರಕಾಶಮಾನವಾಗಿ ಪರಿಶುದ್ಧವಾಗಿ ಇರುವ ಇತರ ಬಣ್ಣಗಳಿಂದಲೂ ಮಾಡಿದ್ದು. ಅಲ್ಲಿ ಅತಿ ಸುಂದರವಾದ ನೀಲಿಗೆಂಪೂ ಹೊಂಬಣ್ಣದ ಸೊಬಗೂ ಸೀಮೆಯಸುಣ್ಣಕ್ಕಿಂತಲೂ ಹಿಮಕ್ಕಿಂತಲೂ ಬಿಳಿಯದಾದ ಬಿಳುಪೂ ಇವೆ. ಭೂಮಿ ಈ ಬಣ್ಣಗಳಿಂದಲೂ ಮನುಷ್ಯನು ಎಂದೂ ಕಾಣದಷ್ಟು ಸೌಂದರ್ಯ ವೈವಿಧ್ಯಗಳುಳ್ಳ ಇತರ ಬಣ್ಣಗಳಿಂದಲೂ ಮಾಡಿದ್ದು. ನಾನು ಮೊದಲು ಹೇಳಿದಂತೆ ನೀರು ಗಾಳಿಗಳಿಂದ ತುಂಬಿದ ಹಳ್ಳಗಳೂ ಸಹ ತಮ್ಮದೇ ಒಂದು ಬಣ್ಣವನ್ನು ತಳೆದು ಸುತ್ತಿನ ವರ್ಣವೈವಿಧ್ಯದಲ್ಲಿ ಬೆಳಕಿನಂತೆ ಪ್ರಕಾಶಿಸುತ್ತವೆ. ಆದ್ದರಿಂದ ಭೂಮಿ ವೈವಿಧ್ಯವುಳ್ಳದ್ದಾದರೂ ಒಂದೇ ಒಂದು ಮೇಲುಮೈಯನ್ನು ಹೊಂದಿರುವಂತೆ ಕಾಣುತ್ತದೆ. ಈ ಸುಂದರ ಭೂಮಿಯಲ್ಲಿ ಬೆಳೆಯುವ ಮರಗಳು, ಹೂವುಗಳು, ಹಣ್ಣುಗಳು ಎಲ್ಲವೂ ಅದೇ ಪ್ರಮಾಣದಲ್ಲಿ ಇಲ್ಲಿಗಿಂತ ಬಹು ಸುಂದರವಾಗಿರುತ್ತವೆ. ಅಲ್ಲಿಯ ಬೆಟ್ಟಗಳಲ್ಲಿರುವ ಕಲ್ಲುಗಳು ಅದೇ ಪ್ರಮಾಣದಲ್ಲಿ ನಯವಾಗಿಯೂ ಗಾಜಿನಂತೆ ಸ್ವಚ್ಛವಾಗಿಯೂ ಇರುತ್ತವೆ. ನಾವು ಇಲ್ಲಿ ಬಹಳ ಬೆಲೆ ಕಟ್ಟುವ ಪಚ್ಚೆ ಮೊದಲಾದ ಕಲ್ಲುಗಳು ಅಲ್ಲಿರುವ ಕಲ್ಲಿನ ಚೂರುಗಳು; ಅಲ್ಲಿಯ ಕಲ್ಲುಗಳೆಲ್ಲವೂ ನಮ್ಮ ರತ್ನಗಳಂತೆಯೇ ಇರುತ್ತವೆ. ಅವುಗಳಿಗಿಂತಲೂ ಸುಂದರವಾಗಿಯೂ ಇರುತ್ತವೆ. ಅದಕ್ಕೆ ಕಾರಣವೇನೆಂದರೆ, ನಮ್ಮ ರತ್ನಗಳು ಕೆಟ್ಟಿರುವಂತೆ ಪ್ರಾಣಿಗಳಲ್ಲಿಯೂ ಗಿಡಗಳಲ್ಲಿಯೂ ಕುರೂಪವನ್ನೂ ರೋಗವನ್ನೂ ಉಂಟುಮಾಡುವ ಉಪ್ಪುನೀರಿನಂಥ ವಸ್ತುಗಳಿಂದ ಅವು ಕೊಳಕು ತಿಂದು ಕೆಡದೆ ಪರಿಶುದ್ಧವಾಗಿರುತ್ತವೆ. ಈ ಕಲ್ಲುಗಳೂ ಇವುಗಳ ಜೊತೆಗೆ ಚಿನ್ನ ಬೆಳ್ಳಿ

ಮುಂತಾದುವೂ ಆ ನಿಜವಾದ ಭೂಮಿಯನ್ನು ಮನೋಹರವಾಗುವಂತೆ ಅಲಂಕರಿಸುತ್ತವೆ. ಅವು ಹೇರಳವಾಗಿಯೂ ಅಧಿಕ ಗಾತ್ರದಲ್ಲೂ ಇರುವುದಲ್ಲದೆ ಎಲ್ಲಾ ಕಡೆಗಳಲ್ಲಿಯೂ ಸಿಕ್ಕುತ್ತವೆ. ಇವುಗಳನ್ನೆಲ್ಲ ಹೊಂದಿರುವ ಆ ಭೂಮಿಯನ್ನು ನೋಡುವವನೇ ನಿಜವಾಗಿಯೂ ಧನ್ಯ. ಅಲ್ಲಿ ಅನೇಕ ಪ್ರಾಣಿಗಳೂ ಜನರೂ ಒಳದೇಶದಲ್ಲಿ ವಾಸಿಸುತ್ತಾರೆ. ನಾವು ಸಮುದ್ರದ ಸುತ್ತಲೂ ವಾಸಿಸುವಂತೆ ಇತರ ಜನರು ಗಾಳಿಯ ಸುತ್ತಲೂ ವಾಸಿಸುತ್ತಾರೆ. ಮತ್ತೆ ಕೆಲವರು ಭೂಖಂಡದ ಹತ್ತಿರದಲ್ಲಿ ಸುತ್ತುಗಟ್ಟಿ ಪ್ರವಹಿಸುವ ಗಾಳಿಯ ನಡುವೆ ದ್ವೀಪಗಳಲ್ಲಿ ವಾಸಿಸುತ್ತಾರೆ. ಒಟ್ಟಿನಲ್ಲಿ ನಾವು ನೀರನ್ನೂ ಸಮುದ್ರವನ್ನೂ ಉಪಯೋಗಿಸುವಂತೆ ಅವರು ಗಾಳಿಯನ್ನೂ, ನಾವು ಗಾಳಿಯನ್ನು ಉಪಯೋಗಿಸುವಂತೆ ಅವರು ಈಥರನ್ನೂ ಉಪಯೋಗಿಸುತ್ತಾರೆ. ಅಲ್ಲಿ ಎಲ್ಲಾ ಋತುಗಳಲ್ಲಿಯೂ ವಾಯುಗುಣ ಬಹು ಉತ್ತಮವಾಗಿರುವುದರಿಂದ ಅವರಿಗೆ ರೋಗವಿಲ್ಲ; ನಮಗಿಂತ ಬಹಳ ಹೆಚ್ಚು ಕಾಲ ಬದುಕುತ್ತಾರೆ. ನೀರಿಗಿಂತ ಗಾಳಿ ಎಷ್ಟು ಶುದ್ಧವಾಗಿದೆಯೋ ಗಾಳಿಗಿಂತ ಈಥರ್ ಎಷ್ಟು ಶುದ್ಧವಾಗಿದೆಯೋ ಅದೇ ಪ್ರಮಾಣದಲ್ಲಿ ಅವರ ಕಣ್ಣು, ಕಿವಿ, ಮೂಗು ಮೊದಲಾದ ಇಂದ್ರಿಯಗಳು ನಮ್ಮ ಇಂದ್ರಿಯಗಳಿಗಿಂತ ಹೆಚ್ಚು ಚುರುಕಾಗಿರುತ್ತವೆ. ಅವರಿಗೂ ಪವಿತ್ರಸ್ಥಳಗಳೂ ದೇವಾಲಯಗಳೂ ಇವೆ. ಅಲ್ಲಿ ನಿಜವಾಗಿಯೂ ದೇವತೆಗಳು ವಾಸಿಸುತ್ತಾರೆ. ಅಲ್ಲಿಯ ಜನರು ದೇವವಾಣಿಯನ್ನು ಕೇಳುತ್ತಾರೆ. ದೇವತೆಗಳಿಂದ ತಮ್ಮ ಪ್ರಶ್ನೆಗಳಿಗೆ ಉತ್ತರಪಡೆಯುತ್ತಾರೆ. ಅವರನ್ನು ಕನಸಿನಲ್ಲಿ ಕಾಣುತ್ತಾರೆ. ಮುಖತಃ ಅವರ ಸಹವಾಸವನ್ನೂ ಹೊಂದುತ್ತಾರೆ. ಆ ಜನರು ಸೂರ್ಯಚಂದ್ರರನ್ನೂ ನಕ್ಷತ್ರಗಳನ್ನೂ ಅವುಗಳ ನಿಜಸ್ವರೂಪದಲ್ಲಿಯೇ ಕಾಣುತ್ತಾರೆ. ಇತರ ವಿಷಯಗಳಲ್ಲಿಯೂ ಕೂಡ ಅವರು ಇದೇ ರೀತಿಯಲ್ಲಿ ಸುಖಿಗಳಾಗಿದ್ದಾರೆ.

"ಒಟ್ಟಿನಲ್ಲಿ, ಇದೇ ಭೂಮಿಯ ಮತ್ತು ಅದರ ಮೇಲಿರುವುದರ ಸ್ವರೂಪ. ಅದರ ಮೇಲೆ ಎಲ್ಲೆಲ್ಲಿಯೂ ನಾವು ವಾಸಿಸುತ್ತಿರುವ ಹಳ್ಳಗಳಿಗಿಂತಲೂ ಹೆಚ್ಚು ಆಳವಾದ ಮತ್ತು ವಿಸ್ತಾರವಾದ ಹಳ್ಳಗಳಲ್ಲಿ ಅನೇಕ ದೇಶಗಳಿವೆ. ಇನ್ನು ಕೆಲವು ಸ್ಥಳಗಳು ಮತ್ತಷ್ಟು ಆಳವಾಗಿವೆ. ಆದರೆ ಅವು ನಮ್ಮ ದೇಶದ ಬಾಗಿಲುಗಳಿಗಿಂತಲೂ ಇಕ್ಕಟ್ಟಾದ ಬಾಗಿಲುಗಳುಳ್ಳವು;

ಮತ್ತೆ ಕೆಲವು ನಮ್ಮ ದೇಶಕ್ಕಿಂತಲೂ ಕಡಮೆ ಆಳವಾಗಿದ್ದರೂ ವಿಸ್ತಾರವಾಗಿವೆ. ಭೂಮಿಯ ಒಳಗಡೆ ಇರುವ ಸಣ್ಣ ದೊಡ್ಡ ಮಾರ್ಗಗಳು ಈ ದೇಶಗಳನ್ನು ಒಂದನ್ನೊಂದಕ್ಕೆ ಸೇರಿಸುತ್ತವೆ. ಇವುಗಳೊಳಗಿನಿಂದಲೂ ಇವುಗಳೊಳಕ್ಕೂ ಅಗಾಧವಾದ ಚಟ್ಟಿಯೊಳಕ್ಕೆ ಹರಿಯುವಂತೆ ಒಂದು ಮಹಾಪ್ರವಾಹ ಹರಿಯುತ್ತದೆ. ಭೂಮಿಯೊಳಗೆ ಅಂತರ್ಗಾಮಿಗಳಾದ ಎಂದೆಂದಿಗೂ ಒಣಗದ ಮಹಾನದಿಗಳೂ ಬಿಸಿನೀರಿನ ಮತ್ತು ತಣ್ಣೀರಿನ ಚಿಲುಮೆಗಳೂ ಒಂದು ಮಹತ್ತರವಾದ ಅಗ್ನಿಯೂ ಬೆಂಕಿಯ ನದಿಗಳೂ ಸಿಸಿಲಿಯಲ್ಲಿರುವ ಮಣ್ಣಿನ ನದಿಗಳ ಮತ್ತು ಅವುಗಳನ್ನು ಹಿಂಬಾಲಿಸಿ ಬರುವ ಲಾವಾಪ್ರವಾಹಗಳ ಹಾಗೆ ಕೆಲವು ತಿಳಿಯಾದ ಮತ್ತು ಕೆಲವು ಬಗ್ಗಡವಾದ ದ್ರವರೂಪದಲ್ಲಿರುವ ಮಣ್ಣಿನ ನದಿಗಳೂ ಇವೆ. ಪ್ರತಿಯೊಂದು ಪ್ರವಾಹವೂ ನಾನು ಮುಂಚೆ ಹೇಳಿದ ಹಳ್ಳಗಳಿಗೆ ಬಂದಾಗ ಆ ಪ್ರದೇಶ ಅದರಿಂದ ತುಂಬಿಹೋಗುತ್ತದೆ. ಭೂಮಿಯೊಳಗೆ ಒಂದು ವಿಧವಾದ ಉಯ್ಯಾಲೆ ಇವೆಲ್ಲವನ್ನೂ ಮೇಲಕ್ಕೂ ಕೆಳಕ್ಕೂ ತೂಗುತ್ತದೆ. ಅದಕ್ಕೆ ಕಾರಣವನ್ನು ಹೇಳುತ್ತೇನೆ, ಕೇಳು. ಮೇಲೆ ಹೇಳಿದ ಪ್ರದೇಶಗಳಿಗಿಂತಲೂ ವಿಸ್ತಾರವಾದ, ಭೂಮಿಯನ್ನು ಸಂಪೂರ್ಣವಾಗಿ ಸೀಳಿಕೊಂಡು ಹೋಗುವ ಕಮರಿಯೊಂದಿದೆ. ಹೋಮರನು 'ದೂರದಲ್ಲಿ, ಭೂತಲದ ಆಳದ ಆಳವಿರುವ ಬಳಿಯಲ್ಲಿ' ಎಂದು ವರ್ಣಿಸಿರುವುದು ಈ ಕಮರಿಯನ್ನೇ. ಇತರ ಕಡೆಗಳಲ್ಲಿ ಹೋಮರನೂ ಇತರ ಕವಿಗಳೂ ಅದನ್ನು ಟಾರ್ಟರಸ್ ಎಂದು ಕರೆದಿರುವರು. ಈ ಕಮರಿಯ ಒಳಕ್ಕೂ ಹೊರಕ್ಕೂ ಪ್ರವಾಹಗಳು ಹರಿಯುವುದರಿಂದ ನಾನು ಈಗ ಹೇಳಿದ ಉಯ್ಯಾಲೆಯ ಚಲನೆಯುಂಟಾಗುತ್ತದೆ. ಈ ನದಿಗಳು ತಾವು ಯಾವ ಪ್ರದೇಶದಲ್ಲಿ ಹರಿಯುತ್ತವೋ ಅಲ್ಲಿಯ ಭೂಗುಣವನ್ನು ಹೊಂದಿರುತ್ತವೆ. ಅವು ಕಮರಿಯ ಒಳಕ್ಕೂ ಹೊರಕ್ಕೂ ಹರಿಯುತ್ತಿರುವುದಕ್ಕೆ ಕಾರಣವೇನೆಂದರೆ—ಆ ನೀರಿನಂಥ ವಸ್ತುವಿಗೆ ನಿಲ್ಲುವುದಕ್ಕೆ ಪಾತ್ರವಾಗಲಿ ಆಧಾರವಾಗಲಿ ಇಲ್ಲ. ಆದ್ದರಿಂದ ಅದು ತೂಗಾಡುತ್ತಾ ಮೇಲಕ್ಕೂ ಕೆಳಕ್ಕೂ ನುಗ್ಗುತ್ತಿರುತ್ತದೆ. ಆ ಪ್ರದೇಶದ ಸುತ್ತಲೂ ಇರುವ ಗಾಳಿಯೂ ವಾಯುವೂ ಹೀಗೆಯೇ ಮಾಡುತ್ತಿರುತ್ತವೆ; ನಾವು ಉಸಿರಾಡುವಾಗ ಗಾಳಿ ಮೇಲಕ್ಕೂ ಕೆಳಕ್ಕೂ ಒಳಕ್ಕೂ ಹೊರಕ್ಕೂ ಸದಾ ತಿರುಗುತ್ತಿರುವಂತೆ

ಅಲ್ಲಿಯೂ ಇವು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೂ ಮೇಲಕ್ಕೂ ಕೆಳಕ್ಕೂ ನೀರಿನ ಹಿಂದೆಯೇ ನುಗ್ಗುತ್ತಿರುತ್ತವೆ. ಹೀಗೆ ಗಾಳಿ ನೀರಿನೊಡನೆ ಒಳಕ್ಕೂ ಹೊರಕ್ಕೂ ನುಗ್ಗುವಾಗ ಭಯಂಕರವಾದ ದುರ್ದಮವಾದ ಸುಂಟರಗಾಳಿಗಳೇಳುತ್ತವೆ. ನಾವು ಭೂಮಿಯ ಕೆಳಭಾಗವೆಂದು ಕರೆಯುವ ಕಡೆಗಳಿಗೆ ಬಲವಾಗಿ ನೀರು ನುಗ್ಗಿದಾಗ ಅದು ಆ ಸ್ಥಳದಲ್ಲೆಲ್ಲಾ ಹರಿದು ನಾವು ಯಂತ್ರಗಳಿಂದ ನೀರು ತುಂಬುವಂತೆ ಆ ಸ್ಥಳವನ್ನೆಲ್ಲಾ ತುಂಬುತ್ತದೆ. ಅನಂತರ ಅದು ಮತ್ತೆ ಅಲ್ಲಿಂದ ಹೊರಕ್ಕೆ ಹರಿದು ಅಲ್ಲಿಯ ನದಿಗಳನ್ನು ಮತ್ತೆ ತುಂಬುತ್ತದೆ. ಅನಂತರ ಆ ನದಿಗಳು ಭೂಮಿಯೊಳಗಡೆ ಕಾಲುವೆಗಳಂತಿರುವ ಮಾರ್ಗಗಳಲ್ಲಿ ಹರಿದು ಅನೇಕ ಸ್ಥಳಗಳಿಗೆ ಹೋಗಿ, ಸಮುದ್ರಗಳನ್ನೂ ಸರೋವರಗಳನ್ನೂ ನದಿಗಳನ್ನೂ ಚಿಲುಮೆಗಳನ್ನೂ ಉಂಟು ಮಾಡುತ್ತವೆ. ಆ ಮೇಲೆ ಅವು ಮತ್ತೆ ಭೂಮಿಯ ಒಳಕ್ಕಿಳಿದು ಅವುಗಳಲ್ಲಿ ಕೆಲವು ಬಹುದೂರದಲ್ಲಿರುವ ಅನೇಕ ಸ್ಥಳಗಳನ್ನು ಸುತ್ತಿಕೊಂಡೂ, ಮತ್ತೆ ಕೆಲವು ಸ್ವಲ್ಪ ದೂರದಲ್ಲಿರುವ ಕೆಲವು ಸ್ಥಳಗಳನ್ನು ಮಾತ್ರ ಸುತ್ತಿಕೊಂಡೂ, ಮತ್ತೆ ಕೆಲವು ತಾವು ಉದ್ಭವಿಸಿದ ಸ್ಥಳಕ್ಕಿಂತ ಸ್ವಲ್ಪ ಕೆಳಗೆ, ಮತ್ತೆ ಕೆಲವು ಇನ್ನೂ ಸ್ವಲ್ಪ ಕೆಳಗೆ, ಅಂತೂ ಎಲ್ಲವೂ ತಮ್ಮ ಮೂಲದಿಂದ ಕೆಳಗೇ— ಟಾರ್ಟರಸ್ಸಿಗೆ ಬೀಳುತ್ತವೆ. ಅವುಗಳಲ್ಲಿ ಕೆಲವು ಎದುರುಗಡೆಯಲ್ಲಿಯೂ ಇನ್ನು ಕೆಲವು ಅದೇ ಕಡೆಯಲ್ಲಿಯೂ ಮತ್ತೆ ಉಕ್ಕಿ ಹರಿಯುತ್ತವೆ. ಇನ್ನು ಕೆಲವು ಹಾವಿನ ಸುರುಳಿಯಂತೆ ಅನೇಕ ಸುರುಳಿಯಾಗಿ ಭೂಮಿಯ ಸುತ್ತಲೂ ಎರಡು ಸಲವೋ ಮೂರು ಸಲವೋ ಸುತ್ತಿಕೊಂಡು ತಮಗೆ ಸಾಧ್ಯವಾದಷ್ಟು ದೂರ ಭೂಮಿಯೊಳಕ್ಕೆ ಇಳಿದು ಅನಂತರ ಮತ್ತೆ ಆ ಕಮರಿಗೆ ಬಂದು ಬೀಳುತ್ತವೆ. ಎರಡು ಕಡೆಗೆ ಹೋದ ನದಿಗಳೂ ಭೂಮಿಯ ಮಧ್ಯದವರೆಗೆ ಇಳಿಯಬಲ್ಲವು ; ಅಲ್ಲಿಂದ ಮುಂದೆ ಹೋಗಲಾರವು; ಏಕೆಂದರೆ ಅಲ್ಲಿಂದಾಚೆಗೆ ಅವು ಎತ್ತರವಾದ ಪ್ರದೇಶಕ್ಕೆ ಹತ್ತಬೇಕಾಗುತ್ತದೆ.

“ಇಂಥ ಅದ್ಭುತವಾದ, ಅನೇಕ ವಿಧವಾದ, ನದಿಗಳು ಎಷ್ಟೋ ಇವೆ ; ಆದರೆ ಅವುಗಳಲ್ಲಿ ಮುಖ್ಯವಾದುವು ನಾಲ್ಕು. ಈ ನಾಲ್ಕರಲ್ಲಿ ಅತ್ಯಂತ ಹೊರಗಡೆ ಇರುವ, ಮತ್ತು ದೊಡ್ಡದಾದ, ಭೂಮಿಯ ಸುತ್ತಲೂ ಹರಿಯುವ ನದಿಗೆ

ಓಷಿಯೇನಸ್ ಎಂದು ಹೆಸರು. ಇದಕ್ಕೆ ಎದುರುದಿಕ್ಕಿನಲ್ಲಿ ಏಕಿರಾನ್ ನದಿ ಹರಿಯುತ್ತದೆ. ಅದು ಮರುಭೂಮಿಗಳಲ್ಲಿಯೂ ಅಲ್ಲಿಂದ ಭೂಮಿಯೊಳಗೂ ಹರಿದು ಕೊನೆಗೆ ಏಕಿರೂಸಿಯನ್ ಸರೋವರವನ್ನು ಸೇರುತ್ತದೆ. ಸತ್ತವರ ಆತ್ಮಗಳು ಸಾಧಾರಣವಾಗಿ ಹೋಗುವುದು ಅಲ್ಲಿಗೇ. ನಿಯಮವಿರುವಂತೆ ಕೆಲವು ಆತ್ಮಗಳು ಸ್ವಲ್ಪ ಕಾಲವೂ ಇನ್ನು ಕೆಲವು ಹೆಚ್ಚು ಕಾಲವೂ ಅಲ್ಲಿದ್ದ ಮೇಲೆ ಮತ್ತೆ ಪ್ರಾಣಿಗಳಾಗಿ ಹುಟ್ಟುವುದಕ್ಕಾಗಿ ಕಳುಹಿಸಲ್ಪಡುವುವು. ಮೂರನೆಯ ನದಿ ಇವೆರಡರ ನಡುವೆ ಹುಟ್ಟಿ, ತನ್ನ ಮೂಲದ ಹತ್ತಿರದಲ್ಲಿಯೇ ಇರುವ ವಿಸ್ತಾರವಾದ ಬೆಂಕಿಯ ಪ್ರದೇಶಕ್ಕೆ ಬಿದ್ದು, ಅಲ್ಲಿ ನಮ್ಮ ಮೆಡಿಟೆರೇನಿಯನ್ ಸಮುದ್ರಕ್ಕಿಂತಲೂ ದೊಡ್ಡದಾದ, ಕುದಿಯುತ್ತಿರುವ ಕೆಸರುಮಣ್ಣಿನಿಂದಲೂ ನೀರಿನಿಂದಲೂ ಕೂಡಿದ ಸರೋವರವಾಗುತ್ತದೆ. ಅಲ್ಲಿಂದ ಹಾಗೆಯೇ ಕೆಸರಾಗಿ, ಬಗ್ಗಡವಾಗಿ, ಆ ಪ್ರವಾಹ ಭೂಮಿಯ ಸುತ್ತಲೂ ಅನೇಕ ಸಲ ಸುತ್ತುಹಾಕಿ ಹರಿದ ಮೇಲೆ ಏಕಿರೂಸಿಯನ್ ಸರೋವರದ ಎಲ್ಲೆಗೆ ಬರುತ್ತದೆ. ಆದರೆ ಆ ಸರೋವರದ ನೀರಿನೊಡನೆ ಬೆರೆಯದೆ ಮತ್ತೆ ಭೂಮಿಯೊಳಗೆ ಅನೇಕ ಸುರುಳಿ ಸುತ್ತಿಕೊಂಡು ಕೊನೆಗೆ ಟಾರ್ಟರಸ್ಸಿನ ಕೆಳಭಾಗಕ್ಕೆ ಹೋಗಿ ಬೀಳುತ್ತದೆ. ಈ ನದಿಯನ್ನು ಜನರು ಪೈರಿಫ್ಲೆಜೆಥ್ ಎಂದು ಕರೆಯುತ್ತಾರೆ. ಇದರ ಕೆಲವು ಭಾಗಗಳು ಭೂಮಿಯ ಮೇಲಕ್ಕೆ ಉಕ್ಕಿ, ಇಲ್ಲಿಯ ಲಾವಾ ಪ್ರವಾಹಗಳಾಗುತ್ತವೆ. ನಾಲ್ಕನೆಯ ನದಿ ಇದಕ್ಕೆ ಎದುರುಕಡೆ ಹೊರಹೊರಡುತ್ತದೆ. ಅದು ಮೊದಲು ಭಯಂಕರವಾದ ಕರಿನೀಲಿಯ ಬಣ್ಣದ ಕಾಡುಪ್ರದೇಶಕ್ಕೆ ಬೀಳುತ್ತದೆಂದು ಹೇಳುತ್ತಾರೆ. ಇದಕ್ಕೆ ಸ್ಟಿಜಿಯನ್ ಪ್ರವಾಹವೆಂದೂ ಇದರಿಂದ ಉಂಟಾಗುವ ಸರೋವರಕ್ಕೆ ಸ್ಟಿಕ್ಸ್ ಎಂದೂ ಹೆಸರು. ಈ ನದಿ ಸರೋವರಕ್ಕೆ ಬಿದ್ದ ಮೇಲೆ ಅದರ ನೀರಿನಿಂದ ವಿಚಿತ್ರವಾದ ಶಕ್ತಿಗಳನ್ನು ಪಡೆಯುತ್ತದೆ. ಅನಂತರ ಭೂಮಿಯೊಳಕ್ಕೆ ಇಳಿದು ಪೈರಿಫ್ಲೆಜೆಥನ್ನಿಗೆ ಎದುರುದಿಕ್ಕಿನಲ್ಲೇ ಭೂಮಿಯನ್ನು ಸುತ್ತಿ ಅದನ್ನು ಏಕಿರೂಸಿಯನ್ ಸರೋವರದ ಬಳಿ ಎದುರುಗೊಳ್ಳುತ್ತದೆ. ಇದರ ನೀರೂ ಮತ್ತೆ ಯಾವ ನೀರಿನೊಡನೆಯೂ ಬೆರೆಯುವುದಿಲ್ಲ. ಅದು ವರ್ತುಳಾಕಾರವಾಗಿ ಹರಿದು ಪೈರಿಫ್ಲೆಜೆಥನ್ನಿಗೆ ಎದುರುಗಡೆ ಟಾರ್ಟರಸ್ಸಿಗೆ ಬೀಳುತ್ತದೆ. ಇದರ ಹೆಸರು ಕಾಕಿಟಸ್ ಎಂದು ಕವಿಗಳು ಹೇಳುತ್ತಾರೆ.

"ಇದೇ ಆ ಪ್ರಪಂಚದ ಸ್ವರೂಪ. ಸತ್ತವರು ತಮ್ಮ ತಮ್ಮ ಅಧಿದೇವತೆ ಕರೆದುಕೊಂಡುಹೋದ ಸ್ಥಳವನ್ನು ಸೇರಿದ ಮೇಲೆ, ಅವರ ಜೀವನ ಪವಿತ್ರವಾದದ್ದೋ ಅಲ್ಲವೋ ಎಂಬುದರ ಆಧಾರದ ಮೇಲೆ ಅವರ ವಿಷಯದಲ್ಲಿ ತೀರ್ಪುಕೊಡಲಾಗುತ್ತದೆ. ಒಳ್ಳೆಯವರಾಗಿಯೂ ಇಲ್ಲದೆ ಕೆಟ್ಟವರಾಗಿಯೂ ಇಲ್ಲದೆ ಸಾಧಾರಣ ರೀತಿಯಲ್ಲಿ ಜೀವಿಸಿದ್ದವರು ಏಕಿರಾನ್ ನದಿಗೆ ಹೋಗಿ ಅಲ್ಲಿರುವ ಹಡಗಿನಲ್ಲಿ ಕುಳಿತು ಏಕಿರೂಸಿಯನ್ ಸರೋವರಕ್ಕೆ ಹೋಗುತ್ತಾರೆ. ಅಲ್ಲಿ ತಮ್ಮ ದುಷ್ಕೃತ್ಯಗಳ ಸೋಂಕಿನಿಂದ ಪರಿಶುದ್ಧಿ ಹೊಂದಿ, ತಾವು ಇತರರಿಗೆ ಮಾಡಿದ್ದ ಕೆಡುಕಿಗಾಗಿ ಶಿಕ್ಷೆಯನ್ನನುಭವಿಸಿ, ತಮ್ಮ ಸತ್ಕಾರ್ಯಗಳಿಗೆ ಅನುಗುಣವಾದ ಫಲವನ್ನು ಭೋಗಿಸುತ್ತಾ ಇರುತ್ತಾರೆ. ಆದರೆ ಮಹತ್ತರವಾದ ಪಾಪಗಳನ್ನಾಚರಿಸಿ ಅವುಗಳಿಂದ ಬಿಡುಗಡೆಹೊಂದಲಾರದವರು, ಪವಿತ್ರವಾದದ್ದನ್ನು ಪದೇ ಪದೇ ಕೆಡಿಸಿದವರು, ಅನ್ಯಾಯವಾದ ಭಯಂಕರವಾದ ಕೊಲೆಗಳನ್ನು ಮಾಡಿದವರು, ಇದೇ ತರದ ಇತರ ಪಾಪಗಳನ್ನು ಮಾಡಿದವರು—ಇವರನ್ನೆಲ್ಲಾ ಟಾರ್ಟರಸ್ಸಿಗೆ ತಳ್ಳುತ್ತಾರೆ; ಅಲ್ಲಿಂದ ಅವರು ಹೊರಗೆ ಬರುವುದೇ ಅಲ್ಲ; ಅದೇ ಅವರಿಗೆ ಸರಿಯಾದ ಸ್ಥಳ. ಮಹಾಪಾಪಗಳಾದರೂ ಪ್ರಾಯಶ್ಚಿತ್ತದಿಂದ ಕಳೆಯಬಹುದಾದ ಪಾಪಗಳನ್ನು ಮಾಡಿರುವ ಇತರರು—ತಾಯಿತಂದೆಗಳ ಮೇಲೆ ಕೋಪಗೊಂಡು ಅವರಿಗೆ ಪೆಟ್ಟುಮಾಡಿ ನೋಯಿಸಿ, ಅನಂತರ ಜೀವಾವಧಿ ಅದಕ್ಕಾಗಿ ಪಶ್ಚಾತ್ತಾಪಪಟ್ಟವರು ಅಥವಾ ಇಂಥ ಸಂದರ್ಭದಲ್ಲಿಯೇ ಯಾರನ್ನಾದರೂ ಕೊಂದಿರುವವರುಕೂಡ ಟಾರ್ಟರಸ್ಸಿಗೆ ಇಳಿಯಬೇಕು. ಅಲ್ಲಿಯ ಸಂಕಟವನ್ನು ಅವರು ಒಂದು ವರ್ಷಕಾಲ ಅನುಭವಿಸಿದ ಮೇಲೆ ಬರಿಯ ಕೊಲೆಪಾತಕರನ್ನು ಕಾಕಿಟಸ್ಸಿನ ಮಾರ್ಗವಾಗಿಯೂ ತಾಯಿತಂದೆಗಳ ಕೊಲೆ ಮಾಡಿದವರನ್ನು ಪೈರಿಫ್ಲೆಜೆಥನ್ನಿನ ಮಾರ್ಗವಾಗಿಯೂ ಒಂದು ಅಲೆ ಹೊರಕ್ಕೆ ತಳ್ಳುತ್ತದೆ. ಆ ನದಿಗಳು ಅವರನ್ನು ಏಕಿರೂಸಿಯನ್ ಸರೋವರದ ಬಳಿಗೆ ಒಯ್ಯುತ್ತವೆ. ಅಲ್ಲಿ ತಾವು ಕೊಂದಿರುವ ಅಥವಾ ನೋಯಿಸಿರುವ ಜನರನ್ನು ಕೂಗಿ, ತಮ್ಮ ಮೇಲೆ ಕರುಣೆಯಿಟ್ಟು ಸರೋವರಕ್ಕೆ ಬರಗೊಡಿಸಬೇಕೆಂದು ಅವರು ಪ್ರಾರ್ಥಿಸುತ್ತಾರೆ. ಆ ಪ್ರಾರ್ಥನೆ ಸಫಲವಾದರೆ ಅವರು ನದಿಯಿಂದ ಹೊರಗೆ ಬಂದು ತಮ್ಮ ಕಷ್ಟಗಳಿಂದ ಪಾರಾಗುವರು ; ಇಲ್ಲದಿದ್ದರೆ ತಾವು

ನೋಯಿಸಿದವರಿಂದ ಕ್ಷಮೆ ಪಡೆಯುವವರೆಗೂ ವಿಚ್ಛಿತ್ತಿಯಿಲ್ಲದೆ ಅವರು ಮತ್ತೆ ಮತ್ತೆ ಟಾರ್ಟರಸ್ಸಿಗೂ ಅಲ್ಲಿಂದ ನದಿಗೂ ಹೋಗಬೇಕಾಗುತ್ತದೆ. ನ್ಯಾಯಾಧೀಶರು ಅವರ ವಿಷಯದಲ್ಲಿ ಹೀಗೆ ತೀರ್ಪುಕೊಡುತ್ತಾರೆ. ಪವಿತ್ರ ತರವಾದ ರೀತಿಯಲ್ಲಿ ಜೀವನಮಾಡಿ ಗಣ್ಯರೆನಿಸಿಕೊಂಡವರು ಭೂಮಿಯ ಸೆರೆಮನೆಯಿಂದ ಬಿಡುಗಡೆಹೊಂದಿ ಮೇಲಿರುವ ಪರಿಶುದ್ಧವಾದ ತಮ್ಮ ಸ್ಥಾನವನ್ನು ಸೇರಿ, ಭೂಮಿಯ ಮೇಲು ಭಾಗದಲ್ಲೇ ವಾಸಿಸುತ್ತಾರೆ. ಇವರು ಗಳಲ್ಲಿ ತತ್ವಜ್ಞಾನದ ಸಹಾಯದಿಂದ ಸಾಕಾದಷ್ಟು ಪರಿಶುದ್ಧಿಯನ್ನು ಪಡೆದವರು ಅಲ್ಲಿಂದ ಮುಂದೆ ಅಶರೀರಿಗಳಾಗಿ ಮತ್ತೂ ಸೊಗಸಾದ ಸ್ಥಳಗಳಲ್ಲಿರುತ್ತಾರೆ. ಆ ಸ್ಥಳಗಳನ್ನು ವರ್ಣಿಸುವುದಕ್ಕಾಗುವುದಿಲ್ಲ; ಅದರ ವಿಷಯವಾಗಿ ಸ್ವಲ್ಪ ಮಾತ್ರ ಹೇಳುವುದಕ್ಕೂ ಈಗ ಕಾಲವಿಲ್ಲ.

"ಇದನ್ನೆಲ್ಲಾ ನೋಡಿದರೆ, ಸಿಮಿಯಾಸ್, ನಾವು ಈ ಜನ್ಮದಲ್ಲಿ ಸದ್ಗುಣವನ್ನೂ ಜ್ಞಾನವನ್ನೂ ಪಡೆಯುವುದಕ್ಕೆ ಎಷ್ಟು ಕಷ್ಟಪಟ್ಟರೆ ತಾನೆ ಹೆಚ್ಚು? ನಮ್ಮ ಬಹುಮಾನ ಘನವಾದದ್ದು; ನಿರೀಕ್ಷೆಯೂ ಮಹತ್ತರವಾದದ್ದು.

"ನಾನು ಇದುವರೆಗೂ ವರ್ಣಿಸಿದ್ದೆಲ್ಲವೂ ಅಕ್ಷರಶಃ ನಿಜವೆಂದು ತಿಳಿವಳಿಕೆಯುಳ್ಳವರು ಯಾರೂ ಹೇಳುವುದಿಲ್ಲ; ಆದರೆ ಆತ್ಮ ಅಮರವಾದದ್ದೆಂದು ಗೊತ್ತಾದ ಮೇಲೆ ಅದರ ವಾಸಸ್ಥಾನ ಹೆಚ್ಚು ಕಡಮೆ ನಾನು ಹೇಳಿದ ಹಾಗೆ ಇರಬೇಕೆಂದು ನಂಬುತ್ತಾರೆ. ಹಾಗೆ ನಂಬುವುದರಲ್ಲಿ ಪ್ರಯೋಜನವುಂಟು. ಅದು ಒಂದು ಘನವಾದ ಸಾಹಸಕೃತ್ಯವೆನ್ನಬಹುದು. ನಮ್ಮ ಮನಸ್ಸಿನಲ್ಲಿ ಸಂಶಯಗಳು ತಲೆದೋರಿದಾಗ ನಾವು ಇಂಥ ಮಾತುಗಳಿಂದ ಸಮಾಧಾನ ಹೊಂದಬೇಕು. ಅದಕ್ಕೋಸ್ಕರವೇ ನಾನು ಈ ಕಥೆಯನ್ನು ಸ್ವಲ್ಪ ಳಂಬಿಸಿ ಹೇಳಿದ್ದು. ಯಾವ ಮನುಷ್ಯನಾಗಲಿ ಶರೀರದ ಸಂತೋಷಗಳೂ ಅಲಂಕಾರಗಳೂ ತನ್ನ ಸ್ವಭಾವಕ್ಕೆ ವಿರುದ್ಧವಾದುವೆಂದೂ ಅವು ತನಗೆ ಕೆಡುಕನ್ನೇ ಹೊರತು ಒಳ್ಳೆಯದನ್ನು ಮಾಡಲಾರವೆಂದೂ ತಿಳಿದು, ಅವುಗಳನ್ನು ದೂರಮಾಡಿ ಜ್ಞಾನದಿಂದ ಬರುವ ಸಂತೋಷವನ್ನು ಪಡೆಯಲು ಯತ್ನಿಸಿದ್ದರೆ, ಆತ್ಮಕ್ಕೆ ಸಹಜವಲ್ಲದ ಅಲಂಕಾರವನ್ನು ಮಾಡದೆ ಸಹಜ

ವಾದ ಒಡವೆಗಳಿಂದಲೇ—ಅಂದರೆ ಮಿತವ್ಯವಹಾರ, ಧರ್ಮ, ಧೈರ್ಯ, ಸ್ವಾತಂತ್ರ್ಯ, ಸತ್ಯ ಮೊದಲಾದುವುಗಳಿಂದಲೇ—ಅದನ್ನು ಅಲಂಕರಿಸಿ, ವಿಧಿ ತನ್ನನ್ನು ಕರೆದಾಗ ಪ್ರಯಾಣಕ್ಕೆ ಸಿದ್ಧವಾಗಿ ಪರಲೋಕಕ್ಕೆ ಹೋಗಲು ಕಾದಿದ್ದರೆ ಅಂಥವನು ತನ್ನ ಆತ್ಮದ ವಿಷಯದಲ್ಲಿ ಆತಂಕವಿಲ್ಲದೆ ಸಂತೋಷದಿಂದಿರಬೇಕು. ಸಿಮಿಯಾಸ್, ಸೀಬೀಸ್, ನೀವೂ ಉಳಿದವರೂ ನಿಮಗೆ ನಿಯಮಿತವಾದ ಕಾಲದಲ್ಲಿ ಹೊರಡುತ್ತೀರಿ. ಆದರೆ ರುದ್ರನಾಟಕಕಾರರು ಹೇಳುವಂತೆ ವಿಧಿ ನನ್ನನ್ನು ಈಗಲೇ ಕರೆಯುತ್ತಿದೆ. ಇನ್ನು ಸ್ನಾನಕ್ಕೆ ಹೋಗುವ ಸಮಯವಾಯಿತು. ನಾನು ವಿಷ ಕುಡಿಯುವುದಕ್ಕೆ ಮುಂಚೆಯೇ ಸ್ನಾನಮಾಡುವುದು ಉತ್ತಮ. ಹೆಂಗಸರಿಗೆ ನನ್ನ ಶವವನ್ನು ತೊಳೆಯುವ ತೊಂದರೆಯನ್ನೇಕೆ ಕೊಡಬೇಕು ? ”

ಆತನು ಮಾತನಾಡುವುದನ್ನು ನಿಲ್ಲಿಸಿದ ಮೇಲೆ ಕ್ರೈಟೊ “ ಹಾಗೇ ಆಗಲಿ, ಸಾಕ್ರೆಟೀಸ್. ಅದಿರಲಿ, ನಿನ್ನ ಮಕ್ಕಳ ವಿಷಯವಾಗಿ ಅಥವಾ ಇತರ ವಿಷಯವಾಗಿ ನನಗೂ ನಿನ್ನ ಸ್ನೇಹಿತರಿಗೂ ಅಪ್ಪಣೆಮಾಡುವುದು ಏನೂ ಇಲ್ಲವೆ ? ನಾವು ನಿನಗೆ ಯಾವ ರೀತಿಯಲ್ಲಿ ಸೇವೆಮಾಡೋಣ ? ” ಎಂದು ಕೇಳಿದನು.

“ ಹೆಚ್ಚು ಹೇಳಬೇಕಾದದ್ದೇನೂ ಇಲ್ಲ, ಕ್ರೈಟೊ. ನಿಮ್ಮ ವಿಷಯದಲ್ಲಿ ನೀವು ಜಾಗರೂಕರಾಗಿರಿ ಎಂದು ಅನೇಕ ವೇಳೆ ಹೇಳಿದ್ದೇನಲ್ಲವೆ ? ಹಾಗೆ ಮಾಡುತ್ತೇವೆಂದು ನನಗೆ ಭಾಷೆಕೊಟ್ಟರೂ ಸರಿ, ಇಲ್ಲದಿದ್ದರೂ ಸರಿ; ಅಷ್ಟು ಮಾತ್ರ ನೀವು ಮಾಡಿದರೆ ನನಗೂ ನನ್ನವರಿಗೂ ನಿಮಗೂ ಎಲ್ಲರಿಗೂ ಸೇವೆಮಾಡಿದ ಹಾಗೆಯೇ. ನೀವು ಹಾಗೆ ಮಾಡದೆ ನಿಮ್ಮ ವಿಷಯದಲ್ಲೇ ಅಸಡ್ಡೆಯಾಗಿದ್ದು, ನಾನು ಇಂದಿನ ಚರ್ಚೆಯಲ್ಲೂ ಹಿಂದೆ ಅನೇಕ ವೇಳೆಯೂ ನಿಮಗೆ ತೋರಿಸಿಕೊಟ್ಟಿರುವ ಜೀವನಪಥವನ್ನು ಅನುಸರಿಸದಿದ್ದರೆ, ನೀವು ನನ್ನೆದುರಿಗೆ ಎಷ್ಟು ಭಾಷೆಯನ್ನೂ ಭರವಸೆಯನ್ನೂ ಕೊಟ್ಟರೂ ಪ್ರಯೋಜನವಿಲ್ಲ ” ಎಂದು ಸಾಕ್ರೆಟೀಸನು ಉತ್ತರಕೊಟ್ಟನು.

“ ನಮ್ಮ ಕೈಯಲ್ಲಾದ ಮಟ್ಟಿಗೂ ನೀನು ಹೇಳಿದಂತೆ ನಡೆಯುತ್ತೇವೆ ” ಎಂದು ಹೇಳಿ, ಕ್ರೈಟೊ “ ನಿನ್ನನ್ನು ಹೇಗೆ ಸಮಾಧಿಮಾಡೋಣ ? ” ಎಂದು ಕೇಳಿದನು.

L.
CT.

BANGALORE G.P.O.
बैंगलूर जी.पी.ओ.

PIN
560001

4 ₹ 85 8980 0 0 0 3.55 FP

S. Raheel

Bombay 1

2



ಸಾಕ್ರೆಟೀಸನು ವಿಷ ತೆಗೆದುಕೊಳ್ಳುವುದು

“ ನಿನಗೆ ತೋರಿದ ಹಾಗೆ ಮಾಡು. ಆದರೆ ಮೊದಲು ನಾನು ನಿನ್ನ ಕೈ ತಪ್ಪಿಸಿಕೊಂಡು ಓಡಿಹೋಗದ ಹಾಗೆ ನನ್ನನ್ನು ಹಿಡಿದುಕೊಳ್ಳಬೇಕಲ್ಲ! ” ಎಂದು ಹೇಳಿ, ಸಾಕ್ರೆಟೀಸನು ಸ್ವಲ್ಪ ನಕ್ಕು “ ಇದುವರೆಗೂ ನಿಮ್ಮೊಡನೆ ಮಾತಾಡಿ ಚರ್ಚೆ ನಡಸುತ್ತಿದ್ದ ಸಾಕ್ರೆಟೀಸನೇ ನಾನು ಎಂದು ಕ್ರೈಟೋವಿಗೆ ನಂಬಿಕೆ ಹುಟ್ಟಿಸಲಾರೆನಲ್ಲ! ಇನ್ನು ಸ್ವಲ್ಪ ಹೊತ್ತಿನಲ್ಲಿ ಶವವಾಗಿ ಹೋಗುವ ಶರೀರವೇ ನಾನೆಂದು ತಿಳಿದು ಅವನು ‘ನಿನ್ನನ್ನು ಹೇಗೆ ಸಮಾಧಿಮಾಡೋಣ’ ಎಂದು ಕೇಳುತ್ತಿದ್ದಾನೆ. ನಾನು ವಿಷ ಕುಡಿದ ಮೇಲೆ ನಿಮ್ಮನ್ನು ಬಿಟ್ಟು ಆನಂದಮಯವಾದ ಪರಲೋಕವಾಸವನ್ನನುಭವಿಸುವುದಕ್ಕೆ ಹೊರಟು ಹೋಗುತ್ತೇನೆಂದು ಎಷ್ಟೋ ವಾದಗಳಿಂದ ನಿಮಗೆ ವಿವರಿಸಿ ಹೇಳಿದೆ. ಆದರೆ ಆ ಮಾತುಗಳು ಕ್ರೈಟೋವಿನ ಮೇಲೆ ಏನೂ ಪರಿಣಾಮವುಂಟುಮಾಡಿದ ಹಾಗೆ ಕಾಣಲಿಲ್ಲ. ನನ್ನ ವಿಚಾರಣೆಯಾದಾಗ ಅವನು ನನಗೆ ಹೊಣೆಯಾಗಿ ನಿಂತಹಾಗೆ–ಆದರೆ ಸ್ವಲ್ಪ ಬೇರೆ ರೀತಿಯಲ್ಲಿ–ನೀವು ಈಗ ನನಗೆ ಹೊಣೆಯಾಗಿ ನಿಲ್ಲಿ. ನಾನು ಇಲ್ಲಿಯೇ ನಿಲ್ಲುತ್ತೇನೆನ್ನುವುದಕ್ಕೆ ಅವನು ನ್ಯಾಯಾಧೀಶರೆದುರಿಗೆ ಹೊಣೆಯಾಗಿದ್ದನು; ಈಗ ನಾನು ಸತ್ತಮೇಲೆ ನಿಮ್ಮೊಡನೆ ನಿಲ್ಲದೆ ಹೊರಟುಹೋಗುತ್ತೇನೆನ್ನುವುದಕ್ಕೆ ನೀವು ಅವನಿಗೆ ಹೊಣೆ ಕೊಡಿ. ಹಾಗೆ ಮಾಡಿದರೆ ನಾನು ಸತ್ತಾಗಲೂ ನನ್ನ ಶರೀರವನ್ನು ಸುಡುವುದನ್ನೋ ಸಮಾಧಿಮಾಡುವುದನ್ನೋ ನೋಡಿದಾಗಲೂ ನಾನು ಬಹಳ ದುಃಸ್ಥಿತಿಯಲ್ಲಿದ್ದೇನೆಂದುಕೊಂಡು ಅವನು ದುಃಖಪಡುವುದಿಲ್ಲ; ನನ್ನನ್ನು ಸಮಾಧಿ ಮಾಡುವಾಗ ‘ ಸಾಕ್ರೆಟೀಸನನ್ನು ಇಲ್ಲಿ ಮಲಗಿಸಿದ್ದೇವೆ, ಆತನನ್ನು ಗೋರಿಗೆ ತೆಗೆದುಕೊಂಡುಹೋಗಿ ಗೋರಿಮಾಡುತ್ತೇವೆ ’ ಎಂದು ಹೇಳುವುದಿಲ್ಲ. ಹೀಗೆ ಪದಗಳನ್ನು ತಪ್ಪಾಗಿ ಉಪಯೋಗಿಸುವುದರಿಂದ ಅವು ಕೆಡುವುದಲ್ಲದೆ ನಮ್ಮ ಆತ್ಮಕ್ಕೂ ಕೆಡುಕಿನ ಸೋಂಕು ತಗಲುತ್ತದೆ. ಆದ್ದರಿಂದ ಕ್ರೈಟೋ, ಹಸನ್ಮುಖಿಯಾಗಿರು, ಸಂತೋಷವಾಗಿರು. ನನ್ನ ಶರೀರವನ್ನು ಸಮಾಧಿ ಮಾಡುತ್ತೇನೆಂದು ಹೇಳು. ಆ ಕೆಲಸವನ್ನು ಪದ್ಧತಿಯಿರುವ ಹಾಗೆ, ನಿಮಗೆ ಉತ್ತಮವೆಂದು ತೋರಿದ ರೀತಿಯಲ್ಲಿ ಮಾಡಬಹುದು. ’’

ಹೀಗೆ ಹೇಳಿ ಆತನು ಎದ್ದು ಸ್ನಾನಮಾಡುವುದಕ್ಕೆ ಬೇರೆ ಕೊಠಡಿಗೆ ಹೋದನು; ನಮ್ಮನ್ನು ಅಲ್ಲಿಯೇ ಕಾದಿರ ಹೇಳಿ, ಕ್ರೈಟೋ ಆತನೊಡನೆಯೇ

ಹೋದನು. ನಾವು ಆ ದಿನ ನಡೆದ ಚರ್ಚೆಯ ವಿಷಯ ಮಾತಾಡುತ್ತಾ, ನಮಗೆ ಎಂಥ ದೊಡ್ಡ ವಿಪತ್ತು ಸಂಭವಿಸಿತು ಎಂದು ಯೋಚಿಸುತ್ತಾ ಅಲ್ಲಿಯೇ ಕಾದಿದ್ದೆವು. ತಂದೆಯನ್ನು ಕಳೆದುಕೊಂಡು ಜೀವಾವಧಿ ತಬ್ಬಲಿಗಳಾಗಿರಬೇಕಾಯಿತೆಂದೇ ನಮ್ಮೆಲ್ಲರ ಭಾವನೆ. ಸ್ನಾನವಾದ ಮೇಲೆ ಸಾಕ್ರೆಟೀಸನ ಮಕ್ಕಳನ್ನು ಅವನ ಬಳಿಗೆ ಕರೆದುಕೊಂಡು ಬಂದರು. ಅವನಿಗೆ ಒಬ್ಬ ದೊಡ್ಡ ಮಗನೂ ಇಬ್ಬರು ಚಿಕ್ಕ ಚಿಕ್ಕ ಗಂಡು ಮಕ್ಕಳೂ ಇದ್ದರು. ಅವನ ಮನೆಯ ಹೆಂಗಸರೂ ಬಂದಿದ್ದರು. ಸಾಕ್ರೆಟೀಸನು ಅವರಿಗೆ ಕೊನೆಯಲ್ಲಿ ಹೇಳಬೇಕಾದ ನಾಲ್ಕು ಮಾತುಗಳನ್ನು ಕ್ರೈಟೊ ಎದುರಿಗೆ ಇದ್ದ ಹಾಗೆಯೇ ಹೇಳಿ, ಅವರನ್ನು ಕಳುಹಿಸಿಕೊಟ್ಟು ಮತ್ತೆ ನಾವೆಲ್ಲರೂ ಇದ್ದ ಬಳಿಗೆ ಬಂದನು. ಅಷ್ಟು ಹೊತ್ತಿಗೆ ಸೂರ್ಯನು ಮುಳುಗುವ ಸಮಯವಾಗಿತ್ತು. ಆತನು ಬಹಳ ಕಾಲವನ್ನು ಒಳಗೇ ಕಳೆದಿದ್ದನು. ಸ್ನಾನವಾದ ಮೇಲೆ ಹೊರಗೆ ಬಂದು ನಮ್ಮ ಬಳಿಯಲ್ಲಿ ಕುಳಿತುಕೊಂಡನು. ಆದರೆ ಆ ಮೇಲೆ ಹೆಚ್ಚು ಮಾತೇನೂ ನಡೆಯಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ ಅಥೆನ್ಸಿನ ಹನ್ನೊಂದು ಜನ ಅಧಿಕಾರಿಗಳ ಸೇವಕನಾದ ಕಾವಲುಗಾರನು ಬಂದು ಅವನ ಹತ್ತಿರ ನಿಂತುಕೊಂಡು "ಸಾಕ್ರೆಟೀಸ್, ಇದುವರೆಗೆ ಈ ಸ್ಥಳಕ್ಕೆ ಬಂದವರಲ್ಲಿ ನಿನ್ನಷ್ಟು ಮೃದುಸ್ವಭಾವದವರೂ ಒಳ್ಳೆಯವರೂ ಘನತೆಯುಳ್ಳವರೂ ಮತ್ತೊಬ್ಬರಿಲ್ಲ. ಅಧಿಕಾರಿಗಳ ಅಪ್ಪಣೆಯ ಪ್ರಕಾರ ನಾನು ಅವರಿಗೆ ವಿಷ ಕುಡಿಯಬೇಕೆಂದು ಹೇಳಿದರೆ ಅವರು ನನ್ನ ಮೇಲೆ ರೇಗಿಬಿದ್ದು ಶಪಿಸುತ್ತಿದ್ದರು. ಆದರೆ ನೀನು ನನ್ನ ಮೇಲೆ ಕೋಪಿಸುವುದಿಲ್ಲವೆಂದು ನಾನು ಬಲ್ಲೆ. ಈ ವಿಷಯದಲ್ಲಿ ತಪ್ಪು ಇತರರದೇ ಹೊರತು ನನ್ನದಲ್ಲವೆಂದು ನಿನಗೆ ತಿಳಿದೇ ಇದೆ. ಆವಶ್ಯಕವಾದದ್ದನ್ನು ಆದಷ್ಟು ಶಾಂತಚಿತ್ತನಾಗಿ ಅನುಭವಿಸಲು ಯತ್ನಿಸು. ನಿನಗೆ ಒಳ್ಳೆಯದಾಗಲಿ, ನಾನು ಬಂದಿರುವ ಕೆಲಸವೇನೆಂದು ನಿನಗೆ ಗೊತ್ತೇ ಇದೆ" ಎಂದು ಹೇಳಿದನು. ಅಷ್ಟು ಹೇಳಿ ಅವನು ಬೇರೆ ಕಡೆ ತಿರುಗಿ ಕಣ್ಣಿನಲ್ಲಿ ನೀರು ಹಾಕಿಕೊಂಡು ಹೊರಟುಹೋದನು.

ಸಾಕ್ರೆಟೀಸನು ಅವನ ಕಡೆ ನೋಡಿ "ನಿನಗೂ ಶುಭವಾಗಲಿ, ನೀನು ಹೇಳಿದಂತೆಯೇ ಮಾಡುತ್ತೇನೆ" ಎಂದನು. ಅನಂತರ ನಮ್ಮ ಕಡೆ ತಿರುಗಿ

“ಅವನ ನಡವಳಿಕೆ ಎಷ್ಟು ಚೆನ್ನಾಗಿದೆ! ನಾನು ಸೆರೆಮನೆಗೆ ಬಂದ ದಿನದಿಂದ ಅವನು ಆಗಾಗ ನನ್ನನ್ನು ನೋಡುವುದಕ್ಕೆ ಬರುತ್ತಿರುತ್ತಾನೆ; ಕೆಲವು ವೇಳೆ ನನ್ನೊಡನೆ ಮಾತಾಡುತ್ತಲೂ ಇದ್ದನು; ತನಗೆ ಸಾಧ್ಯವಾದ ಮಟ್ಟಿಗೂ ಒಳ್ಳೆಯವನಾಗಿ ನಡೆದುಕೊಂಡಿದ್ದಾನೆ. ಈಗ ನೋಡಿ, ನನಗಾಗಿ ಎಷ್ಟು ಸರಳ ಮನಸ್ಸಿನಿಂದ ದುಃಖಪಡುತ್ತಿದ್ದಾನೆ! ಅವನು ಹೇಳಿದಂತೆಯೇ ನಡೆಯಬೇಕು. ಕ್ರೈಟೊ, ವಿಷ ಸಿದ್ಧವಾಗಿದ್ದರೆ ಬಟ್ಟಲನ್ನು ತರಹೇಳು; ಇಲ್ಲದಿದ್ದರೆ ಅದನ್ನು ಸಿದ್ಧಮಾಡಲಿ” ಎಂದನು.

ಅದಕ್ಕೆ ಕ್ರೈಟೋ “ತಾಳು ಸಾಕ್ರೆಟೀಸ್, ಇನ್ನೂ ಸೂರ್ಯನು ಆ ಪರ್ವತಗಳ ಮೇಲೆಯೇ ಇದ್ದಾನೆ, ಮುಳುಗುವ ಹೊತ್ತಾಗಿಲ್ಲ. ಇತರ ಜನರು ವಿಷವನ್ನು ಸ್ವಲ್ಪಹೊತ್ತು ಮೀರಿದ ಮೇಲೆಯೇ ತೆಗೆದುಕೊಳ್ಳುತ್ತಾರೆ. ಕಾಲ ಸನ್ನಿಹಿತವಾಯಿತೆಂಬ ವರ್ತಮಾನ ಬಂದ ಮೇಲೂ ಅವರು ಊಟ ಮಾಡಿ, ಕುಡಿದು, ಸ್ನೇಹಿತರೊಡನೆ ಕಾಲಕಳೆಯುತ್ತಾರೆ. ನೀನೇನೂ ಆತುರಪಡಬೇಕಾಗಿಲ್ಲ, ಇನ್ನೂ ಬಹಳ ಹೊತ್ತಿದೆ” ಎಂದನು.

ಇದನ್ನು ಕೇಳಿ ಸಾಕ್ರೆಟೀಸನು “ಹೌದು, ಕ್ರೈಟೊ. ನೀನು ಹೇಳಿದ ಜನರು ಹಾಗೆ ಮಾಡುವುದು ಸಹಜವಾಗಿಯೇ ಇದೆ. ಹಾಗೆ ಮಾಡಿದ್ದರಿಂದ ತಾವು ಏನೋ ಲಾಭಹೊಂದಿದೆವೆಂದು ಅವರು ತಿಳಿದಿದ್ದಾರೆ. ನಾನು ಹಾಗೆ ಮಾಡದೆ ಇರುವುದೂ ಸಹಜವೇ; ಏಕೆಂದರೆ ವಿಷವನ್ನು ಹೊತ್ತುಮೀರಿ ಕುಡಿದದ್ದರಿಂದ ನನಗೆ ಲಾಭವೇನು? ಮುಗಿದುಹೋದ ಜೀವನವನ್ನು ಜಿಪುಣನಂತೆ ದುರಾಶೆಯಿಂದ ಉಳಿಸಿಕೊಳ್ಳಲು ಯತ್ನಿಸಿದೆನೆಂಬ ಆತ್ಮ ತಿರಸ್ಕಾರವೊಂದು ಬರುತ್ತದೆ. ಇದು ಹೊರತು ಮತ್ತೇನು ಲಾಭ? ನಾನು ಹೇಳಿದ ಹಾಗೆ ಮಾಡು ಕ್ರೈಟೊ, ಇಲ್ಲವೆನ್ನಬೇಡ” ಎಂದು ಉತ್ತರ ಕೊಟ್ಟನು.

ಕ್ರೈಟೊ ಹತ್ತಿರದಲ್ಲಿಯೇ ನಿಂತಿದ್ದ ತನ್ನ ಗುಲಾಮನಿಗೆ ಸನ್ನೆಮಾಡಲು, ಅವನು ಹೊರಕ್ಕೆ ಹೋಗಿ ಸ್ವಲ್ಪ ಹೊತ್ತಿನಲ್ಲೇ ವಿಷ ಕೊಡುವವನನ್ನು ಜೊತೆಯಲ್ಲಿ ಕರೆದುಕೊಂಡು ಬಂದನು. ಅವನ ಕೈಯಲ್ಲಿದ್ದ ಬಟ್ಟಲಿನಲ್ಲಿ ವಿಷ ಸಿದ್ಧವಾಗಿತ್ತು. ಸಾಕ್ರೆಟೀಸನು ಅವನನ್ನು ನೋಡಿ “ಏನಯ್ಯ,

ನಿನಗೆ ಇದರ ವಿಷಯವೆಲ್ಲಾ ಗೊತ್ತಷ್ಟೆ. ನಾನು ಏನು ಮಾಡಬೇಕು ಹೇಳು" ಎಂದನು. ಅದಕ್ಕೆ ಅವನು "ನೀನು ಇದನ್ನು ಕುಡಿದು ನಿನ್ನ ಕಾಲು ಭಾರವಾಗುವವರೆಗೂ ತಿರುಗಾಡುತ್ತಿದ್ದರೆ ಸಾಕು; ಅನಂತರ ಮಲಗಿಕೊಂಡರೆ ವಿಷ ತನ್ನ ಕೆಲಸವನ್ನು ಮಾಡುತ್ತದೆ'' ಎಂದು ಹೇಳಿ ಬಟ್ಟಲನ್ನು ಸಾಕ್ರೆಟೀಸನ ಕೈಗೆ ಕೊಟ್ಟನು. ಆಗ, ಎಕಿಕ್ರೆಟೀಸ್, ಅವನು ಸಂತೋಷದಿಂದ, ಸ್ವಲ್ಪವೂ ಅಲುಗದೆ, ವಿವರ್ಣನಾಗದೆ ಅದನ್ನು ತೆಗೆದುಕೊಂಡನು. ಅನಂತರ ತನ್ನ ಪದ್ಧತಿಯ ಮೇರೆ ಆ ಸೇವಕನ ಕಡೆ ದಿಟ್ಟಿಸಿ ನೋಡಿ "ಈ ಬಟ್ಟಲಿನಲ್ಲಿರುವುದರಲ್ಲಿ ದೇವರಿಗೆ ಅರ್ಘ್ಯಕೊಡಬಹುದೆ? ಆಗಬಹುದೋ ಕೂಡದೋ ಹೇಳು" ಎಂದನು. ಆ ಸೇವಕನು "ನಮಗೆ ಎಷ್ಟು ಆವಶ್ಯಕವೆಂದು ತೋರುತ್ತದೋ ಅಷ್ಟು ವಿಷವನ್ನು ಮಾತ್ರ ಸಿದ್ಧಮಾಡಿರುತ್ತೇವೆ, ಸಾಕ್ರೆಟೀಸ್'' ಎಂದು ಉತ್ತರಕೊಟ್ಟನು. ಸಾಕ್ರೆಟೀಸನು "ಸರಿ, ಗೊತ್ತಾಯಿತು. ಆದರೆ ದೇವತೆಗಳು ನನಗೆ ಪ್ರಪಂಚದಿಂದ ಪರಲೋಕಕ್ಕೆ ಸುಖಪ್ರಯಾಣವನ್ನು ಕರುಣಿಸಲೆಂದು ಪ್ರಾರ್ಥಿಸಬಹುದು, ಪ್ರಾರ್ಥಿಸಲೇಬೇಕು. ಹಾಗೇ ಪ್ರಾರ್ಥಿಸುತ್ತೇನೆ'' ಎಂದು ಹೇಳಿ ಬಟ್ಟಲನ್ನು ಬಾಯಿಗೆ ಎತ್ತಿ ಸಂತೋಷವಾಗಿ ಸ್ವಲ್ಪವೂ ಹಿಂದೆಗೆಯುದೆ ಕುಡಿದುಬಿಟ್ಟನು. ಅದುವರೆಗೂ ನಮ್ಮಲ್ಲಿ ಬಹು ಮಂದಿ ಕಷ್ಟಪಟ್ಟು ದುಃಖವನ್ನು ತಡೆದಿದ್ದೆವು. ಆದರೆ ಅವನು ವಿಷ ಕುಡಿಯುತ್ತಿದ್ದದ್ದನ್ನೂ ಕುಡಿದು ಮುಗಿಸಿದ್ದನ್ನೂ ನೋಡಿ, ನಮಗೆ ದುಃಖವನ್ನು ತಡೆಯುವುದು ಅಸಾಧ್ಯವಾಯಿತು. ಎಷ್ಟು ತಡೆದರೂ ನನ್ನ ಕಣ್ಣಿನಿಂದಲೂ ನೀರು ಧಾರಾಕಾರವಾಗಿ ಹರಿಯಿತು; ನಾನು ಮುಖ ಮುಚ್ಚಿಕೊಂಡು ಅತ್ತುಬಿಟ್ಟೆನು. ನಾನು ಅತ್ತದ್ದು ಸಾಕ್ರೆಟೀಸನಿಗೋಸ್ಕರವಾಗಲ್ಲ, ನನಗಾಗಿ; ಅಂಥ ಸ್ನೇಹಿತನನ್ನು ಕಳೆದುಕೊಳ್ಳುವ ವಿಪತ್ತು ಬಂದದ್ದಕ್ಕಾಗಿ. ಇದಕ್ಕೆ ಮುಂಚೆಯೇ ಕ್ರೈಟೋ ಕಣ್ಣೀರನ್ನು ತಡೆಯಲಾರದೆ ಎದ್ದು ಹೋಗಿದ್ದನು. ಅದುವರೆಗೂ ಕಣ್ಣೀರು ಸುರಿಸುತ್ತಲೇ ಇದ್ದ ಅಪಾಲೊಡೋರಸ್ಸನು ಆಗ ಗಟ್ಟಿಯಾಗಿ ಅಳುವುದಕ್ಕೆ ಮೊದಲು ಮಾಡಿದನು. ಅದನ್ನು ಕೇಳಿ ನಾವೆಲ್ಲರೂ ಸ್ಥೈರ್ಯವನ್ನು ಕಳೆದುಕೊಂಡು ಹೇಡಿಗಳಂತಾದೆವು. ಸಾಕ್ರೆಟೀಸನು ಮಾತ್ರ ಶಾಂತನಾಗಿಯೇ ಇದ್ದು "ಇದೇನು ಈ ವಿಚಿತ್ರರೋದನ?

ಹೀಗೆ ಗಲಭೆಮಾಡದಿರಲೆಂದೇ ನಾನು ಹೆಂಗಸರನ್ನು ಆಗಲೇ ಕಳುಹಿಸಿ ಬಿಟ್ಟದ್ದು. ಸಾಯುವವನು ಶಾಂತಿಯಿಂದಿರಬೇಕು. ಅವನ ಸುತ್ತಲೂ ನೀರವತೆಯಿರಬೇಕು ಎಂದು ಜನರು ಹೇಳುತ್ತಾರೆ. ಶಾಂತರಾಗಿ; ಧೈರ್ಯ ತಂದುಕೊಳ್ಳಿ" ಎಂದನು. ಈ ಮಾತುಗಳನ್ನು ಕೇಳಿ ನಮಗೆಲ್ಲಾ ನಾಚಿಕೆಯಾಗಿ ಅಳುವುದನ್ನು ನಿಲ್ಲಿಸಿದೆವು. ಅವನು ಮಾತ್ರ ತನ್ನ ಕಾಲು ಭಾರವಾಗಿ ತೋರುವವರೆಗೂ ತಿರುಗುತ್ತಿದ್ದು ಅನಂತರ ಅಲ್ಲಿಯ ಸೇವಕನು ಹೇಳಿದ್ದಂತೆ ಮುಖ ಮೇಲಾಗಿ ಮಲಗಿಕೊಂಡನು. ಆ ಸೇವಕನು ಆಗಿಂದಾಗ ಅವನ ಕಾಲುಗಳನ್ನೂ ಹೆಜ್ಜೆಗಳನ್ನೂ ಪರೀಕ್ಷಿಸಿ ನೋಡುತ್ತಿದ್ದನು. ಸ್ವಲ್ಪ ಹೊತ್ತಾದ ಮೇಲೆ ಅವನ ಹೆಜ್ಜೆಯನ್ನು ಬಲವಾಗಿ ಅಮುಕಿ 'ಏನಾದರೂ ನೋವು ಕಾಣುತ್ತದೆಯೆ?' ಎಂದು ಕೇಳಿದನು. ಸಾಕ್ರೆಟೀಸನು 'ಇಲ್ಲ' ಎಂದನು. ಅನಂತರ ಕಾಲು, ಅನಂತರ ಮತ್ತೂ ಸ್ವಲ್ಪ ಮೇಲೆ, ಅನಂತರ ಇನ್ನೂ ಮೇಲೆ, ಹೀಗೆ ಪರೀಕ್ಷಿಸಿ ನೋಡಿ ಅವನ ಮೈ ತಣ್ಣಗಾಗಿಯೂ ನಿಶ್ಚೇಷ್ಟವಾಗಿಯೂ ಪರಿಣಮಿಸಿದ್ದನ್ನು ತೋರಿಸಿದನು. ಸಾಕ್ರೆಟೀಸನಿಗೂ ಅದು ಗೊತ್ತಾಯಿತು. 'ವಿಷ ಹೃದಯವನ್ನು ಮುಟ್ಟಿದಾಗ ನಾನು ಹೊರಡುತ್ತೇನೆ- ಅದೇ ಕೊನೆ' ಎಂದನು. ಅಷ್ಟು ಹೊತ್ತಿಗೆ ಆಗಲೇ ಸೊಂಟವವರೆಗೆ ತಣ್ಣಗಾಗಿತ್ತು. ಆಗ ಅವನು ಮುಖದ ಮೇಲೆ ಮುಚ್ಚಿಕೊಂಡಿದ್ದ ಬಟ್ಟೆಯನ್ನು ತೆಗೆದು 'ಕ್ರೈಟೊ, ನಾನು ಈಸ್ಕ್ಲೆಪಿಯುಸ್ಸಿಗೆ ಒಂದು ಹುಂಜವನ್ನು ಸಲ್ಲಿಸಬೇಕಾಗಿತ್ತು. ಅದನ್ನು ಮರೆಯದೆ ಕೊಡು' ಎಂದನು. ಇವೇ ಅವನು ಆಡಿದ ಕೊನೆಯ ಮಾತುಗಳು. ಕ್ರೈಟೊ 'ಕೊಡುತ್ತೇನೆ, ನೀನು ಹೇಳಬೇಕಾದದ್ದು ಇನ್ನೇನಾದರೂ ಇದೆಯೆ?' ಎಂದನು. ಈ ಪ್ರಶ್ನೆಗೆ ಉತ್ತರ ಬರಲಿಲ್ಲ. ಆದಾದ ಒಂದೆರಡು ನಿಮಿಷಗಳ ಮೇಲೆ ಅವನ ಶರೀರವು ಸ್ವಲ್ಪ ಅಲುಗಾಡಿತು. ಸೇವಕನು ಅವನ ಮುಸುಕು ತೆಗೆದು ನೋಡಿದನು. ಅವನ ದೃಷ್ಟಿ ನೆಟ್ಟು ಹೋಗಿದ್ದಿತು. ಕ್ರೈಟೊ ಅವನ ಬಾಯನ್ನೂ ಕಣ್ಣುಗಳನ್ನೂ ಮುಚ್ಚಿದನು.

ನಮ್ಮ ಸ್ನೇಹಿತನ ಮರಣ ಹೀಗಾಯಿತು, ಎಕಿಕ್ರೆಟೀಸ್. ನನಗೆ ತಿಳಿದ ಮಟ್ಟಿಗೆ ನಾನು ಬಲ್ಲ ಜನರಲ್ಲೆಲ್ಲಾ ಅವನಷ್ಟು ಜ್ಞಾನಿಗಳೂ ನ್ಯಾಯಪರರೂ ಸದ್ಗುಣಿಗಳೂ ಮತ್ತೊಬ್ಬರಿಲ್ಲವೆಂದು ಸತ್ಯವಾಗಿ ಹೇಳಬಹುದು.

GANDHI SMARAKA GRANTHALAYA
BANGALORE-1

ಟಿಪ್ಪಣಿಗಳು

ಟಿಪ್ಪಣಿಗಳು

ಪುಟ ೩ **ಆರ್ಕನ್**—ಅಥೆನ್ಸಿನ ಮುಖ್ಯ ನ್ಯಾಯಾಧೀಶ.

ಲಿಸಿಯಂ—ಅಥೆನ್ಸಿನ ಅಪಾಲೋ ಗುಡಿಯ ಬಳಿಯಲ್ಲಿದ್ದ ಉಪವನ ಅರಿಸ್ಟೋಟಲ್ ತತ್ವಬೋಧೆ ಮಾಡಿದ್ದು ಇಲ್ಲಿಯೇ.

ಪುಟ ೧೦ **ಕ್ರೋನಸ್ ಮತ್ತು ಯುರಾನಸ್**—ಕ್ರೋನಸ್ ಯುರಾನಸ್ಸನ ಮಗ. ಯುರಾನಸ್ ದೇವತೆಗಳ ಒಡೆಯನಾಗಿದ್ದಾಗ ತನ್ನ ಮಕ್ಕಳ ವಿಷಯದಲ್ಲಿ ಬಹಳ ಕ್ರೌರ್ಯವನ್ನು ತೋರಿಸಿದ್ದಕ್ಕಾಗಿ ಕ್ರೋನಸ್ ಅವನನ್ನು ಶಿಕ್ಷಿಸಿ ತಾನೇ ಆ ಪದವಿಗೆ ಏರಿದನು. ಕ್ರೋನಸ್ ತನ್ನ ಮಗನೊಬ್ಬನಿಂದ ರಾಜ್ಯಚ್ಯುತನಾಗುವನೆಂದು ಒಂದು ಭವಿಷ್ಯವಾಣಿಯಿತ್ತು. ಆದ್ದರಿಂದ ಅವನು ತನ್ನ ಮಕ್ಕಳೆಲ್ಲರನ್ನೂ ತಿಂದುಹಾಕುತ್ತಿದ್ದನು. ಆದರೆ ಅವನ ಹೆಂಡತಿ ರ್ಹಿಯ ಎಂಬವಳು ಸ್ಯೂಸ್ ಎಂಬ ಮಗನನ್ನು ತಂದೆಯ ಕೈಗೆ ಸಿಕ್ಕಿಸದೆ ಉಳಿಸಿಕೊಂಡಳು. ಸ್ಯೂಸ್ ಕ್ರೋನಸ್ಸನ್ನು ಸೋಲಿಸಿ ತಾನೇ ದೇವತೆಗಳ ರಾಜನಾದನು.

ಪುಟ ೧೧ **ಪಾನ್-ಅಥೀನಿಯ ಉತ್ಸವ**—ಅಥೆನ್ಸಿನ ಅಭಿಮಾನ ದೇವತೆಯಾದ ಅಥೀನಿ ದೇವಿಗೆ ಸಂಬಂಧಪಟ್ಟ ಉತ್ಸವ.

ಪುಟ ೧೫ **ಹೆಫೀಸ್ಟಸ್**—ಅಗ್ನಿಗೂ ಲೋಹಗಳಲ್ಲಿ ಕೆಲಸಮಾಡುವವರಿಗೂ ಅಭಿಮಾನದೇವತೆ.

ಹೀರ—ದೇವತೆಗಳ ರಾಣಿ. ಸ್ಯೂಸನ ಹೆಂಡತಿ.

ಪುಟ ೩೧ **ಪ್ರೋಟಿಯಸ್**—ಸಮುದ್ರದ ದೇವತೆಗಳಲ್ಲೊಬ್ಬನಾದ ಈತನಿಗೆ ಭವಿಷ್ಯದರ್ಶನ ಶಕ್ತಿ ಇತ್ತು. ಇವನನ್ನು ಹಿಡಿದು ಮಾತಾಡಿಸುವುದು ಬಹಳ ಕಷ್ಟ. ಯಾರಾದರೂ ಹಿಡಿದರೆ ಅವನು ನಾಯಿ, ಹುಲಿ, ಸಿಂಹ, ಸರ್ಪ ಮುಂತಾದ ರೂಪಗಳನ್ನು ಧರಿಸಿ, ಹಿಡಿದವರನ್ನು ಹೆದರಿಸಿಯೋ ಮರುಳುಮಾಡಿಯೋ ತಪ್ಪಿಸಿಕೊಂಡು ಹೋಗುತ್ತಿದ್ದನು. ಅನೇಕ ರೂಪಗಳನ್ನು ತಳೆಯುವ ವಸ್ತು ಯಾವುದಿದ್ದರೂ ಅದನ್ನು ಪ್ರೋಟಿಯಸ್ಸಿಗೆ ಹೋಲಿಸುವ ಪದ್ಧತಿ.

ಪುಟ ೩೨ **ಸಮರ್ಥನವಾದ**—ಈ ವಾದ ಚೆನ್ನಾಗಿ ಮನದಟ್ಟಾಗಬೇಕಾದರೆ ಅಥೆನ್ಸಿನ ನ್ಯಾಯವಿಚಾರಣೆಯ ಕ್ರಮವನ್ನು ಸ್ವಲ್ಪ ತಿಳಿದುಕೊಳ್ಳುವುದು ಅವಶ್ಯಕ. ಅಥೆನ್ಸಿನಲ್ಲಿ ನ್ಯಾಯವಿಚಾರಣೆ ೫೦೧ ಜನ ಪಂಚಾಯಿತರ ಸಮಕ್ಷದಲ್ಲಿ ನಡೆಯುತ್ತಿತ್ತು. ಈ ಪಂಚಾಯಿತರು ಈಗಿನ ನ್ಯಾಯಾಧೀಶರಂತೆ ಗಂಭೀರವಾಗಿ ಕುಳಿತಿರುತ್ತಿರಲಿಲ್ಲ. ಫಿರ್ಯಾದಿಯ ಅಥವಾ ಅಪರಾಧಿಯ ಭಾಷಣ ತಮ್ಮ ಮನಸ್ಸಿಗೆ ಸರಿತೋರದಿದ್ದರೆ ಭಾಷಣ ಕೇಳದಂತೆ ಗಲಭೆ ಮಾಡುತ್ತಿದ್ದದ್ದೂ ಉಂಟು. 'ಸಮರ್ಥನ ವಾದ'ದಲ್ಲಿ ಸಾಕ್ರೆಟೀಸ್ "ಗಲಭೆಮಾಡದೆ ತಾಳ್ಮೆಯಿಂದ ಕೇಳಿ" ಎಂದು ಪ್ರಾರ್ಥಿಸುವುದು ಈ ಜನರನ್ನೇ. ವಿಚಾರಣೆಯ ಕಾಲವನ್ನು ಮೂರು ಭಾಗವಾಗಿ ವಿಂಗಡಿಸಿಕೊಳ್ಳುತ್ತಿದ್ದರು. ಆಪಾದನೆಯನ್ನು ತರುವವರ ಭಾಷಣವೇ ಮೊದಲನೆಯ ಪ್ರಕರಣ. ಅನಂತರ ಅಪರಾಧಿಸ್ಥಾನದಲ್ಲಿರುವವನೂ ಕೆಲವು ವೇಳೆ ಅವನ ಸ್ನೇಹಿತರೂ ಭಾಷಣ ಮಾಡುತ್ತಿದ್ದರು. ಇದಾದ ಮೇಲೆ ಪಂಚಾಯಿತರು "ವೋಟು" ಕೊಡುತ್ತಿದ್ದರು. ಇಲ್ಲಿಗೆ ಎರಡನೆಯ ಪ್ರಕರಣ ಮುಗಿದಂತಾಯಿತು. ಮೂರನೆಯ ಪ್ರಕರಣದಲ್ಲಿ ಮೊದಲು ಫಿರ್ಯಾದಿ ಅಪರಾಧಿಗೆ ಕೊಡಬೇಕಾದ ಶಿಕ್ಷೆಯನ್ನು ಸೂಚಿಸಿ ಭಾಷಣಮಾಡುತ್ತಿದ್ದನು. ಅಪರಾಧಿ ಬೇರೆ ಶಿಕ್ಷೆಯನ್ನು ಸೂಚಿಸಿ ಮಾತಾಡುವುದಲ್ಲದೆ ತನ್ನ ಹೆಂಡತಿಮಕ್ಕಳನ್ನು ಕರೆತಂದು ನ್ಯಾಯಾಧೀಶರ

ಕರುಣೆಯನ್ನು ಬೇಡಬಹುದಾಗಿತ್ತು. ಇದಾದ ಮೇಲೆ ಪಂಚಾಯಿತರು ತೀರ್ಪು ಕೊಡುತ್ತಿದ್ದರು.

ಪುಟ ೩೯ **ಪಿಥಿಯುದ ಭವಿಷ್ಯದರ್ಶಿನಿ**—ಡೆಲ್ಫಿ ಎಂಬ ಸ್ಥಳದಲ್ಲಿ ಪ್ರಸಿದ್ಧವಾದ ಅಪಾಲೋ ದೇವರ ಗುಡಿಯಿತ್ತು. ಆ ದೇವರಿಂದ ಭವಿಷ್ಯವಾಣಿಯನ್ನು ಪಡೆದು ಜನರಿಗೆ ತಿಳಿಸುವ ಅರ್ಚಕಿಗೆ "ಪಿಥಿಯು" ಎಂದು ಹೆಸರು.

ಪುಟ ೪೧ **ಸಿರಿಯುಸ್ಸಿನ ಆಣೆ**—ಮೂಲದಲ್ಲಿ "ಈಜಿಪ್ಟಿನ ನಾಯಿಯ ಆಣೆ" ಎಂದಿದೆ. ಈಜಿಪ್ಟಿನವರು ನಾಯಿಯನ್ನೂ ನಾಯಿನಕ್ಷತ್ರವಾದ (the Dog-star) ಸಿರಿಯುಸ್ಸನ್ನೂ ಬಹಳ ಭಕ್ತಿಯಿಂದ ಕಾಣುತ್ತಿದ್ದರು.

ಹರ್ಕ್ಯುಲೀಸ್—ಸ್ಯೂಸನ ಮಗ; ಬಹು ಪ್ರಸಿದ್ಧನಾದ ವೀರ. ಹೈಡ್ರ ಎಂಬ ಮಹಾಸರ್ಪವನ್ನೂ ಒಂದು ದೊಡ್ಡ ಸಿಂಹವನ್ನೂ ಕೊಂದದ್ದಲ್ಲದೆ ಅನೇಕ ಸಾಹಸಕಾರ್ಯಗಳನ್ನು ಮಾಡಿದವನು. ಅವನು ಒಂದು ಸಲ ಮೃತ್ಯುದೇವತೆಯೊಡನೆ ಸಹ ಯುದ್ಧಮಾಡಿ ಗೆದ್ದನೆಂದು ಕಥೆಯಿದೆ.

ಪುಟ ೪೯ **ಅನಾಗ್ಸಾಗೊರಾಸ್**-ಒಬ್ಬ ತತ್ವಾನ್ವೇಷಕ. ಅವನ ಅಭಿಪ್ರಾಯಗಳು ರಾಷ್ಟ್ರಕ್ಕೆ ಕೆಡಕುಮಾಡುತ್ತವೆಂಬ ಆಪಾದನೆಯನ್ನು ತಂದು ಅಥೆನ್ಸಿನವರು ಅವನಿಗೆ ಮರಣದಂಡನೆಯನ್ನು ವಿಧಿಸಿದರು. ಆದರೆ ಅವನ ಶಿಷ್ಯನಾದ ಪೆರಿಕ್ಲೀಸನು ಆ ದಂಡನೆಯನ್ನು ತಪ್ಪಿಸಿ ಅದಕ್ಕೆ ಬದಲಾಗಿ ಅವನನ್ನು ಗಡಿಪಾರು ಮಾಡಿಸಿದನು.

ಪುಟ ೫೨ **ಪೆಟ್ರೋಕ್ಲಸ್**—ಟ್ರಾಯ್ ಯುದ್ಧದಲ್ಲಿ ಮಡಿದ ಗ್ರೀಕ್ ವೀರ; ಅಕಿಲೀಸನ ಪ್ರಾಣಸ್ನೇಹಿತ ಅಕಿಲೀಸ್ ಕೋಪಿಸಿಕೊಂಡು ಯುದ್ಧಕ್ಕೆ ಹೋಗದೆ ತಟಸ್ಥನಾಗಿದ್ದಾಗ ಪೆಟ್ರೋಕ್ಲಸ್ ಅವನ ಕವಚವನ್ನು ಧರಿಸಿ ಯುದ್ಧಮಾಡಿದನು. ಪೆಟ್ರೋಕ್ಲಸ್ ಹೆಕ್ಟರನ ಕೈಯಿಂದ ಹತನಾದ ಮೇಲೆ ಹೆಕ್ಟರಿನ ಮೇಲೆ ಸೇಡು ತೀರಿಸಿಕೊಳ್ಳಲು ಅಕಿಲೀಸ್ ಮತ್ತೆ ಯುದ್ಧಕ್ಕೆ ಬಂದನು.

ಪುಟ ೭೧ **ಮೈನೋಸ್, ರ್ಹಾಡಮಾಂತಸ್, ಈಯೇಕಸ್**—ಈ ಮೂವರೂ ಸ್ಯೂಸನ ಮಕ್ಕಳು. ನ್ಯಾಯಪರರೆಂದು ಹೆಸರು ಪಡೆದಿದ್ದುದ್ದರಿಂದ ಇವರು ಮೂವರೂ ಸತ್ತಮೇಲೆ ಪರಲೋಕದ ನ್ಯಾಯಾಧೀಶರೆಂದು ಗಣಿಸಲ್ಪಟ್ಟರು.

ಟ್ರಿಪ್ಟಾಲಿಮಸ್—ಒಷಿಯೇನಸ್ ಮತ್ತು ಟೆರ್ರ ಎಂಬ ದೇವತೆಗಳ ಮಗ. ಇವನೂ ಪರಲೋಕದ ನ್ಯಾಯಾಧೀಶರಲ್ಲೊಬ್ಬನು.

ಪುಟ ೭೨ **ಆರ್ಫಿಯುಸ್**—ಪ್ರಸಿದ್ಧ ಗಾಯಕ. ಇವನು ಅಪಾಲೋವಿನ ಮಗನೆಂದೂ ಅವನಿಂದ ತನ್ನ "ಹಾರ್ಪ್" ಎಂಬ ವಾದ್ಯವನ್ನು ಪಡೆದನೆಂದೂ ಹೇಳುತ್ತಾರೆ. ಪರ್ವತಗಳು ಸಹ ಅವನ ಗಾನಕ್ಕೆ ತಲೆದೂಗುತ್ತಿದ್ದುವಂತೆ.

ಮ್ಯೂಸೆಯುಸ್—ಒಬ್ಬ ಪುರಾತನ ಗ್ರೀಕ್ ಕವಿ.

ಹೆಸಿಯಡ್—ಹೋಮರಿನ ಕಾಲದ ಅಥವಾ ಸ್ವಲ್ಪ ಈಚಿನ ಪ್ರಸಿದ್ಧ ಗ್ರೀಕ್ ಕವಿ.

ಹೋಮರ್—ಪ್ರಪಂಚದ ಕವಿಗಳಲ್ಲಿ ಅತ್ಯುತ್ತಮ ವರ್ಗಕ್ಕೆ ಸೇರಿದ ಪುರಾತನ ಗ್ರೀಕ್ ಕವಿ. 'ಇಲಿಯಡ್,' 'ಒಡಿಸ್ಸಿ' ಎಂಬ ಮಹಾಕಾವ್ಯಗಳನ್ನು ರಚಿಸಿದವನು.

ಪಾಲಾಮಿಡೀಸ್—ಟ್ರಾಯ್ ಯುದ್ಧದಲ್ಲಿ ಕಾದಿದ ಗ್ರೀಕ್ ವೀರ. ಒಡಿಸ್ಸಿಯುಸ್ಸನು ಇವನನ್ನು ಕುಯುಕ್ತಿಯಿಂದ ಕೊಂದನೆಂದು ಕಥೆ.

ಏಜಾಕ್ಸ್—ಅಕಿಲೀಸನ್ನು ಬಿಟ್ಟರೆ ಗ್ರೀಕರಲ್ಲಿ ಇವನಿಗಿಂತ ಶೂರರು ಯಾರೂ ಇರಲಿಲ್ಲ. ಅಕಿಲೀಸ್ ಸತ್ತಮೇಲೆ ಅವನ ಕವಚ ಮೊದಲಾದುವು ಯಾರಿಗೆ ಸೇರಬೇಕೆಂಬ ವಿಷಯದಲ್ಲಿ ಇವನಿಗೂ ಒಡಿಸ್ಸಿಯಸ್ಸಿಗೂ ಜಗಳ ಬಂದು ಒಡಿಸ್ಸಿಯಸ್ಸೇ ಗೆದ್ದನು. ಏಜಾಕ್ಸ್ ಕೋಪಗೊಂಡು ಗ್ರೀಕ್ ವೀರರನ್ನು ಕೊಲ್ಲುತ್ತಿದ್ದೇ

ನೆಂಬ ಭ್ರಾಂತಿಯಿಂದ ಒಂದು ಕುರಿಯ ಮಂದೆಯನ್ನು ಕಡಿದು ಹಾಕಿ ಅನಂತರ ನಾಚಿಕೆಯಿಂದ ಆತ್ಮಹತ್ಯ ಮಾಡಿಕೊಂಡನು.

ಪುಟ ೭೨ **ಆಗಮೆಮ್ನನ್**—ಟ್ರಾಯ್ ಪಟ್ಟಣದ ಮೇಲೆ ದಂಡೆತ್ತಿ ಹೊರಟ ಗ್ರೀಕರ ದಳಪತಿ; ಹೆಲನ್ನಳ ಪತಿಯಾದ ಮೆನೆಲೇಯಸ್ಸಿನ ಸಹೋದರ.

ಒಡಿಸ್ಸಿಯಸ್—ಇಥಾಕಾ ದ್ವೀಪದ ದೊರೆ. ಟ್ರಾಯ್ ಯುದ್ಧಕ್ಕೆ ಹೋದ ಗ್ರೀಕ್ ವೀರರಲ್ಲೆಲ್ಲಾ ಬಹಳ ಬುದ್ಧಿಶಾಲಿಯೆಂದು ಹೆಸರುಗೊಂಡವನು.

ಸಿಸಿಫಸ್—ಬಹಳ ತಂತ್ರಿಯಾದ ಒಬ್ಬ ದೊರೆ.

ಪುಟ ೭೫ **"ಡೀಲೋಸಿನಿಂದ ಹಡಗು ಬಂದ ಮೇಲೆ"**—೯೭ನೆಯ ಪುಟವನ್ನು ನೋಡಿ.

ಪುಟ ೯೫ **ಸೈಬೀಲಿ**—ಕ್ರೊನಸ್ಸಿನ ಹೆಂಡತಿ. ಅವತರಣಿಕೆಯ ix ನೆಯ ಪುಟದ ಕೆಳಟಿಪ್ಪಣಿಯನ್ನು ನೋಡಿ.

ಪುಟ ೧೦೩ **ಫಿಲೋಲೆಯಸ್**—ಪಿಥಾಗೊರಾಸನ ಶಿಷ್ಯನಾದ ಒಬ್ಬ ತತ್ತ್ವಾನ್ವೇಷಕ.

ಪುಟ ೧೧೭ **ಥರ್ಸಸ್**—ಥರ್ಸಸ್ ದಂಡವನ್ನು ಹಿಡಿದಿರುವವರೆಂದರೆ ಬ್ಯಾಕಸ್ ದೇವತೆಯ ಭಕ್ತರು.

ಪುಟ ೧೩೦ **ಭಾವಗಳು (Ideas)**—ಪ್ಲೇಟೋವಿನ ತತ್ತ್ವಶಾಸ್ತ್ರದ ಪ್ರಕಾರ ನಾವು ಇಂದ್ರಿಯಗಳ ಮೂಲಕ ತಿಳಿಯುವ ಪ್ರತಿಯೊಂದು ವಸ್ತುವಿಗೂ ಮೂಲರೂಪವಾದ ಒಂದೊಂದು "ಭಾವ" ಇದೆ. "ಭಾವ" ಎನ್ನುವುದನ್ನು ಹೀಗೆ ವರ್ಣಿಸಬಹುದು: ನಾವು ಇಪ್ಪತ್ತು ಮನೆಗಳನ್ನು ನೋಡಿದರೆ ಅವುಗಳಲ್ಲಿ ಯಾವುದೊಂದೂ ಮತ್ತೊಂದರಂತೆ ಇಲ್ಲದಿರಬಹುದು. ಆದರೂ ನಾವು ಅವುಗಳೆಲ್ಲವನ್ನೂ "ಮನೆ" ಎಂದು ಗುರುತಿಸುತ್ತೇವೆ. ಆ ಇಪ್ಪತ್ತು ಮನೆಗಳಲ್ಲಿಯೂ ಕಾಣಬರುವ ಸಾಮಾನ್ಯಸ್ವರೂಪವೊಂದಿದೆ. ಅದನ್ನು ಮನೆಯ "ಭಾವ" ಎನ್ನಬಹುದು. ಈ ಭಾವಗಳು ಮನಸ್ಸಿನ

ಕಲ್ಪನೆ ಮಾತ್ರವಲ್ಲ. ತಮ್ಮದೇ ಒಂದು ಪ್ರಪಂಚದಲ್ಲಿ ಅವು ನೆಲ ಸಿವೆ. ತನ್ನ ಭಾವ ಇಲ್ಲದಿದ್ದರೆ ನಮ್ಮ ಪ್ರಪಂಚದ ಯಾವ ವಸ್ತು ವಿಗಾಗಲಿ ಇರುವಿಕೆಯಿಲ್ಲ. ಭಾವ ಪ್ರಪಂಚದಲ್ಲಿರುವ ಕೋಟ್ಯನು ಕೋಟಿ ಭಾವಗಳೆಲ್ಲವನ್ನೂ ಒಂದುಗೂಡಿಸಿ ಅವುಗಳ ವಿಷಯ ವಾದ ಜ್ಞಾನವನ್ನು ನಮಗೆ ಕೊಡುವ ಪರಮಭಾವವೊಂದಿದೆ. ಅದಕ್ಕೆ "ಒಳ್ಳಿನ ಭಾವ" (The Idea of the Good) ಎಂದು ಹೆಸರು. "ಸತ್" ಎನ್ನುವುದಕ್ಕೆ ಕಾರಣವಾದದ್ದು ಈ ಭಾವವೇ. ಜ್ಞಾನಕ್ಕೂ ಇದೇ ಮೂಲ.

ಪ್ಲೇಟೋವಿನ ತತ್ವವನ್ನು ಅಭ್ಯಾಸಮಾಡಿರುವವರು ಈ ಭಾವ ವಾದಕ್ಕೆ ಎರಡು ವಿಧವಾದ ಅರ್ಥವನ್ನು ಕೊಟ್ಟಿದ್ದಾರೆ: "ನಮ್ಮ ಪ್ರಪಂಚ ಭಾವಪ್ರಪಂಚದ ಪ್ರತಿಬಿಂಬ ಮಾತ್ರ" ಎಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು "ಅದು ಪ್ರತಿಬಿಂಬ ಮಾತ್ರವಲ್ಲ, ಈ ಪ್ರಪಂಚದ ಪ್ರತಿಯೊಂದು ವಸ್ತುವೂ ತನ್ನ ಭಾವದ ಸ್ವರೂಪ ದಲ್ಲಿ ಭಾಗಿಯಾಗಿದೆ. ಇದೇ ಪ್ಲೇಟೋವಿನ ವಾದದ ಅರ್ಥ" ಎಂದು ಹೇಳುತ್ತಾರೆ. ಈ ಎರಡು ಅರ್ಥಗಳಿಗೂ ಪ್ಲೇಟೋವಿನಲ್ಲಿ ಆಧಾರವಿದೆ. ಆದರೆ ಎರಡನೆಯ ಅರ್ಥವೇ ಪ್ಲೇಟೋವಿನ ಮನ ಸ್ಸಿನಲ್ಲಿ ಮುಖ್ಯವಾಗಿದ್ದಿರಬಹುದು.

ಈ ವಾದವು ಸಾಕ್ರೆಟೀಸನದೇ ಅಥವಾ ಪ್ಲೇಟೋವಿನದೇ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ಬಹುಮಂದಿ ತತ್ವಾ ನ್ವೇಷಕರು ಅದು ಪ್ಲೇಟೋವಿನದೇ ಎಂದು ಅಭಿಪ್ರಾಯಪಡು ತ್ತಾರೆ. ಈಚೀಚೆಗೆ ಕೆಲವರು ಆ ವಾದವನ್ನು ಕಂಡುಹಿಡಿದ ಗೌರವ ಸಾಕ್ರೆಟೀಸನಿಗೂ ಬಹುಮಟ್ಟಿಗೆ ಸಲ್ಲಬೇಕೆಂದು ಹೇಳು ತ್ತಾರೆ.

ಪುಟ ೧೪೫ **ಪೆನೆಲಪಿ**—ಒಡಿಸ್ಸಿಯುಸ್ಸನ ಹೆಂಡತಿ. ಒಡಿಸ್ಸಿಯುಸ್ ಟ್ರಾಯ್ ಯುದ್ಧದಲ್ಲಿ ಸತ್ತುಹೋದನೆಂದು ಭಾವಿಸಿ ಕೆಲವರು ರಾಜಪುತ್ರರು ತಮ್ಮನ್ನು ವರಿಸಬೇಕೆಂದು ಪೆನೆಲಪಿಯನ್ನು ಪೀಡಿ

ಸುತ್ತಿದ್ದರು. ಆಕೆ ಒಂದು ವಸ್ತ್ರವನ್ನು ಹೆಣೆಯುವ ಕೆಲಸವನ್ನು ಕೈಕೊಂಡು "ಅದು ಮುಗಿದ ಮೇಲೆ ಯಾರನ್ನಾದರೂ ವರಿಸುತ್ತೇನೆ." ಎಂದು ಒಪ್ಪಿಕೊಂಡಳು. ಆದರೆ ಹಗಲೆಲ್ಲಾ ಮಾಡಿದ ಕೆಲಸವನ್ನು ರಾತ್ರಿ ಬಿಚ್ಚಿಬಿಡುತ್ತಿದ್ದದ್ದರಿಂದ ಅದು ಎಂದಿಗೂ ಮುಗಿಯಲೇ ಇಲ್ಲ.

ಪುಟ ೧೫೫ **ಐಯೊಲೆಯುಸ್**—ಹೈಡ್ರ ಎಂಬ ಸರ್ಪವನ್ನು ಕೊಲ್ಲುವುದರಲ್ಲಿ ಹೆರಾಕ್ಲೀಸ (ಹರ್ಕ್ಯುಲೀಸ್)ನಿಗೆ ಸಹಾಯಮಾಡಿದವನು.

ಪುಟ ೧೫೭ "**ಯೂರಿಪಸ್ ನದಿಯು**"—ಇದನ್ನು "ಯೂರಿಪಸ್ಸಿನ" ಎಂದು ಓದಿಕೊಳ್ಳಬೇಕು. ಯೂರಿಪಸ್ ಎನ್ನುವುದು ಒಂದು ಜಲಸಂಧಿ. ಇಲ್ಲಿ ಪ್ರವಾಹಗಳು ನಿಯಮವಿಲ್ಲದೆ ಯಾವಯಾವುದೋ ಕಾಲಗಳಲ್ಲಿ ಬರುತ್ತಿದ್ದುವು.

ಪುಟ ೧೬೬ **ಹಾರ್ಮೋನಿಯಾ ಮತ್ತು ಕೇಡ್ಮಸ್**—ಹಾರ್ಮೋನಿಯಾ ಎಂಬವಳು ಮಾರ್ಸ್ ಮತ್ತು ವೀನಸ್ ದೇವತೆಗಳ ಮಗಳು. ಅವಳು ಕೇಡ್ಮಸ್ಸನ್ನು ಮದುವೆಯಾದಳು. ಆಕೆಯ ಹೆಸರು ಹಾರ್ಮೋನಿಯಾ ಎಂದಿರುವುದರಿಂದ ಸಾಕ್ರೆಟೀಸ್ ಆಕೆಯನ್ನು ಮೇಳಕ್ಕೆ (Harmony) ಅಧಿದೇವತೆಯನ್ನಾಗಿ ಗಣಿಸಿ ಮಾತಾಡುತ್ತಿದ್ದಾನೆ.

ಪುಟ ೧೭೪ **ಅಟ್ಲಾಸ್**—ಅಟ್ಲಾಸ್ ಎಂಬ ದೊರೆ ದೇವತೆಗಳ ಶತ್ರುಗಳಿಗೆ ಸಹಾಯಮಾಡಿದನು. ಆದ್ದರಿಂದ ಆಕಾಶವನ್ನು ತಲೆಯ ಮೇಲೆ ಹೊತ್ತಿರಬೇಕೆಂದು ಸ್ಯೂಸ್ ಅವನಿಗೆ ಶಿಕ್ಷೆ ವಿಧಿಸಿದನು. ಅಟ್ಲಾಸ್ ಎನ್ನುವುದು ಒಂದು ಪರ್ವತದ ಹೆಸರು. ಅದು ಬಹಳ ಎತ್ತರವಾಗಿರುವುದರಿಂದ ಅಂತರಿಕ್ಷವು ಅದರ ಮೇಲೆ ನಿಂತಿದೆಯೆಂದು ಗ್ರೀಕರು ಭಾವಿಸಿದರು.

ಪುಟ ೧೯೨ **ಗ್ಲಾಕಸ್** — ಸಮುದ್ರದ ದೇವತೆಗಳಲ್ಲೊಬ್ಬನು; ಅಪಾಲೋವಿನಿಂದ ಭವಿಷ್ಯದರ್ಶನ ಶಕ್ತಿಯನ್ನು ಪಡೆದಿದ್ದನು.

GANDHI SMARAKA GRANTHALAYA
DATE..................
Acc No..........................
CALL No.......................
BANGALORE-1.

MAHATMA GANDHI MEMORIAL LIBRARY

5, Kumara Park (East), Bangalore-1

DATE LABLE

CL. No. 033,6MUR N34 Accn. No. K000016

This book ought to be returned on or before the date last marked below, or fines will be incurred.

Due Date	Ticket No.	Inls.	Due Date	Ticket No.	Inls.

BANGALORE-1.

GANDHI SMARAKA GRANTHALAYA
DATE........................
ACC. NO.............................

Mahatma Gandhi Memorial Library
5, Kumara Park (East), Bangalore-1

BOOK CARD

CL No. 033,6 MUR N34 Acc. No. K000016

Author. MURTHY RAO (AN) (.).

Title Socretesana koneyadinagalu.

Ticket No.	Issue Date	Return Date	Ticket No.	Issue Date	Return Date

033,6 MUR
N34
K000016